ಬ್ರಹ್ಮಸೂತ್ರಗಳು

ಸಂಪಾದಕರು :
ಎನ್. ಕೆ. ನರಸಿಂಹಮೂರ್ತಿ, ಎಂ.ಎಸ್‌ಸಿ.

ಪ್ರಕಾಶಕರು :
...ಪ್ರಿಂಟಿಂಗ್ ವರ್ಕ್ಸ್
...ಶಂಕರಪುರಂ, ಬೆಂಗಳೂರು-560 004

ಬ್ರಹ್ಮಸೂತ್ರಗಳು

ಅಭ್ರಮಂ ಭಂಗರಹಿತಮಜಡಂ ವಿಮಲಂ ಸದಾ ।
ಆನಂದತೀರ್ಥಮತುಲಂ ಭಜೇ ತಾಪತ್ರಯಾಪಹಮ್॥

(ಸಂತೋಷಪ್ರದವಾದ ಶಾಸ್ತ್ರವನ್ನು ರಚಿಸಿದ ಆನಂದತೀರ್ಥ ಗುರುಗಳನ್ನು ನಾನು ಯಾವಾಗಲೂ ಸೇವಿಸುತ್ತೇನೆ. ಅವರು ಅಭ್ರಮರು (ಭ್ರಾಂತಿ ಇಲ್ಲದವರು), ಭಂಗ ರಹಿತರು (ಸೋಲು, ನಾಶಗಳಿಲ್ಲದವರು), ಅಜಡರು (ಜಡಸ್ವಭಾವವಿರದವರು), ವಿಮಲರು (ದೋಷದೂರರು), ಅತುಲರು (ಸಮರೇ ಇಲ್ಲದವರು), ಮತ್ತು ಆಧಿಭೌತಿಕ, ಆಧ್ಯಾತ್ಮಿಕ, ಆಧಿದೈವಿಕ ತಾಪತ್ರಯಗಳನ್ನು ನಿವಾರಿಸಬಲ್ಲವರು. ಹಾಗೆಯೇ ಸದಾ ಆನಂದದಾಯಕ ವಾದ ತೀರ್ಥವನ್ನು (ನದಿ ಮೊದಲಾದ ಪುಣ್ಯ ಜಲಾಶಯ) ಸೇವಿಸುವೆ. ಅದು ಅಭ್ರಮ (ಅಪಾಯಕರವಾದ ಸುಳಿಗಳಿಲ್ಲದುದು), ಭಂಗರಹಿತ (ಪ್ರಕ್ಷುಬ್ಧವಾದ ಅಲೆಗಳಿಲ್ಲದುದು) ಅಜಡ (ನಿಂತು ನಾರುವುದಲ್ಲ), ವಿಮಲವಾದುದು, ಅತುಲ (ಅಸದೃಶವಾದುದು) ಮತ್ತು ಶಾರೀರಿಕ ಹಾಗೂ ಮಾನಸಿಕ ಸಂತಾಪಗಳನ್ನು ನಾಶಮಾಡುವಂತಹುದು.

—ಶ್ರೀ ವ್ಯಾಸತೀರ್ಥರು

ಭಾರತೀಯ ತತ್ವಜ್ಞಾನವನ್ನು ಅರಿತುಕೊಳ್ಳಲು ಬ್ರಹ್ಮಸೂತ್ರಗಳು ಪ್ರಸ್ಥಾನತ್ರಯಗಳಲ್ಲಿ ಒಂದು. ವಿವಿಧ ಸಾಂಸಾರಿಕ ದು:ಖಗಳನ್ನು ಅನುಭವಿಸಿ ವೈರಾಗ್ಯ ಪಡೆದು ಪರಬ್ರಹ್ಮನತ್ತ ಗಮನಹರಿಸಿದವನಿಗೆ ಸಾದನಗಳನ್ನೂ, ಫಲಸ್ವರೂಪವಾದ ಮುಕ್ತಿಯನ್ನೂ ಶ್ರೀ ಬಾದರಾಯಣರಿಂದ ವಿರಚಿತವಾದ ಬ್ರಹ್ಮಸೂತ್ರಗಳು ತಿಳಿಸುವುವು. ತಿಳಿಗನ್ನಡದಲ್ಲಿಯೇ ಓದಿ ಬ್ರಹ್ಮಸೂತ್ರಗಳ ಭಾವವನ್ನು ಗ್ರಹಿಸಲು ಸಹಾಯಕವಾದ ಗ್ರಂಥ ಇದೊಂದೇ! ಹಲವಾರು ಶ್ರುತಿ ಸ್ಮೃತಿಗಳನ್ನು ಉದಾಹರಿಸಿ ಅತ್ಯಂತ ಪ್ರಬಲವಾದ ಯುಕ್ತಿಗಳಿಂದ ಸೂತ್ರಗಳನ್ನು ಸಮರ್ಥಿಸಿರುವ ಶ್ರೀಮದಾನಂದತೀರ್ಥಭಗವತ್ಪಾದ ಗುರು ಗಳ ಭಾಷ್ಯವನ್ನು ಆಧರಿಸಿದ ಟಿಪ್ಪಣಿಗಳು ಇಲ್ಲಿವೆ. ಎಲ್ಲ ಸಹೃದಯರೂ ಓದಿ ಜೀವನ ಸಾಫಲ್ಯ ಪಡೆದುಕೊಳ್ಳಲು ಇದು ಅನುಕೂಲವಾಗಿದೆ.

M. A. Krishna

ಬ್ರಹ್ಮಸೂತ್ರಗಳು



ಶ್ರೀಪೂರ್ಣಪ್ರಜ್ಞರು, ಶ್ರೀಬಾದರಾಯಣರು

ಸ್ವಾಧ್ಯಾಯಾನ್ಮಾ ಪ್ರಮದಃ
(ನಿನಗೆ ವಿಹಿತವಾದ ಅಧ್ಯಯನವನ್ನು ಬಿಡಬೇಡ)

ಸಂಪಾದಕರು :
ಎನ್. ಕೆ. ನರಸಿಂಹಮೂರ್ತಿ, ಎಂ.ಎಸ್‌ಸಿ.
(ನಿವೃತ್ತ ಅಧ್ಯಾಪಕರು, ಮೈಸೂರು ವಿಶ್ವವಿದ್ಯಾನಿಲಯ)

ಪ್ರಕಾಶಕರು :
ವಸಂತ ಪ್ರಿಂಟಿಂಗ್ ವರ್ಕ್ಸ್
ನಂ. 3, ಕರಣಿಕರ ರಸ್ತೆ, ಶಂಕರಪುರಂ, ಬೆಂಗಳೂರು-560 004

ಪ್ರಥಮ ಮುದ್ರಣ: 1979

1,000 ಪ್ರತಿಗಳು

ಬೆಲೆ: 10 ರೂ.

ಈ ಲೇಖಕರ ಇತರ ಗ್ರಂಥಗಳು

		ರೂ.
ಮನುಸ್ಮೃತಿಸಾರ (ಎರಡನೆಯ ಮುದ್ರಣ)	...	4-50
ಶ್ರೀದ್ವಾದಶಸ್ತೋತ್ರಮ್	...	1-50
ಸಂಧ್ಯಾವಂದನೆ ಮಾಡಬೇಕೆ ? (ಎರಡನೆಯ ಮುದ್ರಣ)	...	3-50
ಭೀಷ್ಮ ಉವಾಚ (ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಥಮ ಬಹುಮಾನ ಗಳಿಸಿದೆ)	...	3-00
ಆರ್ಯಭಟೀಯಂ	...	4-00
ಮಾನವನ ಮೇಲೆ ಗ್ರಹಗಳ ಪ್ರಭಾವ ಉಂಟೇ ? (ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಥಮ ಬಹುಮಾನ ಗಳಿಸಿದೆ)	...	0-50
ಶ್ರೀಮನ್ಮಧ್ವಮತಪ್ರಸಾರ	...	4-00
ಪೂರ್ಣಪ್ರಜ್ಞಭಾರತೀ(ಮಧ್ವಾಚಾರ್ಯರ ನುಡಿಮುತ್ತುಗಳು)	...	0-80

ಮುದ್ರಕರು:

ವಸಂತ ಪ್ರಿಂಟಿಂಗ್ ವರ್ಕ್ಸ್

ನಂ. 3, ಕರಣಿಕರ ರಸ್ತೆ, ಶಂಕರಪುರಂ, ಬೆಂಗಳೂರು-560 004



ಶ್ರೀಮದಾನಂದತೀರ್ಥರು

ವಿಷಯಸೂಚೀ

				ಪುಟ
1	ಮೊದಲನೆಯ ಅಧ್ಯಾಯ (ಸಮನ್ವಯಾಧ್ಯಾಯ)			
	ಮೊದಲನೆಯ ಪಾದ	...	...	3
	ಎರಡನೆಯ ಪಾದ	...	...	18
	ಮೂರನೆಯ ಪಾದ	...	...	30
	ನಾಲ್ಕನೆಯ ಪಾದ	...	...	52
2	ಎರಡನೆಯ ಅಧ್ಯಾಯ (ಅವಿರೋಧಾಧ್ಯಾಯ)			
	ಮೊದಲನೆಯ ಪಾದ	...	...	65
	ಎರಡನೆಯ ಪಾದ	...	...	81
	ಮೂರನೆಯ ಪಾದ	...	...	100
	ನಾಲ್ಕನೆಯ ಪಾದ	...	...	120
3	ಮೂರನೆಯ ಅಧ್ಯಾಯ (ಸಾಧನಾಧ್ಯಾಯ)			
	ಮೊದಲನೆಯ ಪಾದ	...	...	130
	ಎರಡನೆಯ ಪಾದ	...	...	143
	ಮೂರನೆಯ ಪಾದ	...	...	159
	ನಾಲ್ಕನೆಯ ಪಾದ	...	...	182
4	ನಾಲ್ಕನೆಯ ಅಧ್ಯಾಯ (ಫಲಾಧ್ಯಾಯ)			
	ಮೊದಲನೆಯ ಪಾದ	...	...	201
	ಎರಡನೆಯ ಪಾದ	...	...	207
	ಮೂರನೆಯ ಪಾದ	...	...	215
	ನಾಲ್ಕನೆಯ ಪಾದ	...	...	220

ಪೀಠಿಕೆ

ಪರಂ ಬ್ರಹ್ಮ ಗುಣೈಃ ಪೂರ್ಣಂ ದೋಷದೂರಂ ನಮಾಮ್ಯಹಮ್ ।
ಜ್ಞೇಯಂ ಸಕಲಸಚ್ಛಾಸ್ತ್ರೈರ್ಗಮ್ಯಂ ಭಕ್ತ್ಯಾ ಹ್ಯನನ್ಯಯಾ ॥

ಆಮ್ನಾಯಾರ್ಥಂ ವಿವೃಣ್ವಂತಂ ಬಾದರಾಯಣಯೋಗಿನಮ್ ।
ಬ್ರಹ್ಮಸೂತ್ರಪ್ರಣೇತಾರಂ ಸೇವೇ ಜ್ಞಾನವಿವೃದ್ಧಯೇ ॥

ವೇದಪ್ರವಚನಾಚಾರ್ಯಂ ಪೂರ್ಣಪ್ರಜ್ಞಂ ಸ್ತವೀಮಿ ಯಃ ।
ವ್ಯಾಖ್ಯಾಯ ಬ್ರಹ್ಮಸೂತ್ರಾಣಿ ದ್ವೈತತತ್ತ್ವಮಸಾಧಯತ್ ॥

ನ್ಯಾಯರತ್ನಾವಲಿರ್ಯೇನ ರಚಿತಾಽಚಾರ್ಯಮೋದದಾ ।
ಪದವಾಕ್ಯಪ್ರಮಾಣಜ್ಞಂ ಪದ್ಮನಾಭಮುನಿಂ ಭಜೇ ॥

ಅಕ್ಷೋಭ್ಯತೀರ್ಥಸಚ್ಛಿಷ್ಯಂ ಟೀಕಾಭಿರ್ದ್ವೈತಸಾಧಕಮ್ ।
ಜಯತೀರ್ಥಮುನಿಂ ವಂದೇ ಜ್ಞಾನವೈರಾಗ್ಯಶಾಲಿನಮ್ ॥

ತಾತ್ಪರ್ಯಚಂದ್ರಿಕಾಕರ್ತಾ ಪ್ರತಿವಾದೀಭಕೇಸರೀ ।
ಬ್ರಹ್ಮಣ್ಯತೀರ್ಥಜಃ ಪಾತು ವ್ಯಾಸತೀರ್ಥೋ ವಿಶಾಲಧೀಃ ॥

ವಾದಿರಾಜಗುರುಂ ವಂದೇ ಯಶ್ಚಕ್ರೇ ಯುಕ್ತಿಮಲ್ಲಿಕಾಮ್ ।
ನಾನಾಸೌರಭಸಂಪನ್ನಾಂ ಬ್ರಹ್ಮಸೂತ್ರಾರ್ಥಪೋಷಕಾಮ್ ॥

ವಿದ್ಯಾವಿನಯಸಂಪನ್ನಂ ರಾಘವೇಂದ್ರಂ ದಯಾನಿಧಿಮ್ ।
ಭಜಾಮಿ ಫಲಿತೋ ಯಸ್ಮಾನ್ಮಧ್ವಸಿದ್ಧಾಂತಪಾದಪಃ ॥

ಶ್ರೀಕೃಷ್ಣಧ್ಯಾನಸಂಸಕ್ತಂ ಸರ್ವಭೂತಹಿತೇ ರತಮ್ ।
ಲಕ್ಷ್ಮೀಮನೋಜ್ಞತೀರ್ಥಾರ್ಯಂ ಶ್ರಯೇ ಭಾವವಿಶುದ್ಧಯೇ ॥

ತತ್ತ್ವ (ತತ್+ತ್ವ) ಎಂದರೆ ಒಂದು ವಸ್ತುವಿನ ವಾಸ್ತವಿಕತೆ, ಅದರ ಸ್ವರೂಪ. ತತ್ತ್ವಜ್ಞಾನ, ಎಂದರೆ ಒಂದು ವಸ್ತು ಹೇಗೆ ಇದೆಯೋ ಆ ಬಗೆಯಲ್ಲಿಯೇ ಅದರ ತಿಳಿವಳಿಕೆ—ಯಥಾರ್ಥಜ್ಞಾನ. ಉದಾಹರಣೆಗೆ ನೀರಿನ

ವಿಷಯುವನ್ನು ತಿಳಿದುಕೊಳ್ಳಬೇಕಾಗಿದೆ, ಎನ್ನೋಣ. "ನೀರು ಯಾವ ಸ್ಥಿತಿಯಲ್ಲಿರುವುದು ? (ಘನವೋ, ದ್ರವವೋ, ಅನಿಲವೋ ?) ಅದು ಮೂಲ ವಸ್ತುವೋ, ಸಂಯುಕ್ತಪದಾರ್ಥವೋ? ಸಂಯುಕ್ತವಾಗಿದ್ದರೆ ಯಾವ ಮೂಲ ವಸ್ತುಗಳು ಯಾವ ಪ್ರಮಾಣದಲ್ಲಿ ಸೇರಿ ನೀರಾಗುವುವು? ಅದೇ ವಸ್ತುಗಳು ಅದೇ ಪ್ರಮಾಣದಲ್ಲಿಯೇ ಯಾವಾಗಲೂ ಸಂಯೋಗ ಹೊಂದಿ ನೀರು ಉತ್ಪನ್ನವಾಗುವುದೋ ? ಪ್ರಯೋಗಗಳಿಂದ ನೀರನ್ನು ವಿಶ್ಲೇಷಣೆ ಮಾಡಿ ಆ ಮೂಲವಸ್ತುಗಳನ್ನು ಪಡೆಯುಬಹುದೋ ? ಸಂಶ್ಲೇಷಣೆಯಿಂದ ಪುನಃ ನೀರನ್ನು ಪಡೆಯಲು ಸಾಧ್ಯವೋ ? ನೀರಿನ ಗುಣಗಳಾವುವು? ಭೂಮಿಯ ಮೇಲೆ ನೀರು ಯಾವ ರೀತಿಯಲ್ಲಿ ನಮಗೆ ದೊರೆಯುವುದು ? ನೀರನ್ನು ಹೇಗೆ ಬಳಸಿಕೊಳ್ಳಬಹುದು ? ನೀರಿನೊಡನೆ ಬೆರೆಯುವ ವಸ್ತುಗಳಾವುವು? ಬೆರೆಯದಿರುವುವು ಯಾವುವು? ನೀರು ರೂಪಾಂತರ ಹೊಂದಬಲ್ಲದೋ ? ಅದರ ಸಾಂದ್ರತೆ ಏನು ? ಅದು ಬಿಸಿಯಾಗಲು ಎಷ್ಟು ಶಕ್ತಿ ಬೇಕು ?" ಮೊದಲಾದ ನಾನಾ ಪ್ರಶ್ನೆಗಳಿಗೆ ಪ್ರಯೋಗ, ಪರೀಕ್ಷೆ, ಪರಾಮರ್ಶೆಗಳಿಂದ ಸಮರ್ಪಕ ಉತ್ತರಗಳನ್ನು ಪಡೆದು ನೀರಿನ ವಿಷಯದಲ್ಲಿ ಯಥಾರ್ಥಜ್ಞಾನವನ್ನು ಪಡೆಯಬಹುದು.

ನೀರಿನಂಥ ಜಡಪದಾರ್ಥಗಳಲ್ಲದೆ ಅತೀಂದ್ರಿಯ ಪದಾರ್ಥಗಳ ಅನುಭವವೂ ನಮಗೆ ಆಗುತ್ತಿರುವುದು. "ನಾನು ಊಟ ಮಾಡಿದೆ" ಎಂದು ಹೇಳಿದವನ "ನಾನು" ಯಾವುದು ? ಕೈಯೋ, ಬಾಯಿಯೋ, ನಾಲಗೆಯೋ, ಹೊಟ್ಟೆಯೋ ? ಊಟದ ಸಂಬಂಧ ಇವುಗಳಿಗೆಲ್ಲ ಇದ್ದರೂ ಇವೊಂದೂ ಆ "ನಾನು" ಅಲ್ಲ. ಅದು ಹೇಳುವವನ "ಜೀವ"ವನ್ನು ತಿಳಿಸುತ್ತದೆ. ಜೀವನಿಗೆ ತಿಳಿಯುವ ಶಕ್ತಿ, ಕೆಲಸ ಮಾಡುವ ಇಚ್ಛೆ ಸಾಮರ್ಥ್ಯಗಳು, ಸುಖದುಃಖಗಳ ಅನುಭವ ಇವೆಲ್ಲ ಇವೆ. ಅವು ಯಾವುವೂ ಇಲ್ಲದ ಕಲ್ಲು ಮೊದಲಾದ "ಜಡ" ಪದಾರ್ಥಗಳಿಂದ ಜೀವ ಅತ್ಯಂತ ಭಿನ್ನ. ಇದು ನಮ್ಮ ಅನುಭವಕ್ಕೆ ಗೋಚರವಾಗುತ್ತದೆ.

ಮನುಷ್ಯ ನಾನಾ ಕರ್ಮಗಳನ್ನು ಮಾಡುತ್ತಿರುವಾಗ ಅನೇಕ ಕಾರಣಗಳಿಂದ, ತಾನು ಮಾಡಿದ ಕೆಲಸಕ್ಕೆ ತಕ್ಕ ಫಲ ಅವನಿಗೆ ಸಿಗುವುದಿಲ್ಲ. ಅನಿರೀಕ್ಷಿತವಾಗಿ ಒಳ್ಳೆಯ ಅಥವಾ ಅನಿಷ್ಟವಾದ ಫಲಗಳೂ ತಲೆದೋರುವುವು. ನಮ್ಮ

ಶಕ್ತಿಗೆ ಮೀರಿದ್ದು, ನಮ್ಮ ಎಲ್ಲ ಆಗುಹೋಗುಗಳನ್ನೂ ನಿಯಂತ್ರಿಸುವ ಶಕ್ತಿಗೆ ನಾವು ಪರಮಾತ್ಮನೆಂದು ಹೆಸರು ಕೊಟ್ಟಿದ್ದೇವೆ. ಶಾಸ್ತ್ರಗಳಿಂದ "ಪರಮಾತ್ಮ ಎಲ್ಲರಿಗಿಂತ ಹಿರಿಯ ಹಾಗೂ ಸಮರ್ಥ; ಆದುದರಿಂದ ಅವನನ್ನು 'ಬ್ರಹ್ಮ' ನೆಂದು ಕರೆಯಬಹುದು. ಹರಿ, ಇಂದ್ರ, ವಾಯು, ವರುಣ ಎಂಬ ಶಬ್ದ ಗಳಿಂದಲೂ ನಾವು ಪರಮಾತ್ಮನನ್ನು ಸೂಚಿಸಬಹುದು" ಎಂದು ತಿಳಿದು ಬರುವುದು.

ಜೀವ ಅಥವಾ ಆತ್ಮ, ಪರಬ್ರಹ್ಮ ಅಥವಾ ವಿಷ್ಣು, ಜಡ ಈ ಮೂರು ಗುಂಪುಗಳಿಗೆ ಸೇರಿದ ವಸ್ತುಗಳ ಪರಸ್ಪರ ಸಂಬಂಧ ಎಂತಹುದು? ಒಂದರ ಮೇಲೊಂದು ಅವು ಬೀರುವ ಪ್ರತಿಕ್ರಿಯೆ ಎಂಥದು? ಆತ್ಮ–ಪರಮಾತ್ಮರ ವಿಷಯವನ್ನು ತಿಳಿಯುವ ಬಗೆ ಯಾವುದು? ಈ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರವನ್ನು ಕೊಡುವ ಶಾಸ್ತ್ರಭಾಗವೇ ತತ್ತ್ವಶಾಸ್ತ್ರ.

ನಮ್ಮ ದೇಶದ ತತ್ತ್ವಜ್ಞಾನವೆಲ್ಲ ಉಪನಿಷತ್ತುಗಳು, ಬ್ರಹ್ಮಸೂತ್ರಗಳು ಮತ್ತು ಭಗವದ್ಗೀತೆ ಎಂಬ ಮೂರು ಘಟ್ಟಗಳಲ್ಲಿ—ಪ್ರಸ್ಥಾನತ್ರಯದಲ್ಲಿ— ಅಡಗಿದೆ. ಒಂದರಲ್ಲಿನ ವಿಷಯ ಮತ್ತೊಂದರಲ್ಲಿಯೂ ವಿಮರ್ಶಿಸಲ್ಪಟ್ಟಿದೆ, ದೃಢಗೊಳಿಸಲ್ಪಟ್ಟಿದೆ, ಭಾರತೀಯ ತತ್ತ್ವಜ್ಞಾನವನ್ನು ಯಥಾರ್ಥವಾಗಿ ತಿಳಿಯಬಯಸುವವನು ಈ ಮೂರನ್ನೂ ಚೆನ್ನಾಗಿ ಅರಿತವನಾಗಬೇಕು. ಪುರಾಣ ಗಳೂ ಈ ವಿಷಯಗಳನ್ನು ವಿಶದಪಡಿಸುವುವು.

ಉಪನಿಷತ್ತುಗಳು ಎಲ್ಲ ವೇದಗಳ ಒಂದು ಭಾಗ ಮಾತ್ರವೇ! ಈಶ, ಕೇನ, ಪ್ರಶ್ನ, ಕಠ, ತೈತ್ತಿರೀಯ, ಐತರೇಯ, ಮುಂಡಕ, ಛಾಂದೋಗ್ಯ, ಮಾಂಡೂಕ, ಬೃಹದಾರಣ್ಯಕಗಳು ಮುಖ್ಯವಾದ ಉಪನಿಷತ್ತುಗಳು. ಈ ಹತ್ತು ಉಪನಿಷತ್ತುಗಳಿಗೆ ಶಂಕರ ಮತ್ತು ಪೂರ್ಣಪ್ರಜ್ಞರು ಭಾಷ್ಯಗಳನ್ನು ಬರೆದು ತಮ್ಮ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ರಾಮಾನುಜರೂ ಉಪನಿಷ- ದ್ವಾಕ್ಯಗಳಿಗೆ ಅರ್ಥ ಹೇಳಿದ್ದಾರೆ.

ಶಾಂಕರ ವಾದ ಅದ್ವೈತ. "ಬ್ರಹ್ಮ ಸತ್ಯಂ ಜಗನ್ಮಿಥ್ಯಾ, ಜೀವೋ ಬ್ರಹ್ಮೈವ ನಾಪರಃ"—ಬ್ರಹ್ಮವೊಂದೇ ಸತ್ಯ, ಜಗತ್ತು ಮಿಥ್ಯಾಭೂತ ವಾದುದು, ಜೀವ ಬ್ರಹ್ಮನೇ ಅಲ್ಲದೆ ಬೇರೆಯಲ್ಲ—ಎಂಬುದೇ ಅದ್ವೈತ

ಸಿದ್ಧಾಂತದ ಸ್ವರೂಪ. ರಾಮಾನುಜರ ವಾದ ವಿಶಿಷ್ಟಾದ್ವೈತ. "ಬ್ರಹ್ಮ ಸಮಸ್ತಕಲ್ಯಾಣಗುಣಪೂರ್ಣ, ಪ್ರಪಂಚ ಸತ್ಯ, ಬ್ರಹ್ಮನಲ್ಲಿ ಭಕ್ತಿಪ್ರಪತ್ತಿಗಳನ್ನು ಮಾಡಿ ಜನನಮರಣ ಪ್ರವಾಹರೂಪವಾದ ಸಂಸಾರದಿಂದ ಮುಕ್ತಿಹೊಂದಿ, ಪರಮಾತ್ಮನಲ್ಲಿ ಸೇರಿಕೊಂಡು, ಜೀವ ಅವನಿಂದ ಅಭಿನ್ನನೇ ಆಗಿಬಿಡುವನು" ಎಂಬುದು ವಿಶಿಷ್ಟಾದ್ವೈತ ವಾದ. ಆನಂದತೀರ್ಥ, ಮಧ್ವಾಚಾರ್ಯ, ಎಂಬ ಹೆಸರುಗಳಿಂದ ಪ್ರಸಿದ್ಧರಾದ ಪೂರ್ಣಪ್ರಜ್ಞರು ದ್ವೈತವಾದವನ್ನೇ ಎತ್ತಿ ಹಿಡಿದರು. "ಬ್ರಹ್ಮ ಪೂರ್ಣ, ಸರ್ವಜ್ಞ, ಸರ್ವಶಕ್ತ; ಜೀವ ಅಪೂರ್ಣ, ಅಲ್ಪಜ್ಞ, ಅಲ್ಪಶಕ್ತ; ಜಗತ್ತು ಸತ್ಯ. ಬ್ರಹ್ಮನ ಮಾಹಾತ್ಮ್ಯ ತಿಳಿದು ಅವನಲ್ಲಿ ಭಕ್ತಿ ಮಾಡಿಯೇ ಜೀವ ಹುಟ್ಟು, ಸಾವುಗಳಿಂದ ಕೂಡಿದ ಸಂಸಾರದಿಂದ ಮುಕ್ತನಾಗಬಹುದು. ಮೋಕ್ಷ ಪಡೆದ ಮೇಲೆಯೂ ಪ್ರಪಂಚವನ್ನು ಸೃಷ್ಟಿ ಮಾಡುವ ಸಾಮರ್ಥ್ಯ ಜೀವನಿಗೆ ಬರುವುದಿಲ್ಲ. ಬ್ರಹ್ಮನಿಂದ ಭಿನ್ನನಾಗಿಯೂ ಯಾವಾಗಲೂ ಅವನಿಗೆ ಅಧೀನನಾಗಿಯೂ ಜೀವ ಇರುವನು" ಎಂಬುದು ದ್ವೈತವಾದ. ಈ ಮೂವರು ಆಚಾರ್ಯರೂ ತಾವು ಸಮರ್ಥಿಸಿದ ಸಿದ್ಧಾಂತಕ್ಕೆ ಅನುಗುಣವಾಗಿಯೇ ಪ್ರಸ್ಥಾನತ್ರಯಗಳಿಗೆ ಅರ್ಥಮಾಡಿರುವರು.

ಶ್ರೀಮದಾನಂದತೀರ್ಥ ಭಗವತ್ಪಾದರು ಉಡುಪಿ ಕ್ಷೇತ್ರಕ್ಕೆ ಸಮೀಪ ದಲ್ಲಿರುವ ಪಾಜಕ ಗ್ರಾಮದಲ್ಲಿ ಕ್ರಿ.ಶ. 1199ರಲ್ಲಿ ಜನ್ಮ ತಾಳಿದರು (1238 ಎಂದು ಕೆಲವರ ಮತ). ಅವರ ತಂದೆ ಮಧ್ಯಗೇಹ (ನಡ್ಡಂತಿಲ್ಲಾಯ ಅಥವಾ ನಡುಮನೆ) ಎಂಬ ವಂಶಕ್ಕೆ ಸೇರಿದ ಭಟ್ಟರು. ಶ್ರೀಹರಿಯ ಭಕ್ತ ರಾಗಿದ್ದು ಪುರಾಣ ಹೇಳುತ್ತಾ ಅವರು ಸಾತ್ವಿಕಜೀವನ ನಡೆಸುತ್ತಿದ್ದರು. ಪ್ರತಿಭಾಶಾಲಿಗಳಾಗಿದ್ದ ಆಚಾರ್ಯರು ಬಾಲ್ಯದಲ್ಲಿಯೇ, ಪುರಾಣ ಹೇಳುತ್ತಿದ್ದ ಹಲವರ ಮಾತುಗಳಲ್ಲಿ ತಪ್ಪುಗಳನ್ನು ತೋರಿಸುತ್ತಿದ್ದರೆಂದು ಅವರ ಚರಿತ್ರೆ ಯಲ್ಲಿ ಹೇಳಲಾಗಿದೆ. ಅವರು ವೇದಗಳನ್ನೂ ಇತಿಹಾಸ ಪುರಾಣಗಳನ್ನೂ ಚೆನ್ನಾಗಿ ಅಭ್ಯಾಸ ಮಾಡಿದ್ದರು.

ಅಸದೃಶವಾಗಿದ್ದ ವೈರಾಗ್ಯದಿಂದ ಅವರು ತಮ್ಮ ಹದಿನಾರನೆಯ ವಯಸ್ಸಿನಲ್ಲಿಯೇ ಮನೆ ಬಿಟ್ಟು ಹೊರಟು ಅಚ್ಯುತಪ್ರೇಕ್ಷರೆಂಬ ಯತಿಗಳಲ್ಲಿ ಶುಶ್ರೂಷೆ ಮಾಡುತ್ತಿದ್ದು ಸಂನ್ಯಾಸ ಪಡೆದರು. ತಂದೆ ಇಟ್ಟ ಹೆಸರು ವಾಸುದೇವ, ಗುರುಗಳು ಕೊಟ್ಟದ್ದು ಪೂರ್ಣಪ್ರಜ್ಞ ಎಂಬ ಹೆಸರು.

ಸಂನ್ಯಾಸಿಯಾದ ಸ್ವಲ್ಪವೇ ಕಾಲದಮೇಲೆ ಅವರು ಬೌದ್ಧ, ಅದ್ವೈತ ಮೊದಲಾದ ವಾದಗಳನ್ನು ಮಂಡಿಸುತ್ತಿದ್ದ ಪಂಡಿತರನ್ನು ಸೋಲಿಸಿ ಆನಂದಪ್ರದ ಶಾಸ್ತ್ರವನ್ನು ವಿವರಿಸಿ ಗುರುಗಳಿಂದ ಆನಂದತೀರ್ಥರು ಎಂಬ ಮತ್ತೊಂದು ಹೆಸರನ್ನೂ ಪಡೆದರು; ಅದೇ ಅರ್ಥ ಬರುವ ಮಧ್ವ ಎಂಬ ಹೆಸರಿನಿಂದಲೂ ಅವರು ಪ್ರಸಿದ್ಧರಾದರು.

ಆಚಾರ್ಯರು ಬದರಿಗೆ ಹೋಗಿ ವೇದವ್ಯಾಸರಿಂದ ಪ್ರಭಾವಿತರಾಗಿ ಬ್ರಹ್ಮಸೂತ್ರಗಳಿಗೆ ತಮ್ಮ ಭಾಷ್ಯವನ್ನು ಬರೆದು ಹಿಂದಿನ ಇಪ್ಪತ್ತೊಂದು ಭಾಷ್ಯಗಳನ್ನು ಖಂಡಿಸಿ ನಿರಾಕರಿಸಿದರು. ಅವರೊಡನೆ ವಾದ ಮಾಡಿ ಸೋತು ಶರಣಾಗತರಾಗಿ ದ್ವೈತತತ್ತ್ವವನ್ನು ಅನುಮೋದಿಸಿದವರಲ್ಲಿ ಶ್ರೀಪದ್ಮನಾಭತೀರ್ಥರು, ಶ್ರೀನರಹರಿತೀರ್ಥರು, ಶ್ರೀಮಾಧವತೀರ್ಥರು, ಶ್ರೀಅಕ್ಷೋಭ್ಯತೀರ್ಥರು ಎಂಬುವವರು ಕಾಲಾಂತರದಲ್ಲಿ ಸಂನ್ಯಾಸದೀಕ್ಷೆಯನ್ನೂ ಗುರುಗಳಿಂದ ಪಡೆದುಕೊಂಡವರು. ಇವರಲ್ಲದೆ ತ್ರಿವಿಕ್ರಮಪಂಡಿತರು ಮತ್ತು ಶಂಕರಾಚಾರ್ಯರೆಂಬ ಮತ್ತಿಬ್ಬರು ಲಿಕುಚಕುಲದ ಗೃಹಸ್ಥರೂ ಆಚಾರ್ಯರ ಪ್ರಿಯ ಶಿಷ್ಯರಾದರು.

ಸದಾ ಶ್ರೀಹರಿಯ ಧ್ಯಾನ ಮಾಡುತ್ತಾ ವಿಷ್ಣುಸರ್ವೋತ್ತಮತ್ವವನ್ನು ಸಾರಿ ಹೇಳುತ್ತಾ ದುರ್ವಾದಿಗಳನ್ನು ಗೆಲ್ಲುತ್ತಾ ಆನಂದತೀರ್ಥ ಗುರುವರ್ಯರು ಎಪ್ಪತ್ತೊಂಬತ್ತು ವರ್ಷಗಳ ತುಂಬುಜೀವನವನ್ನು ನಡೆಸಿ ಉಡುಪಿಯಲ್ಲಿ ಅದೃಶ್ಯರಾದರು.

ಗುರುಗಳು ವಾಯುವಿನ ಅವತಾರವೇ ಎಂದು ಮನಗಂಡು ತ್ರಿವಿಕ್ರಮ ಪಂಡಿತರು 'ವಾಯುಸ್ತುತಿ' ಎಂಬ ಗ್ರಂಥದಲ್ಲಿ ಹನುಮದ್ಭೀಮಮಧ್ವಾವತಾರಗಳಲ್ಲಿ ವಾಯುದೇವನು ಮಾಡಿದ ಶ್ರೀಹರಿಯ ಸೇವೆಯನ್ನು ಅತ್ಯುತ್ತಮವಾಗಿ ಬಣ್ಣಿಸಿದ್ದಾರೆ. ಆ ಗೃಹಸ್ಥರ ಪದ್ಯಗಳನ್ನು ಪೀಠಾಧೀಶ ಯತಿಗಳೂ ಪಾರಾಯಣ ಮಾಡುತ್ತಿರುವುದರಿಂದ ಅವುಗಳ ಮಹಿಮೆಯನ್ನು ಮನಗಾಣಬಹುದು.

ವಾಯುಸ್ತುತಿಯಲ್ಲಿ ಗುರುಗಳನ್ನು ಹೀಗೆ ಪ್ರಾರ್ಥಿಸಿಕೊಂಡಿದ್ದಾರೆ:

ಪ್ರಾಚೀನಾಚೀರ್ಣಪುಣ್ಯೋಚ್ಚಯಚತುರತರಾಚಾರತಶ್ಚಾರುಚಿತ್ತಾ-
ನತ್ಯುಚ್ಚಾಂ ರೋಚಯಂತೀಂ ಶ್ರುತಿಚಿತವಚನಾಂ ಶ್ರಾವಕಾಂಶ್ಚೋದ್ಯ-
ಚುಂಚೂನ್।

ವ್ಯಾಖ್ಯಾಮುತ್ಖಾತದುಃಖಾಂ ಚಿರಮುಚಿತಮಹಾಚಾರ್ಯ ಚಿಂತಾರತಾಂಸ್ತೇ
ಚಿತ್ರಾಂ ಸಚ್ಛಾಸ್ತ್ರಕರ್ತಶ್ಚರಣಪರಿಚರಾನ್ ಶ್ರಾವಯಾಸ್ಮಾಂಶ್ಚ ಕಿಂಚಿತ್ ॥

(ಮಹಾಚಾರ್ಯರೂ ಸಚ್ಛಾಸ್ತ್ರಗಳನ್ನು ರಚಿಸಿದವರೂ ಆದ ಗುರುಗಳೇ! ನಾವು ಪೂರ್ವಜನ್ಮಗಳಲ್ಲಿ ಗಳಿಸಿದ ಪುಣ್ಯದಿಂದಲೂ ಸದಾಚಾರದಿಂದಲೂ ಒಳ್ಳೆಯ ಬುದ್ಧಿಯನ್ನು ಪಡೆದಿದ್ದೇವೆ; ಶಾಸ್ತ್ರವನ್ನು ಕೇಳಿ ತಿಳಿದುಕೊಳ್ಳಬೇಕೆಂದಿದ್ದೇವೆ; ಪ್ರಶ್ನೆ ಕೇಳಬೇಕೆಂಬ ಆಸೆ ಹೊಂದಿದ್ದೇವೆ; ಚಿಂತೆಯಲ್ಲಿ ಮಗ್ನರಾಗಿ ತಮ್ಮ ಪಾದಸೇವಕರಾಗಿದ್ದೇವೆ. ತಾವು ಅತಿಶ್ರೇಷ್ಠವಾದ, ಮನಸ್ಸಿಗೆ ಒಪ್ಪುವ, ಶ್ರುತಿಗಳಿಂದ ಆರಿಸಿದ ಮಾತುಗಳುಳ್ಳ, ದುಃಖಗಳನ್ನು ನೀಗುವ ವ್ಯಾಖ್ಯಾನವನ್ನು ಮಾಡಿದ್ದೀರಿ. ಅದನ್ನು ನಮಗೂ ಸ್ವಲ್ಪ ಶ್ರವಣಮಾಡಿಸಿ.)

ಈ ಪ್ರಾರ್ಥನೆ ನಾವೂ ಮಾಡಿಕೊಳ್ಳುವುದು ಶ್ರೇಯಸ್ಕರ.

ಕ್ರಿಸ್ತಪೂರ್ವಕಾಲದಲ್ಲಿಯೇ ಶಾಸ್ತ್ರಗಳನ್ನು ಸೂತ್ರರೂಪದಲ್ಲಿ ರಚಿಸುವುದು ಪದ್ಧತಿಯಾಗಿತ್ತು. ಶುಲ್ವಸೂತ್ರಗಳು ವೇದಗಳಿಗೆ ಸೇರಿದ ಶ್ರೌತಸೂತ್ರಗಳು. ಗೃಹಸ್ಥನ ಕರ್ತವ್ಯವನ್ನು ಬೋಧಿಸುವ ಆಶ್ವಲಾಯನಾದಿ ಗೃಹ್ಯಸೂತ್ರಗಳೂ ಧರ್ಮದ ಸ್ವರೂಪವನ್ನು ತಿಳಿಸುವ ಆಪಸ್ತಂಬಾದಿಧರ್ಮಸೂತ್ರಗಳೂ ಪ್ರಸಿದ್ಧವಾಗಿವೆ. ಹೀಗೆಯೇ ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ, ಪೂರ್ವಮೀಮಾಂಸೆ, ಉತ್ತರಮೀಮಾಂಸೆಗಳೆಂಬ ಷಡ್ದರ್ಶನಗಳಿಗೂ ಸೂತ್ರಗಳಿವೆ. ಜ್ಯೋತಿಃಶಾಸ್ತ್ರವನ್ನು ಪರಿಷ್ಕರಿಸಿ 'ಆರ್ಯಭಟೀಯಂ' ಎಂಬ ಗ್ರಂಥವನ್ನು ರಚಿಸಿದ ಪ್ರಥಮ ಭಾರತೀಯ ಗಣಿತಾಚಾರ್ಯ ಆರ್ಯಭಟನೂ ಅನೇಕ ಖಗೋಳೀಯ ಅಂಕಿ, ಅಂಶಗಳನ್ನು 'ದಶಗೀತಿಕಾ' ಎಂಬ ಹತ್ತೇ ಶ್ಲೋಕಗಳಿಂದ ಸೂತ್ರರೂಪದಲ್ಲಿ ತಿಳಿಸಿದ್ದಾನೆ. ಪಾಣಿನಿಯ ವ್ಯಾಕರಣ ಸೂತ್ರಗಳಂತೂ ಪ್ರಪಂಚದಲ್ಲಿನ ಪಂಡಿತರನ್ನೆಲ್ಲ ಬೆರಗುಗೊಳಿಸುವಂತಹ ಅದ್ಭುತ ಗ್ರಂಥ!

'ಬ್ರಹ್ಮಸೂತ್ರ'ಗಳು ಎಂಬ ಗ್ರಂಥ ಎರಡು ಸಾವಿರ ವರ್ಷಗಳಿಗೆ ಹಿಂದೆಯೇ ರಚಿತವಾದುದು. ಜೀವನನ್ನೂ ಜೀವ-ಬ್ರಹ್ಮರ ಸಂಬಂಧವಿಶೇಷವನ್ನೂ ವಿಪುಲವಾಗಿ ವಿಮರ್ಶೆ ಮಾಡಿರುವ ಈ ಗ್ರಂಥಕ್ಕೆ 'ಶಾರೀರಿಕ ಸೂತ್ರಗಳು' ಎಂದೂ ಹೆಸರಿದೆ; ಶಾರೀರಿಕ ಎಂದರೆ ಶರೀರ ಪಡೆಯುವ ಜೀವನಿಗೆ ಸಂಬಂಧಪಟ್ಟುದುದು, ಎಂದರ್ಥ.

ಅಲ್ಪಾಕ್ಷರಮಸಂದಿಗ್ಧಂ ಸಾರವದ್ವಿಶ್ವತೋಮುಖಮ್ ।
ಅಸ್ತೋಭಮನವದ್ಯಂ ಚ ಸೂತ್ರಂ ಸೂತ್ರವಿದೋ ವಿದುಃ ॥

(ಸೂತ್ರದಲ್ಲಿ ಕೆಲವೇ ಅಕ್ಷರಗಳಿರಬೇಕು, ಆದರೆ ಶಬ್ದಗಳು ಕಡಿಮೆಯಾಗಿರುವುದರಿಂದ ಸಂದೇಹಕ್ಕೆ ಎಡೆ ಇರಬಾರದು. ಸೂತ್ರ ಸಾರವತ್ತಾಗಿರಬೇಕು. ಅದು ನಾನಾ ಮುಖವಾದ ಸಮಾಲೋಚನೆಗಳಿಂದ ಕೂಡಿರಬೇಕು. ಅದರಲ್ಲಿ ಪಾದಪೂರಣವಾಗುವಂತಿರುವ ವ್ಯರ್ಥವಾದ ಅಕ್ಷರಗಳಿರಬಾರದು ಹಾಗೂ ಅದು ಯಾವ ದೋಷವನ್ನೂ ಹೊಂದಿರಬಾರದು) ಎಂದು ಹಿರಿಯರು ಸೂತ್ರಗಳ ಲಕ್ಷಣವನ್ನು ಹೇಳಿದ್ದಾರೆ.

ಬ್ರಹ್ಮಸೂತ್ರಗಳನ್ನು ವಿಷಯಾನುಸಾರವಾಗಿ ಅಧಿಕರಣಗಳನ್ನಾಗಿ ವಿಂಗಡಿಸಿದ್ದಾರೆ. ಪೂರ್ವಮೀಮಾಂಸೆಯ ರೀತಿಯಲ್ಲಿ ಇಲ್ಲಿನ ಪ್ರತಿ ಅಧಿಕರಣದಲ್ಲಿಯೂ ಐದು ಅಂಶಗಳಿರಬೇಕು. (1) **ವಿಷಯ**—ಇದು ಯಾವ ವಿಷಯವನ್ನು ಸೂತ್ರ ಪ್ರಸ್ತಾಪಿಸುತ್ತದೆ, ಎಂಬುದನ್ನು ತಿಳಿಸುವುದು. (2) **ವಿಶಯ**—ಆ ವಿಷಯದಲ್ಲಿ ನಿಷ್ಕೃಷ್ಟ ಜ್ಞಾನಪ್ರಾಪ್ತಿಗೆ ಅಡ್ಡಿಯಾಗಿರುವ ಸಂದೇಹ. (3) **ಪೂರ್ವಪಕ್ಷ**—ಪೂರ್ವಾಚಾರ್ಯರು ವಿಷಯವನ್ನು ಮಂಡಿಸಿದ ಬಗೆ. (4) **ಸಿದ್ಧಾಂತ**—ಪೂರ್ವಪಕ್ಷಗಳನ್ನೆಲ್ಲ ವಿಮರ್ಶಿಸಿ, ವಿಷಯ ಏನನ್ನು ತಿಳಿಸುವುದು, ಎಂದು ಹೇಳುವ ನಿಃಸಂದೇಹವಾದ ಉಪಸಂಹಾರ ಅಥವಾ ಕೊನೆಯ ಮಾತು. (5) **ಸಂಗತಿ**—ಹಿಂದುಮುಂದಿನ ಅಧಿಕರಣಗಳಿಗಿರುವ ಸಂಬಂಧ; ಎಂದರೆ ಆ ವಿಷಯವನ್ನು ಕುರಿತು ಏಕೆ ವಿಚಾರ ಮಾಡಬೇಕು, ಎಂಬ ಕಾರಣ ನಿರೂಪಣೆ. ಇವು ಮುಖ್ಯವಾದ ಐದು ಅಂಶಗಳು. "ಸಂಗತಿ"ಗೆ ಬದಲು "ಪ್ರಯೋಜನ" ಎಂಬ ಅಂಶವನ್ನು ವೇದಾಂತಿಗಳು ಹೇಳುವುದುಂಟು. ಜಿಜ್ಞಾಸಾಧಿಕರಣವೆಂಬ ಮೊದಲನೆಯದರಲ್ಲಿ 'ಅಥಾತೋ ಬ್ರಹ್ಮಜಿಜ್ಞಾಸಾ' ಎಂಬ ಒಂದೇ ಸೂತ್ರವಿದೆ. ಆನಂದಮಯಾಧಿಕರಣದಲ್ಲಿ 'ಆನಂದಮಯೋಽಭ್ಯಾಸಾತ್' ಎಂಬುದರಿಂದ ಆರಂಭವಾಗುವ ಎಂಟು ಸೂತ್ರಗಳಿವೆ. ಆದುದರಿಂದ ಅಧಿಕರಣದಲ್ಲಿನ ಸೂತ್ರಗಳ ಸಂಖ್ಯೆ ಅಲ್ಲಿ ಪ್ರತಿಪಾದಿತವಾಗಿರುವ ವಿಷಯವನ್ನು ಅವಲಂಬಿಸಿರುತ್ತದೆ.

ಅತಿಸಂಕುಚಿತ ರೂಪ ಪಡೆದ ಈ ಸೂತ್ರಗಳನ್ನು ಕಾದಂಬರಿಯಂತೆ ಓದಿ ಅರ್ಥಮಾಡಿಕೊಳ್ಳಲಾಗುವುದಿಲ್ಲ. ಸಾವಿರಾರು ವರ್ಷಗಳ ಹಿಂದಿನ ಕಾಲದಲ್ಲಿ

ಪಾಠ ಕಲಿಯುತ್ತಿದ್ದ ಶಿಷ್ಯ ಅಲ್ಲಲ್ಲಿ ಜ್ಞಾಪಕ ಮಾಡಿಕೊಳ್ಳುವುದಕ್ಕಾಗಿ ಮಾತ್ರ ಕೆಲವೇ ಶಬ್ದಗಳಿಂದ ಸೂತ್ರಗಳನ್ನು ಹೆಣೆದಿದ್ದಾರೆ. ಶಿಷ್ಯನ ಎದುರಿನಲ್ಲಿ ಕುಳಿತಿದ್ದು ಅವನ ಸಂಶಯಗಳನ್ನು ತನ್ನ ವ್ಯಾಖ್ಯಾನದಿಂದ ಗುರು ನಿವಾರಿಸುತ್ತಿದ್ದ. ಆಗ ಗುರುಪರಂಪರೆಯಿಂದಲೇ ಜನರು ವಿಷಯಗಳನ್ನು ತಿಳಿದುಕೊಳ್ಳುತ್ತಿದ್ದರು (ಬರೆವಣಿಗೆ ಆಗ ಇರಲಿಲ್ಲ!) ಕಾಲಾಂತರದಲ್ಲಿ ಪಾಠಕ್ರಮದಲ್ಲಿನ ಭೇದಗಳಿಂದ ಸೂತ್ರಗಳ ತಾತ್ಪರ್ಯ ಒಂದೇ ಬಗೆಯಾಗಿ ಉಳಿಯಲಿಲ್ಲ. ನಿಷ್ಕೃಷ್ಟವಾದ ತಾತ್ಪರ್ಯವನ್ನು ಬರೆಯುತ್ತೇವೆಂದು ಆಗಿಂದಾಗ ಭಾಷ್ಯಕಾರರು ಹುಟ್ಟಿಕೊಂಡರು. ಶ್ರೀಮದಾನಂದತೀರ್ಥರ ಕಾಲಕ್ಕೆ ಹಿಂದೆಯೇ ಪರಸ್ಪರ ವಿರುದ್ಧವಾದ 21 ಭಾಷ್ಯಗಳಿದ್ದವು. ಆ ಆಚಾರ್ಯರ ತರುವಾಯವೂ ನಿಂಬಾರ್ಕ, ಶ್ರೀಕಂಠ ಮೊದಲಾದವರು ಭಾಷ್ಯಗಳನ್ನು ರಚಿಸಿದರು.

ಪೂರ್ಣಪ್ರಜ್ಞರ ಕಾಲಕ್ಕೇ (ಕ್ರಿ. ಶ. ಹದಿಮೂರನೆಯ ಶತಮಾನ) ಬ್ರಹ್ಮಸೂತ್ರಗಳು ಅಧಿಕರಣಗಳಲ್ಲಿ ಒಂದೇ ಬಗೆಯಾಗಿ ವಿಂಗಡಿಸಲ್ಪಟ್ಟಿರಲಿಲ್ಲ. ಸೂತ್ರಗಳ ಒಟ್ಟು ಸಂಖ್ಯೆಯೂ ಬೇರೆ ಬೇರೆಯಾಗಿತ್ತು. ಶಾಂಕರ ಭಾಷ್ಯದಲ್ಲಿ 555, ರಾಮಾನುಜರ ಶ್ರೀಭಾಷ್ಯದಲ್ಲಿ 545, ಪೂರ್ಣಪ್ರಜ್ಞಭಾಷ್ಯದಲ್ಲಿ 564 ಸೂತ್ರಗಳನ್ನೂ ಉಲ್ಲೇಖಿಸಲಾಗಿದೆ. ಪೂರ್ಣಪ್ರಜ್ಞರು ಭಾಲ್ಲವೇಯ, ಕೌಂಠರವ್ಯ, ಕೌಷೀತಕೀ, ತುರ ಮೊದಲಾದ ಶ್ರುತಿಗಳನ್ನೂ ಪಾದ್ಮ, ಸ್ಕಾಂದ, ಬ್ರಾಹ್ಮ ಮೊದಲಾದ ಕೆಲವು ಪುರಾಣಗಳನ್ನೂ ತಮ್ಮ ಅಭಿಪ್ರಾಯಗಳಿಗೆ ಪೋಷಕವಾದ ಪ್ರಮಾಣಗಳನ್ನಾಗಿ ಉದಾಹರಿಸಿದ್ದಾರೆ. ಆ ಆಚಾರ್ಯರಿಗೆ ಬ್ರಹ್ಮಸೂತ್ರಗಳು ಅತ್ಯಂತ ಪ್ರಾಮಾಣಿಕವಾದ ದರ್ಶನಗ್ರಂಥ. ಅವರಲ್ಲಿನ ವಿಷಯಗಳನ್ನು ವಿವರಿಸುವುದಕ್ಕೂ ನ್ಯಾಯಗಳನ್ನು ವಿಮರ್ಶಿಸುವುದಕ್ಕೂ ಅವರು **ಬ್ರಹ್ಮಸೂತ್ರಭಾಷ್ಯ, ಅಣುಭಾಷ್ಯ, ಅನುವ್ಯಾಖ್ಯಾನ ಮತ್ತು ನ್ಯಾಯ ವಿವರಣ** ಎಂಬ ನಾಲ್ಕು ಗ್ರಂಥಗಳನ್ನು ರಚಿಸಿದ್ದಾರೆ.

ಆನಂದತೀರ್ಥರ ಭಾಷ್ಯವೂ ಅತಿ ಸಂಕ್ಷಿಪ್ತ, ಆದರೆ ಬಹ್ವರ್ಥಗರ್ಭಿತ. ಅವರ ಆಶಯವನ್ನು ಸಾರ್ಥಕವಾಗಿ ಹೊರಗೆಡಹುವುದಕ್ಕಾಗಿ ಹಲವಾರು ಉದ್ದಾಮ ಪಂಡಿತರು ಶ್ರಮಪಟ್ಟಿದ್ದಾರೆ.

ಶ್ರೀಮನ್ಮಧ್ವಾಚಾರ್ಯರ ಸಾಕ್ಷಾತ್ ಶಿಷ್ಯರಾದ ತ್ರಿವಿಕ್ರಮಪಂಡಿತರು 'ತತ್ತ್ವಪ್ರದೀಪ' ಎಂಬ ವ್ಯಾಖ್ಯಾನವನ್ನೂ ಪದ್ಮನಾಭತೀರ್ಥರು 'ಸತ್ತರ್ಕ-

ದೀಪಾವಲೀ' ಎಂಬ ಗ್ರಂಥವನ್ನೂ ಜಯತೀರ್ಥರು 'ತತ್ತ್ವಪ್ರಕಾಶಿಕಾ' ಎಂಬ ಟೀಕೆಯನ್ನೂ ಸೂತ್ರಭಾಷ್ಯದ ತಾತ್ಪರ್ಯವನ್ನು ತಿಳಿಸಲು ಒದಗಿಸಿದ್ದಾರೆ. ಅನುವ್ಯಾಖ್ಯಾನವೆಂಬ ಸರ್ವೋತ್ಕೃಷ್ಟ ಗ್ರಂಥಕ್ಕೆ ಪದ್ಮನಾಭತೀರ್ಥರು 'ಸನ್ನ್ಯಾಯರತ್ನಾವಲೀ' ಎಂಬ ಟೀಕೆಯನ್ನೂ ಜಯತೀರ್ಥರು 'ನ್ಯಾಯ-ಸುಧಾ' ಎಂಬ ಟೀಕೆಯನ್ನೂ ಬರೆದು ಕೃತಾರ್ಥರಾಗಿದ್ದಾರೆ. ಇವನ್ನೆಲ್ಲ ಉಪಜೀವಿಸಿಯೇ ವ್ಯಾಸತೀರ್ಥರು, ವಾದಿರಾಜರು, ವಿಜಯೀಂದ್ರರು, ರಘೂತ್ತಮತೀರ್ಥರು, ರಾಘವೇಂದ್ರರು ಮೊದಲಾದ ಜ್ಞಾನಿವರ್ಯರು ನಾನಾ ಟಿಪ್ಪಣಿಗಳನ್ನು ಬರೆದು ಬ್ರಹ್ಮಸೂತ್ರಗಳ ತಾತ್ಪರ್ಯವನ್ನು ವಿಶದ ಗೊಳಿಸಿದ್ದಾರೆ.

ಬ್ರಹ್ಮಸೂತ್ರಗಳು ನಾಲ್ಕು ಅಧ್ಯಾಯಗಳಲ್ಲಿ ಸಂಗ್ರಹಿಸಲ್ಪಟ್ಟಿವೆ. ಪ್ರತಿಯೊಂದು ಅಧ್ಯಾಯದಲ್ಲಿಯೂ ನಾಲ್ಕು ಪಾದಗಳಿವೆ. ಅವುಗಳಲ್ಲಿನ ಸೂತ್ರಗಳು ವಿಷಯದ ದೃಷ್ಟಿಯಿಂದ ಅಧಿಕರಣಗಳೆಂದು ಗುಂಪುಗೂಡಿಸ ಲ್ಪಟ್ಟಿವೆ. ಮೊದಲನೆಯ ಅಧ್ಯಾಯವನ್ನು 'ಸಮನ್ವಯಾಧ್ಯಾಯ'ವೆನ್ನು ತ್ತಾರೆ. ಮೇಲುನೋಟದಲ್ಲಿ ಪರಸ್ಪರ ವಿರುದ್ಧವಾಗಿ ತೋರಿಬರುವ ಶ್ರುತಿ ಗಳಿಗೆಲ್ಲ ಸುಸಂಗತವಾದ ಏಕರೀತಿಯ ತಾತ್ಪರ್ಯವನ್ನು ಹೇಳಿ, ಆಕಾಶಾದಿ ಎಲ್ಲ ಶಬ್ದಗಳೂ ಬ್ರಹ್ಮನನ್ನೇ ಮುಖ್ಯವಾಗಿ ಬೋಧಿಸುವುವೆಂದು ಸೂತ್ರ ಕಾರರು ಈ ಅಧ್ಯಾಯದಲ್ಲಿ ಸಮರ್ಥಿಸಿದ್ದಾರೆ. ಮೊದಲನೆಯ ಅಧ್ಯಾಯ ದಲ್ಲಿ ಹೇಳಿರುವ ವಿಷಯಗಳು ಇತರ ಪ್ರಮಾಣಗ್ರಂಥಗಳಿಗೆ ವಿರೋಧ ಹೊಂದಿಲ್ಲ, ಎಂದು ತೋರಿಸಿರುವುದರಿಂದ ಎರಡನೆಯದಕ್ಕೆ 'ಅವಿರೋಧಾ-ಧ್ಯಾಯ' ಎಂದು ಹೆಸರು ಬಂದಿದೆ. ಸಂಸಾರದಿಂದ ಮುಕ್ತಿ ಪಡೆಯಲು ಬ್ರಹ್ಮ-ಸಾಕ್ಷಾತ್ಕಾರ ಪಡೆಯುವುದು ಆವಶ್ಯಕವಾದುದರಿಂದ ಅದಕ್ಕಾಗಿ ಸಾಧನಗಳನ್ನು ತಿಳಿಸುವ ಮೂರನೆಯದು 'ಸಾಧನಾಧ್ಯಾಯ'. ಬ್ರಹ್ಮಜ್ಞಾನ ಪಡೆದು ಕರ್ಮ ಬಂಧನಗಳನ್ನು ಕಳಚಿಕೊಂಡವನಿಗೆ ಸಿಗುವ ಮುಕ್ತಿಯ ಸ್ವರೂಪವನ್ನು ತಿಳಿಸು ವುದು ನಾಲ್ಕನೆಯದಾದ 'ಫಲಾಧ್ಯಾಯ'.

ಬ್ರಹ್ಮಸೂತ್ರಗಳು ರಚಿತವಾಗುವುದಕ್ಕ ಮೊದಲೇ ಪ್ರಚಲಿತವಾಗಿದ್ದ ಚಾರ್ವಾಕ, ಬೌದ್ಧ, ಜೈನ, ಪಾಶುಪತಾದಿ ವಿಭಿನ್ನಮತಗಳ ನಿಲುವನ್ನು ಎರಡನೆಯ ಅಧ್ಯಾಯದಲ್ಲಿ ಖಂಡಿಸಲಾಗಿದೆ. ಇದಲ್ಲದೆ ತಮ್ಮ ಶಿಷ್ಯರಾಗಿದ್ದ

ಜೈಮಿನಿ, ಬಾದರಿ, ಕಾಶಕೃತ್ಸ್ನ, ಕಾರ್ಷ್ಣಾಜಿನಿ, ಔಡುಲೋಮಿ ಮುಂತಾದ ಮಹರ್ಷಿಗಳ ಅಭಿಪ್ರಾಯಗಳನ್ನೂ ಅಲ್ಲಲ್ಲಿ ಉಲ್ಲೇಖಿಸಿ, ಸೂತ್ರಕಾರರು ತಮ್ಮ ಅಭಿಪ್ರಾಯವನ್ನು "ಬಾದರಾಯಣರು ಹೀಗೆ ಹೇಳುತ್ತಾರೆ" ಎಂದು ಕೊನೆಯ ನಿರ್ಧಾರವನ್ನಾಗಿ ಕೊಟ್ಟಿದ್ದಾರೆ. ಸೂತ್ರಗಳಲ್ಲಿ 'ಬಾದರಾಯಣ' ಎಂಬ ಹೆಸರು ಮಾತ್ರ ಬಂದಿದೆ; ಎಲ್ಲಿಯೂ ಕೃಷ್ಣ, ದ್ವೈಪಾಯನ, ವೇದವ್ಯಾಸ ಎಂಬ ಹೆಸರುಗಳು ಇಲ್ಲ. ಬ್ರಹ್ಮಸೂತ್ರಕಾರರಾದ ಬಾದ-ರಾಯಣರೇ ಮಹಾಭಾರತವನ್ನು ರಚಿಸಿದ ವೇದವ್ಯಾಸರೋ ಅಲ್ಲವೋ, ಎಂದು ಅನೇಕರು ವಾದ-ವಿವಾದ ಮಾಡಿದ್ದಾರೆ. ಆದರೆ ಬ್ರಹ್ಮಸೂತ್ರಗಳ ಉತ್ಕೃಷ್ಟತೆಯನ್ನೂ ಭಾರತೀಯ ತತ್ತ್ವಜ್ಞಾನಕ್ಕೆ ಅವುಗಳಿಂದ ಒದಗಿರುವ ಪ್ರಯೋಜನವನ್ನೂ ಅರಿತುಕೊಳ್ಳಲು ಅಂತಹ ವಿವಾದಗಳು ಯಾವ ರೀತಿಯಿಂದಲೂ ಸಹಾಯಕವಾಗಿರುವುದಿಲ್ಲ.

ಬ್ರಹ್ಮಸೂತ್ರಗಳನ್ನು ಆಧಾರಗ್ರಂಥವನ್ನಾಗಿ ಇಟ್ಟುಕೊಂಡು ಅವಕ್ಕೆ ಭಾಷ್ಯ, ಟೀಕೆ, ಟಿಪ್ಪಣಿಗಳನ್ನು ಸಂಸ್ಕೃತ ಭಾಷೆಯಲ್ಲಿ ಅನೇಕ ವಿದ್ವಾಂಸರು ಬರೆದಿದ್ದಾರೆ. ದ್ವೈತಾದ್ವೈತವಿಶಿಷ್ಟಾದ್ವೈತಾದಿ ಮತಭೇದಗಳಿಂದ ನಾನಾ ಭಾಷ್ಯಗಳು ವಿಭಿನ್ನ ಸಿದ್ಧಾಂತಗಳನ್ನು ಮಂಡಿಸುವುದರಿಂದ ಅವುಗಳಲ್ಲಿ ಪರಸ್ಪರ ಆಕ್ಷೇಪಣೆ, ಶಂಕೆ, ಸಮಾಧಾನಗಳು ತಲೆದೋರಿವೆ. ಎಲ್ಲ ವೇದಾಂತಸಾಹಿತ್ಯವೂ ಬ್ರಹ್ಮಸೂತ್ರಗಳ ಸಾರವನ್ನು ಚರ್ಚಿಸುವುದರಲ್ಲಿ ಅತ್ಯಾಸಕ್ತಿ ತೋರಿದೆ.

ಆದರೆ ಕನ್ನಡದಲ್ಲಿ ಸೂತ್ರಗಳ ಸರಳಾನುವಾದವನ್ನು ಕೊಟ್ಟು ಅವುಗಳಲ್ಲಿ ಅಡಗಿರುವ ಮುಖ್ಯಭಾವಗಳನ್ನು ಎತ್ತಿತೋರಿಸುವ ಗ್ರಂಥಗಳು ತುಂಬ ಕಡಿಮೆ. ನನಗೆ ತಿಳಿದಿರುವ ಮಟ್ಟಿಗೆ ಬೆಂಗಳೂರಿನ ರಾಮಕೃಷ್ಣಾಶ್ರಮದ ಗುರುಗಳು ಮೂವರು ಸುಪ್ರಸಿದ್ಧ ಆಚಾರ್ಯರ ಅಭಿಪ್ರಾಯಗಳನ್ನೂ ಹೊರಗೆಡವುವಂತೆ "ಬ್ರಹ್ಮಸೂತ್ರಗಳು" ಎಂಬ ಹೆಸರಿನ ಪುಸ್ತಕವೊಂದನ್ನು ಪ್ರಕಟಿಸಿದ್ದಾರೆ. ಅದರ ಗಾತ್ರ ದೊಡ್ಡದು, ಬೆಲೆ ಸಾಮಾನ್ಯರಿಗೆ ಎಟುಕದಂತಹುದು, ಎಲ್ಲ ಓದುಗರಿಗೂ ಮೂರು ವಿಧ ಭಾಷ್ಯಗಳ ಪರಿಚಯದ ಆವಶ್ಯಕತೆ ಇರುವುದಿಲ್ಲ.

ದ್ವೈತಮತ ಪ್ರಚಾರಕರಾದ ಶ್ರೀಮದಾನಂದತೀರ್ಥ ಭಗವತ್ಪಾದಾ-ಚಾರ್ಯರ ಭಾಷ್ಯವನ್ನು ಬಹುಮಟ್ಟಿಗೆ ಅನುಸರಿಸಿ, ಅವರ ಮಾತುಗಳನ್ನೇ

ಉದಾಹರಿಸಿ, ಸಂಸ್ಕೃತವಾಕ್ಯಗಳಿಗೆಲ್ಲ ಕನ್ನಡದಲ್ಲಿ ಸರಳಾನುವಾದವನ್ನು ಒದಗಿಸಿ, ಬ್ರಹ್ಮಸೂತ್ರಗಳ ತಿರುಳಿನ ಪರಿಚಯ ಮಾಡಿಕೊಡುವುದೇ ಈ ಗ್ರಂಥದ ಮುಖ್ಯ ಉದ್ದೇಶ.

ಶ್ರೀಮದಾಚಾರ್ಯರ ಸಮಕಾಲೀನರೂ, ಪ್ರಿಯಶಿಷ್ಯರೂ ಆಗಿದ್ದ ತ್ರಿವಿಕ್ರಮಪಂಡಿತರ 'ತತ್ತ್ವಪ್ರದೀಪ'ದಲ್ಲಿನ ಅಭಿಪ್ರಾಯಗಳನ್ನು ಕೆಲವು ಕಡೆ ಬಳಸಿಕೊಂಡಿದ್ದೇನೆ. ಮುಂದಿನ ಅನೇಕ ಟೀಕಾ-ಟಿಪ್ಪಣಿಕಾರರ ಗ್ರಂಥಗಳ ವಿಷಯಗಳನ್ನೆಲ್ಲ ಅಳವಡಿಸಿಕೊಳ್ಳುವುದು ನನ್ನ ಉದ್ದೇಶವಾಗಿರಲಿಲ್ಲ.

"ವೇದವಾಕ್ಯಗಳನ್ನು ಅನುವಾದ ಮಾಡಿ, ಸ್ಮೃತಿಗಳ ಮಾತುಗಳಿಂದ ಅಭಿಪ್ರಾಯವನ್ನು ಸ್ಪಷ್ಟಗೊಳಿಸಿ ಅತ್ಯಂತ ಯುಕ್ತವಾದ ಯುಕ್ತಿಗಳಿಂದ ಅರ್ಥವನ್ನು ತಿಳಿಸಿರುವ ಈ ಭಾಷ್ಯ ಸಾಧಾರಣ ಜನರಿಗೂ ಬೋಧಕವಾಗಿದೆ ; ಆದರೆ ಇದರಲ್ಲಿ ಅಡಗಿರುವ ಎಲ್ಲ ವಿಷಯಗಳನ್ನೂ ಅರಿತುಕೊಳ್ಳುವುದು ಪಂಡಿತರಿಗೂ ಕಷ್ಟಸಾಧ್ಯ" ಎಂದು ಆನಂದತೀರ್ಥರ ಜೀವನವನ್ನು ಚಿತ್ರಿಸಿರುವ 'ಸುಮಧ್ವವಿಜಯ'ದಲ್ಲಿ ಹೇಳಲಾಗಿದೆ.

ಕನ್ನಡ ಮಾತನಾಡಬಲ್ಲ ಸಹಸ್ರಾರು ವಿದ್ವಾಂಸರು ಈ ಕೆಲಸವನ್ನು ಉತ್ತಮವಾಗಿ ನಿರ್ವಹಿಸಬಲ್ಲರಾದರೂ, ಸಂಸ್ಕೃತ ಬಾರದ ಜನರ ವಿಷಯದಲ್ಲಿ ಅವರಿಗಿರುವ ಅನಾದರದಿಂದ ಈ ಕಾರ್ಯ ಇದುವರೆಗೆ ಸಾಧ್ಯವಾಗಿಲ್ಲ. "ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ"—ಸ್ವಧರ್ಮವನ್ನು ಆಚರಿಸುತ್ತಾ ಸತ್ತರೂ ಶ್ರೇಯಸ್ಸಾಗುವುದು, ಪರಧರ್ಮ ನಮಗೆ ಭಯವನ್ನೇ ಉಂಟುಮಾಡುವುದು — ಎಂದು ಭಗವದ್ಗೀತೆ ತಿಳಿಸುತ್ತದೆ. ಹಲವಾರು ಭಾವುಕರು ತಮ್ಮ ಗುರುಗಳಾದ ಆಚಾರ್ಯ ಮಧ್ವರು ಮುಖ್ಯವಾಗಿ ತಿಳಿಸಿದ ವಿಷಯಗಳನ್ನು ಅರಿತುಕೊಳ್ಳಲು ಆಸಕ್ತಿಹೊಂದಿದ್ದರೂ ಸಂಸ್ಕೃತ ಭಾಷೆಯ ಪರಿಚಯದ ಕೊರತೆ, ಪಂಡಿತರ ಉದಾಸೀನತೆಗಳಿಂದ ಅವರ ಆಶೆ ಈಡೇರಿಲ್ಲ. ಅಂಥವರ ಅನುಕೂಲಕ್ಕಾಗಿಯೇ ಈ ಪ್ರಯತ್ನ ನಡೆದಿದೆ.

ಇಲ್ಲಿನ ವಿಷಯ ತುಂಬ ಗಂಭೀರ ; ಬರೆವಣಿಗೆಯ ಲಾಲಿತ್ಯಮಾತ್ರದಿಂದಲೇ ಅದು ಎಲ್ಲರಿಗೂ ಸುಗಮವಾಗದು. ಪುನಃ ಪುನಃ ಓದಿಕೊಂಡು ವಿಷಯಚಿಂತನೆ ಮಾಡುತ್ತಿರುವುದೊಂದೇ ಇದನ್ನು ಚೆನ್ನಾಗಿ ತಿಳಿದುಕೊಳ್ಳಲು ಹೆದ್ದಾರಿ ! "ಆವೃತ್ತಿರಸಕೃದುಪದೇಶಾತ್" ಎಂದೇ ಈ ಗ್ರಂಥದ ನಾಲ್ಕನೆಯ

ಅಧ್ಯಾಯು ಆರಂಭವಾಗುತ್ತದೆಯಲ್ಲವೆ? ಇದನ್ನು ಅನೇಕ ಬಾರಿ ಓದಿ ಸಜ್ಜನರು ಕೃತಾರ್ಥರಾಗಲೆಂದೇ ನನ್ನ ಹಾರೈಕೆ.

ಮೂಲಗ್ರಂಥ ನನ್ನಲ್ಲಿರದಿದ್ದ ಕೊರತೆಯನ್ನು ನೀಗಿ ನನ್ನ ಪೂಜ್ಯ ಮಿತ್ರರು ಶ್ರೀ ಗೌಡಗಿರಿ ಗೋಪಾಲಕೃಷ್ಣಾಚಾರ್ಯರು ನನಗೆ ಬೇಕಾಗಿದ್ದ ಗ್ರಂಥಗಳನ್ನು ಆದರದಿಂದ ಒದಗಿಸಿ ಈ ಕಾರ್ಯದಲ್ಲಿ ಪ್ರೋತ್ಸಾಹಕರಾದರು; ಅವರಿಗೆ ನಾನು ಚಿರಋಣಿ. ವಸಂತ ಪ್ರಿಂಟಿಂಗ್ ವರ್ಕ್ಸ್‌ನ ಮಾಲಿಕರಾದ ಶ್ರೀ ಎಂ.ಎಸ್. ನಾರಾಯಣರಾವ್ ಮತ್ತು ಅವರ ಸೋದರರು ಶ್ರೀ ಎಂ.ಎಸ್. ಗೋಪೀನಾಥ್ ಇವರು ನನ್ನನ್ನು ಹುರಿದುಂಬಿಸಿ ನನ್ನಿಂದ ಹಸ್ತಪ್ರತಿಯನ್ನು ಬರೆಸಿ ಅಂದವಾದ ಮುದ್ರಣದಿಂದ ಈ ಕಿರುಹೊತ್ತಗೆಯನ್ನು ಹೊರತರುವ ಹೊಣೆಯನ್ನು ವಹಿಸಿದುದು ನನ್ನ ಪುಣ್ಯವೇ! ಈ ಗ್ರಂಥ ವೇದಾಂತವನ್ನು ಅರಿತುಕೊಳ್ಳಲು ಮೊದಲಿನ ಮೆಟ್ಟಿಲು ಮಾತ್ರ. ಇದರಿಂದ ಪ್ರಭಾವಿತ ರಾದವರು ಅನೇಕ ಗುರುಹಿರಿಯರು ರಚಿಸಿರುವ ಇತರ ಗ್ರಂಥಗಳನ್ನೂ ಓದಿ ಕೊಂಡು ಕೃತಾರ್ಥರಾಗಲೆಂದು ನನ್ನ ಆಶಯ.

ಚಕ್ರೇ ಕರ್ಣಾಟಭಾಷಾಯಾಂ ಸೂತ್ರಭಾವಪ್ರಕಾಶನಮ್ ।
ಕರಿಗಿರ್ಯಾರ್ಯಪುತ್ರೋಽಹಂ ನರಸಿಂಹೋ ಯಥಾಮತಿ ॥

ಸೂತ್ರವ್ಯಾಖ್ಯಾನಕುಶಲಾಃ ಶಾಸ್ತ್ರಜ್ಞಾ ದ್ವಿಜಸತ್ತಮಾಃ ।
ಕ್ಷಾಮ್ಯಂತು ಕೃಪಯಾ ಧಾರ್ಷ್ಟ್ಯಂ ತತ್ಕಾರ್ಯನಿರತಸ್ಯ ಮೇ ॥

ವಿಶ್ವಂಭರಂ ಸಕಲಸದ್ಗುಣಪೂರ್ಣದೇಹಂ
ಚಿಂತಾಮಯಾದಿವಿವಿಧಾಖಿಲದೋಷದೂರಮ್ ।
ಜ್ಞೇಯಂ ಸಮಸ್ತನಿಗಮೈರಿತಿಹಾಸಪೂರ್ವೈ-
ರ್ಭಕ್ತ್ಯಾಽಪ್ಯಮಚ್ಯುತಮಹಂ ಮನಸಾ ಸ್ಮರಾಮಿ ॥

ಮಾತೃಭ್ಯೋ ನಮಃ, ಪಿತೃಭ್ಯೋ ನಮಃ, ಆಚಾರ್ಯೇಭ್ಯೋ ನಮಃ.

ಬೆಂಗಳೂರು
ಜೂನ್ 1979

ಎನ್. ಕೆ. ನರಸಿಂಹಮೂರ್ತಿ
21/122, ಡಿ.ವಿ.ಜಿ. ರಸ್ತೆ
ಬೆಂಗಳೂರು-560 004

ಬ್ರಹ್ಮಸೂತ್ರಗಳು

ನಾರಾಯಣಂ ಗುಣೈಃ ಸರ್ವೈರುದೀರ್ಣಂ ದೋಷವರ್ಜಿತಮ್ ।
ಜ್ಞೇಯಂ ಗಮ್ಯಂ ಗುರೂಂಶ್ಚಾಪಿ ನತ್ವಾ ಸೂತ್ರಾರ್ಥ ಉಚ್ಯತೇ ॥

"ಸರ್ವಗುಣಪರಿಪೂರ್ಣನೂ ಸರ್ವಥಾ ದೋಷರಹಿತನೂ ಸಕಲ ಸಜ್ಜನರಿಂದಲೂ ತಿಳಿಯಲ್ಪಡಬೇಕಾಗಿರುವವನೂ ಜ್ಞಾನ, ಭಕ್ತಿ, ಉಪಾಸನೆಗಳಿಂದ ಪ್ರಾಪ್ಯನೂ ಆಗಿರುವ ಶ್ರೀಮನ್ನಾರಾಯಣನನ್ನೂ, ಹಾಗೆಯೇ ಗುರುಗಳನ್ನೂ ಅಭಿವಂದಿಸಿ ಬ್ರಹ್ಮಸೂತ್ರಗಳ ಅರ್ಥ ನನ್ನಿಂದ ಹೇಳಲ್ಪಡುತ್ತಿದೆ"; ಬಾದರಾಯಣರೆಂದು ಸುಪ್ರಸಿದ್ಧರಾದ, ಶ್ರೀಹರಿಯ ಅವತಾರವೇ ಆದ ವೇದವ್ಯಾಸಮಹರ್ಷಿಗಳಿಂದ ರಚಿತವಾದ ಬ್ರಹ್ಮಸೂತ್ರಗಳೆಂಬ ಗ್ರಂಥರತ್ನಕ್ಕೆ ಭಾಷ್ಯವನ್ನು ಬರೆಯಲು ಆರಂಭಿಸಿದ ಪೂರ್ಣಪ್ರಜ್ಞರು ಹೀಗೆ ಮಂಗಳಾಚರಣೆ ಮಾಡಿದ್ದಾರೆ.

ಕವಿ ಬರೆಯಲು ಆರಂಭಿಸಿದ ಗ್ರಂಥ ನಿರ್ವಿಘ್ನವಾಗಿ ಪೂರ್ಣವಾಗಬೇಕು; ಆತನ ಉದ್ದೇಶ ಸಫಲವಾಗಬೇಕು; ಓದುಗರಿಗೆ ಪ್ರಯೋಜನವಾಗಬೇಕು. ಪ್ರಕೃತ ಗ್ರಂಥವಾದ ಸೂತ್ರಭಾಷ್ಯವನ್ನು ರಚಿಸುವಾಗ, "ಜನನ ಮರಣ ಪ್ರವಾಹರೂಪವಾದ ಸಂಸಾರದಿಂದ ಬಿಡುಗಡೆ ಪಡೆಯುವ ಮೋಕ್ಷವೆಂಬ ಮುಖ್ಯಫಲವನ್ನು ಸಂಪಾದಿಸಿಕೊಡಬಲ್ಲ ಸಾಧನವಾಗಬೇಕು, ಯಾವ ತಡೆಯೂ ಆಗದೆ ಗ್ರಂಥ ಮುಗಿಯಬೇಕು, ಸುಜನರಿಗೆ ಇದರಿಂದ ಹಿತವಾಗಬೇಕು" ಎಂಬ ಅಪೇಕ್ಷೆಯಿಂದ ಲೋಕರೀತಿಯನ್ನು ಅನುಸರಿಸಿ ಆನಂದತೀರ್ಥ ಗುರುವರ್ಯರಿಗೆ ತಮಗೆ ಪ್ರಿಯನಾದ ಶ್ರೀಮನ್ನಾರಾಯಣನ ಸ್ತೋತ್ರರೂಪವಾದ ಮಂಗಳಾಚರಣೆ ಮಾಡಬೇಕೆನ್ನಿಸಿತು. ಸದಾ ಶ್ರೀಹರಿಯ ಧ್ಯಾನ ಮಾಡುತ್ತಾ ಲೋಕಕಲ್ಯಾಣ ಮಾಡುತ್ತಿದ್ದ ಆಚಾರ್ಯರಿಗೆ ಮಂಗಳಾಚರಣೆ ಒಂದು ವಿಶೇಷ ಕರ್ಮವಲ್ಲ. ಇತರರಿಗೆ ಮಾರ್ಗದರ್ಶನ ಮಾಡುವುದಕ್ಕಾಗಿಯೇ ಅವರು ಗ್ರಂಥಾರಂಭದಲ್ಲಿ ಮಂಗಳಾಚರಣೆಗೈದು ವಿಶೇಷವಾಗಿ ನಾರಾಯಣನಿಗೆ ನಮಸ್ಕಾರ ಮಾಡಿದುದು.

ಬಾದರಾಯಣರು ಬ್ರಹ್ಮಸೂತ್ರಗಳನ್ನು ರಚಿಸಿದ ಸಂದರ್ಭವನ್ನು ಭಾಷ್ಯಕಾರರು ಹೀಗೆ ತಿಳಿಸಿದ್ದಾರೆ: "ತಮ್ಮಲ್ಲಿ ಅತಿಥಿಗಳಾಗಿದ್ದ ತಮಗೇ

ಅಪಚಾರವೆಸಗಿದ ಋಷಿಗಳಿಗೆ, ತಮ್ಮಲ್ಲಿದ್ದಾಗ ಕಲಿತುದುದನ್ನೆಲ್ಲ ಮರೆಯು ವಂತೆ ಗೌತಮರು ಶಾಪ ಕೊಟ್ಟರು. ಮುಂದೆ ದ್ವಾಪರಯುಗದಲ್ಲಿ ಎಲ್ಲೆಡೆಯೂ ಜ್ಞಾನ, ಅಜ್ಞಾನಗಳು ಬೆರೆತುಹೋಗಿ ವೇದಾರ್ಥವನ್ನು ನಿರ್ಣಯ ಮಾಡಲು ದುಃಸಾಧ್ಯವಾದಾಗ, ಬ್ರಹ್ಮಾದಿದೇವತೆಗಳಿಂದ ಪ್ರಾರ್ಥಿತನಾದ ಮಹಾವಿಷ್ಣು ಪರಾಶರ–ಸತ್ಯವತಿಯರಿಗೆ ಮಗನಾಗಿ ಕೃಷ್ಣದ್ವೈಪಾಯನನೆಂದು ಅವತಾರ ತಾಳಿದನು. ಇಷ್ಟಪ್ರಾಪ್ತಿ, ಅನಿಷ್ಟಪರಿಹಾರಗಳಿಗಾಗಿ ಉಪಾಯವನ್ನು ಕಂಡುಕೊಳ್ಳಲಾಗದಿದ್ದ ಜನರಿಗಾಗಿ ಆತನು ವೇದಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿದನು; ಮತ್ತೆ ಆತನೇ ಋಗ್ವೇದವನ್ನು ಇಪ್ಪತ್ತನಾಲ್ಕು ವಿಭಾಗ ಗಳಾಗಿಯೂ, ಯಜುರ್ವೇದವನ್ನು ಒಂದು ನೂರು ವಿಭಾಗಗಳಾಗಿಯೂ, ಸಾಮವೇದವನ್ನು ಒಂದು ಸಾವಿರ ವಿಭಾಗಗಳಾಗಿಯೂ, ಅಥರ್ವವೇದವನ್ನು ಹನ್ನೆರಡು ವಿಭಾಗಗಳನ್ನಾಗಿಯೂ ವಿಂಗಡಿಸಿದನು. ಆ ವೇದಗಳ ಮುಖ್ಯ ಅರ್ಥವನ್ನು ಉಪಕ್ರಮ, ಉಪಸಂಹಾರಾದಿ ಕ್ರಮಗಳಿಂದ ನಿಷ್ಕೃಷ್ಟವಾಗಿ ತಿಳಿಸು ವುದಕ್ಕಾಗಿ ಬ್ರಹ್ಮಸೂತ್ರಗಳನ್ನು ವೇದವ್ಯಾಸ ಮಹರ್ಷಿಯೇ ರಚಿಸಿದನು."

ಅಲ್ಪಾಕ್ಷರಮಸಂದಿಗ್ಧಂ ಸಾರವದ್ವಿಶ್ವತೋಮುಖಂ ।
ಅಸ್ತೋಭಮನವದ್ಯಂ ಚ ಸೂತ್ರಂ ಸೂತ್ರವಿದೋ ವಿದುಃ ॥

ಸೂತ್ರಗಳ ಸ್ವರೂಪ ಹೀಗಿರಬೇಕು : ಆದಷ್ಟು ಕಡಿಮೆ ಅಕ್ಷರಗಳನ್ನು ಸೂತ್ರ ಒಳಗೊಂಡಿರಬೇಕು. ಅಕ್ಷರಗಳು ಕಡಿಮೆಯೆಂದು ಅಭಿಪ್ರಾಯದಲ್ಲಿ ಸಂದೇಹಕ್ಕೆ ಎಡೆಯಿರಬಾರದು; ಉತ್ತಮವಾದ ಅರ್ಥವನ್ನು ಪಡೆದಿರಬೇಕು (ಕುಶಲರಾದ ಹರಟೆಮಲ್ಲರ ಲೋಕವಾರ್ತೆಯಂತೆ ಇರಬಾರದು); ವಿಷಯದ ಎಲ್ಲ ಮುಖಗಳನ್ನೂ ವಿಶದಪಡಿಸಬೇಕು (ಬರೇ ಮಂತ್ರವಾಗಬಾರದು); ಅಪ್ರಯೋಜಕ ಶಬ್ದ ಇರಬಾರದು; ಯಾವ ದೋಷವೂ ಸೂತ್ರದಲ್ಲಿ ಸೇರಬಾರದು. ಇದು ಸೂತ್ರಗಳ ಲಕ್ಷಣವೆಂದು ತಿಳಿದವರು ಹೇಳುತ್ತಾರೆ.

ಮೊದಲನೆಯ ಅಧ್ಯಾಯ

ಮೊದಲನೆಯ ಪಾದ

ವಿಶೇಷವಾಗಿ ಬೇರೆ ಅರ್ಥದಲ್ಲಿಯೇ ಬಳಸುವ ನಾಮಾತ್ಮಕ ಶಬ್ದಗಳನ್ನು ಈ ಪಾದದಲ್ಲಿ ಪರಮಾತ್ಮನಿಗೇ ಸಮನ್ವಯ ಮಾಡಲಾಗಿದೆ.

ಓಂ ಓಂ ಅಥಾತೋ ಬ್ರಹ್ಮಜಿಜ್ಞಾಸಾ ಓಂ 1

ಆಮೇಲೆ, ಆದಕಾರಣ, ಬ್ರಹ್ಮನನ್ನು ಕುರಿತು ವಿಚಾರ ಮಾಡಬೇಕು.

['ಅಥ' ಎಂಬ ಶಬ್ದಕ್ಕೆ ಮಂಗಳಕರ ಎಂಬ ಅರ್ಥವೂ ಇದೆ; ಎಂದರೆ, ಅಥ ಶಬ್ದವನ್ನು ಸೂತ್ರಗಳ ಮೊದಲಲ್ಲಿ ಹೇಳಿರುವುದರಿಂದ ಮಂಗಳಾಚರಣೆ ಮಾಡಿದಂತೆ ಆಯಿತು. ಸಾಮಾನ್ಯವಾಗಿ 'ಅನಂತರ' ಎಂಬ ಅರ್ಥವನ್ನು ಅಥ ಶಬ್ದ ತಿಳಿಸುವುದು. ಯಾವುದರ ಅನಂತರ ? "ಅಧಿಕಾರಪ್ರಾಪ್ತಿಯಾದ ಅನಂತರ", ಎಂದು ಭಾಷ್ಯಕಾರರು ಹೇಳಿದ್ದಾರೆ.

ಎಲ್ಲರೂ ಎಲ್ಲ ಕೆಲಸವನ್ನೂ ಚೆನ್ನಾಗಿ ಮಾಡಲಾರರಷ್ಟೆ. ಕುಲಕಸುಬನ್ನು ಕಲಿತ ಕಮ್ಮಾರನು ಮಾಡುವ ಕೆಲಸವನ್ನು ಜವಳಿ ಅಂಗಡಿಯಲ್ಲಿ ವ್ಯಾಪಾರ ಮಾಡುತ್ತಾ ಕುಳಿತಿರುವವನ ಮಗ ಮಾಡಲಾರ. ಏನನ್ನೂ ಓದಿರದವನು ಕಾಲೇಜಿನ ಕೊನೆಯ ತರಗತಿಯಲ್ಲಿ ಕುಳಿತು ಕಲಿಯಲಾರ. ಕಲಿಯುವ ವಿದ್ಯೆ ವೀರ್ಯವತ್ತರವಾಗಬೇಕಾದರೆ ಶಿಷ್ಯನಿಗೆ ಅಧಿಕಾರವೆಂಬ ಒಂದು ಯೋಗ್ಯತೆ ಇರಬೇಕು. ಹೀಗೆ ವೇದಗಳ ನಿಷ್ಕೃಷ್ಟವಾದ ಅರ್ಥವನ್ನು ತಿಳಿಯಲು ಕೂಡ ಒಂದು ಅಧಿಕಾರವಿರಬೇಕೆಂದು ಬಾದರಾಯಣಮಹರ್ಷಿಗಳ ಮತ. ದ್ವಿಜನಾಗಿದ್ದು ಶಮದಮಾದಿಗುಣಸಂಪನ್ನನಾಗಿ, ವೇದಾಧ್ಯಯನ ಮಾಡಿ ವೈರಾಗ್ಯವನ್ನು ತಾಳಿ, ಸೃಷ್ಟಿಸ್ಥಿತಿಲಯಾದಿಗಳಿಗೆ ನಿಯಾಮಕನಾದ ಭಗವಂತನಲ್ಲಿ ಭಕ್ತಿ ಹೊಂದಿದವನೇ ಬ್ರಹ್ಮಸೂತ್ರಗಳನ್ನು ಕಲಿಯಲು ಉತ್ತಮಾಧಿಕಾರಿ, ಎಂದು ಆಚಾರ್ಯರ ಅಭಿಪ್ರಾಯ.

ಭಾಗವತ ತಂತ್ರದಲ್ಲಿ ಹೀಗೆ ಹೇಳಿದೆ: "ಭಕ್ತಿಮಾನ್ಪರಮೇ ವಿಷ್ಣೌ ಯಸ್ತ್ವಧ್ಯಯನವಾನ್ನರಃ । ಅಧಮಃ ಶಮಾದಿಸಂಯುಕ್ತೋ ಮಧ್ಯಮಃ ಸ ಉದಾಹೃತಃ । ಆಬ್ರಹ್ಮಸ್ತಂಬಪರ್ಯಂತಮಸಾರಂ ಚಾಪ್ಯನಿತ್ಯಕಮ್ ।

ವಿಜ್ಞಾಯ ಜಾತವೈರಾಗ್ಯೋ ವಿಷ್ಣುಪಾದೈಕಸಂಶ್ರಯಃ । ಸ ಉತ್ತಮಾಧಿಕಾರೀ ಸ್ಯಾತ್ ಸಂನ್ಯಸ್ತಾಖಿಲಕರ್ಮವಾನ್ ।"—ಯಾವ ಮನುಷ್ಯನು ಪರಮಾತ್ಮನಾದ ವಿಷ್ಣುವಿನಲ್ಲಿ ಭಕ್ತಿ ಹೊಂದಿ ಅಧ್ಯಯನ ಮಾಡಿರುವವನೋ ಅವನು ಅಧಮಾಧಿಕಾರಿ (ಅಧಿಕಾರಿಗಳಲ್ಲಿ ಕೆಳಮಟ್ಟದವನು). ಭಕ್ತಿ, ಅಧ್ಯಯನಗಳ ಜೊತೆಗೆ ಶಮದಮಾದಿಗಳಿಂದ ಕೂಡಿರುವವನು ಮಧ್ಯಮಾಧಿಕಾರಿ. ಚತುರ್ಮುಖ ಬ್ರಹ್ಮನಿಂದ ಹುಲ್ಲಿನವರೆಗೆ ಇರುವ ಸಂಸಾರ ಅಸಾರವೂ ಅನಿತ್ಯವೂ ಎಂದು ತಿಳಿದು, ವೈರಾಗ್ಯ ಪಡೆದು, ವಿಷ್ಣುವಿನ ಪಾದಗಳನ್ನೇ ಆಶ್ರಯಿಸುತ್ತಾ ಎಲ್ಲ ಕಾಮ್ಯಕರ್ಮಗಳನ್ನೂ ಫಲಾಪೇಕ್ಷೆಯನ್ನೂ ಯಾವನು ತೊರೆದಿರುವನೋ ಅವನೇ ಉತ್ತಮಾಧಿಕಾರಿ.

ಭಗವಂತನಲ್ಲಿ ನಿಶ್ಚಲವಾಗಿ ಮನಸ್ಸನ್ನು ಇಡುವುದೇ ಶಮ; ದಮವೆಂದರೆ ಇಂದ್ರಿಯ ನಿಗ್ರಹ; ಉಪರತಿ ಎಂದರೆ ಮಹಾವಿಷ್ಣುವನ್ನೇ ಮನಸ್ಸಿನಲ್ಲಿಟ್ಟುಕೊಂಡು ಆನಂದಪಡುವುದು. ಸ್ನೇಹ–ದ್ವೇಷ, ಸುಖ–ದುಃಖ ಮೊದಲಾದ ದ್ವಂದ್ವ ಅನುಭವಗಳನ್ನು ಉದ್ವೇಗವಿಲ್ಲದೆ ಸಹಿಸುವುದೇ ತಿತಿಕ್ಷೆ.

"ಶಾಂತೋ ದಾಂತ ಉಪರತಸ್ತಿತಿಕ್ಷುಃ ಸಮಾಹಿತೋ ಭೂತ್ವಾತ್ಮನ್ಯೇವಾತ್ಮಾನಂ ಪಶ್ಯೇತ್"—ಶಮದಮಾದಿಗಳಿಂದ ಬುದ್ಧಿಯನ್ನು ಸಮಸ್ಥಿತಿಯಲ್ಲಿಟ್ಟುಕೊಂಡು ತನ್ನಲ್ಲಿಯೇ ಪರಮಾತ್ಮನನ್ನು ನೋಡುತ್ತಿರಬೇಕು—ಎಂದು ವೇದವೇ ತಿಳಿಸುತ್ತದೆ.

"ಅತಃ" ಎಂಬ ಶಬ್ದಕ್ಕೆ ಆದಕಾರಣ ಎಂದರ್ಥ. ಶ್ರೀಮನ್ನಾರಾಯಣನ ಅನುಗ್ರಹವಿಲ್ಲದೆ ಸಂಸಾರದ ಬಂಧನದಿಂದ ಬಿಡುಗಡೆಯಿಲ್ಲ; ಯಥಾರ್ಥ ಜ್ಞಾನವಿರದಿದ್ದರೆ ಉತ್ತಮ ಅನುಗ್ರಹವೂ ಆಗಲಾರದು. "ಕರ್ಮಣಾ ತ್ವಧಮಃ ಪ್ರೋಕ್ತಃ ಪ್ರಸಾದಃ ಶ್ರವಣಾದಿಭಿಃ । ಮಧ್ಯಮೋ ಜ್ಞಾನಸಂಪತ್ತ್ಯಾ ಪ್ರಸಾದಸ್ತೂತ್ತಮೋ ಮತಃ"—ಕರ್ಮ ಮಾಡಿ ಪಡೆಯುವ ಭಗವಂತನ ಅನುಗ್ರಹ ಕೆಳಗಿನ ಮಟ್ಟದ್ದು; ಶಾಸ್ತ್ರಗಳ ಶ್ರವಣಮನನಾದಿಗಳಿಂದ ಆಗುವ ಪ್ರಸಾದ ಮಧ್ಯಮವರ್ಗಕ್ಕೆ ಸೇರುವುದು; ಯಥಾರ್ಥ ಜ್ಞಾನವೆಂಬ ಸಂಪತ್ತನ್ನು ಗಳಿಸಿ ಪಡೆಯುವ ಶ್ರೀಹರಿಯ ಅನುಗ್ರಹ ಉತ್ತಮವಾದುದು, ಎನ್ನುತ್ತಾರೆ. "ಆದಕಾರಣ" ಬ್ರಹ್ಮಜಿಜ್ಞಾಸೆ ಮಾಡಬೇಕು; ಇದು ಸೂತ್ರದ ಅಭಿಪ್ರಾಯ.

"ಬ್ರಹ್ಮ"ಶಬ್ದ ವಿಷ್ಣುವನ್ನೇ ಬೋಧಿಸುವುದು, ಎಂದು ಅನೇಕ ಶ್ರುತಿವಾಕ್ಯಗಳಿಂದ ತಿಳಿಸಿ, "ಮೋಕ್ಷಪ್ರಾಪ್ತಿಗಾಗಿ ನಾವು ವಿಷ್ಣುವಿನ ವಿಚಾರವನ್ನು ತಿಳಿದು, ಆತನ ಧ್ಯಾನ, ಉಪಾಸನೆಗಳೆಂಬ ಸಾಧನಗಳಿಂದ ನಿರ್ದುಃಖಾನಂದವನ್ನು ಯಥಾಯೋಗ್ಯವಾಗಿ ಶಾಶ್ವತವಾಗಿರುವಂತೆ ಪಡೆಯಬಹುದು" ಎಂದು ಭಾಷ್ಯಕಾರರು ಹೇಳಿದ್ದಾರೆ.]

ಓಂ ಜನ್ಮಾದ್ಯಸ್ಯ ಯತಃ ಓಂ 2

ಏಕೆಂದರೆ ಈ ಜಗತ್ತಿನ ಜನನಾದಿಗಳು ಆ ಬ್ರಹ್ಮನಿಂದಲೇ ಆಗುವುವು.

[ಈ ಚರಾಚರ ಜಗತ್ತಿನ ಸೃಷ್ಟಿ, ಸ್ಥಿತಿ, ಸಂಹಾರ, ನಿಯಂತ್ರಣ, ಜ್ಞಾನ, ಅಜ್ಞಾನ, ಬಂಧ, ಮೋಕ್ಷಗಳೆಲ್ಲ ಆ ಪರಮಾತ್ಮನ ದೆಸೆಯಿಂದಲೇ ಆಗುವುವು, ಎಂಬುದಕ್ಕೆ ಭಾಷ್ಯಕಾರರು ಅನೇಕ ಶ್ರುತಿಗಳನ್ನು ಉದಾಹರಿಸಿದ್ದಾರೆ. "ಯತೋ ವಾ ಇಮಾನಿ ಭೂತಾನಿ ಜಾಯಂತೇ" –ಯಾವಾತನ ದೆಸೆಯಿಂದ ಈ ಪ್ರಾಣಿಗಳೆಲ್ಲ ಹುಟ್ಟುತ್ತವೆಯೋ—ಎಂದು ತೈತ್ತಿರೀಯೋಪನಿಷತ್ತಿನಲ್ಲಿ ಹೇಳಲ್ಪಟ್ಟಿದೆ. "ಯೋ ನಃ ಪಿತಾ ಜನಿತಾ ಯೋ ವಿಧಾತಾ"—ಯಾವನು ನಮ್ಮನ್ನು ಹುಟ್ಟಿಸಿ ನಮಗೆ ತಂದೆಯಾಗಿದ್ದಾನೆಯೋ, ಯಾವನು ನಮ್ಮನ್ನು ಎಲ್ಲ ರೀತಿಯಲ್ಲಿಯೂ ನಿಯಂತ್ರಿಸುತ್ತಾನೆಯೋ—ಎಂದು ಋಗ್ವೇದ ತಿಳಿಸುತ್ತದೆ.

ಈ ಸೂತ್ರ ಬ್ರಹ್ಮನ ಒಂದು ಮುಖ್ಯ ಲಕ್ಷಣವನ್ನು ತೋರಿಸುವುದು. ಪರಬ್ರಹ್ಮನಾದ ವಿಷ್ಣು ನಮಗೆ ತಂದೆಯಾಗಿ ಪೋಷಕನಾಗಿರುವುದರಿಂದ ಅವನ ವಿಷಯವನ್ನು ನಾವು ತಿಳಿದುಕೊಳ್ಳಬೇಕು.]

ಓಂ ಶಾಸ್ತ್ರಯೋನಿತ್ವಾತ್ ಓಂ 3

ಈ ಪರಬ್ರಹ್ಮನಿಗೆ ಶಾಸ್ತ್ರವೇ ಮುಖ್ಯ ಪ್ರಮಾಣವಾಗಿರುವುದರಿಂದ.

[ಪರಬ್ರಹ್ಮ ಜಗತ್ತಿನ ಸೃಷ್ಟ್ಯಾದಿಗಳಿಗೆ ಕಾರಣ, ಎಂದು ಹೇಳಿದರೆ ಆ ಬ್ರಹ್ಮ ಚತುರ್ಮುಖ, ರುದ್ರ, ಪ್ರಕೃತಿ ಮೊದಲಾದವುಗಳಲ್ಲಿ ಒಂದಾಗಿರಬಹುದಲ್ಲವೇ, ಎಂಬ ಅನುಮಾನ ಬಂದೀತು! "ಹಾಗೆ ಊಹೆಯಿಂದಲೇ ಬ್ರಹ್ಮನನ್ನು ತಿಳಿದುಕೊಳ್ಳಲಾಗದು; ಆ ಜ್ಞಾನಕ್ಕೆ ಶಾಸ್ತ್ರಗಳೇ ಪ್ರಮಾಣ", ಎನ್ನುತ್ತಾರೆ, ಸೂತ್ರಕಾರರು, "ಆಗಮಪ್ರಾಮಾಣ್ಯವನ್ನು ಒಪ್ಪಿ ವಿಮರ್ಶಿಸಿದರೆ

ವಿಷ್ಣುವೇ ಜಗತ್ಕಾರಣ" ಎಂದು ಪೂರ್ಣಪ್ರಜ್ಞರು ಸಾಧಿಸಿದ್ದಾರೆ. "ನಾವೇದ-ವಿನ್ಮನುತೇ ತಂ ಬೃಹಂತಂ"—ವೇದಗಳನ್ನು ತಿಳಿಯದವನು ಆ ಬ್ರಹ್ಮನನ್ನು ತಿಳಿಯುವುದಿಲ್ಲ—ಮುಂತಾದ ಶ್ರುತಿಗಳಿವೆ. "ಶ್ರುತಿಸಾಹಾಯ್ಯರಹಿತಂ, ಅನುಮಾನಂ ನ ಕುತ್ರಚಿತ್ । ನಿಶ್ಚಯಾತ್ಸಾಧಯೇದರ್ಥಂ ಪ್ರಮಾಣಾಂತರ-ಮೇವ ಚ"—ಶ್ರುತಿ ಸಾಹಾಯ್ಯವಿಲ್ಲದ ಅನುಮಾನ (ತರ್ಕ) ಎಂದಿಗೂ ನಿಶ್ಚಯರೂಪದಿಂದ ವಿಷಯವನ್ನು ಸಾಧಿಸಲಾರದು, ಇತರ ಪ್ರಮಾಣಗಳೂ ಹಾಗೆಯೇ – ಎಂದು ಕೂರ್ಮಪುರಾಣ ಹೇಳುತ್ತದೆ. ಶ್ರುತಿಸ್ಮೃತಿಗಳ ಬೆಂಬಲದಿಂದಲೇ ಪ್ರತ್ಯಕ್ಷ, ಅನುಮಾನಗಳೆಂಬ ಇತರ ಪ್ರಮಾಣಗಳೂ ಸಾಧಕಗಳಾಗುವುವು. ಶ್ರುತಿ ಸಾಹಾಯ್ಯವಿಲ್ಲದ ಅನುಮಾನ ಏನನ್ನಾದರೂ ಸಾಧಿಸಬಹುದು, ಶಾಸ್ತ್ರದ ಬಲಪಡೆಯದೆ ಅತೀಂದ್ರಿಯ ವಸ್ತುಗಳನ್ನು ಸಾಧಿಸಲು ಶುಷ್ಕತರ್ಕ ಒಂದೇ ಸಾಲದು. ಋಗ್ಯಜುಃಸಾಮಾಥರ್ವವೇದ ಗಳೂ, ಭಾರತ, ಪಂಚರಾತ್ರ, ಮೂಲರಾಮಾಯಣಗಳೂ ಶಾಸ್ತ್ರಗಳೆಂದು ಸ್ಕಾಂದಪುರಾಣದಲ್ಲಿ ಹೇಳಲ್ಪಟ್ಟಿದೆ. ಅವುಗಳಿಗೆ ಅನುಕೂಲವಾದ ತಾತ್ಪರ್ಯ ವುಳ್ಳ ಪುರಾಣಾದಿಗಳೂ ಶಾಸ್ತ್ರಗಳೇ.]

ಓಂ ತತ್ತು ಸಮನ್ವಯಾತ್ ಓಂ 4

ಅದಾದರೋ ನಿರ್ದುಷ್ಟ ಉಪಪತ್ತಿಗಳಿಂದ ಚೆನ್ನಾಗಿ ಸಾಧಿತವಾದುದು.

[ಅನ್ವಯವೆಂದರೆ ಉಪಪತ್ತಿ ಮೊದಲಾದವು; ಸಮನ್ವಯ ಎಂದರೆ ಚೆನ್ನಾಗಿ ಮಾಡಿರುವ ನಿರ್ಣಯ. "ಉಪಕ್ರಮೋಪಸಂಹಾರಾವಭ್ಯಾಸೋಽ-ಪೂರ್ವತಾ ಫಲಂ । ಅರ್ಥವಾದೋಪಪತ್ತೀ ಚ ಲಿಂಗಂ ತಾತ್ಪರ್ಯನಿರ್ಣಯೇ — ಒಂದು ಶಾಸ್ತ್ರವಾಕ್ಯಕ್ಕೆ ಅಭಿಪ್ರಾಯವನ್ನು ನಿರ್ಣಯ ಮಾಡಬೇಕಾದರೆ, ಉಪಕ್ರಮ (ಪ್ರಾರಂಭದಲ್ಲಿ ಹೇಳಿರುವ ವಿಷಯ), ಉಪಸಂಹಾರ (ಕೊನೆಯ ಮಾತು), ಅಭ್ಯಾಸ (ಮತ್ತೆ ಮತ್ತೆ ಹೇಳಲ್ಪಟ್ಟಿರುವ ವಾಕ್ಯಗಳು), ಅಪೂರ್ವತೆ (ಬೇರೆ ಪ್ರಮಾಣಗಳಲ್ಲಿ ಹೇಳಲ್ಪಡದಿರುವ ವಿಷಯ), ಫಲ (ಪ್ರಯೋಜನ), ಅರ್ಥವಾದ (ಒಂದು ವಿಶಿಷ್ಟ ಉದ್ದೇಶವನ್ನು ಮನಸ್ಸಿನಲ್ಲಿ ಇಟ್ಟುಕೊಂಡೇ ಹೇಳುವ ಮಾತು), ಉಪಪತ್ತಿ (ವಿಷಯಸಾಧನೆ) ಎಂಬುವನ್ನೆಲ್ಲ ಚೆನ್ನಾಗಿ ಗಮನಿಸಬೇಕು (ಬೃಹತ್ಸಂಹಿತೆ). ಇವುಗಳಲ್ಲಿ ಪ್ರತಿಯೊಂದೂ ಹಿಂದಿನದಕ್ಕಿಂತ ಹೆಚ್ಚು ಪ್ರಬಲವಾದುದು; ಎಂದರೆ ತಾತ್ಪರ್ಯನಿರ್ಣಯಕಾರ್ಯದಲ್ಲಿ ಉಪಪತ್ತಿ

ಸರ್ವಶ್ರೇಷ್ಠವಾದುದು. (ಅದ್ವೈತಮತದಲ್ಲಿ ಮುಂದಿನದಕ್ಕಿಂತ ಹಿಂದಿನದೇ ಪ್ರಬಲ; ಅಲ್ಲಿ ಉಪಕ್ರಮಕ್ಕೇ ಹೆಚ್ಚು ಪ್ರಾಶಸ್ತ್ಯ.)

ಈ ಕ್ರಮಗಳಿಂದ ಪರಾಮರ್ಶಿಸಿ ಶಾಸ್ತ್ರಗಳ ಅರ್ಥವನ್ನು ನಿರ್ಣಯಿಸಿದರೆ ವಿಷ್ಣುವೇ ಜಗತ್ತಿನ ಜನ್ಮಾದಿ ಕಾರಣನೆಂದು ತಿಳಿಯಬರುವುದು ; ಆದುದರಿಂದ ಆತನೇ ಜಿಜ್ಞಾಸೆಗೆ ಮುಖ್ಯ ವಿಷಯ.]

ಓಂ ಈಕ್ಷತೇರ್ನಾಶಬ್ದಮ್ ಓಂ 5

ನೋಡಲು ಸಾಧ್ಯವಾಗುವುದರಿಂದ, "ಬ್ರಹ್ಮ ಶಬ್ದಗೋಚರನಲ್ಲ", ಎನ್ನಲಾಗದು.

["ಯತೋ ವಾಚೋ ನಿವರ್ತಂತೇ", "ಅಶಬ್ದಮಸ್ಪರ್ಶಂ", "ಯತ್ ಶ್ರೋತ್ರೇಣ ನ ಶೃಣೋತಿ" ಎಂಬ ವೇದವಾಕ್ಯಗಳು, "ಪರಮಾತ್ಮನನ್ನು ಬಣ್ಣಿಸುತ್ತಾ ಮಾತುಗಳು ಹಿಂದಿರುಗಿಬಿಡುತ್ತವೆ", "ಶಬ್ದಸ್ಪರ್ಶಗಳಿಂದ ಬ್ರಹ್ಮ ತಿಳಿಯಲ್ಪಡುವವನಲ್ಲ", "ಬ್ರಹ್ಮನನ್ನು ಕಿವಿಗಳಿಂದ ಕೇಳಲಾಗುವುದಿಲ್ಲ", ಎಂದು ತಿಳಿಸುವುದರಿಂದ 'ಶಬ್ದಗಳಿಂದ ಬ್ರಹ್ಮನನ್ನು ವರ್ಣಿಸಿ ತಿಳಿದುಕೊಳ್ಳಲು ಸಾಧ್ಯವಿಲ್ಲ' ಎಂದು ಅದ್ವೈತತತ್ತ್ವ; ಆದರೆ ಇದು ಸರಿಯಲ್ಲ, ಎಂದು ಈ ಸೂತ್ರ ತಿಳಿಸುವುದು. "ಸರ್ವೇ ವೇದಾ ಯತ್ಪದಮಾಮನಂತಿ"— ಎಲ್ಲ ವೇದಗಳೂ ಯಾರ ಪದವನ್ನು ತಿಳಿಯುತ್ತವೆಯೋ—"ಆತ್ಮನ್ಯೇವಾ-ತ್ಮಾನಂ ಪಶ್ಯೇತ್"—ತನ್ನಲ್ಲಿಯೇ ಬ್ರಹ್ಮನನ್ನು ನೋಡಬೇಕು—ಎಂದು ಮೊದಲಾಗಿ ಅಪರೋಕ್ಷಜ್ಞಾನದ ವಿಷಯವನ್ನು ಹೇಳುವ ನಾನಾ ವೇದವಾಕ್ಯಗಳಿರುವುದರಿಂದ ಬ್ರಹ್ಮ ಸಮೀಕ್ಷಣೀಯ, ಆದುದರಿಂದಲೇ ವಾಚ್ಯ (ಮಾತುಗಳಿಂದ ತಿಳಿಸಲು ಸಾಧ್ಯ), ಎಂದು ಗೊತ್ತಾಗುವುದು. "ವೇದೈಶ್ಚ ಸರ್ವೈ-ರಹಮೇವ ವೇದ್ಯಃ" ಎಂಬ ಗೀತಾವಾಕ್ಯವೂ ಬ್ರಹ್ಮ ಎಲ್ಲ ವೇದಗಳಲ್ಲಿನ ಶಬ್ದಗಳಿಂದ ವಾಚ್ಯ, ಎಂದೇ ತಿಳಿಸುವುದು. ಬ್ರಹ್ಮನಿಗೆ ಅಶಬ್ದತ್ವ ಕೂಡುವುದೇ ಇಲ್ಲ.]

ಓಂ ಗೌಣಶ್ಚೇನ್ನ, ಆತ್ಮಶಬ್ದಾತ್ ಓಂ 6

'ಈಕ್ಷಣೀಯನೂ ವಾಚ್ಯನೂ ಆಗಿರುವವನು ಸಗುಣಬ್ರಹ್ಮ' ಎನ್ನುವುದು ಸರಿಯಲ್ಲ, ಜಗತ್ಕಾರಣನಾದವನನ್ನು 'ಆತ್ಮಾ' ಎಂದು ಕರೆದಿರುವುದರಿಂದ.

[ತ್ರಿಗುಣಾತೀತನೂ ದೋಷರಹಿತನೂ ಹೇಯೋಪಾದೇಯ (ಬಿಡಬೇಕಾದುದು, ಸ್ವೀಕರಿಸಬೇಕಾದುದು) ರಹಿತನೂ ಆದವನು ಆತ್ಮ, ಈ ಗುಣಗಳಿಲ್ಲದುದು ಅನಾತ್ಮ; ಇದು ವಾಮನಪುರಾಣದಲ್ಲಿ ಹೇಳಲ್ಪಟ್ಟಿದೆ. "ಸ ಆತ್ಮಾ ಸ ನಿತ್ಯಃ ಶುದ್ಧಃ ಕೇವಲೋ ನಿರ್ಗುಣಶ್ಚ । ಅಥ ಹ ಯೋಽನೀದೃಶಃ ಸೋಽನಾತ್ಮಾ"—ಆತ್ಮ ನಿತ್ಯ, ಶುದ್ಧ, ಕೇವಲ ಮತ್ತು ಸತ್ವಾದಿ ಗುಣಾತೀತ, ಯಾವನು ಹೀಗಲ್ಲವೋ ಅವನು ಆತ್ಮನಲ್ಲ—ಎಂದು ತಲವಕಾರ ಬ್ರಾಹ್ಮಣ ತಿಳಿಸುವುದು. ಮುಖ್ಯಾರ್ಥವನ್ನೇ ಬಿಟ್ಟು ಗೌಣಾರ್ಥವನ್ನು ಏಕೆ ತೆಗೆದುಕೊಳ್ಳಬೇಕು ?].

ಓಂ ತನ್ನಿಷ್ಠಸ್ಯ ಮೋಕ್ಷೋಪದೇಶಾತ್ ಓಂ 7

'ಆತ್ಮನಲ್ಲಿ ನಿಷ್ಠೆಯುಳ್ಳವನಿಗೆ ಮೋಕ್ಷವಾಗುವುದು' ಎಂದು ಶ್ರುತಿ ತಿಳಿಸುವುದರಿಂದ ಸಗುಣಬ್ರಹ್ಮನನ್ನು ಅದು ತಿಳಿಸುವುದಿಲ್ಲ.

[ಗುಣಾತೀತನಾದ ಆತ್ಮನನ್ನು ತಿಳಿಯುವುದರಿಂದಲೇ ಮೋಕ್ಷಪ್ರಾಪ್ತಿಯಾಗುವುದು. "ಪರೋ ಹಿ ಪುರುಷೋ ವಿಷ್ಣುಸ್ತಸ್ಮಾನ್ಮೋಕ್ಷಸ್ತತಃ ಸ್ಮೃತಃ"—ಪುರುಷೋತ್ತಮನಾದ ವಿಷ್ಣುವೇ ಪರಮಾತ್ಮ, ಆತನ ಅನುಗ್ರಹದಿಂದಲೇ ಮೋಕ್ಷವಾಗುವುದು—ಎಂದು ಪದ್ಮಪುರಾಣ ತಿಳಿಸುತ್ತದೆ. ಮೋಕ್ಷ ಸಂಪಾದಿಸಿಕೊಡಬಲ್ಲ ಜ್ಞಾನಕ್ಕೆ ವಿಷಯನಾದವ, ತ್ರಿಗುಣಾತೀತನಾದ ಪರಬ್ರಹ್ಮ.]

ಓಂ ಹೇಯತ್ವಾವಚನಾಚ್ಚ ಓಂ 8

ಹೇಯತ್ವವನ್ನು ಹೇಳದಿರುವುದರಿಂದ ಆತ್ಮ ಗೌಣನಲ್ಲ (ಸಗುಣನಲ್ಲ).

[ಹೇಯವೆಂದರೆ ಬಿಡಬೇಕಾದುದು, ಉಪಾದೇಯವೆಂದರೆ ಸ್ವೀಕರಿಸಬೇಕಾದುದು. "ತಮೇವೈಕಂ ಜಾನಥ ಆತ್ಮಾನಂ, ಅನ್ಯಾ ವಾಚೋ ವಿಮುಂಚಥ"—ಆ ಪರಬ್ರಹ್ಮನೊಬ್ಬನನ್ನೇ ತಿಳಿಯಿರಿ; ಬೇರೆ ವಿಷಯಗಳನ್ನು ಬಿಟ್ಟುಬಿಡಿ—ಎಂದು ಮುಂಡಕೋಪನಿಷತ್ತು ಹೇಳುತ್ತದೆ. ಆತ್ಮನ ವಿಷಯದಲ್ಲಿ 'ಬಿಟ್ಟುಬಿಡಿ' ಎಂಬ ಹೇಯತ್ವವನ್ನು ಹೇಳದೆ, ಉಪಾದೇಯತ್ವವನ್ನೇ ಹೇಳಿರುವುದರಿಂದ ಇದು ಸಗುಣ ಬ್ರಹ್ಮನನ್ನು ಬೋಧಿಸುವುದಿಲ್ಲ, ಮುಖ್ಯವಾಗಿ ನಿರ್ಗುಣ ಬ್ರಹ್ಮನನ್ನೇ ಸೂಚಿಸುತ್ತದೆ.]

ಓಂ ಸ್ವಾಪ್ಯಯಾತ್ ಓಂ 9

ತನ್ನಲ್ಲಿಯೇ ತಾನು ಲಯಹೊಂದುವುದರಿಂದ.

[ನಿರ್ದೋಷನಾದ ಪರಬ್ರಹ್ಮ ಸಗುಣ ಬ್ರಹ್ಮನಲ್ಲಿ ಲಯಹೊಂದು ವುದಿಲ್ಲ. "ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ"— ಪೂರ್ಣನಾದ ಪರಬ್ರಹ್ಮ ಪೂರ್ಣ ಅವತಾರಗಳನ್ನು ತಾಳಿ ಪುನಃ ಪೂರ್ಣ ಮೂಲರೂಪದಲ್ಲಿಯೇ ಸೇರಿಹೋಗುತ್ತಾನೆ—ಎಂದು ಬೃಹದಾರಣ್ಯಕ ಉಪನಿಷತ್ತು ತಿಳಿಸುವುದು.]

ಓಂ ಗತಿಸಾಮಾನ್ಯಾತ್ ಓಂ 10

ಜ್ಞಾನ ಒಂದೇ ವಿಧವಾಗಿರುವುದರಿಂದ.

[ಬ್ರಹ್ಮ ಸಗುಣ ಮತ್ತು ನಿರ್ಗುಣ ಎಂಬ ಬಗೆಯಲ್ಲಿ ಇರುವುದಿಲ್ಲ. "ಸರ್ವೇ ವೇದಾ ಯುಕ್ತಯಃ ಸುಪ್ರಮಾಣಾ, ಬ್ರಾಹ್ಮಂ ಜ್ಞಾನಂ ಪರಮಂ ತ್ವೇಕಮೇವ । ಪ್ರಕಾಶಯಂತೇ ನ ವಿರೋಧಃ ಕುತಶ್ಚಿತ್, ವೇದೇಷು ಸರ್ವೇಷು ತಥೇತಿಹಾಸೇ"—ಎಲ್ಲ ವೇದಗಳೂ ಯುಕ್ತಿಗಳೂ ಪ್ರಮಾಣವಾಗಿದ್ದು ಒಂದೇ ವಿಧದ ಶ್ರೇಷ್ಠ ಬ್ರಹ್ಮಜ್ಞಾನವನ್ನು ಹುಟ್ಟಿಸುವುವು. ಎಲ್ಲ ವೇದಗಳು ಹಾಗೂ ಇತಿಹಾಸಗಳಲ್ಲಿ ಯಾವ ವಿರೋಧವೂ ಇಲ್ಲದೆ ಸತ್‌ಜ್ಞಾನ ಒಂದೇ ಆಗಿರು ವುದು—ಎಂದು ಪೈಂಗಿಶ್ರುತಿ ಹೇಳುತ್ತದೆ. ಗತಿ ಎಂದರೆ ಜ್ಞಾನವೆಂದು ಅರ್ಥ.

"ಏಕೋ ದೇವಃ ಸರ್ವಭೂತೇಷು ಗೂಢಃ, ಸರ್ವವ್ಯಾಪೀ ಸರ್ವ-ಭೂತಾಂತರಾತ್ಮಾ । ಕರ್ಮಾಧ್ಯಕ್ಷಃ ಸರ್ವಭೂತಾಧಿವಾಸಃ, ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ"—ದೇವರೊಬ್ಬನೇ, ಎಲ್ಲ ಪ್ರಾಣಿಗಳಲ್ಲಿಯೂ ಆತ ಗೂಢನಾಗಿರುತ್ತಾನೆ; ಅವನು ಸರ್ವತ್ರ ಇರುವನು, ಎಲ್ಲ ಪ್ರಾಣಿಗಳಿಗೂ ಅವನು ಅಂತರ್ಯಾಮಿ, ಎಲ್ಲ ಕೆಲಸಗಳನ್ನೂ ಮಾಡಿಸಬಲ್ಲವ, ಎಲ್ಲ ಪ್ರಾಣಿಗಳ ದೇಹಗಳಲ್ಲಿಯೂ ವಾಸ ಮಾಡುವವ; ಅವನು ಸಾಕ್ಷಿ ಎಂಬ ಅಂತರಿಂದ್ರಿಯ ವಾಗಿದ್ದು ಜೀವನ ಆಗುಹೋಗುಗಳನ್ನೆಲ್ಲ ನೋಡಬಲ್ಲ ಚೇತನ ಸ್ವರೂಪಿ; ಅವನು ಸತ್ವಾದಿಗುಣಾತೀತ; ಯಾರೊಡನೆಯೂ ಬೆರೆಯದಿರುವವ—ಎಂದು ಶ್ರುತಿ ಇದೆ.]

ಓಂ ಶ್ರುತತ್ವಾಚ್ಚ ಓಂ 11

ಶ್ರುತಿಯಲ್ಲಿ ಹೇಳಲ್ಪಟ್ಟಿರುವುದರಿಂದ ಬ್ರಹ್ಮ ಅವಾಚ್ಯ (ಅಶಬ್ದ)ನಲ್ಲ.

[ಪದಗಳಿಂದ ಬ್ರಹ್ಮ ಅವಾಚ್ಯನಾಗಿದ್ದರೆ ಅವನ ವಿಷಯವನ್ನು ಶ್ರುತಿ ಹೇಗೆ ತಿಳಿಸೀತು ? ಪ್ರಮಾಣದಿಂದ ಪ್ರಸಿದ್ಧವಲ್ಲದುದನ್ನು ಕಲ್ಪಿಸಬಾರದು. ಎಲ್ಲ ಶಬ್ದಗಳಿಂದಲೂ ಅವಾಚ್ಯನಾದವನನ್ನು ಪದಗಳು ತಿಳಿಸಲಾರವು. ಈ ಅಧಿಕರಣದಿಂದ ಪರಬ್ರಹ್ಮ ಅನಿರ್ವಚನೀಯನಲ್ಲವೆಂದು ತೋರಿಸಿ ಅವನ ವಾಚ್ಯತ್ವವನ್ನು ಸಮರ್ಥಿಸಲಾಗಿದೆ.]

ಓಂ ಆನಂದಮಯೋಽಭ್ಯಾಸಾತ್ ಓಂ 12

ಪರಬ್ರಹ್ಮ ಆನಂದಮಯ; ಹಾಗೆ ಆನಂದಶಬ್ದವನ್ನು ಮತ್ತೆ ಮತ್ತೆ ಹೇಳಿರುವುದರಿಂದ.

[ಈ ಸೂತ್ರದಿಂದ ಆರಂಭಿಸಿ ಪರಬ್ರಹ್ಮ ಶಾಸ್ತ್ರಪ್ರತಿಪಾದ್ಯನೆಂಬುದನ್ನು ಮುಖ್ಯವಾಗಿ ಈ ಅಧ್ಯಾಯದಲ್ಲೆಲ್ಲ ಸೂತ್ರಕಾರರು ಸ್ಪಷ್ಟಪಡಿಸುತ್ತಾರೆ. ಈ ಪಾದದಲ್ಲಿ "ಅನ್ಯತ್ರ ಪ್ರಸಿದ್ಧವಾದ ಶಬ್ದಗಳು ಪರಮಾತ್ಮನಿಗೇ ಅನ್ವಯಿಸುವುವು" ಎಂಬುದನ್ನು ತೋರಿಸಲಾಗುತ್ತದೆ. ಇದೇ ಸಮನ್ವಯ.

"ಬ್ರಹ್ಮಜಿಜ್ಞಾಸೆ ಮಾಡಬೇಕು" ಎಂದು ಹೇಳಿಯಾಯಿತು. "ಬ್ರಹ್ಮ-ಪುಚ್ಛಂ ಪ್ರತಿಷ್ಠಾ" ಎಂದು ತೈತ್ತಿರಿಯೋಪನಿಷತ್ತಿನಲ್ಲಿ ಹೇಳಿರುವುದರಿಂದ ಬ್ರಹ್ಮ ಪಾದ, ಎಂದರೆ 'ಅವಯವ ಮಾತ್ರ' ಎಂದಾಯಿತು. ಅವಯವಿಯನ್ನು ಬಿಟ್ಟು ಅವಯವವನ್ನು ಕುರಿತು ವಿಚಾರ ಮಾಡುವುದು ಸರಿಯೇ ? ಆನಂದಮಯನಾದವನು ವಿಷ್ಣುವೋ ಪ್ರಕೃತಿಯೋ ? ಚತುರ್ಮುಖನೂ 'ಶತಾನಂದ'ನಲ್ಲವೇ ? ಬ್ರಹ್ಮ ಎಂದರೆ ಜೀವನೂ ಆಗಬಹುದಲ್ಲ ! ಆದರೆ "ತದೇವ ಬ್ರಹ್ಮ ಪರಮಂ ಕವೀನಾಂ"—ಅದೇ ಕವಿಗಳ ಪರಬ್ರಹ್ಮ— ಮುಂತಾದ ಆಗಮ ವಾಕ್ಯಗಳಿಂದ ಬ್ರಹ್ಮಶಬ್ದವಾಚ್ಯನಾದವನು ವಿಷ್ಣುವೇ, ಅವನೇ ಆನಂದಮಯ, ಎನ್ನುತ್ತಾರೆ, ಆನಂದತೀರ್ಥಮುನಿಗಳು.]

ಓಂ ವಿಕಾರಶಬ್ದಾನ್ನೇತಿ ಚೇನ್ನ, ಪ್ರಾಚುರ್ಯಾತ್ ಓಂ 13

ವಿಕಾರಶಬ್ದವಿರುವುದರಿಂದ 'ಆನಂದಮಯ ವಿಷ್ಣುವಲ್ಲ' ಎನ್ನುವುದು ಸರಿಯಲ್ಲ; ಪ್ರಾಚುರ್ಯ ಎಂಬ ಶಬ್ದವೇ ಇರುವುದು.

['ಆನಂದಮಯ' ಎಂಬಲ್ಲಿ ಮಯ ಎಂಬುದು 'ಮಯಟ್' ಪ್ರತ್ಯಯ; ಅದಕ್ಕೆ ವಿಕಾರವೆಂಬ ಅರ್ಥವಿದೆ. 'ಸುವರ್ಣಮಯ' ಎನ್ನುವುದು ಬಂಗಾರ ವನ್ನು ರೂಪಾಂತರಗೊಳಿಸಿ ಪಾತ್ರೆ ಮಾಡಿದುದನ್ನು ತಿಳಿಸುವುದು. ಪ್ರಕೃತಿ ರೂಪಾಂತರ ಹೊಂದಿ—ವಿಕಾರ ಹೊಂದಿ—ನಾನಾ ಬಗೆಯ ವಸ್ತುಗಳಾಗಿ ಕಾಣಬರುವುದು. ಹಾಗೆ ವಿಕಾರಶೀಲಳೂ ವಸ್ತುಗಳಲ್ಲಿ ಅಭಿಮಾನಿದೇವತೆಯೂ ಆಗಿರುವ ಲಕ್ಷ್ಮಿ ಆನಂದಮಯಳಾಗುವಳಲ್ಲವೇ ? ಹಾಗಲ್ಲ, ಎನ್ನುತ್ತಾರೆ, ಭಾಷ್ಯಕಾರರು.

ಮಯಟ್ ಪ್ರತ್ಯಯ ಪ್ರಾಚುರ್ಯಾರ್ಥವನ್ನೂ ಕೊಡುವುದು. "ಸಮುದ್ರ ಜಲಮಯ" ಎಂದಾಗ ಸಮುದ್ರದಲ್ಲಿ ನೀರೇ ಹೆಚ್ಚಾಗಿರುವುದು, ಎಂದರ್ಥ. "ಆನಂದಮಯ" ಎಂದಾಗ ಪ್ರಚುರವಾದ (ಹೆಚ್ಚಾದ) ಆನಂದ ಉಳ್ಳವ—ಪ್ರಚುರಾನಂದ— ಎಂದು ಅರ್ಥವಾಗುವುದು. ಆದರೆ "ಪರಮಾತ್ಮನಲ್ಲಿ ಆನಂದ ಹೆಚ್ಚಾಗಿದೆ", ಎಂದರೆ, "(ಆನಂದ ಪ್ರತಿಯೋಗಿ ಯಾದ) ದುಃಖ ಅವನಲ್ಲಿ ಅಲ್ಪಪ್ರಮಾಣದಲ್ಲಿದೆ", ಎಂದು ಹೇಳಬಾರದು. "ಸೂರ್ಯನಲ್ಲಿ ಪ್ರಕಾಶ ಹೆಚ್ಚು" ಎಂದಾಗ "ಅವನಲ್ಲಿ ಕತ್ತಲೆ ಕಡಿಮೆ ಪ್ರಮಾಣದಲ್ಲಿದೆ" ಎಂದು ಒಪ್ಪಬಹುದೇ ?]

ಓಂ ತದ್ಧೇತುವ್ಯಪದೇಶಾಚ್ಚ ಓಂ 14

ಜಗತ್ತಿನ ಎಲ್ಲ ಆಗುಹೋಗುಗಳಿಗೆ ಬ್ರಹ್ಮ ಕಾರಣನಾದುರಿಂದ (ಅವನು ಆನಂದಮಯ).

[ಬ್ರಹ್ಮ ಆನಂವಮಯನಾಗಿರದಿದ್ದರೆ ಈ ಜಗತ್ತಿನ ಪ್ರವರ್ತಕನಾಗು ತ್ತಿದ್ದನೇ ? ಅಸ್ವತಂತ್ರ ಹಾಗೂ ದುಃಖಿಯಾದವನಿಂದ ಜಗತ್ತಿನ ಸೃಷ್ಟಿ ಅಸಂಭವ.]

ಓಂ ಮಾಂತ್ರವರ್ಣಿಕಮೇವ ಚ ಗೀಯತೇ ಓಂ 15

ಮಂತ್ರದಲ್ಲಿ ಹೇಳಲ್ಪಟ್ಟಿರುವ ಬ್ರಹ್ಮನೇ ಉಪನಿಷತ್ತುಗಳಲ್ಲಿಯೂ ಹೊಗಳಲ್ಪಟ್ಟಿದ್ದಾನೆ. ಅವನು ಆನಂದಮಯ.

["ಬ್ರಹ್ಮವಿದಾಪ್ನೋತಿ ಪರಂ"—ಬ್ರಹ್ಮಜ್ಞಾನ ಪಡೆದವನು ಪರಮಾತ್ಮನ ಬಳಿ ಸಾರುತ್ತಾನೆ—ಎಂಬ ತೈತ್ತಿರೀಯೋಪನಿಷತ್ತಿನಲ್ಲಿ ಸೂಚಿತನಾದ

ಬ್ರಹ್ಮನೇ "ಸತ್ಯಂ ಜ್ಞಾನಮನಂತಂ ಬ್ರಹ್ಮ"—ಬ್ರಹ್ಮನು ಸತ್ಯ, ಜ್ಞಾನಾತ್ಮಕ, ಅನಂತ– ಎಂದೂ ಅಲ್ಲಿ ಹೇಳಲ್ಪಟ್ಟಿದ್ದಾನೆ. ಬ್ರಹ್ಮನ ಪ್ರತಿಯೊಂದು ಅವಯವವೂ ಸರ್ವಸಮರ್ಥವಾಗಿರುವುದರಿಂದ, ಅವಯವ-ಅವಯವಿಗಳಲ್ಲಿ ಭೇದವನ್ನೆಣಿಸದೆ, 'ಬ್ರಹ್ಮನ ಪಾದ ಆನಂದಮಯ' ಎಂದರೂ 'ಬ್ರಹ್ಮ ಆನಂದಮಯ' ಎಂದೇ ನಿಶ್ಚಿತವಾಗುವುದು. ಎಲ್ಲ ಪದಾರ್ಥಗಳ ಸಾರಭೂತನಾಗಿ ಬ್ರಹ್ಮ ಚಿನ್ಮಯನಾಗಿದ್ದಾನೆ; ಅವನ ಅವಯವಗಳು ನಮ್ಮ ಅವಯವಗಳಂತಲ್ಲ.]

ಓಂ ನೇತರಃ, ಅನುಪಪತ್ತೇಃ ಓಂ 16

ಆನಂದಮಯ. ಬ್ರಹ್ಮನಲ್ಲದೆ ಬೇರೊಬ್ಬನಲ್ಲ; ಬೇರೆಯವರಲ್ಲಿ ಉಪಪತ್ತಿ ಕೂಡುವುದಿಲ್ಲ.

[ಬ್ರಹ್ಮನನ್ನು–ವಿಷ್ಣುವನ್ನು–ಬಿಟ್ಟು ಮತ್ತೊಬ್ಬನ ವಿಚಾರಗಳನ್ನು ತಿಳಿದು ಧ್ಯಾನ, ಉಪಾಸನೆಗಳನ್ನು ಮಾಡಿದರೆ ಮೋಕ್ಷ ಸಿಗದು. ಮೋಕ್ಷಪ್ರಾಪ್ತಿಗೆ ವಿಷ್ಣುವಿನಲ್ಲಿ ಭಕ್ತಿ, ಉಪಾಸನೆಗಳಲ್ಲದೆ ಬೇರೆ ಮಾರ್ಗವೇ ಇಲ್ಲ, ಎಂಬುದನ್ನು "ನಾನ್ಯಃ ಪಂಥಾ ಅಯನಾಯ ವಿದ್ಯತೇ"—ಮೋಕ್ಷಪ್ರಾಪ್ತಿಗೆ ಬೇರೆ ಮಾರ್ಗವೇ ಇಲ್ಲ—ಎಂಬ ವೇದವಾಕ್ಯ ತಿಳಿಸುತ್ತದೆ.]

ಓಂ ಭೇದವ್ಯಪದೇಶಾಚ್ಚ ಓಂ 17

ಇಬ್ಬರಿಗೂ ಭೇದವನ್ನು ಹೇಳಿರುವುದರಿಂದಲೂ (ಆನಂದಮಯ ಬ್ರಹ್ಮನೇ, ಜೀವನಲ್ಲ).

[ತೈತ್ತಿರೀಯೋಪನಿಷತ್ತಿನ ಆನಂದವಲ್ಲಿಯಲ್ಲಿ, "ತೇ ಯೇ ಶತಂ ಪ್ರಜಾಪತೇರಾನಂದಾಃ, ಸ ಏಕೋ ಬ್ರಹ್ಮಣ ಆನಂದಃ"—ಪ್ರಜಾಪತಿಯ ಆನಂದದ ನೂರರಷ್ಟು ಬ್ರಹ್ಮನ ಆನಂದ—ಮೊದಲಾಗಿ ಹೇಳಲಾಗಿದೆ. "ಸ ಯಶ್ಚಾಯಂ ಪುರುಷೇ, ಯಶ್ಚಾಸಾವಾದಿತ್ಯೇ"—ಯಾವನು ಪುರುಷನಲ್ಲಿರುವನೋ ಯಾವನು ಆದಿತ್ಯನಲ್ಲಿರುವನೋ—ಎಂದು ಆ ಉಪನಿಷತ್ತಿನ ಭೃಗುವಲ್ಲಿಯಲ್ಲಿ ಹೇಳಲ್ಪಟ್ಟಿದೆ. ಇವು ಜೀವ–ಬ್ರಹ್ಮರ ಭೇದವನ್ನು ಸ್ಪಷ್ಟವಾಗಿ ತಿಳಿಸುವುವು. 'ತತ್ತ್ವಮಸಿ', 'ಅಹಂ ಬ್ರಹ್ಮಾಸ್ಮಿ' ಎಂಬ ಶ್ರುತಿವಾಕ್ಯಗಳು ಭೇದವಿರೋಧಿಗಳಲ್ಲ.

ಓಂ ಕಾಮಾಚ್ಚ ನಾನುಮಾನಾಪೇಕ್ಷಾ ಓಂ 18

ಅನುಮಾನ ಕಾಮಚಾರಿಯಾದುದರಿಂದ ಅದನ್ನು ಮುಖ್ಯ ಪ್ರಮಾಣ ವನ್ನಾಗಿ ಅಪೇಕ್ಷಿಸಬಾರದು.

[ಬೇಕಾದಂತೆ ಊಹೆ ಮಾಡಲು ಸಾಧ್ಯ; ಆದುದರಿಂದ ತತ್ತ್ವಜ್ಞಾನ ಪಡೆಯಲು ಬರೇ ಅನುಮಾನ ಸಾಲದು. "ನೈಷಾ ತರ್ಕೇಣ ಮತಿರಾಪ-ನೇಯಾ"—ತರ್ಕದಿಂದಲೇ ಈ ಬ್ರಹ್ಮಜ್ಞಾನ ಸಿದ್ಧಿಸದು—ಎಂದು ಶ್ರುತಿ ವಾಕ್ಯವೇ ಇದೆ. ಶ್ರುತಿಯಿಂದ ಸಮರ್ಥಿತವಾದ ಅನುಮಾನಕ್ಕೆ ಮಾತ್ರ ಪ್ರಾಮಾಣ್ಯ ಉಂಟು.]

ಓಂ ಅಸ್ಮಿನ್ನಸ್ಯ ಚ ತದ್ಯೋಗಂ ಶಾಸ್ತಿ ಓಂ 19

ಬ್ರಹ್ಮನೊಡನೆ ಜೀವನ ಸಂಬಂಧವನ್ನು ಮುಕ್ತಿಯಲ್ಲಿಯೂ ಹೇಳಿದ್ದಾರೆ.

["ಸಹ ಬ್ರಹ್ಮಣಾ ವಿಪಶ್ಚಿತಾ"—ಸರ್ವಜ್ಞನಾದ ಬ್ರಹ್ಮನೊಡನೆ ಸೇರಿ ಕೊಂಡು ಮುಂತಾದ ವಾಕ್ಯಗಳಿಂದ ಮುಕ್ತಜೀವನು ಬ್ರಹ್ಮನೊಡನೆ ಸೇರಿ ಕೊಂಡೇ ಆನಂದಪಡುತ್ತಾನೆ, ಎಂದು ತಿಳಿಸಿರುವುದರಿಂದ ಆನಂದಮಯ ಶಬ್ದ ಬ್ರಹ್ಮನಿಗೇ ಮುಖ್ಯವಾಗಿ ಅನ್ವಯಿಸುವುದು: ಅವನೇ ವಿಚಾರಕ್ಕೆ ವಿಷಯ.]

ಓಂ ಅಂತಸ್ತದ್ಧರ್ಮೋಪದೇಶಾತ್ ಓಂ 20

"ಅಂತಃಸ್ಥ" ಮೊದಲಾದ ಪದಗಳು ಬ್ರಹ್ಮನನ್ನೇ ಬೋಧಿಸುವುವು, ಅವನ ಧರ್ಮಗಳನ್ನೇ ತಿಳಿಸುವುದರಿಂದ.

["ಸಮುದ್ರೇಽಂತಃ ಕವಯೋ ವಿಚಕ್ಷತೇ"—ಸಮುದ್ರದ ಒಳಗೆ ಇರುವವನನ್ನು ಕವಿಗಳು ತಿಳಿದಿದ್ದಾರೆ (ತೈ.ಉ.)—ಮುಂತಾದ ವರ್ಣನೆ ಗಳಲ್ಲಿ ಹೇಳಲ್ಪಟ್ಟಿರುವವನು ಬ್ರಹ್ಮನೇ—ವಿಷ್ಣುವೇ, ಕ್ಷೀರಾಬ್ಧಿಶಾಯೀ—ಇಂದ್ರಾದಿ ದೇವತೆಗಳಲ್ಲ.]

ಓಂ ಭೇದವ್ಯಪದೇಶಾಚ್ಚಾನ್ಯಃ ಓಂ 21

ಶ್ರುತಿಗಳು ಭೇದವನ್ನು ಸ್ಪಷ್ಟವಾಗಿ ತಿಳಿಸುವುದರಿಂದಲೂ ಆತ ಬ್ರಹ್ಮನೇ.

['ಅಂತಃಸ್ಥ' ಪದದಿಂದ ಬ್ರಹ್ಮನನ್ನೇ ಹೇಳಿ, "ವಾಯೋರಾತ್ಮಾನಂ ಕವಯೋ ನಿಚಿಕ್ಯುಃ"—ಅವನು ವಾಯುವಿಗೆ ಆತ್ಮನೆಂದು ಕವಿಗಳು

ನಿಶ್ಚೈಲಸಿದರು—ಎಂದು ಹೇಳಿರುವುದರಿಂದ ಆ ಬ್ರಹ್ಮ ಇಂದ್ರಾದಿ ದೇವತೆಗಳಿಗಿಂತ ಭಿನ್ನ, ಅವರಿಗೆ ಅಂತಃಸ್ಥ ಪದ ಕೂಡುವುದಿಲ್ಲ, ಎಂದ ಹಾಗಾಯಿತು.]

ಓಂ ಆಕಾಶಸ್ತಲ್ಲಿಂಗಾತ್ ಓಂ 22

ಆಕಾಶಶಬ್ದವಾಚ್ಯ ಬ್ರಹ್ಮನೇ–ವಿಷ್ಣುವೇ–ಅವನ ಲಿಂಗಗಳಿರುವುದರಿಂದ.

[ಈ ಜಗತ್ತಿಗೆ ಯಾರು ಆಶ್ರಯ? ಎಂಬ ಶಿಲಕನ ಪ್ರಶ್ನೆಗೆ, 'ಆಕಾಶವೇ' ಎಂಬ ಉತ್ತರವನ್ನು ಪ್ರವಹಣ ಹೇಳಿದ್ದಾನೆ (ಛಾಂದೋಗ್ಯ). ಈ ಜಗತ್ತಿಗೆ ಆಶ್ರಯಭೂತನಾದ 'ಆಕಾಶ' ವಿಷ್ಣುವೇ, ಭೂತಾಕಾಶವಲ್ಲ. "ನಾಮಾನಿ ಸರ್ವಾಣಿ ಯಮಾವಿಶಂತಿ"—ಎಲ್ಲ ಹೆಸರುಗಳೂ ಯಾವನಲ್ಲಿ ಸೇರುತ್ತವೆಯೋ—ಎಂದೂ ಶ್ರುತಿಯಿದೆ.]

ಓಂ ಅತ ಏವ ಪ್ರಾಣಃ ಓಂ 23

ಆದುದರಿಂದಲೇ ಪ್ರಾಣವೆಂದರೂ ಮುಖ್ಯವಾಗಿ ಬ್ರಹ್ಮನೇ.

[ಪ್ರಾಣ, ಎಂದರೆ ಪ್ರಸಿದ್ಧನಾದ ವಾಯು ಎಂಬ ದೇವತೆಯಾಗಬಹುದು; ಆದರೆ ಹಾಗಲ್ಲ. ವಿಷ್ಣುವೇ ಪ್ರಾಣಶಬ್ದವಾಚ್ಯ. "ತದ್ವೈವ ತ್ವಂ ಪ್ರಾಣೋಽಭವಃ" ನೀನೇ ಆ ಪ್ರಾಣ ಆದೆ—ಮುಂತಾದ ವಾಕ್ಯಗಳಲ್ಲಿ ಹೀಗೆ ಅರ್ಥ ಮಾಡಬೇಕು.]

ಓಂ ಜ್ಯೋತಿಶ್ಚರಣಾಭಿಧಾನಾತ್ ಓಂ 24

ಜ್ಯೋತಿ ಎಂದರೆ ಬ್ರಹ್ಮ, ಚರಣವನ್ನು ಹೇಳಿರುವುದರಿಂದ.

[ಕಣ್ಣು, ಕಿವಿ ಮೊದಲಾದ ಇಂದ್ರಿಯಗಳು ವಿರುದ್ಧವನ್ನು ಆಚರಿಸುತ್ತವೆ. ಜ್ಯೋತಿ ಅವುಗಳಿಂದ ಅತ್ಯಂತ ದೂರ. ಜ್ಯೋತಿ ಇತರ ಇಂದ್ರಿಯಗಳಿಂದ ದೂರ ಹೋಗುವುದು, ಅದು ಇಂದ್ರಿಯಾತೀತ. ಆದುದರಿಂದ ಜ್ಯೋತಿ ಎಂದರೆ ವಿಷ್ಣುವೇ, ಅವನೇ ಇಂದ್ರಿಯಾದಿ ವಿದೂರ. ಹಾಗೆಂದು ಋಗ್ವೇದ ಹೇಳುತ್ತದೆ.]

ಓಂ ಛಂದೋಽಭಿಧಾನಾನ್ನೇತಿ ಚೇನ್ನ, ತಥಾ ಚೇತೋಽರ್ಪಣನಿಗದಾತ್, ತಥಾ ಹಿ ದರ್ಶನಮ್ ಓಂ 25

ಗಾಯತ್ರೀ ಮೊದಲಾದ ಛಂದಸ್ಸುಗಳನ್ನು ಹೇಳಿರುವುದರಿಂದ

ಬ್ರಹ್ಮನನ್ನು ಸೂಚಿಸಿಲ್ಲ, ಎನ್ನುವುದು ಸರಿಯಲ್ಲ; ಹಾಗೆ ಮನಸ್ಸನ್ನು ಅರ್ಪಣೆ ಮಾಡಬೇಕೆಂದು ಹೇಳಿದೆ. ಹಾಗೆಯೇ ಶ್ರುತಿಯೂ ಇದೆ.

["ಗಾಯತ್ರೀ ವಾ ಇದಂ ಸರ್ವಂ ಭೂತಂ, ಯದಿದಂ ಕಿಂ ಚ"—ಇದೆಲ್ಲವೂ ಗಾಯತ್ರಿಯೇ ಎಂದು ಛಾಂದೋಗ್ಯ ಉಪನಿಷತ್ತು ಹೇಳುತ್ತದೆ. ವೇದಗಳಲ್ಲಿ ಹೇಳಿರುವ ಇಪ್ಪತ್ತನಾಲ್ಕು ಅಕ್ಷರಗಳುಳ್ಳ ಗಾಯತ್ರೀ ಛಂದಸ್ಸು ವಿಷ್ಣುವಲ್ಲ, ಎನ್ನುವುದು ಸರಿಯಲ್ಲ; ಏಕೆಂದರೆ ಗಾನ ಮತ್ತು ತ್ರಾಣ-ರಕ್ಷಣೆ —ಮಾಡುವುದರಿಂದ ವಿಷ್ಣುವೇ ಗಾಯತ್ರೀ ಶಬ್ದವಾಕ್ಯ. ಆ ಶಬ್ದದಿಂದಲೇ ಮನಸ್ಸು ವಿಷ್ಣುವನ್ನು ಉಪಾಸನೆ ಮಾಡಲಿ, ಎಂದು ಶ್ರುತಿಯ ತಾತ್ಪರ್ಯ.]

ಓಂ ಭೂತಾದಿಪಾದವ್ಯಪದೇಶೋಪ-ಪತ್ತೇಶ್ಚೈವಂ ಓಂ 26

ಭೂತಾದಿಪಾದಗಳನ್ನು ಹೇಳುವುದು ಹೊಂದುವುದರಿಂದಲೂ, ಹೀಗೆ ನಿಶ್ಚೈಸಬೇಕು.

[ಗಾಯತ್ರೀ ಶಬ್ದ ವಿಷ್ಣುಸೂಚಕ, ಎನ್ನುವುದಕ್ಕೆ ಇನ್ನೊಂದು ಉಪಪತ್ತಿಯೂ ಇದೆ. ಛಾಂದೋಗ್ಯದಲ್ಲಿ "ಸೈಷಾ ಚತುಷ್ಪದಾ ಷಡ್ವಿಧಾ ಗಾಯತ್ರೀ" ಎಂದು ಗಾಯತ್ರಿಗೆ ನಾಲ್ಕು ಪಾದಗಳಿರುವುದನ್ನು ಹೇಳಿದೆ. ಬ್ರಹ್ಮನನ್ನು ಬಿಟ್ಟು ಗಾಯತ್ರೀ ಎಂಬ ಛಂದಸ್ಸಿಗೆ ಭೂತಾದಿ ನಾಲ್ಕು ಪಾದಗಳು ಸಂಬದ್ಧವಾಗುವುದಿಲ್ಲ. ಪುರುಷಸೂಕ್ತದಲ್ಲಿ "ಪಾದೋऽಸ್ಯ ವಿಶ್ವಾ ಭೂತಾನಿ" ಎಂದರೆ ಪುರುಷನಿಗೆ—ಬ್ರಹ್ಮನಿಗೆ—ಈ ವಿಶ್ವವೆಲ್ಲ ಒಂದು ಪಾದವೆಂದು ಹೇಳಿದೆ. ಆಕಾಶದಲ್ಲಿರುವ ಅನಂತಾಸನ, ವೈಕುಂಠ ಮತ್ತು ಕ್ಷೀರಸಾಗರಗಳೆಂಬ ಮೂರು ಸ್ಥಾನಗಳು ಅಮೃತಮಯವಾದ ಮೂರು ಪಾದಗಳು: ಇದನ್ನು "ತ್ರಿಪಾತ್, ಅಸ್ಯಾಮೃತಂ ದಿವಿ" ಎಂದು ತಿಳಿಸಿದೆ. ಆದುದರಿಂದ ಗಾಯತ್ರೀ ಎಂಬ ಶಬ್ದ ವಿಷ್ಣುವನ್ನೇ ಬೋಧಿಸುವುದು.]

ಓಂ ಉಪದೇಶಭೇದಾತ್ ನೇತಿ ಚೇನ್ನ, ಉಭಯಸ್ಮಿನ್ನಪ್ಯವಿರೋಧಾತ್ ಓಂ 27

ಉಪದೇಶದಲ್ಲಿ ಭೇದವಿರುವುದರಿಂದ ಜ್ಯೋತಿ ಮತ್ತು ಗಾಯತ್ರೀ ಶಬ್ದಗಳು ಒಬ್ಬನೇ ಆದ ಬ್ರಹ್ಮನನ್ನು ಸೂಚಿಸಲಾರವು, ಎನ್ನಬಾರದು, ಎರಡರಲ್ಲಿಯೂ ವಿರೋಧವಿಲ್ಲದಿರುವುದರಿಂದ.

[ಭೂಃ, ಭುವಃ, ಸ್ವಃ ಎಂಬ ಮೂರು ಲೋಕಗಳನ್ನು ಗಮನಿಸಿದಾಗ ಭುವರ್ಲೋಕದಿಂದ ಆಚೆಗೆ ಇರುವುದೆಲ್ಲ ದ್ಯುಲೋಕ. ಆದುದರಿಂದ ಅನಂತಾಸನ, ವೈಕುಂಠ ಮತ್ತು ಶ್ವೇತದ್ವೀಪಗಳು ದ್ಯುಲೋಕದಲ್ಲಿರುವುವು. ಭೂಃ, ಭುವಃ, ಸ್ವಃ, ಮಹಃ, ಜನಃ, ತಪಃ, ಸತ್ಯಂ ಎಂಬ ಏಳು ಲೋಕಗಳನ್ನು ಗಮನದಲ್ಲಿ ಇಟ್ಟುಕೊಂಡಾಗ ಮೇರುಪರ್ವತದಿಂದ ಆಚೆಗೆ ಇರುವುದೇ ದ್ಯುಲೋಕ. ಮೇರುವಿನ ಮೇಲಿರುವ ಅನಂತಾಸನಾದಿಗಳು ದ್ಯುಲೋಕದಿಂದ ಹೊರಗೆ ಇರುವುವು. ಗಾಯತ್ರೀ 'ದಿವಿ' ಎಂದರೆ ದ್ಯುಲೋಕದಲ್ಲಿದೆ ಎಂದೂ ಜ್ಯೋತಿ 'ದಿವಃ ಪರಂ' ಎಂದರೆ ದ್ಯುಲೋಕದ ಹೊರಗೆ ಇದೆಯೆಂದೂ ಹೇಳಿದೆ. ಬ್ರಹ್ಮ ಸರ್ವಗತನಾದುದರಿಂದ ಜ್ಯೋತಿ ಮತ್ತು ಗಾಯತ್ರೀ ಶಬ್ದಗಳು ಬ್ರಹ್ಮನನ್ನು ಸೂಚಿಸುವುದರಲ್ಲಿ ಅಡ್ಡಿಯಿಲ್ಲ.]

ಓಂ ಪ್ರಾಣಸ್ತಥಾಽನುಗಮಾತ್ ಓಂ 28

ಹಾಗೆಯೇ 'ಪ್ರಾಣ' ಎಂದರೆ ಬ್ರಹ್ಮ, ಹಾಗೆ ವಾಕ್ಯಗಳ ಅನ್ವಯವಿರುವುದರಿಂದ.

["ಸ ಏಷ ಪ್ರಾಣಃ", "ತಂ ದೇವಾಃ ಪ್ರಾಣಯಂತ" ಮೊದಲಾದ ಶ್ರುತಿವಾಕ್ಯಗಳಿಂದ ಎಲ್ಲ ದೇವತೆಗಳಿಂದ ಉಪಾಸ್ಯನಾದ ಪ್ರಾಣ ಬ್ರಹ್ಮನೇ, ಎಂದು ಹೇಳಬೇಕು. ಬ್ರಹ್ಮ, ಪ್ರಾಣ ಇಬ್ಬರೂ ಸಕಲದೇವೋಪಾಸ್ಯರು.]

ಓಂ ನ ವಕ್ತುರಾತ್ಮೋಪದೇಶಾದಿತಿ ಚೇತ್, ಅಧ್ಯಾತ್ಮಸಂಬಂಧಭೂಮಾ ಹ್ಯಸ್ಮಿನ್ ಓಂ 29

ಹೇಳುವವನು ತನ್ನನ್ನೇ ವಾಯುವೆಂದಿರುವುದರಿಂದ ವಾಯು ವಿಷ್ಣುವಲ್ಲ, ಎನ್ನುವುದು ಸರಿಯಲ್ಲ. ಅಲ್ಲಿ ಪರಮಾತ್ಮನ ಬಹುದೇಹ ಸಂಬಂಧವನ್ನು ಹೇಳಿದೆ.

["ಪ್ರಾಣೋ ವಾ ಅಹಮಸ್ಮಿ ಋಷೇ"—ಎಲೈ ಋಷಿ, ನಾನು ಪ್ರಾಣನಾಗಿದ್ದೇನೆ—ಎಂದು ಐತರೇಯ ಆರಣ್ಯಕದಲ್ಲಿ ಹೇಳಲ್ಪಟ್ಟಿದೆ. ಇದು ವಿಶ್ವಾಮಿತ್ರನನ್ನು ಕುರಿತು ಬೃಹತೀಸಹಸ್ರವನ್ನು ಉಪದೇಶ ಮಾಡಿದ ಇಂದ್ರ ಹೇಳಿದ ಮಾತು. ಆದುದರಿಂದ ಇಂದ್ರನೇ ಪ್ರಾಣ, ಎನ್ನಬಹುದೇ ? ಇಲ್ಲವೆಂದು ಸೂತ್ರದ ತಾತ್ಪರ್ಯ. ಪರಮಾತ್ಮನಿಗೆ ಬಹುವಾಗಿ ಅಧ್ಯಾತ್ಮ ಸಂಬಂಧವಿರುವುದು. ಆದುದರಿಂದ ಅನೇಕ ದೇಹಗಳಲ್ಲಿರುವ ವಿಷ್ಣುವೇ

ಇಲ್ಲಿ ಇಂದ್ರಶಬ್ದದಿಂದ ತಿಳಿಯಲ್ಪಡತಕ್ಕವ; ಅವನೇ ವಾಯು. ಆದುದರಿಂದ ವಾಯುವೆಂದರೆ ಮುಖ್ಯವಾಗಿ ವಿಷ್ಣುವೇ.]

ಓಂ ಶಾಸ್ತ್ರದೃಷ್ಟ್ಯಾ ತೂಪದೇಶೋ ವಾಮದೇವವತ್ ಓಂ 30

ಅಂತರ್ಯಾಮಿಯ ದೃಷ್ಟಿಯಿಂದಲೇ ವಾಮದೇವನಂತೆ ಉಪದೇಶ ಮಾಡಿರುವುದು.

[ಸೂತ್ರದಲ್ಲಿನ ಶಾಸ್ತ್ರಶಬ್ದ ಅಂತರ್ಯಾಮಿ ಪರಮಾತ್ಮನನ್ನೇ ಬೋಧಿಸುವುದು. 'ನಾನೇ ಪ್ರಾಣ' ಎಂದು ಇಂದ್ರ ಹೇಳಿದುದೂ, "ಅಹಂ ಮನುರಭವಂ ಸೂರ್ಯಶ್ಚ (ಬೃ. ಆ.)"—ನಾನೇ ಮನುವಾಗಿದ್ದೆ, ಸೂರ್ಯನಾಗಿದ್ದೆ—ಎಂಬ ವಾಮದೇವಋಷಿಯ ಉಪದೇಶವೂ ಅಂತರ್ಯಾಮಿ ಪರಮಾತ್ಮನನ್ನು ಉದ್ದೇಶಿಸಿ ಹೇಳಿದ ಮಾತುಗಳು. ಎಲ್ಲರನ್ನೂ ಶಾಸನ ಮಾಡುವವ ಶಾಸ್ತ್ರ—ಪರಮಾತ್ಮ—ಆಯಾ ಹೆಸರುಗಳಿಂದಲೇ ವಾಚ್ಯನಾಗುವನು.]

ಓಂ ಜೀವಮುಖ್ಯಪ್ರಾಣಲಿಂಗಾನ್ನೇತಿ ಚೇನ್ನ, ಉಪಾಸಾತ್ರೈವಿಧ್ಯಾತ್ ಆಶ್ರಿತತ್ವಾತ್ ಇಹ ತದ್ಯೋಗಾತ್ ಓಂ 31

ಜೀವ ಮತ್ತು ಮುಖ್ಯಪ್ರಾಣರ ಲಿಂಗಗಳನ್ನು ಹೇಳಿರುವುದರಿಂದ ಬ್ರಹ್ಮನನ್ನು ಸೂಚಿಸಿಲ್ಲ, ಎನ್ನಲಾಗದು; ಉಪಾಸನೆಯು ಮೂರು ಬಗೆಗಳಿರುವುದರಿಂದಲೂ, ಆಶ್ರಿತತ್ವ ಮತ್ತು ಸಂಬಂಧಗಳಿರುವುದರಿಂದಲೂ ಬ್ರಹ್ಮನೇ ಆ ವಾಕ್ಯಗಳಿಂದ ಸೂಚಿತನಾಗಿರುವನು.

[ಉಪಾಸನೆ ಮೂರು ಬಗೆಯಾಗಿದೆ; ಅಂತಃ, ಬಹಿಃ, ಮತ್ತು ಸರ್ವಗತನಾದ ಬ್ರಹ್ಮನನ್ನು ಕುರಿತುದು, ಎಂದು. ಮನುಷ್ಯರು ಪ್ರಾಯಶಃ ಬಹಿರ್ಗತನಾದ ಪರಮಾತ್ಮನನ್ನೂ ಗಂಧರ್ವರು ಅಂತರ್ಗತನಾದ ಹರಿಯನ್ನೂ ದೇವತೆಗಳು ಸರ್ವವ್ಯಾಪಿಯಾದ ವಿಷ್ಣುವನ್ನೂ ಉಪಾಸನೆ ಮಾಡುವರು. "ಸ ಏತಮೇವ ಸೀಮಾನಂ ವಿದಾರ್ಯೈತಯಾ ದ್ವಾರಾ ಪ್ರಾಪದ್ಯತ"—ಅವನು ಇದೇ ಮೇರೆಯನ್ನು ಸೀಳಿಕೊಂಡು ಇದೇ ದ್ವಾರದ ಮೂಲಕ (ಬ್ರಹ್ಮನ ಹೃದಯವನ್ನು) ಪ್ರವೇಶಿಸಿದನು—ಎಂದೂ "ಸ ಏತಮೇವ

ಪುರುಷಂ ಬ್ರಹ್ಮ ತತಮಪಶ್ಯತ್"—ಅವನು ಈ ಪುರುಷನನ್ನೇ ವ್ಯಾಪ್ತನಾದ ಬ್ರಹ್ಮನನ್ನಾಗಿ ನೋಡಿದನು—ಎಂದೂ ಐತರೇಯ ಆರಣ್ಯಕ ಹೇಳುತ್ತದೆ.

ಕೇಷಾಂ ಚಿತ್ಸರ್ವಗತ್ವೇನ ಕೇಷಾಂ ಚಿದ್ಧೃದಯೇ ಹರಿಃ ।
ಕೇಷಾಂ ಚಿದ್ಬಹಿರೇವಾಸಾವುಪಾಸ್ಯಃ ಪುರುಷೋತ್ತಮಃ ॥

ಎಂದು ಇದೇ ಅಭಿಪ್ರಾಯವನ್ನು ಬ್ರಾಹ್ಮಪುರಾಣದಲ್ಲಿ ಹೇಳಿದೆ. ಹೀಗೆ ಮುಖ್ಯಪ್ರಾಣ ಎಂದು ಶ್ರುತಿ ಹೇಳಿದಾಗ ಪರಬ್ರಹ್ಮನೇ ಸೂಚಿತನಾಗುತ್ತಾನೆ.]

ಇಲ್ಲಿಗೆ ಬ್ರಹ್ಮಸೂತ್ರಗಳ ಮೊದಲನೆಯ ಅಧ್ಯಾಯದ ಮೊದಲನೆಯ ಪಾದ ಮುಗಿಯಿತು.

ಎರಡನೆಯ ಪಾದ

ಲಿಂಗಾತ್ಮಕವಾದ ಶಬ್ದಗಳು—ಆಕಾಶ, ಪ್ರಾಣ, ಜ್ಯೋತಿ ಮೊದಲಾದವು—ಮುಖ್ಯವಾಗಿ ವಿಷ್ಣುವನ್ನೇ ಸೂಚಿಸುವುವೆಂದು ತೋರಿಸಿದ ಮೇಲೆ ಸರ್ವಗತತ್ವಾದಿ ಧರ್ಮವಾಚಿ ಶಬ್ದಗಳನ್ನು ಈಗ ವಿವೇಚಿಸಲಾಗುವುದು. ಅನ್ಯತ್ರಪ್ರಸಿದ್ಧವಾದ—ಇತರ ವಸ್ತುಗಳಲ್ಲಿಯೇ ವಿಶೇಷವಾಗಿ ಬಳಕೆಯಲ್ಲಿರುವ—ಶಬ್ದಗಳನ್ನು ಬ್ರಹ್ಮನಲ್ಲಿ ಸಮನ್ವಯ ಮಾಡಲಾಗುವುದು. ಛಾಂದೋಗ್ಯದಲ್ಲಿನ ಮನೋಮಯ, ಪ್ರಾಣ, ಶರೀರ ಎಂಬ ಶಬ್ದಗಳನ್ನು ಈಗ ಪರಾಮರ್ಶೆ ಮಾಡಲಾಗುವುದು.

ಓಂ ಸರ್ವತ್ರ ಪ್ರಸಿದ್ಧೋಪದೇಶಾತ್ ಓಂ 1

ಎಲ್ಲೆಡೆಯೂ ಇರುವುದು, ಮುಂತಾದವನ್ನು ಹೇಳುವ ಶಬ್ದಗಳು ಬ್ರಹ್ಮನನ್ನೇ ಸೂಚಿಸುವುವು.

["ತಸ್ಯೈ ತಸ್ಯ ಅಸಾವಾದಿತ್ಯೋ ರಸಃ"—ಇವನಿಗೆ ಈ ಆದಿತ್ಯ ರಸ—ಎಂಬ ಐತರೇಯ ಶ್ರುತಿಯಲ್ಲಿ ಆದಿತ್ಯ ಸರ್ವಗತ ಎಂದು ತಿಳಿಸಿದೆ. "ಸ ಯಶ್ಚಾಯಮಶರೀರಃ ಪ್ರಜ್ಞಾತ್ಮಾ"—ಯಾವನು ಅಶರೀರಿಯೋ ಪ್ರಜ್ಞಾತ್ಮನೋ (ಚಿದಾತ್ಮಕ)—ಎಂಬ ಐತರೇಯ ವಾಕ್ಯದಿಂದ ಸರ್ವಗತನಾದವನು ನಾರಾಯಣನೇ, ಎಂದು ಹೇಳಿದೆ. ಆದುದರಿಂದ ಬ್ರಹ್ಮಶಬ್ದ ಮುಖ್ಯವಾಗಿ ವಿಷ್ಣುವನ್ನೇ ತಿಳಿಸುವುದು.]

ಓಂ ವಿವಕ್ಷಿತಗುಣೋಪಪತ್ತೇಶ್ಚ ಓಂ 2

ವಿವಕ್ಷಿತ (ಹೇಳಬೇಕಾದ) ಗುಣಗಳು ಅವನಲ್ಲಿಯೇ ಹೊಂದುವುದರಿಂದ.

[ಅಶ್ರುತ, ಅದೃಷ್ಟ, ಅಮತ ಮೊದಲಾದ ಶಬ್ದಗಳು ಬ್ರಹ್ಮನನ್ನು ವರ್ಣಿಸುವುವು. "ನ ತೇ ವಿಷ್ಣೋ ಜಾಯಮಾನೋ ನ ಜಾತೋ ದೇವ, ಮಹಿಮ್ನಃ ಪರಮಂತಮಾಪ"— ವಿಷ್ಣುವೇ, ಈಗ ಹುಟ್ಟುತ್ತಿರುವ ಅಥವಾ ಹಿಂದೆ ಹುಟ್ಟಿದ ಯಾವನೂ ನಿನ್ನ ಮಹಿಮೆಯ ಪಾರವನ್ನು ಮುಟ್ಟಲಾರ— ಇತ್ಯಾದಿ ಶ್ರುತಿಗಳಿಂದ ಅಶ್ರುತತ್ವಾದಿಗುಣಗಳೆಲ್ಲ ವಿಷ್ಣುವಿಗೇ ಅನ್ವಯಿಸುವುವು. ಅವನೇ ಜಿಜ್ಞಾಸ್ಯ, ಉಪಾಸ್ಯನಾದ ದೇವತೆ.]

ಓಂ ಅನುಪಪತ್ತೇಶ್ಚ ನ ಶಾರೀರಃ ಓಂ 3

ಹೊಂದದೆ ಇರುವುದರಿಂದಲೂ ಜೀವನಲ್ಲ.

[ಶರೀರವುಳ್ಳವನು ಶಾರೀರ—ಜೀವ. 'ಸರ್ವಗತ' ಜೀವನೂ ಆಗಲಾರ, ಆದಿತ್ಯನೆಂಬ ಸೂರ್ಯನೂ ಆಗಲಾರ. ಒಬ್ಬನೇ ಆದ ಜೀವ ನಾನಾ ಶರೀರಗಳಲ್ಲಿ, ಒಂದೇ ಸಮಯದಲ್ಲಿ ಪ್ರವೇಶಿಸಿ ಇರಲಾರ. ಆದುದರಿಂದ 'ಮನೋಮಯ', 'ಅಶ್ರುತ' ಮೊದಲಾದ ಶಬ್ದಗಳಿಂದ ಸೂಚಿತನಾದವನು ಬ್ರಹ್ಮ— ಜೀವನಲ್ಲ.]

ಓಂ ಕರ್ಮಕರ್ತೃವ್ಯಪದೇಶಾಚ್ಚ ಓಂ 4

ಕರ್ಮ, ಕರ್ತೃ ಎಂದು ಬೇರೆಯಾಗಿ ಹೇಳಿರುವುದರಿಂದಲೂ.

["ಆತ್ಮಾನಂ ಪರಸ್ಮೈ ಶಂಸತಿ"— ಆತ್ಮನನ್ನು ಮತ್ತೊಬ್ಬನಿಗೆ ಉಪದೇಶಿಸುವನು—ಎಂಬ ಐತರೇಯ ಆರಣ್ಯಕದ ವಾಕ್ಯದಲ್ಲಿ ಕರ್ತೃಪದ, ಕರ್ಮಪದಗಳು ಬೇರೆಯಾಗಿಯೇ ಇವೆ. ಜೀವ ಕರ್ತಾ, ಆತ್ಮಾ ಕರ್ಮ ಎಂದಿರುವುದರಿಂದ ಜೀವ ಬೇರೆ, ಆತ್ಮಾ—ಪರಮಾತ್ಮಾ ಅಥವಾ ಬ್ರಹ್ಮ—ಬೇರೆ. ಆದುದರಿಂದ ಅಲ್ಲಿ ಉದ್ದೇಶಿಸಲ್ಪಟ್ಟಿರುವವನು ಬ್ರಹ್ಮನೇ, ಜೀವನಲ್ಲ.]

ಓಂ ಶಬ್ದವಿಶೇಷಾತ್ ಓಂ 5

ವಿಶೇಷ ಶಬ್ದವಾಚ್ಯನಾಗಿರುವುದರಿಂದ.

["ಏತಮೇವ ಬ್ರಹ್ಮೇತ್ಯಾಚಕ್ಷತೇ"—ಇವನನ್ನೇ ಬ್ರಹ್ಮನೆನ್ನುತ್ತಾರೆ— ಎನ್ನುವುದರಿಂದ ಸರ್ವಗತನಾದ ಆತ್ಮನನ್ನೇ ಬ್ರಹ್ಮನೆನ್ನುತ್ತಾರೆ, ಎಂದು

ಐತರೇಯ ಆರಣ್ಯಕ ಶ್ರುತಿ ತಿಳಿಸುತ್ತದೆ. "ಏಷ ಉ ಏವ ಬ್ರಹ್ಮ, ಏಷ ಉ ಏವಾತ್ಮಾ, ಏಷ ಉ ಏವ ಸವಿತಾ, ಏಷ ಉ ಏವೇಂದ್ರಃ, ಯ ಉ ಏವ ಹರಿರ್ಹರತಿ, ಪರಃ ಪರಮಾನಂದಃ"—ಇವನೇ ಬ್ರಹ್ಮ, ಇವನೇ ಆತ್ಮಾ, ಇವನೇ ಸೂರ್ಯ, ಇವನೇ ಇಂದ್ರ, ಇವನೇ ಹರಿ, ಪರಮ ಮತ್ತು ಪರಮಾನಂದ—ಎಂದು ಇಂದ್ರದ್ಯುಮ್ನ ಶಾಖೆ ಹೇಳುವುದರಿಂದ, ಜೀವನನ್ನೇ ಬ್ರಹ್ಮನೆಂದು ಅದು ತಿಳಿಸುವುದಿಲ್ಲ.]

ಓಂ ಸ್ಮೃತೇಶ್ಚ ಓಂ 6

ಸ್ಮೃತಿಯಿಂದಲೂ.

["ಅಹಮಾತ್ಮಾ ಗುಡಾಕೇಶ! ಸರ್ವಭೂತಾಶಯಃ ಸ್ಥಿತಃ"—ಅರ್ಜುನ! ನಾನು ಸಮಸ್ತಪ್ರಾಣಿಗಳ ಹೃದಯದಲ್ಲಿರುವ ಆತ್ಮಾ—ಮೊದಲಾಗಿ ಗೀತಾವಾಕ್ಯಗಳು ಹಾಗೂ ಇತರ ಸ್ಮೃತಿವಾಕ್ಯಗಳಿಂದ ಸರ್ವಭೂತಸ್ಥತ್ವ, ಸರ್ವಾಧಾರತ್ವ ಮುಂತಾದ ಗುಣಗಳು ವಿಷ್ಣುವಿಗೆ ಹೊಂದುತ್ತವೆ, ಜೀವನಿಗಲ್ಲ. ಆ ವಾಕ್ಯಗಳನ್ನು 'ಅಪ್ರಾಮಾಣಿಕ, ವ್ಯಾವಹಾರಿಕ ಸತ್ಯಸೂಚಕ' ಮೊದಲಾಗಿ ಕಲ್ಪಿಸಿಕೊಳ್ಳಬಾರದು—ಅದ್ವೈತಿಗಳಂತೆ.]

ಓಂ ಅರ್ಭಕೌಕಸ್ತ್ವಾತ್ ತದ್ವ್ಯಪದೇಶಾಚ್ಚ ನೇತಿ ಚೇನ್ನ, ನಿಚಾಯ್ಯತ್ವಾದೇವಂ, ವ್ಯೋಮವಚ್ಚ ಓಂ 7

"ಆಶ್ರಯ ಅಲ್ಪವಾಗಿರುವುದರಿಂದಲೂ ಹಾಗೆ ಸೂಕ್ಷ್ಮನೆಂದು ಹೇಳಿರುವುದರಿಂದಲೂ ಬ್ರಹ್ಮನಲ್ಲ" ಎಂದು ಹೇಳುವುದು ಸರಿಯಲ್ಲ; ಹಾಗೆ ಧ್ಯಾನ ಮಾಡಬೇಕಾಗಿರುವುದರಿಂದ—ಆಕಾಶದಂತೆ.)

["ಅಲ್ಪಸ್ಥಾನವನ್ನು ಆಶ್ರಯಿಸಿರುವುದರಿಂದಲೂ, ಚಕ್ಷುರ್ಮಯಾದಿ ರೂಪಗಳಿಂದ ಧ್ಯಾನಮಾಡಬೇಕೆಂದು ವಿಧಿಸಿರುವುದರಿಂದಲೂ ಜೀವನನ್ನೇ ತಿಳಿಸುವುದು, ಪರಬ್ರಹ್ಮನನ್ನಲ್ಲ, ಎನ್ನಲಾಗದು. ಸರ್ವಗತನಾದ ಪರಮಾತ್ಮನನ್ನು ಒಂದು ಪ್ರದೇಶದಲ್ಲಿ ಕೇಂದ್ರೀಕರಿಸಿಕೊಂಡು ಧ್ಯಾನ ಮಾಡುವುದು ಸುಲಭವಾದ ಉಪಾಸನೆಯ ಮಾರ್ಗ. "ಆಕಾಶ ಎಲ್ಲೆಡೆಯೂ ಇದೆ," ಎಂದಾಗ ಒಂದು ಅಲ್ಪಸ್ಥಾನದಲ್ಲಿಯೂ ಅದು ಇದೆ, ಎಂದಾಗುವುದಿಲ್ಲವೆ?]

ಓಂ ಸಂಭೋಗಪ್ರಾಪ್ತಿರಿತಿ ಚೇನ್ನ, ವೈಶೇಷ್ಯಾತ್ ಓಂ 8

ಜೀವಪರಮಾತ್ಮರಿಗೆ ಒಂದೇ ರೀತಿಯ ಸುಖಾನುಭವವಿದೆ, ಎನ್ನುವುದು ಸರಿಯಲ್ಲ; ವೈಶಿಷ್ಟ್ಯವಿರುವುದರಿಂದ.

[ಒಂದೇ ದೇಹದಲ್ಲಿ ಜೀವನೂ ಪರಮಾತ್ಮನೂ ಇರುವುದರಿಂದ ಅವರಿಬ್ಬರಿಗೂ ಒಂದೇ ಪ್ರಕಾರದ ಸುಖದುಃಖಗಳಾಗುವುವು, ಎಂದು ಹೇಳುವುದು ಸರಿಯಲ್ಲ. ಸಾಮರ್ಥ್ಯ ವಿಶೇಷದಿಂದ ಸುಖಾನುಭವದಲ್ಲಿಯೂ ವ್ಯತ್ಯಾಸವಿದೆ. ಪರಮಾತ್ಮ ಸರ್ವಜ್ಞ, ಸರ್ವಶಕ್ತ, ಇತ್ಯಾದಿ; ಜೀವ ಅಲ್ಪಜ್ಞ, ಅಲ್ಪಶಕ್ತ, ಇತ್ಯಾದಿ. ಆದುದರಿಂದ ಸರ್ವಸ್ವಾತಂತ್ರ್ಯವುಳ್ಳ ಪರಮಾತ್ಮನ ಪೂರ್ಣಸುಖ, ಅಸ್ವತಂತ್ರನಾದ ಜೀವನಿಗೆ ಆಗಲಾರದು; ಅವನದು ದುಃಖಮಿಶ್ರಿತ ಸುಖ, ಪರಮಾತ್ಮನದು ದುಃಖಲೇಪವಿಲ್ಲದ ಆನಂದ.]

ಓಂ ಅತ್ತಾ, ಚರಾಚರಗ್ರಹಣಾತ್ ಓಂ 9

ಚರಾಚರ ವಸ್ತುಗಳನ್ನೆಲ್ಲ ಹಿಡಿಯುವುದರಿಂದ 'ಅತ್ತಾ' ಎನಿಸಿಕೊಳ್ಳುವವ ವಿಷ್ಣುವೇ.

["ಸ ಯದ್ಯದೇವಾಸೃಜತ ತತ್ತದತ್ತುಮಧ್ರಿಯತ, ಸರ್ವಂ ವಾ ಅತ್ತೀತಿ ತದದಿತೇರದಿತಿತ್ವಂ"—ಆತ ತಾನು ಯಾವ ಯಾವುದನ್ನು ಸೃಷ್ಟಿಮಾಡಿದನೋ ಅದನ್ನೆಲ್ಲ ತಿನ್ನಲು ಮನಸ್ಸು ಮಾಡಿದನು, ತಿನ್ನುತ್ತಾನೆಂಬ ಕಾರಣದಿಂದಲೇ ಅವನು 'ಅದಿತಿ'—ಎಂದು ಬೃಹದಾರಣ್ಯಕಶ್ರುತಿ ಹೇಳಿರುವಲ್ಲಿ ಅದಿತಿ ಶಬ್ದ ಬ್ರಹ್ಮನಿಗೇ ಅನ್ವಯಿಸಬೇಕು, ಅದಿತಿಯೆಂಬ ಹೆಂಗಸಿಗಲ್ಲ; ದೇವಮಾತೆ ಅದಿತಿ 'ಎಲ್ಲವನ್ನೂ' ಹೇಗೆ ತಿಂದಾಳು ?]

ಓಂ ಪ್ರಕರಣಾಚ್ಚ ಓಂ 10

ಸಂದರ್ಭದಿಂದಲೂ (ಹೀಗೆ ನಿಶ್ಚಯಿಸಬೇಕು).

['ನೀರನ್ನೂ ಸೃಷ್ಟಿಕರ್ತನಾದ ಸಂವತ್ಸರನೆಂಬ ಬ್ರಹ್ಮನನ್ನೂ ಮೊದಲು ಸೃಷ್ಟಿ ಮಾಡಿದನು' ಎಂದು ತಿಳಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳಿರುವುದರಿಂದಲೂ 'ಅತ್ತಾ' ಎಂದರೆ ಪರಬ್ರಹ್ಮನೇ—ವಿಷ್ಣುವೇ.]

ಓಂ ಗುಹಾಂ ಪ್ರವಿಷ್ಟಾವಾತ್ಮಾನೌ ಹಿ, ತದ್ದರ್ಶನಾತ್ ಓಂ 11

(ಹೃದಯ)ಗುಹೆಯನ್ನು ಪ್ರವೇಶಿಸಿರುವ ಇಬ್ಬರೂ ವಿಷ್ಣುವಿನ ರೂಪಗಳೇ, ಅದು ಕಂಡುಬಂದಿದೆ.

["ಋತಂ ಪಿಬಂತೌ ಸುಕೃತಸ್ಯ ಲೋಕೇ ಗುಹಾಂ ಪ್ರವಿಷ್ಟೌ ಪರಮೇ ಪರಾರ್ಧೇ"—ಈ ಶರೀರದ ಹೃದಯಾಕಾಶದಲ್ಲಿ ಸುಕೃತದ ಫಲವನ್ನು ಪಾನ ಮಾಡುತ್ತಿರುವ ಇಬ್ಬರು ಪ್ರವೇಶಿಸಿರುತ್ತಾರೆ—ಎಂದು ಕಠಶ್ರುತಿಯಿದೆ. ಅಲ್ಲಿ ಜೀವೇಶ್ವರರನ್ನು ಕುರಿತು ಹೇಳುವುದಿಲ್ಲ, ವಿಷ್ಣುವಿನ ಎರಡು ರೂಪಗಳನ್ನೇ. "ಆತ್ಮಾಽಂತರಾತ್ಮೇತಿ ಹರಿರೇಕ ಏವ ದ್ವಿಧಾ ಸ್ಥಿತಃ । ನಿವಿಷ್ಟೋ ಹೃದಯೇ ನಿತ್ಯಂ ರಸಂ ಪಿಬತಿ ಕರ್ಮಜಮ್"—ಆತ್ಮಾ, ಅಂತರಾತ್ಮಾ ಎಂಬುದಾಗಿ ಹರಿಯೊಬ್ಬನೇ ಎರಡು ರೂಪಗಳಿಂದ ಹೃದಯದಲ್ಲಿ ನೆಲೆಸಿ ಜೀವನ ಜೊತೆಗೇ ಇದ್ದು ಸತ್ಕರ್ಮಗಳ ಫಲವನ್ನು ಉಣ್ಣುವನು—ಎಂದು ಬೃಹತ್ಸಂಹಿತೆ ಹೇಳುತ್ತದೆ. ಜೀವೇಶ್ವರರನ್ನು ವರ್ಣಿಸುವ "ದ್ವಾ ಸುಪರ್ಣಾ" ಶ್ರುತಿಗೆ ಇದು ವಿರೋಧವಲ್ಲ.]

ಓಂ ವಿಶೇಷಣಾಚ್ಚ ಓಂ 12

ವಿಶೇಷಣಗಳಿಂದಲೂ.

["ಸತ್ಯ ಆತ್ಮಾ, ಸತ್ಯೋ ಜೀವಃ, ಸತ್ಯಂ ಭಿದಾ, ಸತ್ಯಂ ಭಿದಾ, ಸತ್ಯಂ ಭಿದಾ, ಮೈವಾವರುಣ್ಯೋ ಮೈವಾವರುಣ್ಯಃ"—ಆತ್ಮ ಸತ್ಯ, ಜೀವ ಸತ್ಯ, ಭೇದವೂ ಸತ್ಯ—ಎಂದು ಪೈಂಗಿಶ್ರುತಿ ಹೇಳುತ್ತದೆ. ಪರಮಾತ್ಮನ ಗುಣಗಳು ಅನಂತ, ಅವನ್ನು ಬಿಡಿಬಿಡಿಯಾಗಿ ಹೇಳಲು ಸಾಧ್ಯವಿಲ್ಲ; ಆದುದರಿಂದ ಬ್ರಹ್ಮಶಬ್ದವನ್ನು ಹೇಳಿ ಎಲ್ಲವನ್ನೂ ತಿಳಿಸಬಹುದು. ಜೀವನ ವಿಷಯದಲ್ಲಿ ಆ ಬಗೆಯ ಸಮನ್ವಯ ಹೇಳಲಾಗುವುದಿಲ್ಲ. ಸೇತುತ್ವ, ಬ್ರಹ್ಮತ್ವ ಮುಂತಾದ ವಿಶೇಷಣಗಳಿಂದ ಸುಕೃತದ ಫಲವನ್ನು ಅನುಭವಿಸುವವನು ವಿಷ್ಣುವೇ.]

ಓಂ ಅಂತರಃ, ಉಪಪತ್ತೇಃ ಓಂ 13

(ಕಣ್ಣಿನ) ಒಳಗಿರುವ ಪುರುಷ ಬ್ರಹ್ಮನೇ (ಅಗ್ನಿಯಲ್ಲ), ಹಾಗೆ ಸರಿಹೋಗುವುದರಿಂದ.

["ಯ ಏಷೋಽಕ್ಷಿಣಿ ಪುರುಷೋ ದೃಶ್ಯತೇ, ಏಷ ಆತ್ಮೇತಿ ಹೋವಾಚ, ಏತದಮೃತಮಭಯಂ, ಏತದ್ಬ್ರಹ್ಮೇತಿ, ತದ್ಯದ್ಯಪ್ಯಸ್ಮಿನ್ ಸರ್ಪಿರ್ವೋದಕಂ ವಾ ಸಿಂಚತಿ ವರ್ತ್ಮನೀ ಏವ ಗಚ್ಛತಿ"—ಕಣ್ಣಿನಲ್ಲಿ ಕಾಣಿಸಿಕೊಳ್ಳುವ ಪುರುಷ ಆತ್ಮನೇ. ಇವನು ಅಮೃತ, ಅಭಯ; ಇವನು ಬ್ರಹ್ಮ. ಆದುದರಿಂದ ಕಣ್ಣಿನಲ್ಲಿ ತುಪ್ಪವನ್ನಾದರೂ ನೀರನ್ನಾದರೂ ಚಿಮುಕಿಸಿದರೆ ಅದು ಕಣ್ಣಿನ ಅಂಚಿನಲ್ಲಿ ಹರಿದುಹೋಗುತ್ತದೆ (ಛಾಂದೋಗ್ಯ). "ಯ ಏಷ ಆದಿತ್ಯೇ ಪುರುಷಃ, ಸೋಽಹಮಸ್ಮಿ"—ಆದಿತ್ಯನಲ್ಲಿರುವ ಪುರುಷ ನಾನೇ—ಎನ್ನುವುದು ಅಂತರ್ಯಾಮಿ ದೃಷ್ಟಿಯಿಂದ. ಕಣ್ಣಿನಲ್ಲಿದ್ದು ಅಂತರನೆನಿಸಿಕೊಳ್ಳುವವನು ವಿಷ್ಣುವೇ, ಅಗ್ನಿಯಲ್ಲ.]

ಓಂ ಸ್ಥಾನಾದಿವ್ಯಪದೇಶಾಚ್ಚ ಓಂ 14

ಸ್ಥಾನ ಮೊದಲಾದವನ್ನು ಹೇಳಿರುವುದರಿಂದಲೂ.

[ಕಣ್ಣಿನಲ್ಲಿ ಚಿಮುಕಿಸಿದ ತುಪ್ಪ ಅಥವಾ ನೀರು ಅಂಚಿನಲ್ಲಿ ಹರಿದು ಬರುತ್ತದೆ, ಎನ್ನುವುದು ಸ್ಥಾನಶಕ್ತಿಯನ್ನೂ "ಏಷ ಉ ವಾ ಏವ ವಾಮನೀಃ, ಏಷ ಉ ವಾ ಏವ ಭಾಮನೀಃ"—ಇವನು ವಾಮನೀ, ಇವನು ಭಾಮನೀ (ಭಾಂ)—ಎಂಬಲ್ಲಿನ ಶಬ್ದಗಳು ಆತ್ಮಶಕ್ತಿಯನ್ನೂ ತೋರಿಸುತ್ತವೆ. ಇವು ವಿಷ್ಣುಲಿಂಗಗಳು.]

ಓಂ ಸುಖವಿಶಿಷ್ಟಾಭಿಧಾನಾದೇವ ಚ ಓಂ 15

ಮತ್ತು ಬ್ರಹ್ಮನನ್ನು ಸುಖವಿಶೇಷವುಳ್ಳವನೆಂದು ಹೇಳಿರುವುದರಿಂದ.

['ಆನಂದ ಬ್ರಹ್ಮ', 'ವಿಜ್ಞಾನವೂ ಆನಂದವೂ ಬ್ರಹ್ಮ', 'ಆನಂದವನ್ನೇ ಬ್ರಹ್ಮನನ್ನಾಗಿ ತಿಳಿದನು' ಮೊದಲಾದ ವಾಕ್ಯಗಳಲ್ಲಿ ಆನಂದ ಬ್ರಹ್ಮನ ಲಕ್ಷಣವೆಂದಾಯಿತು. ಅವ್ಯಕ್ತದಿಂದ ಹುಲ್ಲಿನವರೆಗೆ ಎಲ್ಲವೂ ಆನಂದಭಾಗಿಗಳೇ ಆದರೂ ಅಮುಖ್ಯವಾದುದನ್ನು ಬಿಟ್ಟು ಮುಖ್ಯವಾದುದನ್ನೇ ಸ್ವೀಕರಿಸಿ ಪೂರ್ಣಾನಂದ ಸ್ವರೂಪನಾದವನು ಪರಮಾತ್ಮನೇ. ಎಂದು ತಿಳಿಯಬೇಕು.]

ಓಂ ಶ್ರುತೋಪನಿಷತ್ಕಗತ್ಯಭಿಧಾನಾಚ್ಚ ಓಂ 16

ಉಪನಿಷತ್ತುಗಳನ್ನು ಕೇಳಿದವನಿಗೆ ಬರುವ ಉತ್ತಮಗತಿಯನ್ನು ಹೇಳಿರುವುದರಿಂದಲೂ.

[ಉಪನಿಷತ್ತು ರಹಸ್ಯ ವಿದ್ಯೆ. ಅದನ್ನು ಕೇಳಿ ತಿಳಿದು ಅದರ ಪ್ರಕಾರ ಬ್ರಹ್ಮೋಪಾಸನೆ ಮಾಡಿದವನ ವಿಷಯದಲ್ಲಿ, "ಸ ಏನಾನ್ ಬ್ರಹ್ಮ ಗಮಯತಿ" —ಅವನು ಇವರನ್ನು ಬ್ರಹ್ಮನ ಬಳಿಗೆ ಒಯ್ಯುತ್ತಾನೆ - ಎಂದು ಹೇಳಿರುವುದರಿಂದ ಅಕ್ಷಿಸ್ಥನಾದ 'ಅಂತರ' ವಿಷ್ಣುವೇ; ಬ್ರಹ್ಮೋಪಾಸಕನಿಗೇ ಬ್ರಹ್ಮಪ್ರಾಪ್ತಿಯಾದೀತು. ಬೇರೆ ವಿದ್ಯೆಯಿಂದ ಬೇರೊಂದು ಗತಿ ಆಗಲಾರದಷ್ಟೆ!]

ಓಂ ಅನವಸ್ಥಿತೇರಸಂಭವಾಚ್ಚ ನೇತರಃ ಓಂ 17

ಬೇರೆ ಆತ್ಮ ಕಣ್ಣಿನಲ್ಲಿರುವುದಿಲ್ಲ; ಕಣ್ಣಿನಲ್ಲಿರುವ ಪುರುಷನ ಗುಣಗಳು ಇತರರಲ್ಲಿ ಇರುವ ಸಂಭವವಿಲ್ಲ; ಆದುದರಿಂದ ಅಕ್ಷಿಪುರುಷ ವಿಷ್ಣುವೇ, ಜೀವನಲ್ಲ.

[ಕಣ್ಣಿನಲ್ಲಿ ಅಗ್ನ್ಯಾದಿ ದೇವತೆಗಳು ಇರುವರೆಂದರೆ ಅನವಸ್ಥೆ ಎಂಬ ದೋಷ ಹುಟ್ಟುವುದು, ಅದು ಅಸಂಭವವೂ ಆಗಿರುವುದು. ಒಬ್ಬ ಜೀವ ಮತ್ತೊಬ್ಬ ಜೀವನಿಗೆ ನಿಯಾಮಕನಾಗುವುದು ಅನವಸ್ಥೆ!—ಮುಗಿಯದ ಸಮಸ್ಯೆ. ಇಬ್ಬರೂ ಸಮವಾದರೆ ನಿಯಮ್ಯ–ನಿಯಾಮಕ ಸಂಬಂಧ ಕೂಡುವುದಿಲ್ಲ.]

ಓಂ ಅಂತರ್ಯಾಮ್ಯಧಿದೈವಾದಿಷು, ತದ್ಧರ್ಮವ್ಯಪದೇಶಾತ್ ಓಂ 18

ಅಧಿದೈವ ಮುಂತಾದವುಗಳಲ್ಲಿ ಅಂತರ್ಯಾಮಿಯಾಗಿರುವವನು ಬ್ರಹ್ಮ; ಅವನ ಧರ್ಮಗಳನ್ನೇ ಹೇಳಿರುವುದರಿಂದ.

["ಯಃ ಪೃಥಿವ್ಯಾಂ ತಿಷ್ಠನ್" ಮುಂತಾದ ವಾಕ್ಯಗಳಿಂದ ಪೃಥಿವ್ಯಾದಿಗಳಲ್ಲಿ ಅಂತರ್ಯಾಮಿಯಾದ ದೈವವನ್ನು ಕುರಿತು ಹೇಳಿದೆ; ಆ ಅಂತರ್ಯಾಮಿ ವಿಷ್ಣುವೇ. 'ಪೃಥಿವಿಗೆ ಅಂತರ್ಯಾಮಿಯ ವಿಷಯ ತಿಳಿಯದು", "ಅವನು ಪೃಥಿವಿಯ ಒಳಗಿರುವವನು" ಮುಂತಾದ ಶ್ರುತಿವಾಕ್ಯಗಳು ಬ್ರಹ್ಮನ ಅವಿದಿತತ್ವ (ತಿಳಿಯಲ್ಪಡದಿರುವಿಕೆ), ಅಂತರತ್ವ (ಒಳಗೆ ಇರುವಿಕೆ)ಗಳನ್ನು ಹೇಳುತ್ತವೆ. "ಯಃ ಪೃಥಿವ್ಯಾಂ ತಿಷ್ಠನ್" ಎಂಬುದು ಅಧಿದೈವವನ್ನೂ "ಯಃ ಸರ್ವೇಷು ಭೂತೇಷು ತಿಷ್ಠನ್" ಎಂಬುದು ಅದಿಭೂತವನ್ನೂ "ಯಃ ಪ್ರಾಣೇಷು ತಿಷ್ಠನ್" ಎಂಬುದು ಅಧ್ಯಾತ್ಮವನ್ನೂ ತಿಳಿಸುವುವು.]

ಓಂ ನ ಚ ಸ್ಮಾರ್ತಂ, ಅತದ್ಧರ್ಮಾಭಿಲಾಪಾತ್ ಓಂ 19

ಅದು ಸ್ಮೃತಿಯಲ್ಲಿ ಕಲ್ಪಿತವಾಗಿರುವ ಜಡಪ್ರಕೃತಿಯಲ್ಲ; ಅದಕ್ಕೆ ಕೂಡದ ಧರ್ಮಗಳನ್ನು ಹೇಳಿರುವುದರಿಂದ.

[ತ್ರಿಗುಣವತ್ತ್ವ, ಜಡತ್ವಾದಿ ಗುಣಗಳನ್ನು ಹೇಳದಿರುವುದರಿಂದ ಅಂತರ್ಯಾಮಿ, ಕಪಿಲನ ಸಾಂಖ್ಯಮತ ತಿಳಿಸುವ ಪ್ರಧಾನವಲ್ಲ. "ಸ್ಮೃತಿಯಲ್ಲಿ ಹೇಳಲ್ಪಟ್ಟಿರುವ" ಎನ್ನುವುದರಿಂದ ಶ್ರುತಿ ಪ್ರಾಮಾಣ್ಯವಿಲ್ಲದ ಸಾಂಖ್ಯಮತ ಹೇಳಿರುವಂತೆ 'ಪ್ರಧಾನ, ಅಂತರ್ಯಾಮಿ' ಎಂದು ತಿಳಿಯಬಾರದು.]

ಓಂ ಶಾರೀರಶ್ಚೋಭಯೇಽಪಿ ಹಿ ಭೇದೇನೈನಮಧೀಯತೇ ಓಂ 20

ಕಾಣ್ವ ಮತ್ತು ಮಾಧ್ಯಂದಿನ ಶಾಖೆಗೆ ಸೇರಿದವರಿಬ್ಬರೂ ಜೀವನು ಅಂತರ್ಯಾಮಿಗಿಂತ ಭಿನ್ನ, ಎಂದು ಹೇಳುತ್ತಾರೆ.

[ಯೋ ವಿಜ್ಞಾನೇ ತಿಷ್ಠನ್"—ಯಾವನು ವಿಜ್ಞಾನದಲ್ಲಿ ಇರುವವನಾಗಿ—ಎಂದು ಬೃಹದಾರಣ್ಯಕದಲ್ಲಿ ಕಾಣ್ವಶಾಖೆಯವರು ಹೇಳುತ್ತಾರೆ. "ಯ ಆತ್ಮನಿ ತಿಷ್ಠನ್, ಆತ್ಮನೋಽಂತರಃ"—ಯಾವನು ಆತ್ಮನಲ್ಲಿ ಇರುವವನಾಗಿ ಆತ್ಮನಿಗಿಂತ ಭಿನ್ನನೋ —ಎಂದು ಮಾಧ್ಯಂದಿನ ಶಾಖೆಯವರು ಹೇಳುತ್ತಾರೆ. ಹೀಗೆ ಇಬ್ಬರೂ ಭೇದದಿಂದಲೇ ಆತ್ಮನ ವಿಷಯ ಅಧ್ಯಯನ ಮಾಡುತ್ತಾರೆ. ಇಲ್ಲಿಗೆ ಅಂತರ್ಯಾಮಿಯ ವಿಷಯ ಮುಗಿಯಿತು.]

ಓಂ ಅದೃಶ್ಯತ್ವಾದಿಗುಣಕಃ, ಧರ್ಮೋಕ್ತೇಃ ಓಂ 21

ಅದೃಶ್ಯತ್ವಾದಿ ಗುಣಗಳುಳ್ಳವನು ವಿಷ್ಣುವೇ, ಅವನ ಧರ್ಮಗಳನ್ನೇ ಹೇಳಿರುವುದರಿಂದ.

["ತದಕ್ಷರಮಧಿಗಮ್ಯತೇ, ಯತ್ತದದ್ರೇಶ್ಯಮಗ್ರಾಹ್ಯಂ"—ಅದು ಅಕ್ಷರ, ಅದು ಅದೃಶ್ಯ, ಅದು ಅಗ್ರಾಹ್ಯ ಎಂದು ತಿಳಿಯಲ್ಪಡುತ್ತದೆ. — ಎಂಬ ಅದೃಶ್ಯತ್ವಾದಿ ಗುಣಗಳುಳ್ಳದುದು ವಿಷ್ಣುವೇ, ಜಡಪ್ರಕೃತಿಯಲ್ಲ,

ಹಿರಣ್ಯಗರ್ಭನೂ ಅಲ್ಲ. ಅದೃಶ್ಯತ್ವಾದಿ ಗುಣಗಳುಳ್ಳ ಭೂತಯೋನಿ ಪ್ರಧಾನವೋ, ಜೀವನೋ, ಈಶ್ವರನೋ, ಎಂಬ ಸಂಶಯವನ್ನು ಈ ಸೂತ್ರ ಪರಿಹರಿಸುವುದು.]

ಓಂ ವಿಶೇಷಣಭೇದವ್ಯಪದೇಶಾಭ್ಯಾಂ ಚ ನೇತರೌ ಓಂ 22

ಬೇರೆ ವಿಶೇಷಣಗಳನ್ನೂ ಭೇದವನ್ನೂ ಹೇಳಿರುವುದರಿಂದ ಪ್ರಕೃತಿ, ಚತುರ್ಮುಖನಲ್ಲ.

["ಯಃ ಸರ್ವಜ್ಞಃ ಸರ್ವವಿತ್" (ಮುಂಡಕ) — ಎಲ್ಲವನ್ನೂ ತಿಳಿದವನು, ಎಲ್ಲೆಡೆಯೂ ಇರುವವನು (ಸರ್ವತ್ರ ವಿದ್ಯತೇ) ಎಂಬ ವಿಶೇಷಣಗಳನ್ನು ಹೇಳಿರುವುದರಿಂದ ಜಡಪ್ರಕೃತಿಯನ್ನು ಕುರಿತು ಹೇಳಿಲ್ಲ. "ಜುಷ್ಟಂ ಯದಾ ಪಶ್ಯತ್ಯನ್ಯಮೀಶಮಸ್ಯ", "ತಸ್ಮಾದೇತದ್ಬ್ರಹ್ಮ ನಾಮ-ರೂಪಮನ್ನಂ ಚ ಜಾಯತೇ"—ಚತುರ್ಮುಖ ಬ್ರಹ್ಮನೂ ನಾಮರೂಪಗಳೂ ಅನ್ನವೂ ಅವನಿಂದ ಹುಟ್ಟುವುವು —ಎಂದು ಮುಂಡಕಶ್ರುತಿಯಲ್ಲಿ ಹೇಳಿರುವುದರಿಂದ ಚತುರ್ಮುಖ ಬ್ರಹ್ಮನೂ ಅಲ್ಲ; ಅವನಿಗೆ ಅದೃಶ್ಯತ್ವಾದಿ ಗುಣಗಳನ್ನು ಹೇಳಿಲ್ಲ. ಪ್ರಕೃತಿಯು ಜಡ, ಅಕ್ಷರ ಎಂಬ ಹೆಸರುಗಳುಳ್ಳದುದು. ವಿಷ್ಣುವನ್ನು ಆಶ್ರಯಿಸಿರುವ ಚೇತನ ಲಕ್ಷ್ಮೀ, ಅವಳು ಪರಪ್ರಕೃತಿ. ಪರಾತ್ಪರನಾದ ಅಕ್ಷರ, ವಿಷ್ಣು. ಈ ಮೂರೂ ಅಕ್ಷರತತ್ತ್ವಗಳೇ. ಪರಬ್ರಹ್ಮ ಸರ್ವಶ್ರೇಷ್ಠ.]

ಓಂ ರೂಪೋಪನ್ಯಾಸಾಚ್ಚ ಓಂ 23

ರೂಪವನ್ನು ಹೇಳಿರುವುದರಿಂದಲೂ (ಭೂತಯೋನಿ ಪರಬ್ರಹ್ಮನೇ).

["ಯದಾ ಪಶ್ಯಃ ಪಶ್ಯತೇ ರುಕ್ಮವರ್ಣಂ" — ಜೀವ ಯಾವಾಗ ಬಂಗಾರದ ಬಣ್ಣವುಳ್ಳ ಪರಬ್ರಹ್ಮನನ್ನು ನೋಡುವನೋ – ಎಂದು ಬ್ರಹ್ಮನ ರೂಪವನ್ನು ಮುಂಡಕದಲ್ಲಿ ಬಣ್ಣಿಸಲಾಗಿದೆ. ನಾರಾಯಣನಿಗೆ ಬಿಳಿ, ಕೆಂಪು, ಹಳದಿ, ಕಪ್ಪು ಎಂಬ ನಾಲ್ಕು ಬಣ್ಣಗಳ ರೂಪಗಳಿವೆಯೆಂದೂ ಹೇಳಲ್ಪಟ್ಟಿದೆ. ಆದುದರಿಂದ ಅದೃಶ್ಯತ್ವಾದಿಗುಣಗಳಿಂದ ಕೂಡಿದವನು ಪರಬ್ರಹ್ಮನೇ.]

ಓಂ ವೈಶ್ವಾನರಃ, ಸಾಧಾರಣಶಬ್ದವಿಶೇಷಾತ್ ಓಂ 24

ವೈಶ್ವಾನರನೆಂದರೆ ವಿಷ್ಣುವೇ; ಸಾಧಾರಣ ಶಬ್ದಗಳಿಗೆ ವಿಶೇಷಾರ್ಥ ವಿರುವುದರಿಂದ.

[ಇಲ್ಲಿಂದ ಮುಂದೆ ಎರಡನೆಯ ಪಾದದ ಕೊನೆಯುವರೆಗೆ ಇರುವ ವೈಶ್ವಾನರಾಧಿಕರಣ ಎಂಬ ವಿಭಾಗವನ್ನು ತ್ರಿವಿಕ್ರಮಪಂಡಿತರು 'ಅಧಿಕರಣ ರಾಜ' ಎಂದು ಕರೆದಿದ್ದಾರೆ. ಅವರು ಶ್ರೀಮದಾನಂದತೀರ್ಥ ಗುರುಗಳ ಸಾಕ್ಷಾತ್ ಅಪ್ಪಣೆಯಂತೆಯೇ ಸೂತ್ರಭಾಷ್ಯಕ್ಕೆ 'ತತ್ತ್ವಪ್ರದೀಪ'ವೆಂಬ ಪ್ರಾಚೀನ ಟೀಕೆಯನ್ನು ಬರೆದವರು.

ಶ್ರುತಿಯಲ್ಲಿ ಹೇಳಿರುವ ಲಿಂಗಗಳಿಂದ ಅನ್ಯತ್ರ ಪ್ರಸಿದ್ಧವಾದ ಶಬ್ದಗಳಿಗೆ ಬ್ರಹ್ಮನಲ್ಲಿಯೇ ಸಮನ್ವಯವನ್ನು ತೋರಿಸಿ, ಎರಡು ಪಾದಗಳಿಂದ ನಿಶ್ಚಿತ ವಾಗುವ ಅರ್ಥವನ್ನು ದೃಢಪಡಿಸಿ ತಿಳಿಸುವುದಕ್ಕಾಗಿ ಈ ಅಧಿಕರಣ ಆರಂಭ ವಾಗಿದೆ. ಹಿಂದೆ ಅನ್ಯತ್ರ ಪ್ರಸಿದ್ಧವಾದ ಶಬ್ದಗಳಿಗೆ ಅನ್ಯಾರ್ಥಗಳನ್ನು ಬಿಟ್ಟು 'ಬ್ರಹ್ಮ' ಎಂಬ ಮುಖ್ಯ ಅರ್ಥವನ್ನೇ ತಿಳಿಸಿ, ಈಗ ಉಭಯತ್ರ ಪ್ರಸಿದ್ಧ ವಾದ—ಎರಡಕ್ಕೂ ಹೊಂದಿಕೊಳ್ಳುವ—ಶಬ್ದಗಳಿಗೆ ಬ್ರಹ್ಮಪರವಾಗಿಯೇ ಮುಖ್ಯಾರ್ಥವನ್ನು ಹೇಳುತ್ತಾರೆ.

ವೈಶ್ವಾನರ ಶಬ್ದ ಅಗ್ನಿ ಹಾಗೂ ವಿಷ್ಣು ಎಂಬ ಎರಡೂ ಅರ್ಥಗಳಲ್ಲಿ ಬಳಸಲ್ಪಟ್ಟಿದೆ. "ತಸ್ಯ ಹ ವಾ ಏತಸ್ಯಾತ್ಮನೋ ವೈಶ್ವಾನರಸ್ಯ ಮೂರ್ಧೈವ ಸುತೇಜಾಃ"—ವೈಶ್ವಾನರನೆಂಬ ಈ ಆತ್ಮನ ತಲೆಯೇ ಸುತೇಜಸ್ಸು—ಎಂದು ಛಾಂದೋಗ್ಯದಲ್ಲಿ ಹೇಳಿರುವುದರಿಂದ ಆತ್ಮ ಎಂಬ ವಿಶೇಷಣವನ್ನು ಹೊಂದಿರುವ ವೈಶ್ವಾನರ ಶಬ್ದ ವಿಷ್ಣುವನ್ನೇ ತಿಳಿಸುವುದು, ಅಗ್ನಿಯನ್ನಲ್ಲ.]

ಓಂ ಸ್ಮರ್ಯಮಾಣಮನುಮಾನಂ ಸ್ಯಾದಿತಿ ಓಂ 25

ಸ್ಮೃತಿಯಲ್ಲಿ ಹೇಳಿರುವುದು ಇದಕ್ಕೆ ಅನುಮಾನವಾಗುವುದು.

["ಅಹಂ ವೈಶ್ವಾನರೋ ಭೂತ್ವಾ ಪ್ರಾಣಿನಾಂ ದೇಹಮಾಶ್ರಿತಃ"—ವೈಶ್ವಾನರನಾಗಿ ನಾನು ಪ್ರಾಣಿಗಳ ದೇಹದಲ್ಲಿ ಸೇರಿಕೊಂಡಿರುವೆ—ಎಂಬ ಗೀತಾವಾಕ್ಯವು ವೈಶ್ವಾನರ ಶಬ್ದ ವಿಷ್ಣುವಿಗೆ ಅನ್ವಯಿಸುವುದು, ಎಂದು ತೋರಿಸುವುದು. ಇದು ಶ್ರುತಿಗೆ ಪೋಷಕವಾದ ಅನುಪ್ರಮಾಣ.]

ಓಂ ಶಬ್ದಾದಿಭ್ಯೋಽಂತಃ ಪ್ರತಿಷ್ಠಾನಾನ್ನೇತಿ ಚೇನ್ನ, ತಥಾ ದೃಷ್ಟ್ಯುಪದೇಶಾತ್, ಅಸಂಭವಾತ್, ಪುರುಷವಿಧಮಪಿ ಚೈನಮಧೀಯತೇ ಓಂ 26

ಶಬ್ದ ಮೊದಲಾದವುಗಳಿಂದಲೂ ಒಳಗೆ ಪ್ರತಿಷ್ಠಿತನಾಗಿರುವುದರಿಂದಲೂ ಬ್ರಹ್ಮನಲ್ಲ, ಅಗ್ನಿಯೇ, ಎನ್ನುವುದು ಸರಿಯಲ್ಲ; ಹಾಗೆ ದೃಷ್ಟಿ ಉಪದೇಶಿಸಲ್ಪಟ್ಟದೆ; ದ್ಯುಲೋಕಾದಿಗಳು ಜಾಠರಾಗ್ನಿಗೆ ತಲೆಯಾಗಿದೆ, ಮುಂತಾದುದು ಅಸಂಭವ. ವಾಜಸನೇಯಿಗಳು ಇವನನ್ನು ಪುರುಷನೆಂದೂ ಪಠಿಸುತ್ತಾರೆ.

["ವೈಶ್ವಾನರೇ ತದ್ಧುತಂ ಭವತಿ" — ವೈಶ್ವಾನರನಲ್ಲಿ ಅದು ಹುತವಾಗಿದೆ—ಮುಂತಾದ ಶ್ರುತಿಗಳಿಂದ ವೈಶ್ವಾನರ ಶಬ್ದ ಅಗ್ನಿಯನ್ನು ಸೂಚಿಸುವುದು, ಎನ್ನಬಹುದು. ಹಾಗೆಯೇ "ಯೇನೇದಮನ್ನಂ ಪಚ್ಯತೇ"— ಯಾವನಿಂದ ಈ ಅನ್ನ ಜೀರ್ಣವಾಗುತ್ತದೆಯೋ—ಎಂಬ ವಾಜಸನೇಯ ವಾಕ್ಯ ಪುರುಷನನ್ನೇ ಸೂಚಿಸುತ್ತದೆ. "ಕೋ ನ ಆತ್ಮಾ, ಕಿಂ ಬ್ರಹ್ಮ" — ಆತ್ಮನಲ್ಲದವನು ಯಾರು, ಬ್ರಹ್ಮ ಯಾವುದು—ಎಂದು ಕೇಳಿದ ಪ್ರಶ್ನೆಗೆ ಛಾಂದೋಗ್ಯದಲ್ಲಿ ವೈಶ್ವಾನರ ವಿದ್ಯೆಯನ್ನು ತಿಳಿಸುವಲ್ಲಿ ವೈಶ್ವಾನರ ವಿಷ್ಣುವೇ, ಎಂದು ನಿರ್ಧರಿಸಲಾಗಿದೆ.]

ಓಂ ಅತ ಏವ ನ ದೇವತಾ, ಭೂತಂ ಚ ಓಂ 27

ಆದುದರಿಂದ ವೈಶ್ವಾನರ ಎಂದರೆ ಅಗ್ನಿದೇವತೆಯೂ ಅಲ್ಲ, ಭೂತಾಗ್ನಿ (ಬೆಂಕಿ)ಯೂ ಅಲ್ಲ.

[ಅಗ್ನಿ, ವೈಶ್ವಾನರ ಮೊದಲಾದ ಶಬ್ದಗಳು ತೇಜಸ್ಸು, ಅಗ್ನಿದೇವತೆ ಎಂಬ ಅರ್ಥಗಳಲ್ಲಿ ಪ್ರಸಿದ್ಧವಾಗಿದ್ದರೂ ಮೇಲೆ ಹೇಳಿದ ಕಾರಣದಿಂದ ವೈಶ್ವಾನರ ಶಬ್ದ ಆ ದೇವತೆಯನ್ನಾಗಲಿ ಬೆಂಕಿಯನ್ನಾಗಲಿ ಸೂಚಿಸುವುದಿಲ್ಲ. ಪರಮಾತ್ಮನನ್ನೇ ಮುಖ್ಯವಾಗಿ ನಿರೂಪಿಸುವುದು.]

ಓಂ ಸಾಕ್ಷಾದಪ್ಯವಿರೋಧಂ ಜೈಮಿನಿಃ ಓಂ 28

ಸಾಕ್ಷಾತ್ತಾಗಿಯೂ ವಿರೋಧವಿಲ್ಲ, ಎಂದು ಜೈಮಿನಿಯ ಅಭಿಪ್ರಾಯ.

[ಅಗ್ನಿ ಮೊದಲಾದ ಶಬ್ದಗಳು ಮುಖ್ಯವಾಗಿ ಬ್ರಹ್ಮನನ್ನೇ ಸೂಚಿಸಿದರೂ ವ್ಯವಹಾರಕ್ಕಾಗಿ ಇತರ ಲೌಕಿಕವಸ್ತುಗಳನ್ನು—ಬೆಂಕಿ ಮೊದಲಾದುವನ್ನು ಸೂಚಿಸುತ್ತವೆ. ಹೀಗೆ ಶಬ್ದಗಳು ಪರಮಾತ್ಮ ಮತ್ತು ಬೆಂಕಿ ಮುಂತಾದ ಎರಡು ವಿಭಿನ್ನ ವಸ್ತುಗಳನ್ನು ಸೂಚಿಸಿದರೆ ವಿರೋಧವೇನೂ ಇಲ್ಲ, ಎಂದು ಜೈಮಿನಿಯ ಮತ. ಜ್ಞಾನಿಗಳು ಪರಮಾತ್ಮನ ಪರವಾಗಿಯೇ ಅರ್ಥಮಾಡುತ್ತಾರೆ, ಅಜ್ಞಾನಿಗಳು ಲೌಕಿಕ ವಸ್ತುಗಳನ್ನು ಮಾತ್ರ ಗಮನಿಸುತ್ತಾರೆ. ಹೀಗಿರುವುದರಿಂದ ಎರಡು ಬಗೆಯ ಅರ್ಥಗಳನ್ನು ಸೂಚಿಸುವುದರಲ್ಲಿ ವಿರೋಧವಿಲ್ಲ.]

ಓಂ ಅಭಿವ್ಯಕ್ತೇರಿತ್ಯಾಶ್ಮರಥ್ಯಃ ಓಂ 29

ಅಭಿವ್ಯಕ್ತಿಯ ಮೂಲಕ ಸರ್ವವ್ಯಾಪಿ ಬ್ರಹ್ಮನು ಪ್ರಾದೇಶಮಾತ್ರನೂ ಆಗಬಹುದು, ಎನ್ನುತ್ತಾನೆ, ಆತ್ಮರಥ್ಯ.

[ಅಗ್ನಿ ಮೊದಲಾದ ರೂಪಗಳಿಂದ ಪರಬ್ರಹ್ಮ ಗೋಚರನಾಗುತ್ತಾನಷ್ಟೆ. ಅಗ್ನ್ಯಾದಿಗಳ ಮೂಲಕ ವಿಷ್ಣು ಅಭಿವ್ಯಕ್ತವಾಗುವುದರಿಂದ, ಅಗ್ನಿಸೂಕ್ತ, ವಾಯುಸೂಕ್ತ ಎಂಬ ಭೇದಗಳನ್ನು ನೋಡುವೆವು.]

ಓಂ ಅನುಸ್ಮೃತೇರ್ಬಾದರಿಃ ಓಂ 30

ಅನುಸ್ಮರಣ ಮಾಡುವುದರಿಂದ ಹೀಗೆಂದು ಬಾದರಿ ಹೇಳುತ್ತಾನೆ.

[ಅನೇಕ ಸೂಕ್ತಗಳಲ್ಲಿ ಅಗ್ನಿ ಮೊದಲಾದವರಲ್ಲಿ ಅಂತರ್ಯಾಮಿಯಾದ ವಿಷ್ಣುವನ್ನೇ ಅನುಸ್ಮರಣೆ ಮಾಡಬೇಕಾದುದರಿಂದ, ಬೇರೆ ಬೇರೆ ಸೂಕ್ತಗಳಿವೆ. ಇದು ಬಾದರಿಯ ಅಭಿಪ್ರಾಯ.]

ಓಂ ಸಂಪತ್ತೇರಿತಿ ಜೈಮಿನಿಸ್ತಥಾ ಹಿ ದರ್ಶಯತಿ ಓಂ 31

ಉಪಾಸಕರು ಅಗ್ನ್ಯಾದಿಗಳನ್ನು ಹೊಂದುವರು, ಎಂಬ ಕಾರಣದಿಂದ ಜೈಮಿನಿಯು ಸೂತ್ರಗಳ ನಿಯಮವನ್ನು ಹೇಳಿದ್ದಾನೆ, ಹೀಗೆ ಶ್ರುತಿಯೂ ಇದೆ.

["ಸಾಕ್ಷಾತ್ತಾಗಿ ಎರಡು ಅರ್ಥಗಳಿದ್ದರೂ ವಿರೋಧವಿಲ್ಲ, ಉಪಾಸಕರಿಗೆ ಅಗ್ನ್ಯಾದಿ ಸೂಕ್ತಗಳಿಂದ ಅಗ್ನ್ಯಾದಿ ಪ್ರಾಪ್ತಿಯಾಗುವುದರಿಂದ ಹಾಗೆ ಸೂತ್ರಗಳ ನಿಯಮವಾಗಿದೆ" ಎನ್ನುತ್ತಾನೆ, ಜೈಮಿನಿ. "ತಂ ಯಥಾ ಯಥೋ-ಪಾಸತೇ, ತದೇವ ಭವತಿ" —ಅವನನ್ನು ಯಾವನು ಹೇಗೆ ಹೇಗೆ ಉಪಾಸನೆ ಮಾಡುತ್ತಾನೆಯೋ ಅವನು ಹಾಗೆಯೇ ಆಗುತ್ತಾನೆ—ಎನ್ನುವ ಶ್ರುತಿ ಈ ಅಭಿಪ್ರಾಯಕ್ಕೆ ಪೋಷಕ.]

ಓಂ ಆಮನಂತಿ ಚೈನಮಸ್ಮಿನ್ ಓಂ 32

ಅಗ್ನ್ಯಾದಿಗಳಲ್ಲಿ ಬ್ರಹ್ಮ ಇರುವನೆಂದೂ ಶ್ರುತಿಗಳು ತಿಳಿಸುತ್ತವೆ.

["ಯೋಽಗ್ನೌ ತಿಷ್ಠನ್ನಗ್ನೇರಂತರಃ"—ಯಾವನು ಅಗ್ನಿಯಲ್ಲಿದ್ದು ಅಗ್ನಿಯಿಂದ ಬೇರೆಯಾಗಿರುವನೋ,—ಎಂಬ ಬೃಹದಾರಣ್ಯಕ ವಾಕ್ಯ, ವಿಷ್ಣು ಅಗ್ನಿಯಲ್ಲಿರುವನೆಂದು ಹೇಳುತ್ತದೆ. ಆದುದರಿಂದ ಅಗ್ನಿಯ ಉಪಾಸಕರು ಅಗ್ನಿಯ ಮೂಲಕ ವಿಷ್ಣುವಿನ ಬಳಿಗೇ ಹೋಗುವರು.

ಇಲ್ಲಿಗೆ ಬ್ರಹ್ಮಸೂತ್ರಗಳ ಮೊದಲನೆಯ ಅಧ್ಯಾಯದ ಎರಡನೆಯ ಪಾದ ಮುಗಿಯಿತು.

ಮೂರನೆಯ ಪಾದ

ವಿಷ್ಣುವಿನಲ್ಲಿಯೂ ಇತರರಲ್ಲಿಯೂ ಪ್ರಸಿದ್ಧವಾಗಿರುವ ಶಬ್ದಗಳು ಮುಖ್ಯವಾಗಿ ವಿಷ್ಣುವನ್ನೇ ಬೋಧಿಸುತ್ತವೆ, ಎಂದು ಈ ಪಾದದಲ್ಲಿ ಹೇಳಲಾಗಿದೆ. ಇದು ಉಭಯತ್ರ ಪ್ರಸಿದ್ಧವಾದ ನಾಮಲಿಂಗಾತ್ಮಕ ಶಬ್ದಗಳ ಸಮನ್ವಯ ಮಾಡುವುದು. "ಪ್ರಾಣೇಶ್ವರಃ ಕೃತ್ತಿವಾಸಾಃ" ಮುಂತಾದ ವಾಕ್ಯಗಳಿಂದ ರುದ್ರನಿಗೆ ಪ್ರಾಣಾಧಾರತ್ವ ಸೂಚಿತವಾಗುವುದು; "ಸ ಏಷೋಽಂತಶ್ಚರತೇ ಬಹುಧಾ ಜಾಯಮಾನಃ" ಎಂಬ ವಾಕ್ಯ ಜೀವನ ಗುಣವನ್ನು ಬೋಧಿಸುವುದು. ಹೀಗೆ ರುದ್ರ, ಜೀವ ಮೊದಲಾದವರನ್ನು ಬೋಧಿಸುವ ಶ್ರುತಿಗಳಲ್ಲಿ ಮುಖ್ಯವಾಗಿ ಪ್ರತಿಪಾದ್ಯನಾಗಿರುವವನು ವಿಷ್ಣುವೇ, ಎಂದು ತಿಳಿಸುವುದು ಈ ಪಾದದ ಆಶಯ.

ಓಂ ದ್ಯುಭ್ವಾದ್ಯಾಯತನಂ, ಸ್ವಶಬ್ದಾತ್ ಓಂ 1

ದ್ಯುಲೋಕ, ಭೂಮಿ ಮೊದಲಾದವುಗಳಿಗೆ ಆಶ್ರಯನಾಗಿರುವವನು ಬ್ರಹ್ಮ; 'ಸ್ವ' ಶಬ್ದವಿರುವುದರಿಂದ.

["ಯಸ್ಮಿನ್ ದ್ಯೌಃ ಪೃಥಿವೀ ಚಾಂತರಿಕ್ಷಮೋತಂ ಮನಃ ಸಹ ಪ್ರಾಣೈಶ್ಚ ಸರ್ವೈಃ । ತಮೇವೈಕಂ ಜಾನಥ ಆತ್ಮಾನಮನ್ಯಾ ವಾಚೋ ವಿಮುಂಚಥ, ಅಮೃತಸ್ಯೈಷ ಸೇತುಃ" ಯಾವನಲ್ಲಿ ಸ್ವರ್ಗ, ಭೂಮಿಗಳೂ ಮನಸ್ಸು, ಪ್ರಾಣಗಳೂ ಸೇರಿಕೊಂಡಿವೆಯೋ ಅಂಥ ಅದ್ವಿತೀಯನಾದ ಆತ್ಮನನ್ನು ತಿಳಿದುಕೊಳ್ಳಿ; ಬೇರೆ ಮಾತುಗಳನ್ನು ಬಿಟ್ಟುಬಿಡಿ. ಮೋಕ್ಷ ಪ್ರಾಪ್ತಿಗೆ ಇವನೇ ಸೇತು (ಸಾಧನ)—ಎಂಬ ಮುಂಡಕ ಶ್ರುತಿಯ ವಾಕ್ಯದಿಂದ ಸ್ವರ್ಗಭೂಮಿಗಳಿಗೆ ಆಶ್ರಯಭೂತನಾದವನು ಆತ್ಮಾ, ಎಂದು ತಿಳಿದುಬರುವುದು. ಆತ್ಮಾ ಎಂದರೆ ಬ್ರಹ್ಮ, ವಿಷ್ಣುವೇ. ಸ್ವ ಅಥವಾ ಆತ್ಮಾ ಎಂಬ ಶಬ್ದಗಳು ಬಂದಿರುವುದರಿಂದ ದ್ಯುಭೂಮಿಗಳಿಗೆ ಆಶ್ರಯ ಭೂತನಾದವ ವಿಷ್ಣುವೇ.]

ಓಂ ಮುಕ್ತೋಪಸೃಪ್ಯವ್ಯಪದೇಶಾತ್ ಓಂ 2

ಮುಕ್ತರಿಂದ ಪ್ರಾಪ್ಯನೆಂದು ಹೇಳಿರುವುದರಿಂದ.

[ಮೇಲೆ ಹೇಳಿದ ಶ್ರುತಿಯಲ್ಲಿ "ಅಮೃತಸ್ಯೈಷ ಸೇತುಃ"—ಮೋಕ್ಷಕ್ಕೆ ಇವನು ಸಾಧನ —ಎಂದಿರುವುದರಿಂದ ಬ್ರಹ್ಮಶಬ್ದವನ್ನೇ ತೆಗೆದುಕೊಳ್ಳಬೇಕು, ಆತ್ಮಶಬ್ದದಿಂದ ರುದ್ರಾದಿಗಳನ್ನು ತಿಳಿಯಬಾರದು. 'ಬ್ರಹ್ಮವಿದಾಪ್ನೋತಿ ಪರಂ', 'ಮುಕ್ತಾನಾಂ ಪರಮಾ ಗತಿಃ' ಮುಂತಾದವುಗಳಿಂದ ಬ್ರಹ್ಮಜ್ಞಾನ ವನ್ನು ಪಡೆದು ಮುಕ್ತನಾದವನಿಗೆ ನಾರಾಯಣನೇ ಗತಿ, ಎಂದು ಗೊತ್ತಾಗು ವುದು. ಮುಕ್ತರಿಂದ ಅವನೇ ಪ್ರಾಪ್ಯ.]

ಓಂ ನಾನುಮಾನಂ, ಅತಚ್ಛಬ್ದಾತ್ ಓಂ 3

ಬೇರೆಯವರನ್ನು ಸೂಚಿಸಲು ಅನುಮಾನ ಸಾಧನವಾಗದು; ಹಾಗೆ ಸೂಚಿಸುವ ಶಬ್ದಗಳಿಲ್ಲ.

[ಅನುಮಾನಾತ್ಮಕ ಆಗಮಗಳಿಂದ ದ್ಯುಲೋಕಾದಿಗಳಿಗೆ ಆಶ್ರಯ ನಾದವನು ರುದ್ರಾದಿಗಳಲ್ಲಿ ಯಾವನೂ ಅಲ್ಲ, ಶೈವಾಗಮಗಳನ್ನು ನೋಡಿದರೂ 'ಭಸ್ಮಧರ', 'ಉಗ್ರ' ಮೊದಲಾದ ರುದ್ರಸೂಚಕ ವಿಶೇಷ ಶಬ್ದಗಳಿಲ್ಲದಿರುವುದರಿಂದ ಅವು ಇಲ್ಲಿ ಪ್ರಮಾಣವಾಗಲಾರವು. ಆದುದರಿಂದ

ಅನುಮಾನ ಸಾಧುವಾಗುವುದಿಲ್ಲ. "ಸೋಽಂತಕಃ, ಸ ರುದ್ರಃ ಸ ಪ್ರಾಣ-ಭೃತ್, ಸ ಪ್ರಾಣನಾಯಕಃ, ಸ ಈಶೋ ಯೋ ಹರಿರ್ಯೋಽನಂತೋ ಯೋ ವಿಷ್ಣುರ್ಯಃ ಪರೋಽವರೀಯಾನ್"—ಎಂಬ ವಾಕ್ಯದಲ್ಲಿ ಮುಖ್ಯವಾಗಿ ವಿಷ್ಣುವನ್ನೇ ಹೇಳಿದೆ; ಅಂತಕ, ರುದ್ರ, ಪ್ರಾಣಭೃತ್, ಈಶ ಮುಂತಾದ ಶಬ್ದಗಳೆಲ್ಲ ಮುಖ್ಯವಾಗಿ ವಿಷ್ಣುವನ್ನೇ ಬೋಧಿಸುವುವು.]

ಓಂ ಪ್ರಾಣಭೃಚ್ಚ ಓಂ 4

ಪ್ರಾಣವನ್ನು ಧರಿಸುವವ ಜೀವನೂ ಅಲ್ಲ, ವಾಯುವೂ ಅಲ್ಲ.

[ಮೇಲೆ ಹೇಳಿದ ಕಾರಣದಿಂದಲೇ ಭೂಲೋಕ, ಸ್ವರ್ಗಲೋಕಗಳಿಗೆ ಆಶ್ರಯಭೂತನಾದವ ವಿಷ್ಣುವೇ; ಜೀವನೂ ಅಲ್ಲ, ವಾಯುವೂ ಅಲ್ಲ. "ಅಜಾಯಮಾನೋ ಬಹುಧಾ ವಿಜಾಯತೇ" ಎಂಬ ಪುರುಷಸೂಕ್ತದ ವಾಕ್ಯ ಜನ್ಮರಹಿತನಾದ ವಿಷ್ಣುವಿನ ಬಹುಜನ್ಮಗಳನ್ನು ತಿಳಿಸುತ್ತದೆ. ಆದುದರಿಂದ 'ಪ್ರಾಣಭೃತ್' ಜೀವನೇ ಆಗಬೇಕಾಗಿಲ್ಲ, ಮುಖ್ಯವೃತ್ತಿಯಿಂದ ವಿಷ್ಣುವೇ.]

ಓಂ ಭೇದವ್ಯಪದೇಶಾತ್ ಓಂ 5

ಭೇದವನ್ನು ಹೇಳಿರುವುದರಿಂದಲೂ.

[ಜೀವ–ಪರಮಾತ್ಮರ ಅಭೇದವನ್ನು ಹೇಳಬಾರದು. "ಜುಷ್ಟಂ ಯದಾ ಪಶ್ಯತ್ಯನ್ಯಮೀಶಂ" ಎಂಬ ಮುಂಡಕೋಪನಿಷತ್ತಿನ ವಾಕ್ಯ, ಒಂದೇ ಮರವನ್ನು ಆಶ್ರಯಿಸಿರುವ ಜೀವನೇ ಬೇರೆ, ಪರಮಾತ್ಮನೇ ಬೇರೆ, ಎಂದು ತಿಳಿಸುವುದು; 'ಜೀವನಿಗಿಂತ ಭಿನ್ನನಾದ ಪರಮಾತ್ಮನನ್ನು ಯಾವಾಗ ನೋಡುತ್ತಾನೆಯೋ' ಎಂದು ಅಲ್ಲಿ ಭೇದವನ್ನು ಹೇಳಲಾಗಿದೆ.]

ಓಂ ಪ್ರಕರಣಾತ್ ಓಂ 6

ಪ್ರಕರಣದಿಂದಲೂ.

["ದ್ವೇ ವಿದ್ಯೇ ವೇದಿತವ್ಯೇ"—ಎರಡು ವಿದ್ಯೆಗಳನ್ನು ತಿಳಿಯಬೇಕು—ಎಂದು ಹೇಳಲಾಗಿದೆ. "ಯತ್ತದದ್ರೇಶ್ಯಮಗ್ರಾಹ್ಯಮಗೋತ್ರವರ್ಣ-ಮಚಕ್ಷುಃಶ್ರೋತ್ರಂ ತದಪಾಣಿಪಾದಂ ನಿತ್ಯಂ ವಿಭುಂ ಸರ್ವಗತಂ ಸುಸೂಕ್ಷ್ಮಂ ತದವ್ಯಯಂ ಯದ್ಭೂತಯೋನಿಂ ಪರಿಪಶ್ಯಂತಿ ಧೀರಾಃ"—ಯಾವುದು ಕಾಣಬರುವುದಿಲ್ಲವೋ, ಗ್ರಹಿಸಲು ಅಶಕ್ಯವೋ, ಅಶರೀರಿಯೋ,

ಬಣ್ಣವಿಲ್ಲದುದೋ, ಕಣ್ಣು, ಕಿವಿಗಳಿಲ್ಲದುದೋ ಅದು ಕೈಕಾಲುಗಳಿಲ್ಲದುದೂ, ನಿತ್ಯವಾದುದೂ, ಸಮರ್ಥವಾದುದೂ, ಎಲ್ಲದರ ಒಳಗಿರುವುದೂ, ಸೂಕ್ಷ್ಮವಾಗಿರುವುದೂ ಆಗಿದೆ; ಅದು ಅವಿನಾಶಿ; ಅದು ಭೂತಯೋನಿ, ಎಂದರೆ ಜಗತ್ತಿನ ಸೃಷ್ಟಿಗೆ ಕಾರಣ; ಹೀಗೆಂದು ಬುದ್ಧಿವಂತರು ತಿಳಿಯುತ್ತಾರೆ. ಈ ಮುಂಡಕ ಶ್ರುತಿಯ ಸಂದರ್ಭದಲ್ಲಿಯೂ ಅದೃಶ್ಯತ್ವಾದಿ ಧರ್ಮ ಉಳ್ಳವನು ಜೀವನಿಂದ ಭಿನ್ನವಾದ ಪರಮಾತ್ಮನೆಂದು ಗೊತ್ತಾಗುವುದು.]

ಓಂ ಸ್ಥಿತ್ಯದನಾಭ್ಯಾಂ ಚ ಓಂ 7

ಸ್ಥಿತಿ ಮತ್ತು ತಿನ್ನುವುದು ಎಂಬ ಧರ್ಮಗಳಿಂದಲೂ.

[ಮುಂಡಕ ಶ್ರುತಿಯಲ್ಲಿ "ದ್ವಾ ಸುಪರ್ಣಾ ಸಯುಜಾ ಸಖಾಯಾ ಸಮಾನಂ ವೃಕ್ಷಂ ಪರಿಷಸ್ವಜಾತೇ। ತಯೋರನ್ಯ। ಪಿಪ್ಪಲಂ ಸ್ವಾದ್ವತ್ತಿ, ಅನಶ್ನನ್ನನ್ಯೋಽಭಿಚಾಕಶೀತಿ"—ಯಾವಾಗಲೂ ಜೊತೆಯಲ್ಲಿರುವ, ಸಖರಾದ ಎರಡು ಪಕ್ಷಿಗಳು ಒಂದೇ ಮರವನ್ನು ಆಲಿಂಗಿಸಿಕೊಂಡಿವೆ; ಅವೆರಡರಲ್ಲಿ ಒಂದು, ಸಿಹಿಯಾದ ಪಿಪ್ಪಲ ಹಣ್ಣನ್ನು ತಿನ್ನುತ್ತದೆ; ಮತ್ತೊಂದು ಏನೊಂದನ್ನೂ ತಿನ್ನದೆಯೇ ಹೊಳೆಯುತ್ತಿದೆ—ಎಂದು ಹೇಳಿದೆ. ಇಲ್ಲಿ ಮರವೆಂದರೆ ಸಂಸಾರ; ತಿನ್ನುವ ಪಕ್ಷಿ ಜೀವ, ಏನನ್ನೂ ತಿನ್ನದೆ ಸುಖವಾಗಿರುವ ಪಕ್ಷಿ ಪರಮಾತ್ಮ; ಹಣ್ಣು ಸಂಸಾರದ ಸುಖ–ದುಃಖ. ಇದೊಂದು ರೂಪಕ! ಜೀವ–ಪರಮಾತ್ಮರು ಒಂದೇ ದೇಹದಲ್ಲಿದ್ದರೂ ತನ್ನ ಕರ್ಮದ ಫಲವನ್ನು ಅನುಭವಿಸುವವ ಜೀವನೇ; ಪರಮಾತ್ಮ ಅಲಿಪ್ತ. ಈ ಶ್ರುತಿ ಜೀವೇಶರ ಭೇದವನ್ನು ಸ್ಪಷ್ಟವಾಗಿ ಹೇಳುವುದು. ಒಟ್ಟಿಗೆ ಸಂಸಾರದಲ್ಲಿರುವುದು ಸ್ಥಿತಿ; ಫಲವನ್ನು ಅನುಭವಿಸುವುದು 'ಅದನ'— ತಿನ್ನುವುದು. ಈ ವಿಷಯವನ್ನು ಪರಿಶೀಲಿಸಿದರೆ ಜೀವ–ಪರಮಾತ್ಮರ ಐಕ್ಯವನ್ನು ಹೇಳಬಾರದೆಂದು ಸ್ಪಷ್ಟವಾಗಿ ಗೊತ್ತಾಗುವುದು. ಬ್ರಹ್ಮನೇ ದ್ಯುಲೋಕಾದಿಗಳಿಗೆ ಆಶ್ರಯನಾದವ.]

ಓಂ ಭೂಮಾ, ಸಂಪ್ರಸಾದಾತ್, ಅಧ್ಯುಪದೇಶಾತ್ ಓಂ 8

ಪೂರ್ಣಸುಖರೂಪ ಹೊಂದಿರುವುದರಿಂದಲೂ, ಎಲ್ಲರಿಗಿಂತ ಶ್ರೇಷ್ಠನೆಂದು ಹೇಳಿರುವುದರಿಂದಲೂ 'ಭೂಮಾ' ಎಂದರೆ ಬ್ರಹ್ಮನೇ.

["ನಾಲ್ಪೇ ಸುಖಮಸ್ತಿ, ಭೂಮೈವ ಸುಖಂ" ಅಲ್ಪವಾಗಿರುವುದರಲ್ಲಿ ಸುಖವಿಲ್ಲ, ಭೂಮಾ, ಎಂದರೆ ಹೆಚ್ಚಾಗಿರುವುದೇ ಸುಖ — ಎಂದು ಛಾಂದೋಗ್ಯ ಶ್ರುತಿ ಇದೆ. ಅಲ್ಲಿ ಹೇಳಿರುವ ಭೂಮಾ 'ಪ್ರಾಣ'ನೇ ಇರಬಹುದು, ಎಂದು ಸಂಶಯ. "ಪ್ರಾಣೋ ವಾ ಆಶಾಯಾ ಭೂಯಾನ್"— ಪ್ರಾಣ ಆಸೆಗಿಂತ ಹೆಚ್ಚು - ಎಂಬ ಹಿಂದಿನ ವಾಕ್ಯದಿಂದ ಪ್ರಾಣನೇ ಭೂಮಾ, ಎಂದು ತೋರುತ್ತದೆ. "ಉತ್ಕ್ರಾಂತಪ್ರಾಣಾನ್" ಎಂಬ ಛಾಂದೋಗ್ಯ ವಾಕ್ಯವೂ ಪ್ರಾಣನನ್ನು ಸೂಚಿಸುವುದು. ಈ ಅಭಿಪ್ರಾಯವನ್ನು ಖಂಡಿಸು ವುದಕ್ಕಾಗಿ ಈ ಸೂತ್ರ ಹೊರಟಿದೆ. ವಿಷ್ಣುವೇ ಪೂರ್ಣಸುಖ, ಎಂದು ಹೇಳಿರುವುದರಿಂದಲೂ "ವಿಶ್ವತಃ ಪರಮಾಂ ನಿತ್ಯಂ" ಮುಂತಾದ ವಾಕ್ಯ ಗಳಿಂದಲೂ ವಿಷ್ಣುವೇ ಭೂಮಾ. "ತಮುತ್ಕ್ರಾಂತಂ ಪ್ರಾಣೋಽ- ನೂತ್ಕ್ರಾಮತಿ"—ಹೊರಟುಹೋಗುತ್ತಿರುವ ಆತ್ಮನನ್ನು ಪ್ರಾಣ ಹಿಂಬಾಲಿಸು ತ್ತಾನೆ. —ಎಂದು ಹೇಳಿರುವುದರಿಂದ ಉತ್ಕ್ರಮಣಾದಿ ಲಿಂಗಗಳು ಮುಖ್ಯ ವಾಗಿ ಬ್ರಹ್ಮನಿಗೇ ಅನ್ವಯಿಸುವುವು.]

ಓಂ ಧರ್ಮೋಪಪತ್ತೇಶ್ಚ ಓಂ 9

ಶ್ರುತ್ಯುಕ್ತ ಧರ್ಮಗಳು ಹೊಂದುವುದರಿಂದ ಭೂಮಾ ಪರಬ್ರಹ್ಮನೇ.

["ಸ ಏವಾಧಸ್ತಾತ್ ಸ ಉಪರಿಷ್ಟಾತ್ ಸ ಪಶ್ಚಾತ್ ಸ ಪುರಸ್ತಾತ್.... ಸ ಭೂಮಾ" ಅವನೇ ಕೆಳಗೆ ಇರುವವನು, ಅವನೇ ಮೇಲಿರುವವನು, ಹಿಂದೆಯೂ ಮುಂದೆಯೂ ಇರುವವನು ಅವನೇ....ಅವನು ಭೂಮಾ— ಎಂದು ಛಾಂದೋಗ್ಯ ತಿಳಿಸುವುದರಿಂದ ಸರ್ವಗತತ್ವ ಎಂಬ ಧರ್ಮವನ್ನು ಹೊಂದಿದವ ಬ್ರಹ್ಮನೇ.]

ಓಂ ಅಕ್ಷರಮಂಬರಾಂತಧೃತೇಃ ಓಂ 10

ಆಕಾಶದ ಕೊನೆಯುವರೆಗೆ ಎಲ್ಲವನ್ನೂ ಧರಿಸುವುದರಿಂದ 'ಅಕ್ಷರ' ಎಂದರೆ ಬ್ರಹ್ಮನೇ.

[ತನ್ನ ಹೆಂಡತಿಗೆ ಉಪದೇಶ ಮಾಡುತ್ತಾ ಯಾಜ್ಞವಲ್ಕ್ಯ ಮಹರ್ಷಿ, "ಏತಸ್ಮಿನ್ನು ಖಲ್ವಕ್ಷರೇ ಗಾರ್ಗಿ, ಆಕಾಶ ಓತಶ್ಚ ಪ್ರೋತಶ್ಚ"—ಗಾರ್ಗಿ ! ಅಕ್ಷರವೆನಿಸಿಹ ಈತನಲ್ಲಿಯೇ ಆಕಾಶವು ಹೆಣೆದುಕೊಂಡಿದೆ—ಎಂದಿದ್ದಾನೆ. ಬೃಹದಾರಣ್ಯಕದ ಈ ವಾಕ್ಯ, ಆಕಾಶದಿಂದ ವ್ಯಾಪ್ತವಾದ ಎಲ್ಲಕ್ಕೂ

ಆಧಾರವಾಗಿರುವವನು ಆತ್ಮಾ—ಬ್ರಹ್ಮ—ಎಂದು ತಿಳಿಸುವುದು. 'ಅಹಂ ಸೋಮಮಾಹನಸಂ ಬಿಭರ್ಮಿ' ಎಂಬ ಅಂಭೃಣೀ ಸೂಕ್ತದಿಂದ ಅಕ್ಷರಳಾದ ಲಕ್ಷ್ಮಿಯೇ ಎಲ್ಲವನ್ನೂ ಧರಿಸುವಳೆಂದು ತಿಳಿದುಬರುವುದು. ಹೀಗಿದ್ದರೂ ಆ ಲಕ್ಷ್ಮಿಗೆ ಆಧಾರನಾದ ವಿಷ್ಣುವೇ ಮೂಲಾಕ್ಷರ, ಲಕ್ಷ್ಮಿ ಮಧ್ಯಮಾಕ್ಷರ, ಎಂದು ತಿಳಿಯಬೇಕು. ಮುಖ್ಯವಾಗಿ ವಿಶ್ವವನ್ನೆಲ್ಲ ಧರಿಸುವವನು ಪರಬ್ರಹ್ಮನೇ—ವಿಷ್ಣುವೇ—ಅಲ್ಲದೆ ಶ್ರೀತತ್ತ್ವವಲ್ಲ. ಇದು ಸೂತ್ರದ ಅಭಿಪ್ರಾಯ.]

ಓಂ ಸಾ ಚ ಪ್ರಶಾಸನಾತ್ ಓಂ 11

ಆ ಸರ್ವಾಧಾರತ್ವ ಬ್ರಹ್ಮನಿಗೇ ಸೇರಿದುದೆಂದು ಪ್ರಶಾಸನವಿರುವುದರಿಂದ.

["ಏತಸ್ಯ ವಾ ಅಕ್ಷರಸ್ಯ ಪ್ರಶಾಸನೇ ಗಾರ್ಗಿ, ಸೂರ್ಯಾಚಂದ್ರಮಸೌ ವಿಧೃತೌ ತಿಷ್ಠತಃ"—ಅಕ್ಷರನಾದ ಈ ಬ್ರಹ್ಮನ ಅಧೀನದಲ್ಲಿಯೇ ಸೂರ್ಯ-ಚಂದ್ರರು ತಮ್ಮ ಸ್ಥಾನಗಳಲ್ಲಿ ಧರಿಸಲ್ಪಟ್ಟಿದ್ದಾರೆ—ಎಂಬ ಬೃಹದಾರಣ್ಯಕ ವಾಕ್ಯದಿಂದ ಎಲ್ಲವನ್ನೂ ಪ್ರಶಾಸನ ಮಾಡಿ ಆಳುತ್ತಾ ಧರಿಸುವವನು ಬ್ರಹ್ಮನೇ, ಎಂದು ತಿಳಿದುಬರುವುದು. ಈ ಬಗೆಯ ಅಪ್ಪಣೆ ವಿಷ್ಣುವಿಗೇ ಸೇರಿದುದು, ಎನ್ನುತ್ತಾರೆ, ಪೂರ್ಣಪ್ರಜ್ಞಗುರುಗಳು. "ಏಕಃ ಶಾಸ್ತಾ ನ ದ್ವಿತೀಯೋಽಸ್ತಿ ಶಾಸ್ತಾ"—ಪ್ರಭು ಒಬ್ಬನೇ, ಎರಡನೆಯವನಿಲ್ಲ—ಎಂದು ಮಹಾಭಾರತ ತಿಳಿಸುತ್ತದೆ.]

ಓಂ ಅನ್ಯಭಾವವ್ಯಾವೃತ್ತೇಶ್ಚ ಓಂ 12

ಮತ್ತು ಇನ್ನೊಂದರ ಸ್ವಭಾವವನ್ನು ಹಿಂದಿರುಗಿಸಿರುವುದರಿಂದಲೂ ಅಕ್ಷರ, ಬ್ರಹ್ಮನೇ.

["ತದ್ವಾ ಏತದಕ್ಷರಂ ಗಾರ್ಗಿ, ಅದೃಷ್ಟಂ ದ್ರಷ್ಟೃ, ಅಶ್ರುತಂ ಶ್ರೋತೃ, ಅಮತಂ ಮಂತೃ, ಅವಿಜ್ಞಾತಂ ವಿಜ್ಞಾತೃ"—ಗಾರ್ಗಿ, ತಾನು ಕಾಣಿಸಿಕೊಳ್ಳದೆಯೇ ನೋಡುವುದು, ಕೇಳಿಸಿಕೊಳ್ಳದೆಯೇ ಕೇಳುವುದು, ತಿಳಿಯಲ್ಪಡದೆಯೇ ತಿಳಿಯುವುದು, ಮುಂತಾದ ಧರ್ಮಗಳುಳ್ಳದುದು ಈ ಅಕ್ಷರವೇ—ಎಂದು ಆತ್ಮನ ವಿಷಯದಲ್ಲಿ ಯಾಜ್ಞವಲ್ಕ್ಯನ ಉಪದೇಶವಿದೆ. 'ಬ್ರಹ್ಮ, ಅಸ್ಥೂಲ ಹಾಗೂ ಅನಣು'—ಎಂಬ ವಾಕ್ಯ, ಇತರ ವಸ್ತುಗಳಲ್ಲಿರುವ ಸ್ಥೂಲತ್ವ, ಅಣುತ್ವಗಳನ್ನು ಬ್ರಹ್ಮನಲ್ಲಿ ನಿರಾಕರಿಸಿದೆ. ಆದುದರಿಂದ ಅಕ್ಷರ ಎಂದರೆ

ಬ್ರಹ್ಮನೇ. "ವಿರುದ್ಧಧರ್ಮರೂಪೋಽಸಾವೈಶ್ವರ್ಯಾತ್ಪುರುಷೋತ್ತಮಃ" ಐಶ್ವರ್ಯವೆಂಬ ಧರ್ಮವಿರುವುದರಿಂದ ಪುರುಷೋತ್ತಮನಾದ ವಿಷ್ಣು ವಿರುದ ಧರ್ಮರೂಪ ಉಳ್ಳವನು. ಎಂದು ಬ್ರಹ್ಮಪುರಾಣದಲ್ಲಿದೆ, ಎಂದು ಭಾಷ್ಯ ಕಾರರು ತಿಳಿಸಿದ್ದಾರೆ.]

ಓಂ ಈಕ್ಷತಿಕರ್ಮವ್ಯಪದೇಶಾತ್ಸಃ ಓಂ 13

ಈಕ್ಷಣ ಕರ್ಮವನ್ನು ಹೇಳಿರುವುದರಿಂದ ವಿಷ್ಣುವೇ ಸೂಚಿಸಲ್ಪಡುತ್ತಾನೆ.

["ಸದೇವ ಸೋಮ್ಯೇದಮಗ್ರ ಆಸೀತ್"—ಎಲ್ಲಕ್ಕಿಂತ ಮೊದಲು 'ಸತ್' ಒಂದೇ ಇತ್ತು—ಎಂಬ ಛಾಂದೋಗ್ಯ ಶ್ರುತಿ ಆ ಸದ್ವಸ್ತುವಿನಿಂದ ಜಗತ್ತಿನ ಸೃಷ್ಟಿಯಾಯಿತು, ಎಂದು ತಿಳಿಸುತ್ತದೆ. ಅಲ್ಲಿಯೇ 'ತದೈಕ್ಷತ'—ಅದು ನೋಡಿತು,—ಎಂದು ಹೇಳಿರುವುದರಿಂದ ಈಕ್ಷಣವನ್ನೂ ಸೃಷ್ಟಿಯನ್ನೂ ಆ ಸದ್ವಸ್ತುವಿಗೇ ಹೇಳಲಾಗಿದೆ. ಇದು ಪೂರ್ವಪಕ್ಷ. "ಅಜಾಯಮಾನೋ ಬಹುಧಾ ವಿಜಾಯತೇ"—ತನಗೆ ಹುಟ್ಟು ಇರದಿದ್ದರೂ ಅವನು ಅನೇಕವಾಗಿ ಹುಟ್ಟುವನು—ಎನ್ನುವಲ್ಲಿ, ವಿಷ್ಣು ವಿಕಾರವನ್ನು ಹೊಂದದೆಯೇ ಅನೇಕ ಬಗೆಯಲ್ಲಿ ಸೃಷ್ಟಿಪಡೆದನು, ಎಂದು ಹೇಳಬೇಕು. "ನಾನ್ಯೋಽತೋಽಸ್ತಿ ದ್ರಷ್ಟಾ" ಎಂಬ ಬೃಹದಾರಣ್ಯಕ ವಾಕ್ಯ 'ನೋಡುವವನು' ಎಂಬ ಶಬ್ದ ಬ್ರಹ್ಮನಿಗೇ ಮುಖ್ಯವಾಗಿ ಸಲ್ಲುವುದು, ಎಂದು ತಿಳಿಸುವುದು. ಆದುದರಿಂದ ಈಕ್ಷತಿಕರ್ಮಕ್ಕೆ—ನೋಡುವ ಕಾರ್ಯಕ್ಕೆ—ವಿಷಯನಾದವ ಬ್ರಹ್ಮನೇ.]

ಓಂ ದಹರ ಉತ್ತರೇಭ್ಯಃ ಓಂ 14

ಮುಂದಿನ ವಾಕ್ಯಗಳ ಕಾರಣದಿಂದ ದಹರವಾದ (ಸಣ್ಣದಾದ) ಆಕಾಶ ಬ್ರಹ್ಮನೇ.

["ಯ ಆತ್ಮಾಽಪಹತಪಾಪ್ಮಾ ವಿಜರೋ ವಿಮೃತ್ಯುಃ"—ಯಾವ ಆತ್ಮ ಪಾಪಗಳನ್ನು ನಾಶಮಾಡಿದವ, ಜರಾಮರಣಗಳಿಲ್ಲದವ—ಮೊದಲಾಗಿ ಹೇಳುವ (ಛಾಂದೋಗ್ಯಾದಿ) ಶ್ರುತಿಗಳಿಂದ ದಹರವೆಂದರೆ ವಿಷ್ಣುವೇ. ಚಂದ್ರ-ಸೂರ್ಯರಿಗೆ ಆಧಾರ ವಿಷ್ಣುವೇ ಎಂದು ಹೇಳಲಾಗಿದೆ. ಛಾಂದೋಗ್ಯದಲ್ಲಿ "ಈ ಬ್ರಹ್ಮಪುರದಲ್ಲಿ ಸಣ್ಣ ಹೃದಯಕಮಲವೆಂಬ ಮನೆಯಿದೆ. ಅದರಲ್ಲಿ ಒಂದು ಸಣ್ಣ ಅಂತರಾಕಾಶವಿದೆ. ಅದರಲ್ಲಿರುವುದನ್ನು ಹುಡುಕಬೇಕು, ಅರಿತುಕೊಳ್ಳಲು ಬಯಸಬೇಕು" ಎಂದಿದೆ. ಬ್ರಹ್ಮಪುರವೆಂದರೆ ನಮ್ಮ

ಶರೀರ. ದಹರಾಕಾಶ ಭೂತಾಕಾಶವೋ ಬ್ರಹ್ಮನೋ ಎಂದೇ ಸಂದೇಹ. ಆ ಆಕಾಶ ಭೂತಾಕಾಶವಲ್ಲ, ವಿಷ್ಣುವೇ, ಎಂದು ಸಿದ್ಧಾಂತ. "ತಸ್ಯಾಂತೇ ಸುಷಿರಂ ಸೂಕ್ಷ್ಮಂ ತಸ್ಮಿನ್ ಸರ್ವಂ ಪ್ರತಿಷ್ಠಿತಮ್" ಎಂದು ಮಹಾನಾರಾಯಣೀಯೋಪನಿಷತ್ತಿನಲ್ಲಿ ಹೇಳಿರುವುದರಿಂದಲೂ ಭೂತಾಕಾಶ ವಿಷ್ಣುವಾಗಲಾರದು. ಅಪಹತಪಾಪ್ಮನೂ ಅಜರಾಮರಣನೂ ಆದ ವಿಷ್ಣುವೇ ದಹರಾಕಾಶದಲ್ಲಿರುವವನು.]

ಓಂ ಗತಿಶಬ್ದಾಭ್ಯಾಂ, ತಥಾ ಹಿ ದೃಷ್ಟಂ, ಲಿಂಗಂ ಚ ಓಂ 15

ಗಮನ ಮತ್ತು ಶಬ್ದಗಳಿರುವುದರಿಂದ, ಹಾಗೆಯೇ ಶ್ರುತಿಗಳಿವೆ ಮತ್ತೆ ಲಿಂಗವಿದೆ.

["ಇಮಾಃ ಸರ್ವಾಃ ಪ್ರಜಾ ಅಹರಹರ್ಗಚ್ಛಂತ್ಯ ಏವಂ ಬ್ರಹ್ಮಲೋಕಂ ನ ವಿದಂತಿ" ಎಂಬ ಶ್ರುತಿ ಸುಪ್ತಜೀವ ದಿನ ದಿನವೂ ಸಂಚರಿಸುತ್ತಲೇ ಇದ್ದು ಬ್ರಹ್ಮಲೋಕವನ್ನು ಸೇರುವುದಿಲ್ಲ, ಎಂಬ ವಿಷಯವನ್ನು ತಿಳಿಸುತ್ತದೆ. ಅಜ್ಞಾತ್ವವಿರುವುದರಿಂದ ಸುಪ್ತಿಯಲ್ಲಿ ಬ್ರಹ್ಮನ ಬಳಿಗೆ ಹೋದರೂ ಅವನ ವಿಷಯವನ್ನು ಜೀವ ತಿಳಿಯಲಾರ, ಎಂದ ಹಾಗಾಯಿತು. ಸುಪ್ತಗಮ್ಯತ್ವ ಎಂಬ ಲಿಂಗವಿರುವುದರಿಂದಲೂ ಬ್ರಹ್ಮ ಎಂಬ ಶಬ್ದವಿರುವುದರಿಂದಲೂ ದಹರ ದಲ್ಲಿರುವವನು ವಿಷ್ಣುವೇ. ಇವು ಹೃತ್ಕಮಲಸ್ಥನಲ್ಲಿ ಇರುವಂತೆಯೇ 'ಅರ' ಮತ್ತು 'ಣ್ಯ' ಎಂಬ ಅಮೃತಸರೋವರರೂಪನಾದ ಲಿಂಗವೂ ವಿಷ್ಣುವಿನಲ್ಲಿದೆ (ಛಾಂದೋಗ್ಯ).]

ಓಂ ಧೃತೇಶ್ಚ ಮಹಿಮ್ನೋಽಸ್ಯಾಸ್ಮಿನುಪ-ಲಬ್ಧೇಃ ಓಂ 16

ಧೃತಿಯೆಂಬ ಕಾರಣದಿಂದಲೂ ದಹರ ವಿಷ್ಣುವೇ; ಈ ಮಹಿಮೆ ಇವನಲ್ಲಿ ಕಂಡುಬರುವುದು.

["ಏಷ ಸೇತುರ್ವಿಧೃತಿಃ" ಎಂದು ಜಗತ್ತಿನ ಧೃತಿಯನ್ನೇ (ಧಾರಣ ವನ್ನೇ) ಕುರಿತು ಹೇಳಿರುವುದರಿಂದ ದಹರ ಪ್ರದೇಶದಲ್ಲಿರುವವ ವಿಷ್ಣುವೇ. "ಏತಸ್ಮಿನ್ನು ಖಲ್ವಕ್ಷರೇ ಗಾರ್ಗಿ" ಇತ್ಯಾದಿ ಶ್ರುತಿಗಳಿಂದ ಆ ವಿಷ್ಣುವಿಗೇ ಧೃತ್ಯಾದಿ ಮಹಿಮೆಗಳನ್ನು ಹೇಳಲಾಗಿದೆ.]

ಓಂ ಪ್ರಸಿದ್ಧೇಶ್ಚ ಓಂ 17

ಪ್ರಸಿದ್ಧವಾಗಿರುವುದರಿಂದಲೂ.

["ಸರ್ವಾಣಿ ಹ ವಾ ಇಮಾನಿ ಭೂತಾನ್ಯಾಕಾಶಾದೇವ ಸಮುತ್ಪದ್ಯಂತೇ"—ಈ ಎಲ್ಲ ಪ್ರಾಣಿಗಳೂ ಆಕಾಶದಿಂದಲೇ ಹುಟ್ಟುವುವು—ಎಂಬ ಛಾಂದೋಗ್ಯವಾಕ್ಯದಿಂದ ಆಕಾಶಶಬ್ದ ಬ್ರಹ್ಮನನ್ನೇ ಸೂಚಿಸುತ್ತದೆ. ಆಕಾಶಶಬ್ದ ಜೀವನನ್ನು ಕುರಿತು ಹೇಳುವುದೇ ಇಲ್ಲ; "ತತ್ರಾಪಿ ದಹ್ರಂ ಗಹನಂ ವಿಶೋಕಸ್ತಸ್ಮಿನ್ಯದಂತಸ್ತದುಪಾಸಿತವ್ಯಂ"—ಅಲ್ಲಿಯೂ ಗಹನವಾದ ದಹರಾಕಾಶ ಇರುವುದು, ಅದರಲ್ಲಿ ಶೋಕರಹಿತವಾಗಿರುವುದನ್ನು ಉಪಾಸನೆ ಮಾಡಬೇಕು — ಎಂದು ಮಹಾನಾರಾಯಣೀಯೋಪನಿಷತ್ತಿನಲ್ಲಿ ಹೇಳಿದೆ. ಆದುದರಿಂದ ಹೃತ್ಪದ್ಮದಲ್ಲಿ ಇರುವವನು ವಿಷ್ಣುವೇ, ಎಂಬುದು ಪ್ರಸಿದ್ಧವೇ ಆಗಿದೆ.]

ಓಂ ಇತರಪರಾಮರ್ಶಾತ್ಸ ಇತಿ ಚೇನ್ನ, ಅಸಂಭವಾತ್ ಓಂ 18

ಶ್ರುತಿಯಲ್ಲಿ ಮತ್ತೊಬ್ಬನ (ಜೀವನ) ವಿಷಯವನ್ನು ಹೇಳಿರುವುದರಿಂದ ಅವನೇ ಆಕಾಶ, ಎನ್ನುವುದು ಸರಿಯಲ್ಲ; ಅದು ಅಸಂಭವವಾದುದರಿಂದ.

["ಅಥ ಯ ಏಷ ಸಂಪ್ರಸಾದೋಽಸ್ಮಾತ್ ಶರೀರಾತ್ಸಮುತ್ಥಾಯ, ಪರಂ ಜ್ಯೋತಿರುಪಸಂಪದ್ಯ, ಸ್ವೇನ ರೂಪೇಣಾಭಿನಿಷ್ಪದ್ಯತೇ, ಏಷ ಆತ್ಮೇತಿ ಹೋವಾಚ"—ಆಮೇಲೆ ಸಂಪ್ರಸಾದಗುಣವುಳ್ಳ ಇವನು ಈ ಶರೀರವನ್ನು ಬಿಟ್ಟು ಎದ್ದು ಪರಮಜ್ಯೋತಿಯನ್ನು ಸೇರಿ ಸ್ವಸ್ವರೂಪದಿಂದ ಇರುತ್ತಾನೆ; ಇವನು ಆತ್ಮಾ, ಎಂದು ಆಚಾರ್ಯ ಹೇಳಿದನು—ಎಂಬ ಛಾಂದೋಗ್ಯ ವಾಕ್ಯವನ್ನು ವಿಮರ್ಶಿಸಿದರೆ 'ಸಂಪ್ರಸಾದಗುಣವುಳ್ಳ ಆತ್ಮಾ ಜೀವನೇ, ಅವನೇ ದಹರಾಕಾಶಸ್ಥ', ಎನ್ನುವುದು ಸರಿಯಲ್ಲ. ಅವನಿಗೆ ಅಪಹತಪಾಪ್ಮತ್ವಾದಿ (ಪಾಪಗಳನ್ನು ನಾಶ ಮಾಡುವ) ಗುಣಗಳಿಲ್ಲ.]

ಓಂ ಉತ್ತರಾಚ್ಚೇತ್, ಆವಿರ್ಭೂತಸ್ವರೂಪಸ್ತು ಓಂ 19

ಮುಂದಿನ ವಾಕ್ಯದಿಂದ ದಹರಾಕಾಶ ಜೀವನೇ, ಎಂದರೆ ಆವಿರ್ಭೂತ ಸ್ವರೂಪನಾದವನು ಜೀವ.

[ಸ ತತ್ರ ಪರ್ಯೇತಿ ಜಕ್ಷನ್ ಕ್ರೀಡನ್ ರಮಮಾಣಃ ಸ್ತ್ರೀಭಿರ್ವಾ ಯಾನೈರ್ವಾ ಜ್ಞಾತಿಭಿರ್ವಾ"—ಅವನು ಅಲ್ಲಿ ಸ್ತ್ರೀಯರೊಡನೆ, ವಾಹನಗಳಿಂದ, ಅಥವಾ ಜ್ಞಾತಿಗಳೊಡನೆ ನಗುತ್ತಾ ಕ್ರೀಡಿಸುತ್ತಾ ಸಂತೋಷಪಡುತ್ತಾ ಸಂಚರಿಸುತ್ತಾನೆ – ಎಂದು ಮುಂದಿನ ವಾಕ್ಯ ಹೇಳುತ್ತದೆ; ಅದು ಜೀವನ ವಿಷಯವೇ. ಆದರೆ ಅಲ್ಲಿ ಹೇಳಲ್ಪಟ್ಟಿರುವ ಮುಕ್ತಾವಸ್ಥೆಯಲ್ಲಿನ ಜೀವ, ತನ್ನ ಸ್ವರೂಪವನ್ನು ಪಡೆದು ಸಂತೋಷ ಹೊಂದುವುದು ಭಗವಂತನ ಅನುಗ್ರಹದಿಂದಲೇ; ಅವನನ್ನೇ ಪೂರ್ವವಾಕ್ಯ ತಿಳಿಸುವುದು, ಎಂದಿದ್ದಾರೆ, ಭಾಷ್ಯಕಾರರು. ಆದುದರಿಂದ ದಹರಾಕಾಶ ಪರಮಾತ್ಮನನ್ನೇ ಮುಖ್ಯವಾಗಿ ತಿಳಿಸುವುದು; ಅವನು ಸರ್ವವ್ಯಾಪಿ.]

ಓಂ ಅನ್ಯಾರ್ಥಶ್ಚ ಪರಾಮರ್ಶಃ ಓಂ 20

ಪರಾಮರ್ಶಕ್ಕೆ ಬೇರೊಂದು ಪ್ರಯೋಜನವಿದೆ.

[18ನೆಯ ಸೂತ್ರದ ವಿವರಣೆಯಲ್ಲಿ ಹೇಳಿರುವ ವಾಕ್ಯದಲ್ಲಿ 'ಏಷ ಆತ್ಮಾ' ಎನ್ನುವುದರಲ್ಲಿ, "ಯಾವನನ್ನು ಹೊಂದಿ ಜೀವನು ತನ್ನ ಸ್ವರೂಪವನ್ನು ಹೊಂದುತ್ತಾನೆಯೋ ಅವನೇ ಈ ಆತ್ಮಾ" ಎಂದು ಸ್ಪಷ್ಟವಾಗುವುದರಿಂದ ಪರಂಜ್ಯೋತಿಃ, ಎಂದು ಹೇಳಲ್ಪಟ್ಟಿರುವ ಬ್ರಹ್ಮನ ವಿಷಯದಲ್ಲಿಯೇ 'ಅವನೇ ಈ ಆತ್ಮಾ' ಎಂದು ಹೇಳಿರುವುದು.]

ಓಂ ಅಲ್ಪಶ್ರುತಿರಿತಿ ಚೇತ್, ತದುಕ್ತಮ್ ಓಂ 21

ಶ್ರುತಿಯಲ್ಲಿ ದಹರ—ಅಲ್ಪ—ಎಂದು ಹೇಳಿರುವುದರಿಂದ ಬ್ರಹ್ಮನಲ್ಲ, ಎಂದರೆ ಅದನ್ನು ಹೇಳಿಯಾಗಿದೆ.

["ದಹರೋಽಸ್ಮಿನ್ನಂತರಾಕಾಶಃ" ಎಂದು ಸಣ್ಣ ಪ್ರದೇಶವನ್ನು ಕುರಿತು ಹೇಳಿರುವುದರಿಂದ ಅಲ್ಲಿ ಬ್ರಹ್ಮ ಇರಲು ಸಾಧ್ಯವಿಲ್ಲ, ಎನ್ನಲಾಗದು. 'ವ್ಯೋಮವಚ್ಚ' ಎಂಬ ಸೂತ್ರದಲ್ಲಿ ಆಕಾಶದಂತೆ ಸರ್ವವ್ಯಾಪಿಯಾಗಿದ್ದಾನೆ, ಎಂದು ಹೇಳಿರುವುದರಿಂದ ಅಲ್ಪಸ್ಥಾನಗಳಲ್ಲಿಯೂ ಬ್ರಹ್ಮ ಇರುವುದು ಸಾಧ್ಯ. "ಏಷ ಮ ಆತ್ಮಾಂತರ್ಹೃದಯೇ ಜ್ಯಾಯಾನ್"—ನನ್ನ ಹೃದಯ ಪುಂಡರೀಕದಲ್ಲಿರುವ ಈ ಆತ್ಮ ಎಲ್ಲಕ್ಕಿಂತ ದೊಡ್ಡವನು – ಎಂದು ಛಾಂದೋಗ್ಯಶ್ರುತಿಯೇ ಹೇಳುತ್ತದೆ. ಆದುದರಿಂದ ದಹರ ಸ್ಥಾನದಲ್ಲಿರುವವನು ಪರಮಾತ್ಮ, ಅವನನ್ನೇ ಕುರಿತು ಉಪಾಸನೆ ಮಾಡಬೇಕು. ಇಲ್ಲಿಗೆ ದಹರಾಧಿಕರಣ ಮುಗಿಯಿತು.]

ಓಂ ಅನುಕೃತೇಸ್ತಸ್ಯ ಚ ಓಂ 22

ಅವನನ್ನು ಅನುಕರಣ ಮಾಡುವುದರಿಂದಲೂ.

[ಅದೃಶ್ಯತ್ವಾದಿಗಳು ಈಶನ ಗುಣಗಳು, ಎಂದು ಹೇಳಲ್ಪಟ್ಟಿವೆ. "ತೇಷಾಂ ಸುಖಂ ನೇತರೇಷಾಂ"—ಶಾಶ್ವತಸುಖ ಅವರಿಗೇ, ಇತರರಿಗಲ್ಲ— ಎಂದು ಕಠಶ್ರುತಿಯಿದೆ. "ತದೇತದಿತಿ ಮನ್ಯಂತೇಽನಿರ್ದೇಶ್ಯಂ ಪರಮಂ ಸುಖಂ, ಕಥಂ ನು ತದ್ವಿಜಾನೀಯಾಮ್"—ಆ ಬ್ರಹ್ಮ ಅನಿರ್ದೇಶ್ಯ ಹಾಗೂ ಶಾಶ್ವತಸುಖಸ್ವರೂಪ, ಎಂದು ಜ್ಞಾನಿಗಳು ತಿಳಿಯುತ್ತಾರೆ, ಅದನ್ನು ನಾನು ಹೇಗೆ ತಿಳಿದುಕೊಳ್ಳಲಿ?—ಎಂದೂ ಆ ಶ್ರುತಿ ಹೇಳುತ್ತದೆ. ಇದರಿಂದ ಜ್ಞಾನಿಗಳ ಸುಖಕ್ಕೂ ಅನಿರ್ದೇಶ್ಯತ್ವ, ಅಜ್ಞೇಯತ್ವಗಳನ್ನು ಹೇಳಬಹುದೇ? ಇಲ್ಲವೆನ್ನುತ್ತದೆ, ಸೂತ್ರ. "ತಮೇವ ಭಾಂತಂ, ಅನುಭಾತಿ ಸರ್ವಂ"— ಪ್ರಕಾಶಿಸುತ್ತಿರುವ ಆ ಬ್ರಹ್ಮನನ್ನೇ ಅನುಕರಿಸಿ ಎಲ್ಲವೂ ಪ್ರಕಾಶಿಸುವುದು— ಎಂದು ಹೇಳಿರುವುದರಿಂದಲೂ "ತಸ್ಯ ಭಾಸಾ ಸರ್ವಮಿದಂ ವಿಭಾತಿ"— ಅವನ ಪ್ರಕಾಶದಿಂದಲೇ ಇವೆಲ್ಲ ಪ್ರಕಾಶಿಸುವುದು — ಎಂದಿರುವುದರಿಂದಲೂ (ಮುಂಡಕ), ಪರಮಾತ್ಮನೇ ಅನಿರ್ದೇಶ್ಯ ಸುಖಸ್ವರೂಪ. ಜ್ಞಾನಿಗಳ ಸುಖ, ಪ್ರಕಾಶಗಳಿಂದ ಇತರರು ಪ್ರಕಾಶಿಸುವುದಿಲ್ಲ.]

ಓಂ ಅಪಿ ಸ್ಮರ್ಯತೇ ಓಂ 23

ಸ್ಮೃತಿಯಲ್ಲಿಯೂ ಇದು ಹೇಳಲ್ಪಟ್ಟಿದೆ.

["ಯದಾದಿತ್ಯಗತಂ ತೇಜೋ ಜಗದ್ಭಾಸಯತೇಽಖಿಲಮ್ । ಯಚ್ಚಂದ್ರಮಸಿ ಯಚ್ಚಾಗ್ನೌ ತತ್ತೇಜೋ ವಿದ್ಧಿ ಮಾಮಕಮ್ । ನ ತದ್ಭಾಸಯತೇ ಸೂರ್ಯೋ ನ ಶಶಾಂಕೋ ನ ಪಾವಕಃ ॥" ಎಂಬ ಗೀತಾವಾಕ್ಯಗಳಿಂದ ಶ್ರೀಕೃಷ್ಣನು, "ಸೂರ್ಯನಲ್ಲಿರುವ ಯಾವ ತೇಜಸ್ಸು ಇಡೀ ಜಗತ್ತನ್ನೇ ಬೆಳಗಿಸುವುದೋ, ಚಂದ್ರನಲ್ಲಿಯೂ ಅಗ್ನಿಯಲ್ಲಿಯೂ ಯಾವ ತೇಜಸ್ಸು ಇದೆಯೋ, ಅದನ್ನೆಲ್ಲ ನನ್ನಿಂದ ಹೊರಟ ತೇಜಸ್ಸೆಂದೇ ತಿಳಿ. ಸೂರ್ಯನೇ ಆಗಲಿ, ಚಂದ್ರ ಅಥವಾ ಬೆಂಕಿಯೇ ಆಗಲಿ ನನ್ನ ತೇಜಸ್ಸು ಬೆಳಗುವಂತೆ ಮಾಡುವುದಿಲ್ಲ" ಎಂದು ಹೇಳಿ ಮೂಲಾಧಾರವಾದ ತೇಜಸ್ಸು ಪರಬ್ರಹ್ಮನದೇ, ಎಂದು ತೋರಿಸಿದ್ದಾನೆ. ಅದೇ ಇತರ ವಸ್ತುಗಳಲ್ಲಿ ತೇಜಸ್ಸನ್ನು ಪ್ರೇರಿಸುವುದು.]

ಓಂ ಶಬ್ದಾದೇವ ಪ್ರಮಿತಃ ಓಂ 24

ಶಬ್ದದಿಂದಲೇ (ಈಶಾನ ಶ್ರುತಿಯಿಂದಲೇ) ಪರಿಮಾಣ ಹೊಂದಿರುವವನು ವಿಷ್ಣುವೇ.

["ಅಂಗುಷ್ಠಮಾತ್ರಃ ಪುರುಷೋ ಮಧ್ಯ ಆತ್ಮನಿ ತಿಷ್ಠತಿ"—ಅಂಗುಷ್ಠದಷ್ಟೇ ಅಳತೆಯುಳ್ಳ ಪುರುಷ ಶರೀರಮಧ್ಯದಲ್ಲಿ ಇರುತ್ತಾನೆ—ಎಂದು ಕಠೋಪನಿಷತ್ತು ಹೇಳಿ, ಮುಂದೆ "ಅಂಗುಷ್ಠಮಾತ್ರಃ ಪುರುಷೋ ಜ್ಯೋತಿರಿವಾಧೂಮಕಃ । ಈಶಾನೋ ಭೂತಭವ್ಯಸ್ಯ ಸ ಏವಾದ್ಯ ಸ ಉಶ್ವಃ । ಏತದ್ವೈ ತತ್"—ಅಂಗುಷ್ಠಮಾತ್ರ ಪ್ರಮಾಣದ ಪುರುಷ ಹೊಗೆಯಿಲ್ಲದ ಬೆಂಕಿಯಂತೆ ಇರುವನು. ಅವನು ಭೂತಭವಿಷ್ಯಗಳಿಗೆ ಒಡೆಯ. ಇವತ್ತಿಗೂ ಅವನೇ, ನಾಳೆಯೂ ಅವನೇ—ಎಂದು ತಿಳಿಸುವುದು. ಆ ಅಂಗುಷ್ಠಮಾತ್ರ ಪುರುಷ ಯಾರು? "ಊರ್ಧ್ವಂ ಪ್ರಾಣಮುನ್ನಯತಿ, ಅಪಾನಂ ಪ್ರತ್ಯಗಶ್ಯತಿ। ಮಧ್ಯೇ ವಾಮನಮಾಸೀನಂ ವಿಶ್ವೇ ದೇವಾ ಉಪಾಸತೇ"—ಪ್ರಾಣನಾಮಕ ವಾಯುವನ್ನು ಮೇಲಕ್ಕೆ ಎಳೆಯುತ್ತದೆ; ಅಪಾನವಾಯುವನ್ನು ಕೆಳಕ್ಕೆ ದೂಡುತ್ತದೆ; ಮಧ್ಯೆ ವಾಮನನಾಗಿ ಕುಳಿತಿರುವ ಅವನ್ನು ಎಲ್ಲ ದೇವತೆಗಳೂ ಉಪಾಸನೆ ಮಾಡುತ್ತಾರೆ—ಎಂದು ಅದೇ ಉಪನಿಷತ್ತಿನಲ್ಲಿ ಮುಂದೆ ಹೇಳಲಾಗಿದೆ. ಹೀಗೆ ಮಧ್ಯದಲ್ಲಿರುವ ಮುಖ್ಯಪ್ರಾಣನೇ ಇತರ ಪ್ರಾಣಗಳನ್ನು ನಿಯಮಿಸುತ್ತದೆಯಾದುದರಿಂದ ಅಂಗುಷ್ಠಮಾತ್ರ ಪ್ರಮಾಣದ ಪುರುಷ ಮುಖ್ಯಪ್ರಾಣನೇ, ಎನ್ನುವುದಾದರೆ ಅದು ಸರಿಯಲ್ಲ, ಎನ್ನುತ್ತದೆ, ಈ ಸೂತ್ರ. ವಾಮನ ಶಬ್ದದಿಂದಲೇ ವಿಷ್ಣು ಸೂಚಿತನಾಗುತ್ತಾನೆ. ಆಗಮದ ತಾತ್ಪರ್ಯ ನಿರೂಪಿಸುವಲ್ಲಿ ಬಳಸುವ ಶ್ರುತಿ, ಲಿಂಗ, ವಾಕ್ಯ, ಪ್ರಕರಣ ಎಂಬ ಸಾಧನಗಳಲ್ಲಿ ಶ್ರುತಿಯೇ ಬಲಿಷ್ಠವಾದುದು. ಇಲ್ಲಿ ವಾಮನನೆಂಬ ಲಿಂಗವೂ ವಿಷ್ಣುವಿಗೇ ಅನ್ವಯಿಸುವುದು. 'ತದ್ವೈ ತ್ವಂ ಪ್ರಾಣಃ' ಎಂಬ ವಾಕ್ಯದಿಂದಲೂ ಪ್ರಾಣಶಬ್ದವಾಚ್ಯ ವಿಷ್ಣುವೇ.]

ಓಂ ಹೃದ್ಯಪೇಕ್ಷಯಾ ತು ಮನುಷ್ಯಾಧಿಕಾರತ್ವಾತ್ ಓಂ 25

ಆದರೆ ಹೃದಯದ ಅಪೇಕ್ಷೆಯಿಂದಲೇ ಆತ್ಮ ಅಂಗುಷ್ಠಮಾತ್ರ, ಮನುಷ್ಯ ಅಧಿಕಾರಿಯಾಗಿರುವುದರಿಂದ.

[ಮನುಷ್ಯರು ಮಾತ್ರ ಉಪಾಸನೆಗೆ ಅಧಿಕಾರಿಗಳು, ಇತರ ಪ್ರಾಣಿಗಳಲ್ಲ. ಆ ಮನುಷ್ಯರಿಂದ ಉಪಾಸ್ಯನಾದ ಬ್ರಹ್ಮ, ಅವರ ಹೃದಯದಲ್ಲಿಯೇ ಇದ್ದಾನೆ. ಆ ಹೃದಯದ ಅವಕಾಶದ ಪ್ರಮಾಣ ಅಂಗುಷ್ಠಮಾತ್ರವೇ. ಆದುದರಿಂದ ಉಪಾಸ್ಯನಾದ ಆತ್ಮ—ಬ್ರಹ್ಮ—ಅಂಗುಷ್ಠಮಾತ್ರ ಪರಿಮಾಣವುಳ್ಳವನು. ಸರ್ವಗತನಾಗಿರುವ ವಿಷ್ಣು, ಉಪಾಸನೆಗಾಗಿ ಅಂಗುಷ್ಠದಷ್ಟೇ ಗಾತ್ರ ಹೊಂದಿ ಹೃದಯದಲ್ಲಿರುತ್ತಾನೆ.]

ಓಂ ತದುಪರ್ಯಪಿ ಬಾದರಾಯಣಃ, ಸಂಭವಾತ್ ಓಂ 26

ಮನುಷ್ಯರಿಗಿಂತ ಮೇಲಿರುವವರೂ ಉಪಾಸನೆಗೆ ಅಧಿಕಾರಿಗಳಾಗುವರು, ಎಂದು ಬಾದರಾಯಣರ ಮತ; ಅದು ಸಾಧ್ಯವಾಗುವುದರಿಂದ.

[ಇಲ್ಲಿಂದ ದೇವತಾಧಿಕರಣ ಆರಂಭವಾಗುವುದು. ವೇದವಿದ್ಯೆಗೆ ಮನುಷ್ಯರೇ ಅಧಿಕಾರಿಗಳು, ಇತರ ಪ್ರಾಣಿಗಳಲ್ಲ, ಎಂದು ಹೇಳಿದುದಾಯಿತು, ಪ್ರಾಣಿಗಳಿಗೆ ಮಾತ್ರ ಅಧಿಕಾರವಿಲ್ಲ, ಎಂದು ಹೇಳುವುದಕ್ಕಾಗಿಯೇ 'ಮನುಷ್ಯಾಧಿಕಾರತ್ವಾತ್' ಎಂದು ಹಿಂದಿನ ಸೂತ್ರದಲ್ಲಿ ಹೇಳಿದುದು. ದೇವತೆಗಳು ಮನುಷ್ಯರಿಗಿಂತ ಉತ್ತಮರಾದುದರಿಂದ, ಅವರಿಗೆ ಅಧಿಕಾರವಿಲ್ಲವೆನ್ನಲಾಗದು. 'ತದುಪರಿ' ಎಂಬ ಶಬ್ದಕ್ಕೆ ಮನುಷ್ಯರಿಗಿಂತ ಉತ್ತಮರಾದ ದೇವಾದಿಗಳಲ್ಲಿ, ಎಂದು ತಾತ್ಪರ್ಯ. ಅವರಿಗೆ ಉಪಾಸನೆಯು ನಿಷೇಧ ಮಾಡಿಲ್ಲ. ದೇವತೆಗಳು ಉತ್ತಮಾಧಿಕಾರಿಗಳು !]

ಓಂ ವಿರೋಧಃ ಕರ್ಮಣೇತಿ ಚೇನ್ನ, ಅನೇಕಪ್ರತಿಪತ್ತೇರ್ದರ್ಶನಾತ್ ಓಂ 27

ಯಜ್ಞಾದಿ ಕರ್ಮಗಳಲ್ಲಿ (ದೇವತೆಗಳ ಶರೀರತ್ವದಿಂದ) ವಿರೋಧ ಬರುತ್ತದೆ, ಎನ್ನುವುದು ಸರಿಯಲ್ಲ. ಅನೇಕ ರೂಪಗಳನ್ನು ಹೊಂದಿರುವುದು ಕಂಡುಬಂದಿರುವುದರಿಂದ.

[ಮನುಷ್ಯರಿಗೂ ದೇವತ್ವ ಪ್ರಾಪ್ತವಾಗುವುದು ಕಂಡುಬಂದಿದೆ. ಹೀಗೆ ಮನುಷ್ಯರು ದೇವತೆಗಳಾಗುವುದಕ್ಕೆ ಮೊದಲು ಅವರನ್ನು ಉದ್ದೇಶಿಸಿ

ಮಾಡಿದ ಕರ್ಮ ವ್ಯರ್ಥವಾಗುವುದಲ್ಲ! ಇದು ಸರಿಯಲ್ಲ, ಹಿಂದೆ ಅನೇಕರು ದೇವತಾ ಪದವಿಯನ್ನು ಪೂರ್ವದಲ್ಲಿ ಹೊಂದಿದ್ದರೆಂದು, "ಯತ್ರ ಪೂರ್ವೇ ಸಾಧ್ಯಾಃ ಸಂತಿ ದೇವಾಃ" ಎಂದು ಶ್ರುತಿವಾಕ್ಯವಿದೆ. ವಸ್ವಾದಿ ದೇವತೆಗಳು ಮೊದಲಿಂದಲೂ ಇದ್ದರು, ಎಂದು ಶ್ರುತಿಯ ತಾತ್ಪರ್ಯ. "ತೇ ಹ ನಾಕಂ ಮಹಿಮಾನಃ ಸಚಂತ" ಎನ್ನುವುದರಿಂದಲೂ ಮಹಿಮೆಯುಳ್ಳವರು ಮೋಕ್ಷ ವನ್ನು ಪಡೆದಿದ್ದರು, ಎಂದು ತಿಳಿಯಬರುವುದು.]

ಓಂ ಶಬ್ದ ಇತಿ ಚೇನ್ನ, ಅತಃ ಪ್ರಭಾವಾತ್, ಪ್ರತ್ಯಕ್ಷಾನುಮಾನಾಭ್ಯಾಮ್ ಓಂ 28

ವೇದಗಳಲ್ಲಿ ವಿರೋಧವಿದೆ, ಎನ್ನುವುದು ಸರಿಯಲ್ಲ, ಶಬ್ದದಿಂದ ಸೃಷ್ಟಿಯು ನಿಯಮವಾಗುವುದು, ಎಂದು ಪ್ರತ್ಯಕ್ಷ, ಅನುಮಾನಗಳಿಂದ ತಿಳಿದುಬರುವುದು.

["ಮೂಲಪ್ರಮಾಣಗಳಾದ ವೇದಗಳು ನಿತ್ಯ, ಅವು ತಿಳಿಸುವ ದೇವತೆಗಳು ಶರೀರ ಹೊಂದಿ ಅನಿತ್ಯರಾಗಿರುವರು. ಶಬ್ದಾರ್ಥಗಳ ನಿತ್ಯಸಂಬಂಧವನ್ನು ಅಪೇಕ್ಷಿಸುವ ವೇದಗಳು ಇದರಿಂದ ತಮ್ಮ ತಮ್ಮ ನಿತ್ಯತ್ವವನ್ನೂ ಪ್ರಾಮಾಣ್ಯವನ್ನೂ ಕಳೆದುಕೊಳ್ಳುತ್ತವೆ." ಹೀಗೆ ಹೇಳುವ ಪೂರ್ವಪಕ್ಷ ಸರಿಯಲ್ಲ, ಎನ್ನುತ್ತದೆ, ಸೂತ್ರ. ವೇದ ನಿತ್ಯವಾಗಿರುವಾಗ ವೇದದಿಂದ ಹುಟ್ಟುವ ದೇವತೆಗಳು ಅನಿತ್ಯ, ಎಂಬುದು ವಿರೋಧ. ಇದು ಸರಿಯಲ್ಲ. "ಸೂರ್ಯಾಚಂದ್ರಮಸೌ ಧಾತಾ ಯಥಾಪೂರ್ವಮಕಲ್ಪಯತ್"— ಬ್ರಹ್ಮನು ಸೂರ್ಯಚಂದ್ರರನ್ನು ಹಿಂದಿನಂತೆಯೇ ಸೃಷ್ಟಿಮಾಡಿದನು—ಎಂಬ ಮಹಾನಾರಾಯಣೀಯ ಉಪನಿಷತ್ತಿನ ವಾಕ್ಯದಿಂದ ದೇವತೆಗಳು ಹಿಂದಿನ ಕ್ರಮದಲ್ಲಿಯೇ ಪುನಃ ಪುನಃ ಹುಟ್ಟುವರು, ಎಂಬುದು ಶಬ್ದ(ವೇದ)ದಿಂದಲೇ ತಿಳಿಯಬರುವುದು. ಇದು ಮಹಾತ್ಮರಿಗೆ ಪ್ರತ್ಯಕ್ಷಸಿದ್ಧವಾಗಿದೆ. 'ಹಿಂದಿನಂತೆ ಮುಂದೆಯೂ ಸೃಷ್ಟಿಯಾಗುವುದು' ಎಂಬ ಅನುಮಾನವನ್ನೂ ಇತರರು ಬಳಸಬಹುದು.]

ಓಂ ಅತ ಏವ ಚ ನಿತ್ಯತ್ವಂ ಓಂ 29

ಮತ್ತು ಈ ಕಾರಣದಿಂದಲೂ ನಿತ್ಯ.

[ವೇದಗಳ ಶಬ್ದ ನಿತ್ಯವಾಗಿದೆ, ಎಂಬ ಕಾರಣದಿಂದಲೇ ದೇವ ಪರಂಪರೆಯ ಸೃಷ್ಟಿಯೂ ನಿತ್ಯ; ಬೇರೆ ಕಾರಣವೇ ಬೇಡ. ದೇವತೆಗಳೇ ನಿತ್ಯವೆಂದು ಅರ್ಥವಲ್ಲ, ಹಾಗಿದ್ದರೆ ಪ್ರಳಯದ ಪ್ರಸಂಗವೇ ಇರುತ್ತಿರಲಿಲ್ಲ. ದೇವತೆಗಳ ಆಕೃತಿ ನಿತ್ಯ. ಅವೇ ಪುನಃ ಪುನಃ ದೇವತೆಗಳಿಗೆ ಬರುತ್ತಿರುವುದರಿಂದ ಪ್ರವಾಹದಂತೆ, ಅವರು ನಿತ್ಯರು. ನದಿಯ ನೀರು ಮುಂದೆ ಸಾಗುತ್ತಲೇ ಇರುವುದು. ಮುಂದೆ ಸರಿದ ನೀರಿನ ಸ್ಥಾನದಲ್ಲಿ ಅಂಥದೇ ನೀರು ಹಿಂದಿನಿಂದ ಬರುತ್ತದೆ. ಇದು ಪ್ರವಾಹ. ನೀರಿನ ರೂಪ ಇಲ್ಲಿ ನಿತ್ಯವಾದರೂ ಒಂದೇ ಪ್ರಮಾಣದ ನಿಗದಿಯಾದ ನೀರು ಅಲ್ಲಿರದೆ ಸದಾ ಸರಿಯುತ್ತಿರುತ್ತದೆ. ಆಗ ನಾವು ನದಿ ನಿತ್ಯವೆನ್ನುತ್ತೇವೆ. ಹೀಗೆಯೇ ಪೂರ್ವಕಲ್ಪದಲ್ಲಿದ್ದಂತೆಯೇ ಮತ್ತೆ ಮತ್ತೆ ದೇವತೆಗಳ ಸೃಷ್ಟಿಯಾಗುವುದರಿಂದ ದೇವತೆಗಳು ಪ್ರವಾಹದಂತೆ ನಿತ್ಯರು. ಆದುದರಿಂದ ವಿರೋಧವಿಲ್ಲ.]

ಓಂ ಸಮಾನನಾಮರೂಪತ್ವಾಚ್ಚ, ಆವೃತ್ತಾವಪ್ಯ- ವಿರೋಧಃ, ದರ್ಶನಾತ್, ಸ್ಮೃತೇಶ್ಚ ಓಂ 30

ನಾಮರೂಪಗಳು ಸಮಾನವಾಗಿರುವುದರಿಂದ, ಆವೃತ್ತಿಯ ವಿಷಯದಲ್ಲಿಯೂ ಶಬ್ದದ ನಿತ್ಯತ್ವಕ್ಕೆ ಯಾವ ವಿರೋಧವೂ ಇರುವುದಿಲ್ಲ; ಶ್ರುತಿಯಿಂದಲೂ ಸ್ಮೃತಿಯಿಂದಲೂ ಇದನ್ನು ತಿಳಿಯಬಹುದು.

[ಹಿಂದೆ ಇದ್ದ ದೇವತೆಗಳಿಗೂ ಮುಂದೆ ಬರುವ ದೇವತೆಗಳಿಗೂ—ಕಲ್ಪಸೃಷ್ಟಿಗಳಲ್ಲಿ—ಒಂದೇ ಹೆಸರು—ಇಂದ್ರ, ಅಗ್ನಿ, ಇತ್ಯಾದಿ—ಮತ್ತು ಒಂದೇ ರೂಪಗಳಿರುವುದರಿಂದ ಮುಕ್ತಿಯಿಂದ ಪುನರಾವೃತ್ತಿ ಹೊಂದಿದರೂ ವಿರೋಧವಿಲ್ಲ. ಹೀಗೆ ಶ್ರುತಿಗಳೂ ಹೇಳುತ್ತವೆ. 'ಯಥಾ ಪೂರ್ವಮಕಲ್ಪಯತ್' ಎಂಬ ವಾಕ್ಯದಿಂದ ಹಿಂದಿನ ಕಲ್ಪಗಳಲ್ಲಿದ್ದಂತೆಯೇ ಮುಂದೆಯೂ ಬ್ರಹ್ಮ ಸೃಷ್ಟಿ ಮಾಡುವನು, ಎಂದು ಅರ್ಥವಾಗುವುದು. ಬೇರೆ ಬೇರೆ ವ್ಯಕ್ತಿಗಳೇ ದೇವತೆಗಳಾದರೂ ಹಿಂದೆ ಇದ್ದಂತೆ ಹೊಸ ಸೃಷ್ಟಿಯಲ್ಲಿಯೂ ಅದೇ ಹೆಸರಿನ ಮತ್ತು ಅದೇ ರೂಪದ ಇಂದ್ರಾದಿ ದೇವತೆಗಳೇ ಪುನಃ ಪುನಃ ಪ್ರವಾಹ ರೂಪದಿಂದ ಹುಟ್ಟುತ್ತಾರೆ. ಮುಖ್ಯವಾಗಿ ಇಂದ್ರಾದಿ ಶಬ್ದಗಳು ವಿಷ್ಣುವನ್ನೇ ಬೋಧಿಸುವುದರಿಂದ ಎಲ್ಲರೂ ಒಂದೇ ಹೆಸರನ್ನು ಪಡೆದಿರುತ್ತಾರೆ.]

ಓಂ ಮಧ್ವಾದಿಷ್ವಸಂಭವಾದನಧಿಕಾರಂ ಜೈಮಿನಿಃ ಓಂ 31

ಮಧು ಮೊದಲಾದ ವಿದ್ಯೆಗಳಲ್ಲಿ ದೇವತೆಗಳಿಗೆ ಅಧಿಕಾರ ಅಸಂಭವವಾದುದರಿಂದ ಅವರಿಗೆ ಬ್ರಹ್ಮವಿದ್ಯೆಯಲ್ಲಿ ಅಧಿಕಾರವಿಲ್ಲವೆಂದು ಜೈಮಿನಿಯ ಮತ.

["ಅಸೌ ವಾ ಆದಿತ್ಯೋ ದೇವಮಧು"—ಈ ಆದಿತ್ಯನೇ ದೇವಮಧು—ಎಂದು ಛಾಂದೋಗ್ಯ ಹೇಳುತ್ತದೆ. "ಸ ಯ ಏತದೇವಮಮೃತಂ ವೇದ, ವಸೂನಾಮೇವೈಕೋ ಭೂತ್ವಾಽಗ್ನಿನೈವ ಮುಖೇನೈತದೇವಾಮೃತಂ ದೃಷ್ಟ್ವಾ ತೃಪ್ಯತಿ" ಎಂಬ ವಾಕ್ಯದಿಂದ ಮಧುವಿದ್ಯೆಯ ಫಲವಾದ ವಸು ಮೊದಲಾದ ಪದಗಳನ್ನು ದೇವತೆಗಳು ಹೊಂದುತ್ತಾರೆ, ಎಂದು ತಿಳಿದು ಬರುವುದು, ಹಾಗೆ ಅಂಥ ಪದವಿ ಗಳಿಸಿದವರಿಗೆ ಮಧುವಿದ್ಯೆಯಲ್ಲಿ ಅಧಿಕಾರವಿಲ್ಲವೆನ್ನುತ್ತಾನೆ, ಜೈಮಿನಿ. ಮನುಷ್ಯರು ಆದಿತ್ಯನನ್ನು ಮಧುವೆಂದು ಉಪಾಸಿಸಬೇಕು. ದೇವತೆಗಳೂ ಉಪಾಸಕರಾಗುವುದಾದರೆ ಆದಿತ್ಯ ತಾನು ಯಾವ ಆದಿತ್ಯನನ್ನು ಉಪಾಸಿಸಬೇಕು? ತಮಗೆ ಬೇಕಾದುದನ್ನು ಪಡೆದವನಿಗೆ — ದೇವತೆಗೆ — ಮಧುವಿದ್ಯಾದಿಗಳಿಗೆ ಅಧಿಕಾರವಿಲ್ಲ, ಅದು ಅನಾವಶ್ಯಕ, ಎಂದು ಭಾವ.]

ಓಂ ಜ್ಯೋತಿಷಿ ಭಾವಾಚ್ಚ ಓಂ 32

ದೇವಾದಿಗಳಿಗೆ ಉಪಾಸನೆ ಜ್ಯೋತಿಸ್ಸಿನಲ್ಲಿಯೇ ಇರುವುದರಿಂದಲೂ.

["ತಂ ದೇವಾ ಜ್ಯೋತಿಷಾಂ ಜ್ಯೋತಿರಾಯುರ್ಹೋಪಾಸತೇಽಮೃತಂ"—ಜ್ಯೋತಿಗಳ ಜ್ಯೋತಿಯನ್ನು ದೇವತೆಗಳು ಅಮೃತವಾದ ಆಯುಸ್ಸೆಂದು ಉಪಾಸಿಸುತ್ತಾರೆ—ಎಂಬ ಬೃಹದಾರಣ್ಯಕದ ವಾಕ್ಯದಿಂದ ದೇವಾದಿಗಳಿಗೆ ಜ್ಯೋತಿಸ್ಸಿನ ಉಪಾಸನೆ ಹೇಳಲ್ಪಟ್ಟಿದೆ. ದೇವತೆಗಳು ಸರ್ವಜ್ಞರು. ಆದಿತ್ಯ ಪ್ರಕಾಶದಲ್ಲಿ ಇತರ ಪ್ರಕಾಶಗಳು ಅಡಗಿರುವಂತೆ ದೇವತೆಗಳ ಜ್ಞಾನದಲ್ಲಿ ಎಲ್ಲ ವಸ್ತುಗಳೂ ಅಂತರ್ಗತವಾಗಿವೆ. ವಿದ್ಯೆಗಳು ಅವರಲ್ಲಿ ನಿತ್ಯಸಿದ್ಧವಾಗಿವೆ. ಆದುದರಿಂದ ಮಧುವಿದ್ಯಾದಿಗಳಲ್ಲಿ ಅವರಿಗೆ ಅಧಿಕಾರವಿಲ್ಲ.]

ಓಂ ಭಾವಂ ತು ಬಾದರಾಯಣೋಽಸ್ತಿ ಹಿ ಓಂ 33

ಅಧಿಕಾರ ಇದೆ, ಎನ್ನುತ್ತಾರೆ, ಬಾದರಾಯಣರು.

[ಬಾದರಾಯಣಮುನಿಗಳ ಮತದಂತೆ ಮಧುವಿದ್ಯಾದಿಗಳಿಂದ ಯೋಗ್ಯವಾದ ಸ್ಥಾನಗಳನ್ನು ಗಳಿಸಿಕೊಂಡ ದೇವತೆಗಳಿಗೂ ಫಲವಿಶೇಷವಾಗುವುದರಿಂದ ಪುನಃ ಉಪಾಸನೆಗೆ ಅಧಿಕಾರವಿದ್ದೇ ಇದೆ. ಹಿಂದಿನ ಎರಡು ಸೂತ್ರಗಳಲ್ಲಿ ತಿಳಿಸಿದ ಪೂರ್ವಪಕ್ಷವನ್ನು ನಿರಾಕರಿಸಿ ಇಲ್ಲಿ ಬಾದರಾಯಣರ ಅಭಿಪ್ರಾಯವನ್ನು ಹೇಳಲಾಗಿದೆ. ಇನ್ನೂ ಹೆಚ್ಚಿನ ಫಲಪ್ರಾಪ್ತಿಗಾಗಿ ಮಧುವಿದ್ಯಾದಿಗಳಲ್ಲಿ ದೇವತೆಗಳಿಗೆ ಅಧಿಕಾರವಿದೆ, ಎಂದು ಸಿದ್ಧಾಂತ. ಈಗ ಪಡೆದಿರುವ ಫಲದ ದೃಷ್ಟಿಯಿಂದ ಅಧಿಕಾರವಿಲ್ಲವೆಂದು ಜೈಮಿನಿ ಹೇಳಿದನು. ಇದು ಅವರಿಬ್ಬರ ಅಭಿಪ್ರಾಯದಲ್ಲಿ ತೋರುವ ವಿರೋಧವನ್ನು ಪರಿಹರಿಸುವುದು. ಬ್ರಹ್ಮಪ್ರರಾಣದಲ್ಲಿ, "ಸರ್ವಜ್ಞಸ್ಯೈವ ಕೃಷ್ಣಸ್ಯ ತ್ವೇಕದೇಶವಿಚಿಂತಿತಮ್ । ಸ್ವೀಕೃತ್ಯ ಮುನಯೋ ಬ್ರೂಯುಸ್ತನ್ಮತಂ ನ ವಿರುಧ್ಯತೇ"—ಸರ್ವಜ್ಞರಾದ ಕೃಷ್ಣದ್ವೈಪಾಯನರ ಉಪದೇಶದ ಒಂದು ಭಾಗವನ್ನು ತೆಗೆದುಕೊಂಡು ಇತರ ಮುನಿಗಳು ಹೇಳುತ್ತಾರೆ; ಆ ಗುರುಶಿಷ್ಯರಲ್ಲಿ ವಿರೋಧವೇನೂ ಇಲ್ಲ—ಎಂದು ಹೇಳಲಾಗಿದೆ. ಇಲ್ಲಿಗೆ ದೇವತಾಧಿಕರಣ ಮುಗಿಯಿತು.]

ಓಂ ಶುಗಸ್ಯ ತದನಾದರಶ್ರವಣಾತ್, ತದಾದ್ರವಣಾತ್ ಸೂಚ್ಯತೇ ಹಿ ಓಂ 34

ತನ್ನ ವಿಷಯದಲ್ಲಿ ಅನಾದರ ತೋರಿದುದರಿಂದ ಅವನಿಗೆ (ಜಾನಶ್ರುತಿಗೆ) ಶೋಕ ಹುಟ್ಟಿತು; ಅದು 'ಶೋಕವನ್ನು ಹೊಂದಿದನು' ಎಂದು ಹೇಳಿರುವುದರಿಂದ ಸೂಚಿತವಾಗಿದೆ.

[ಮನುಷ್ಯರಿಗಿರುವಂತೆಯೇ ವೇದವಿದ್ಯೆಯಲ್ಲಿ ದೇವತೆಗಳಿಗೂ ಅಧಿಕಾರವಿದೆಯೆಂದು ಹಿಂದೆ ಹೇಳಿಯಾಯಿತು. ಈ ಅಧಿಕರಣದಲ್ಲಿ 'ಶೂದ್ರನಿಗೆ ಅಧಿಕಾರ ಉಂಟೇ ?' ಎಂಬುದನ್ನು ಚರ್ಚಿಸಲಾಗಿದೆ. ಶೂದ್ರ ಯಜ್ಞಕ್ಕೆ ಅರ್ಹನಲ್ಲ—ತಸ್ಮಾಚ್ಛೂದ್ರೋ ಯಜ್ಞೇಽನವಕ್ಲೃಪ್ತಃ—ಎಂದು ತೈತ್ತಿರೀಯ ಸಂಹಿತೆ ತಿಳಿಸುವ ಹಾಗೆ, 'ಶೂದ್ರ ವಿದ್ಯೆಗೆ ಅರ್ಹನಲ್ಲ', ಎಂಬ ನಿಷೇಧವಿಲ್ಲ. ಅವನು ಬೆಂಕಿಯನ್ನು ಅಖಂಡವಾಗಿ ಇಡಲಾಗದುದರಿಂದ ಯಜ್ಞ ಮಾಡಲು ಅನರ್ಹ. ಆದರೆ ವಿದ್ಯಾರ್ಜನೆಗೆ ಅಧಿಕಾರವಿರಲು ಅಡ್ಡಿಯಿಲ್ಲ. ವಿದ್ಯಾರ್ಜನೆಗೆ

ತನ್ನಲ್ಲಿಗೆ ಬಂದ ಜಾನಶ್ರುತಿ ಪೌತ್ರಾಯಣನನ್ನು ಕುರಿತು ರೈಕ್ವನು, "ಶೂದ್ರ, ಈ ಗೋವುಗಳಿಂದ ಕೂಡಿದ ಹಾರವೂ ರಥವೂ ನಿನಗೇ ಇರಲಿ" ಎಂದನು. ಇದರಿಂದ ರೈಕ್ವ ಶೂದ್ರನಿಗೆ ವಿದ್ಯೆ ಹೇಳಿದನೆಂದು ಅರ್ಥವಾಗುತ್ತದೆ. ಇದು ಪೂರ್ವಪಕ್ಷ—ಶೂದ್ರನಿಗೆ ವೇದ ಕಲಿಯುವ ಅಧಿಕಾರವಿದೆ, ಎಂದು ತಿಳಿಸುವ ಅನುಮಾನ. ಆದರೆ ಭಾಷ್ಯಕಾರರು ಶೂದ್ರನಿಗೆ ವೇದಾಧಿಕಾರವಿಲ್ಲವೆನ್ನುತ್ತಾರೆ. ಪೌತ್ರಾಯಣ ಜಾತಿಯಿಂದ ಶೂದ್ರನಲ್ಲ. 'ಶುಚೋ ದ್ರಾವಣಾತ್ ಶೂದ್ರಃ'—ಶೋಕ ಹರಿಯುವುದರಿಂದ ಶೂದ್ರ—ಎಂಬ ಅರ್ಥದಿಂದ ಶೋಕತಪ್ತನಾದ ಪೌತ್ರಾಯಣನನ್ನು ಶೂದ್ರನೆಂದು ಕರೆದಿದ್ದಾನೆ, ಅಷ್ಟೆ. ಆದುದರಿಂದ ಜಾತಿಯಿಂದ ಶೂದ್ರನಾದವನಿಗೆ ವೇದವನ್ನು ಕಲಿಯುವ ಅಧಿಕಾರವಿಲ್ಲ, ಎಂದು ಸಿದ್ಧಾಂತ.]

ಓಂ ಕ್ಷತ್ರಿಯತ್ವಾವಗತೇಶ್ಚ, ಉತ್ತರತ್ರ ಚೈತ್ರರಥೇನ ಲಿಂಗಾತ್ ಓಂ 35

ಮುಂದೆ ಚೈತ್ರರಥವೆಂಬ ಲಿಂಗದಿಂದ ಅವನ ಕ್ಷತ್ರಿಯತ್ವ ತಿಳಿದುಬರುವುದರಿಂದಲೂ.

["ಇದು ಅಶ್ವತರೀರಥ" ಎಂದು ಜಾನಶ್ರುತಿ ರೈಕ್ವನಿಗೆ ಹೇಳುತ್ತಾನೆ. ಅಶ್ವತರೀ ಎಂದರೆ ಹೇಸರಕತ್ತೆ. ಅದನ್ನು ಕಟ್ಟಿರುವ ರಥ ಚಿತ್ರರಥ, ಎಂದು ಬ್ರಹ್ಮಪುರಾಣದಲ್ಲಿ ಹೇಳಿದೆ. ಹಾಗೆ ಚಿತ್ರರಥದಲ್ಲಿ ಕುಳಿತಿರುವವ ಕ್ಷತ್ರಿಯನೇ, ಶೂದ್ರನಲ್ಲ. ಆದುದರಿಂದ ರೈಕ್ವನು ಕ್ಷತ್ರಿಯನಾದ ಪೌತ್ರಾಯಣನಿಗೇ ಬ್ರಹ್ಮವಿದ್ಯೆಯನ್ನು ಕಲಿಸಬೇಕಾಗಿತ್ತು. ಈ ಸಂದರ್ಭದಿಂದ ಪೌತ್ರಾಯಣ ಶೂದ್ರನಲ್ಲ, ಹಾಗೂ ಶೂದ್ರನಿಗೆ ವೇದಾಧಿಕಾರವಿಲ್ಲ, ಎಂಬ ವಿಷಯ ಗೊತ್ತಾಗುವುದು.

"ಸಂಸರ್ಗ ವಿದ್ಯೆಯ ಮೊದಲನೆಯ ಖಂಡ ಜಾನಶ್ರುತಿ ಬಹುದೊಡ್ಡ ದಾನಿ, ಎಂದು ತಿಳಿಸುತ್ತದೆ; ಅನಂತರ ಕ್ಷತ್ತೃವನ್ನು ಕೆಲಸದ ಮೇಲೆ ಕಳುಹಿಸಿದನೆಂದು ಹೇಳುತ್ತದೆ. ಕೊನೆಯಲ್ಲಿ ರೈಕ್ವನಿಗೆ ಅನೇಕ ಗ್ರಾಮಗಳನ್ನು ದಾನ ಮಾಡಿದನೆಂದೂ ಹೇಳಿದೆ. ಇವೆಲ್ಲ ಜಾನಶ್ರುತಿ ಪೌತ್ರಾಯಣ ಕ್ಷತ್ರಿಯನೆಂದೇ ತಿಳಿಸುತ್ತವೆ" ಎಂದು ರಾಮಾನುಜಾಚಾರ್ಯರ ಶ್ರೀಭಾಷ್ಯದಲ್ಲಿ ಹೇಳಲ್ಪಟ್ಟಿದೆ.]

ಓಂ ಸಂಸ್ಕಾರಪರಾಮರ್ಶಾತ್, ತದಭಾವಾಭಿಲಾಪಾಚ್ಚ ಓಂ 36

ದ್ವಿಜರಿಗಾಗಿ ಹೇಳಲ್ಪಟ್ಟಿರುವ ಸಂಸ್ಕಾರಗಳನ್ನು ಪರಿಶೀಲಿಸುವುದರಿಂದಲೂ, ನಾಲ್ಕನೆಯ ವರ್ಣದವರಿಗೆ ಅವು ಇಲ್ಲವೆಂದು ಹೇಳಿರುವುದರಿಂದಲೂ.

["ಅಷ್ಟವರ್ಷಂ ಬ್ರಾಹ್ಮಣಮುಪನಯೀತ, ತಮಧ್ಯಾಪಯೀತ"—ಎಂಟು ವರ್ಷದ ಬ್ರಾಹ್ಮಣಕುಮಾರನಿಗೆ 'ಉಪನಯನ' ಮಾಡಿ, ವೇದಾಭ್ಯಾಸ ಮಾಡಿಸಬೇಕು—ಎಂದು ಸ್ಮೃತಿಗಳಲ್ಲಿ ಹೇಳಿದೆ. "ನಾಗ್ನಿರ್ನ ಯಜ್ಞೋ ನ ಸಂಸ್ಕಾರೋ ನ ವ್ರತಾನಿ ಶೂದ್ರಸ್ಯ"—ಶೂದ್ರನಿಗೆ ಅಗ್ನಿಕಾರ್ಯ, ಯಜ್ಞ, ನಾನಾ ಸಂಸ್ಕಾರಗಳು ಮತ್ತು ವ್ರತಗಳು ಇಲ್ಲ—ಎಂದು ಪೈಂಗಿ ಶ್ರುತಿ ತಿಳಿಸುವುದು. ಹೀಗೆ ಬ್ರಾಹ್ಮಣನಿಗೆ—ಮತ್ತು ಕ್ಷತ್ರಿಯ, ವೈಶ್ಯರಿಗೆ—ಸಂಸ್ಕಾರಗಳನ್ನು ಹೇಳಿ, ಶೂದ್ರನಿಗೆ ಅವಿಲ್ಲ, ಎಂದು ಸ್ಪಷ್ಟವಾಗಿ ಹೇಳಿರುವುದರಿಂದ ಶೂದ್ರನಿಗೆ ವೇದಾಧಿಕಾರವಿಲ್ಲ. ಸ್ತ್ರೀಯರಿಗೂ ಶೂದ್ರರಂತೆಯೇ ವೇದಾಧಿಕಾರವಿಲ್ಲ, ಎಂಬುದು ಸಾಮಾನ್ಯನಿಯಮ. ಆದರೆ ಪೂರ್ಣಪ್ರಜ್ಞರು 'ಉತ್ತಮ ಸ್ತ್ರೀಯರು ಶೂದ್ರರಂತಲ್ಲ' ಎಂದು ಹೇಳಿ ಶಚೀ, ಯಮೀ, ಊರ್ವಶೀ ಮೊದಲಾದ ಶ್ರೇಷ್ಠ ಸ್ತ್ರೀಯರಿಗೆ ವೇದಾಧಿಕಾರ ಉಂಟೆಂದು ಹೇಳಿದ್ದಾರೆ. ಸ್ತ್ರೀಯರಿಗೆ ಕನ್ಯಾದಾನ ಉಪನಯನಕ್ಕೆ ಸಮಾನವಾದ ಕರ್ಮ, ಎಂದು ವ್ಯಾಸವಾಕ್ಯವೂ ಇದೆ.]

ಓಂ ತದಭಾವನಿರ್ಧಾರಣೇ ಚ ಪ್ರವೃತ್ತೇಃ ಓಂ 37

ಶೂದ್ರತ್ವಾಭಾವವನ್ನು ನಿಶ್ಚಯಿಸಿದ ಮೇಲೆಯೇ ಉಪದೇಶ ಪ್ರವೃತ್ತಿಯಾಗುವುದರಿಂದಲೂ.

[ಜಾಬಾಲನು ಗೌತಮನಲ್ಲಿಗೆ ಉಪದೇಶಕ್ಕಾಗಿ ಬಂದನು. ಅವನದು ಯಾವ ಗೋತ್ರ, ಅವನ ತಂದೆ ಯಾರು, ತಾಯಿ ಯಾರು, ಎಂದು ಗೌತಮ ವಿಚಾರಿಸಿದನು, ತಾಯಿಯ ಬಳಿಗೆ ಹೋಗಿ ಬಂದ ಹುಡುಗ ತನ್ನ ತಾಯಿಗೆ ಏನೂ ಗೊತ್ತಿಲ್ಲವೆಂದು ನುಡಿದಾಗ, ಋಷಿ "ಮಗೂ, ನೀನು ಸತ್ಯಕಾಮನೇ ಆಗಿದ್ದೀ; ಆದುದರಿಂದ ಬ್ರಾಹ್ಮಣನೇ ಆಗಿರಬೇಕು. ಬ್ರಾಹ್ಮಣನಲ್ಲದವನು

ಇದನ್ನು ವಿವರಿಸಿ ಹೇಳಲಾರ. ಸಮಿತ್ತನ್ನು ತೆಗೆದುಕೊಂಡು ಬಾ, ನಿನಗೆ ಉಪನಯನ ಮಾಡಿಸುವೆ" ಎಂದು ಹೇಳಿದನು. ಹೀಗೆ ಸತ್ಯವನ್ನು ಬಿಡದೆಯೇ ನಡೆದುಕೊಂಡುದುದರಿಂದ ಅವನು ಶೂದ್ರನಲ್ಲ, ಎಂದು ನಿಶ್ಚಯಿಸಿ, ಆಮೇಲೆಯೇ ಜಾಬಾಲನಿಗೆ ಗೌತಮ ಉಪದೇಶ ಮಾಡಿದನು. ಇದರಿಂದಲೂ ಶೂದ್ರನಿಗೆ ಅಧಿಕಾರವಿಲ್ಲವೆಂದು ಗೊತ್ತಾಗುವುದು.]

ಓಂ ಶ್ರವಣಾಧ್ಯಯನಾರ್ಥಪ್ರತಿಷೇಧಾತ್, ಸ್ಮೃತೇಶ್ಚ ಓಂ 38

ವೇದಮಂತ್ರಗಳನ್ನು ಕೇಳುವುದನ್ನೂ ಕಲಿಯುವುದನ್ನೂ ನಿಷೇಧಿಸಿರು ವುದರಿಂದಲೂ, ಹಾಗೆ ಸ್ಮೃತಿಗಳು ತಿಳಿಸುವುದರಿಂದಲೂ.

[ಶ್ರವಣ, ಅಧ್ಯಯನಗಳನ್ನು ಮಾಡುವ ಶೂದ್ರನಿಗೆ ಸ್ಮೃತಿಗಳು ಶಿಕ್ಷೆ ಯನ್ನು ವಿಧಿಸಿವೆ. ಇವುಗಳ ನಿಷೇಧದಿಂದಲೇ ಜ್ಞಾನ ಮತ್ತು ಅನುಷ್ಠಾನ ಗಳನ್ನು ತಡೆದಂತಾಯಿತು. ಹಿಂದೆ ಮಾಡಿದ ಕರ್ಮ ಮತ್ತು ಸಂಸ್ಕಾರಗಳ ಫಲವಾಗಿ ಈ ಜನ್ಮದಲ್ಲಿ ಜ್ಞಾನವನ್ನು ಪಡೆದ ವಿದುರ, ಧರ್ಮವ್ಯಾಧ ಮೊದಲಾದವರಿಗೆ ಫಲ ಇದ್ದೇ ಇರುವುದು. ವೇದಪೂರ್ವಕವಾಗಿ ಮಾತ್ರ — ಕ್ರಮವನ್ನು ಅನುಸರಿಸಿ ಸ್ವರಪೂರ್ವಕವಾದ ವೇದಮಂತ್ರಗಳನ್ನು ಉಚ್ಚರಿ ಸುತ್ತಾ—ಅಧ್ಯಯನ ಮಾಡುವುದನ್ನು ಇಲ್ಲಿ ನಿಷೇಧಿಸಲಾಗಿದೆ. ವೇದಗಳಲ್ಲಿ ಪ್ರತಿಪಾದ್ಯವಾದ ವಿಷಯಗಳನ್ನೇ ಉದಾಹರಣಪೂರ್ವಕವಾಗಿ ವಿವರಿಸಿರುವ ಮಹಾಭಾರತಾದಿ ಗ್ರಂಥಗಳ ಶ್ಲೋಕಗಳನ್ನು ಕೇಳಲು ಹಾಗೂ ಅರ್ಥಮಾಡಿ ಕೊಳ್ಳಲು ಸ್ತ್ರೀಯರು, ಶೂದ್ರರು, ಬ್ರಹ್ಮಬಂಧುಗಳು ಇವರಿಗೆಲ್ಲ ಅಧಿಕಾರ ವಿದೆ. ಇದು ಅಪಶೂದ್ರಾಧಿಕರಣ.]

ಓಂ ಕಂಪನಾತ್ ಓಂ 39

(ಜಗತ್ತು) ಕಂಪಿಸುವುದರಿಂದ (ಪ್ರಾಣ ಬ್ರಹ್ಮನೇ).

["ಯದಿದಂ ಕಿಂ ಚ ಜಗತ್ಸರ್ವಂ ಪ್ರಾಣ ಏಜತಿ ನಿಃಸೃತಮ್ । ಮಹದ್ಭಯಂ ವಜ್ರಮುದ್ಯತಂ ಯ ಏತದ್ವಿದುರಮೃತಾಸ್ತೇ ಭವಂತಿ"— ಪ್ರಾಣದಲ್ಲಿದ್ದು ಹೊರಕ್ಕೆ ಬಂದಿರುವ ಈ ಜಗತ್ತೆಲ್ಲ ಎತ್ತಿದ ವಜ್ರಾಯುಧ ದಿಂದ ಹುಟ್ಟಿದ ಮಹಾಭಯದಿಂದ ನಡುಗುತ್ತದೆ—ಎಂದು ಕಠಶ್ರುತಿಯಲ್ಲಿ ಹೇಳಿದೆ. ವಜ್ರವನ್ನು ತಿಳಿದರೆ ಮೋಕ್ಷಪ್ರಾಪ್ತಿಯಾಗುವುದೆಂದು ಹೇಳಿದೆ.

ಜಗತ್ತನ್ನು ನಡುಗಿಸುವ ಆ ವಜ್ರ ಬ್ರಹ್ಮನೇ. ಹೀಗೆಯೇ ಪ್ರಾಣ, ಖಡ್ಗ, ಚಕ್ರ ಮೊದಲಾದುವೆಲ್ಲ ವಿಷ್ಣುವಿನ ಹೆಸರುಗಳೇ, ಎಂದು ಬ್ರಹ್ಮವೈವರ್ತದಲ್ಲಿ ಹೇಳಿದೆ.]

ಓಂ ಜ್ಯೋತಿಃ, ದರ್ಶನಾತ್ ಓಂ 40

ಜ್ಯೋತಿ ಎಂದರೆ ಬ್ರಹ್ಮನೇ; ಶ್ರುತಿಗಳಲ್ಲಿ ಹಾಗೆ ಕಂಡುಬಂದಿರುವುದರಿಂದ.

[ಹೃದಯದಲ್ಲಿನ ಜ್ಯೋತಿ ಪರಮಾತ್ಮನೇ, ಎಂದು ಹಿಂದೆ ತಿಳಿಸಲಾಗಿದೆ. ವಿಜ್ಞಾನಮಯನಾಗಿ ಇಂದ್ರಿಯಗಳ ನಡುವೆ ಇರುವ ಜ್ಯೋತಿಯಾದ ಪುರುಷ ಎರಡು ಲೋಕಗಳಲ್ಲಿಯೂ ಸಂಚರಿಸುವನು, ಎಂಬ ಬೃಹದಾರಣ್ಯಕ ವಾಕ್ಯದಿಂದ ಜ್ಯೋತಿ ಎಂದರೆ ಜೀವನಿರಬಹುದೋ, ಎಂಬ ಸಂಶಯ ಬರುತ್ತದೆ. "ಅಲ್ಲ, ಜ್ಯೋತಿಯೆಂದರೆ ಬ್ರಹ್ಮನೇ" ಎಂದು ಈ ಸೂತ್ರ ಹೇಳುತ್ತದೆ. 'ವಿಷ್ಣುರೇವ ಜ್ಯೋತಿಃ'—ವಿಷ್ಣುವೇ ಜ್ಯೋತಿ—ಎಂದು ಚತುರ್ವೇದ ಶಿಖೆಯಲ್ಲಿ ಹೇಳಿದೆ.]

ಓಂ ಆಕಾಶಃ, ಅರ್ಥಾಂತರತ್ವಾದಿ-ವ್ಯಪದೇಶಾತ್ ಓಂ 41

ಆಕಾಶ, ಎಂದರೆ ಬ್ರಹ್ಮನೇ, ಬೇರೆ ಅರ್ಥ ಇರುವುದು ಮೊದಲಾದುವನ್ನು ಹೇಳಿರುವುದರಿಂದ.

[ಛಾಂದೋಗ್ಯದಲ್ಲಿ "ಆಕಾಶೋ ವೈ ನಾಮ ನಾಮರೂಪಯೋ-ರ್ನಿರ್ವಹಿತಾ ತೇ ಯದಂತರಾ, ತದ್ಬ್ರಹ್ಮ"—ಆಕಾಶವೆಂದು ಪ್ರಸಿದ್ಧವಾದುದು ನಾಮರೂಪಗಳನ್ನು ತೋರಿಸುವುದು. ಅವು ಯಾವುದರಲ್ಲಿ ಇವೆಯೋ ಅದು ಬ್ರಹ್ಮ—ಎಂದು ಹೇಳಲ್ಪಟ್ಟಿದೆ. ಆ 'ಆಕಾಶ' ಭೂತಾಕಾಶವನ್ನು ಸೂಚಿಸುವುದೋ ಪರಬ್ರಹ್ಮನನ್ನೋ, ಎಂಬುದು ವಿಶಯ. ಈ ಸಂಶಯವನ್ನು ಸೂತ್ರ ನಿವಾರಿಸುತ್ತದೆ. 'ತೇ ಯದಂತರಾ' ಎಂದು ಹೇಳಿರುವುದರಿಂದ, ನಾಮರೂಪಗಳಿಂದ ಬೇರೆಯಾಗಿದ್ದು ಅವನ್ನು ಪಡೆಯದೆ ಇರುವವನು ವಿಷ್ಣುವೇ. ಅನಾಮಾ, ಅವರ್ಣ, ಅರೂಪ ಎಂದು ಬ್ರಹ್ಮನಿಗೆ ಹೇಳಲಾಗಿದೆ.)

ಓಂ ಸುಷುಪ್ತ್ಯುತ್ಕ್ರಾಂತ್ಯೋರ್ಭೇದೇನ ಓಂ 42

ಸುಷುಪ್ತಿ ಮತ್ತು ಉತ್ಕ್ರಾಂತಿ ಎಂಬ ಎರಡು ಅವಸ್ಥೆಗಳಲ್ಲಿಯೂ ಭೇದ ವಿರುವುದರಿಂದ.

["ಕತಮ ಆತ್ಮಾ"—ಆತ್ಮಾ ಯಾರು,—ಎಂಬ ಪ್ರಶ್ನೆಗೆ ಬೃಹದಾರಣ್ಯಕ ದಲ್ಲಿ "ಯೋಽಯಂ ವಿಜ್ಞಾನಮಯಃ ಪ್ರಾಣೇಷು ಹೃದ್ಯಂತರ್ಜ್ಯೋತಿಃ ಪುರುಷಃ"—ಇಂದ್ರಿಯಗಳ ನಡುವೆ ಇರುವವನೂ ಹೃದಯದಲ್ಲಿರುವ ಸ್ವಯಂಜ್ಯೋತಿಯೂ ವಿಜ್ಞಾನಮಯನೂ ಆದ ಈ ಪುರುಷ—ಎಂದು ಉತ್ತರ ಹೇಳಲಾಗಿದೆ. ಇದು ಅಸಂಗನಾದ ಪರಮಾತ್ಮನನ್ನು ಕುರಿತುದುದೋ ಸಂಗವುಳ್ಳ ಜೀವನನ್ನು ಕುರಿತುದುದೋ? ಪರಮಾತ್ಮನೇ ಎಂದು ಸೂತ್ರ ಹೇಳುತ್ತದೆ. "ಪ್ರಾಜ್ಞೇನಾತ್ಮನಾ ಸಂಪರಿಷ್ವಕ್ತೋ ನ ಬಾಹ್ಯಂ ಕಿಂಚನ ವೇದ ನಾಂತರಂ"—ಸುಷುಪ್ತ್ಯವಸ್ಥೆಯಲ್ಲಿ (ಸ್ವಪ್ನವಿಲ್ಲದ ಸುಖನಿದ್ರೆಯಲ್ಲಿ) ಪ್ರಾಜ್ಞನಾಮಕ ಪರಮಾತ್ಮನಿಂದ ಆಲಿಂಗಿತನಾದ ಜೀವ ಹೊರಗಿನದಾಗಲಿ, ಒಳಗಿನದಾಗಲಿ ಯಾವುದನ್ನೂ ತಿಳಿಯುವುದಿಲ್ಲ—ಎಂದು ಬೃಹದಾರಣ್ಯಕದಲ್ಲಿ ಜೀವಬ್ರಹ್ಮರಿಗೆ ಭೇದವನ್ನು ಹೇಳಲಾಗಿದೆ. ಸ್ವಪ್ನಾದಿಗಳನ್ನು ನೋಡುವುದು ಈಶ್ವರನೇ, "ಅಯಂ ಶಾರೀರ ಆತ್ಮಾ ಪ್ರಾಜ್ಞೇನಾಽತ್ಮನಾಽನ್ವಾರೂಢ ಉತ್ಸರ್ಜನ್ಯಾತಿ" ಎಂಬ ಆ ಶ್ರುತಿಯ ವಾಕ್ಯದಲ್ಲಿ ಈ ಜೀವ "ಪ್ರಾಜ್ಞನಿಂದ ಅಧಿಷ್ಠಿತನಾಗಿ ಸಂಕಟಪಡುತ್ತಾ ಹೋಗುತ್ತಾನೆ' ಎಂದು ಭೇದವನ್ನು ಹೇಳಿದೆ.]

ಓಂ ಪತ್ಯಾದಿಶಬ್ದೇಭ್ಯಃ ಓಂ 43

ಪತಿ ಮೊದಲಾದ ಶಬ್ದಗಳಿಂದ.

["ಏಷ ನಿತ್ಯೋ ಮಹಿಮಾ ಬ್ರಾಹ್ಮಣಸ್ಯ"—ಇದು ಬ್ರಾಹ್ಮಣನ ನಿತ್ಯವಾದ ಮಹಿಮೆ (ಬೃ.ಆ)—ಎಂಬಲ್ಲಿ ಬ್ರಾಹ್ಮಣ ಎನ್ನುವುದು ಚತುರ್ಮುಖ ಬ್ರಹ್ಮನನ್ನು ಸೂಚಿಸುವುದಿಲ್ಲ, ಅದು ವಿಷ್ಣುವನ್ನೇ ಸೂಚಿಸುವುದು. "ಸರ್ವಸ್ಯೇಶಾನಃ ಸರ್ವಸ್ಯಾಧಿಪತಿಃ" ಎಂದು ಆ ಶ್ರುತಿಯಲ್ಲಿನ ಶಬ್ದಗಳಿಂದ ಶಾಶ್ವತ ಮಹಿಮೆ ಪಡೆದವನು ವಿಷ್ಣುವೇ, ಎಂದು ಗೊತ್ತಾಗುವುದು. 'ಅಮೃತತ್ವಸ್ಯೇಶಾನಃ' ಎಂದರೆ ಮುಕ್ತರಿಗೂ ಒಡೆಯ, ವಿಷ್ಣುವೇ.

ಇಲ್ಲಿಗೆ ಬ್ರಹ್ಮಸೂತ್ರಗಳ ಮೊದಲನೆಯ ಅಧ್ಯಾಯದ ಮೂರನೆಯ ಪಾದ ಮುಗಿಯಿತು.

ನಾಲ್ಕನೆಯ ಪಾದ

ವಿಶೇಷಕಾರಣಗಳನ್ನು ತೋರಿಸಿ ಎಲ್ಲ ಶಬ್ದಗಳನ್ನೂ ವಿಷ್ಣುವಿಗೆ ಅನ್ವಯುವಾಗುವಂತೆ ಈ ಪಾದದಲ್ಲಿ ತೋರಿಸಲಾಗಿದೆ.

ಓಂ ಆನುಮಾನಿಕಮಪ್ಯೇಕೇಷಾಮಿತಿ ಚೇನ್ನ, ಶರೀರರೂಪಕವಿನ್ಯಸ್ತಗೃಹೀತೇಃ, ದರ್ಶಯತಿ ಚ ಓಂ 1

ಕೆಲವರ ಶಾಖೆಗಳಲ್ಲಿ ಅವ್ಯಕ್ತ, ಬುದ್ಧಿ, ಜೀವಾದಿಶಬ್ದಗಳು ಆನುಮಾನಿಕವಾದ ಪ್ರಧಾನವನ್ನೇ ಸೂಚಿಸುವುವು, ಎನ್ನಲಾಗದು; ಶರೀರದಂತಿರುವ ಪ್ರಧಾನಾದಿಗಳಲ್ಲಿ ಪರಬ್ರಹ್ಮನೇ ನಿಯಾಮಕನಾಗಿರುವುದರಿಂದ ಅವುಗಳಲ್ಲಿ ಅವ್ಯಕ್ತಾದಿ ಶಬ್ದಗಳು ಪ್ರಯುಕ್ತವಾಗಿವೆ. ಶ್ರುತಿಗಳೂ ಇದನ್ನೇ ತಿಳಿಸುವುವು.

["ತತ್ತು ಸಮನ್ವಯಾತ್" ಎಂಬ ಸೂತ್ರ 'ಸರ್ವಶಬ್ದಗಳೂ ಪರಮಾತ್ಮನಲ್ಲಿ ಸಮನ್ವಯ ಹೊಂದುತ್ತವೆ" ಎಂದು ತಿಳಿಸುತ್ತದೆ ."ಅವ್ಯಕ್ತಾತ್ಪುರುಷಃ ಪರಃ"—ಅವ್ಯಕ್ತಕ್ಕಿಂತ ಪುರುಷ ಶ್ರೇಷ್ಠ—ಎಂಬ ಕಠಶ್ರುತಿಯಿಂದ ಸಾಂಖ್ಯರು ಪ್ರಧಾನವನ್ನು ಅವ್ಯಕ್ತವೆನ್ನುತ್ತಾರೆ, ಎಂದರೆ ಹಾಗಲ್ಲವೆನ್ನುತ್ತದೆ, ಸೂತ್ರ. ಆನುಮಾನಿಕ ಎಂಬಲ್ಲಿನ 'ಕ'ಪ್ರತ್ಯಯ ತುಚ್ಛ ಎಂಬರ್ಥವನ್ನು ಸೂಚಿಸುತ್ತದೆ. ಪರಮಾತ್ಮನ ಅಧೀನದಲ್ಲಿಯೇ ಅಸ್ವತಂತ್ರವಾಗಿದ್ದು ಪ್ರಧಾನ ಅವನಂತೆಯೇ ರೂಪ ಪಡೆದಿರುತ್ತದೆ. "ತುಚ್ಛೇನಾಭ್ಯಪಿಹಿತಂ ಯದಾಽಸೀತ್"—ಅಲ್ಪವಾದ ಪ್ರಧಾನದಿಂದ ಬ್ರಹ್ಮ ಯಾವಾಗ ಮುಚ್ಚಲ್ಪಟ್ಟಿತ್ತೋ—ಎಂದು ಋಗ್ವೇದದಲ್ಲಿ ಹೇಳಿದೆ. "ಅಕ್ಷರಂ ಪರಮಂ ಬ್ರಹ್ಮ"—ಅಕ್ಷರ ಪರಬ್ರಹ್ಮ—"ಅವ್ಯಕ್ತೋಽಕ್ಷರ ಉಚ್ಯತೇ"—ಅವ್ಯಕ್ತನನ್ನು ಅಕ್ಷರನೆನ್ನುತ್ತಾರೆ—ಎಂಬ ಗೀತಾವಾಕ್ಯಗಳೂ ಇವೆ. ಆದುದರಿಂದ ಅವ್ಯಕ್ತಾದಿ ಶಬ್ದಗಳೆಲ್ಲ ಬ್ರಹ್ಮಪರವಾದುವು.]

ಓಂ ಸೂಕ್ಷ್ಮಂ ತು, ತದರ್ಹತ್ವಾತ್ ಓಂ 2

ಸೂಕ್ಷ್ಮ ವಸ್ತುವನ್ನೇ ಅವ್ಯಕ್ತಶಬ್ದ ಸೂಚಿಸುವುದು, ಅದೇ ಅವ್ಯಕ್ತತೆಗೆ ಅರ್ಹವಾದುದು.

[ಸೂಕ್ಷ್ಮವಾದ ಪರಮಾಣು, ಆಕಾಶಗಳನ್ನು ಅವ್ಯಕ್ತವೆನ್ನುತ್ತಾರೆ. ಅಂತಹ ಸೂಕ್ಷ್ಮತ್ವ ಮುಖ್ಯವಾಗಿ ಬ್ರಹ್ಮನಿಗೇ ಸಲ್ಲುವುದು. ಮುಖ್ಯವಾದ ಪದಾರ್ಥ ಇರುವಾಗ ಅಮುಖ್ಯವಾದುದನ್ನು ಗ್ರಹಿಸಬಾರದು. "ಯತ್ತತ್ ಸೂಕ್ಷ್ಮಂ ಪರಮಂ ವೇದಿತವ್ಯಂ"—ಯಾವುದು ಅತ್ಯಂತ ಸೂಕ್ಷ್ಮವೋ ಅದನ್ನು ಪರಮವೆಂದು ತಿಳಿಯಬೇಕು—ಎನ್ನುವ ಪಿಪ್ಪಲಾದ ಶಾಖೆ ಪರಮಾತ್ಮನೇ ಅತಿಸೂಕ್ಷ್ಮ, ಎಂದು ತಿಳಿಸುವುದು. ಅಣೋರಣೀಯ ಎಂದೂ ಬ್ರಹ್ಮನಿಗೆ ವಿಶೇಷಣವಿದೆ. ಆದುದರಿಂದ ಅವನೇ ಅವ್ಯಕ್ತಶಬ್ದವಾಚ್ಯ.]

ಓಂ ತದಧೀನತ್ವಾದರ್ಥವತ್ ಓಂ 3

ಅವ್ಯಕ್ತ ಬ್ರಹ್ಮನ ಅಧೀನದಲ್ಲಿರುವುದರಿಂದಲೇ ಅದು ಅರ್ಥವತ್ತಾಗುವುದು.

[ಗುಣಗಳು ಯಾವನ ಅಧೀನವೋ, ಆ ಗುಣೀ—ಗುಣವುಳ್ಳವ—ಹಾಗೆಯೇ ಕರೆಯಲ್ಪಡುತ್ತಾನಷ್ಟೆ. ರಾಜನನ್ನು 'ಜಯೀ' ಎನ್ನುತ್ತಾರೆ, ಏಕೆಂದರೆ ಜಯ ಅವನ ಅಧೀನವಾದುದು; ಹೀಗೆಯೇ ಪರಮಾತ್ಮಾ 'ಜೀವ' ಎನ್ನುವುದೂ ಕೂಡ; ಏಕೆಂದರೆ ಪ್ರಾಣಧಾರಣರೂಪವಾದ ಜೀವಗುಣ ಪರಮಾತ್ಮನ ಅಧೀನವಾದುದು. ಇದನ್ನು ಸ್ಕಾಂದಪುರಾಣದಲ್ಲಿ ಹೇಳಿದೆ. ಅವ್ಯಕ್ತತ್ವ, ಪರಾವರತ್ವಾದಿ ಗುಣಗಳೆಲ್ಲ ಪರಮಾತ್ಮನ ಅಧೀನದಲ್ಲಿಯೇ ಇರುವುದರಿಂದ ಅವನೇ ಮುಖ್ಯವಾಗಿ ಅವ್ಯಕ್ತ, ಪರಾವರ, ಇತ್ಯಾದಿ.]

ಓಂ ಜ್ಞೇಯತ್ವಾವಚನಾಚ್ಚ ಓಂ 4

ಅವ್ಯಕ್ತ 'ಜ್ಞೇಯ' ಎಂದು ಹೇಳದಿರುವುದರಿಂದಲೂ.

[ಪ್ರಧಾನ ಜ್ಞೇಯವೆಂದು ಸಾಂಖ್ಯರು ಹೇಳುತ್ತಾರೆ. ಆದರೆ ವಿಷಯವಾಕ್ಯದಲ್ಲಿ ಅವ್ಯಕ್ತವನ್ನು ಅರಿತುಕೊಳ್ಳಬೇಕು, ಉಪಾಸಿಸಬೇಕು, ಎಂದು ಹೇಳಿಲ್ಲ. ಪರಬ್ರಹ್ಮನೇ ಜ್ಞೇಯ, ಇತರ ಪದಾರ್ಥಗಳಿಗೆ ವಾಚ್ಯತ್ವವಿಲ್ಲ; ಅವ್ಯಕ್ತಾದಿ ಶಬ್ದಗಳಿಂದ ವಾಚ್ಯನಾದವನು ಪರಬ್ರಹ್ಮನೇ ಅಲ್ಲದೆ ಪ್ರಧಾನಾದಿಗಳಲ್ಲ.]

ಓಂ ವದತೀತಿ ಚೇನ್ನ, ಪ್ರಾಜ್ಞೋ ಹಿ ಓಂ 5

ಶ್ರುತಿ ಹೇಳುತ್ತದೆ, ಎನ್ನುವುದು ಸರಿಯಲ್ಲ, ಪ್ರಕರಣದಿಂದ ಪ್ರಾಜ್ಞನೇ ಜ್ಞೇಯ.

["ಅಶಬ್ದಮಸ್ಪರ್ಶಮರೂಪಮವ್ಯಯಂ ತಥಾऽರಸಂ ನಿತ್ಯಮ-ಗಂಧವಚ್ಚ ಯತ್ । ಅನಾದ್ಯನಂತಂ ಮಹತಃ ಪರಂ ಧ್ರುವಂ ನಿಚಾಯ್ಯ ತನ್ಮೃತ್ಯುಮುಖಾತ್ಪ್ರಮುಚ್ಯತೇ"— ಶಬ್ದ, ಸ್ಪರ್ಶ, ರೂಪ, ರಸ, ಗಂಧ ಗಳೊಂದೂ ಇಲ್ಲದ, ಅವ್ಯಯವೂ ನಿತ್ಯವೂ ಅನಾದ್ಯನಂತವೂ ಆದ, ಬುದ್ಧಿ ಯಿಂದ ಮಹತ್ತತ್ತ್ವಕ್ಕಿಂತ ಹೆಚ್ಚಿನದಾದ ಹಾಗೂ ಶ್ರೇಷ್ಠವಾದ, ಶಾಶ್ವತ ವಾದ ವಸ್ತುವನ್ನು ಧ್ಯಾನ ಮಾಡಿ ಮೃತ್ಯುವಿನ ಬಾಯಿಯಿಂದ ಬಿಡುಗಡೆ ಹೊಂದುತ್ತಾನೆ—ಎಂಬ ಕಠಶ್ರುತಿ ಅವ್ಯಕ್ತಕ್ಕೆ ಜ್ಞೇಯತ್ವವನ್ನು ಹೇಳುವುದು, ಎನ್ನುವುದು ಸರಿಯಲ್ಲ. ಅಲ್ಲಿ ಪ್ರಾಜ್ಞನಾಮಕ ಪರಮಾತ್ಮನೇ ಉಕ್ತನಾಗಿ ದ್ದಾನೆ. ಅಣೋರಣೀಯಾನ್, ಮಹತೋ ಮಹೀಯಾನ್, ಎಂದು ಹೇಳಿರು ವುದರಿಂದ ಅವನೇ ಮಹತ್ತಿಗಿಂತ ದೊಡ್ಡವ. ಎಲ್ಲಕ್ಕಿಂತ ಶ್ರೇಷ್ಠನಾಗಿರುವವ ಮಹತ್ತಿಗಿಂತ ಶ್ರೇಷ್ಠನಾಗಿರುವುದು ಯುಕ್ತವೇ.]

ಓಂ ಪ್ರಕರಣಾತ್ ಓಂ 6

ಪ್ರಕರಣದಿಂದಲೂ.

["ಸೋऽಧ್ವನಃ ಪಾರಮಾಪ್ನೋತಿ ತದ್ವಿಷ್ಣೋಃ ಪರಮಂ ಪದಂ"— ಅವನು ದಾರಿಯ ಕೊನೆಯನ್ನು ಮುಟ್ಟುತ್ತಾನೆ, ಅದು ವಿಷ್ಣುವಿನ ಪರಮ ಪದ—ಎಂಬುದು ಇಲ್ಲಿ ಪ್ರಕರಣ. ಅದು ಪ್ರಾಜ್ಞನಾದ ವಿಷ್ಣುವನ್ನೇ ತಿಳಿಸುವುದು.]

ಓಂ ತ್ರಯಾಣಾಮೇವ ಚೈವಮುಪನ್ಯಾಸಃ ಪ್ರಶ್ನಶ್ಚ ಓಂ 7

ಹೀಗೆ ಮೂರು ಪ್ರಶ್ನೆಗಳನ್ನೇ ಕುರಿತು ಹೇಳಲಾಗಿದೆ, ಹಾಗೂ ಕೇಳಲಾಗಿದೆ.

[ತಂದೆಯ ಸೌಮನಸ್ಯ, ಸ್ವರ್ಗಕ್ಕೆ ಜೀವನನ್ನು ಕರೆದೊಯ್ಯುವ ಅಗ್ನಿ ಮತ್ತು ಪರಮಾತ್ಮಾ ಎಂಬ ಮೂರು ವಿಷಯಗಳನ್ನು ಮಾತ್ರ ಕುರಿತ ನಚಿಕೇತನ ಪ್ರಶ್ನೆಗಳು, ಅವುಗಳಿಗೆ ಉತ್ತರ, ಕಠೋಪನಿಷತ್ತಿನಲ್ಲಿ ಬಂದಿವೆ. ಅಲ್ಲಿ ಪ್ರಧಾನದ ವಿಷಯದಲ್ಲಿ ಚರ್ಚೆಯೇ ಇಲ್ಲ. ತಿಳಿಯದುದರ ವಿಚಾರವಾಗಿ ತಾನೆ ಪ್ರಶ್ನೆ ಕೇಳುವುದು! ನಿಷ್ಫಲವಾಗಿದ್ದ ಹಸುಗಳನ್ನು ದಾನವಾಗಿ ಕೊಡು ತ್ತಿದ್ದ ತಂದೆಯನ್ನು ಆಕ್ಷೇಪಿಸಿ ಅವನಿಂದ ತಿರಸ್ಕೃತನಾದ ನಚಿಕೇತ ಯಮನ ಬಳಿಗೇ ಹೋಗಿ ವಿಚಾರ ಮಾಡಿದನು. ಮೃತ್ಯು ಮುಂತಾದ ವಿಷಯಗಳಲ್ಲಿ

ವಿವರಣೆ ಕೊಡಲೊಪ್ಪದೆ ಮೂರು ವರಗಳನ್ನು ಕೇಳಿಕೊಳ್ಳುವಂತೆ ಯಮನು ಹೇಳಿದನು. ಮೊದಲನೆಯ ವರವಾಗಿ, "ಹಿಂದಿರುಗಿದ ಮೇಲೆ ತನ್ನ ತಂದೆ ಕೋಪಿಸಿಕೊಳ್ಳದಿರಲಿ" (ಶಾಂತಸಂಕಲ್ಪಃ ಸುಮನಾ ಯಥಾ ಸ್ಯಾತ್, ವೀತ-ಮನ್ಯುರ್ಗೌತಮೋ ಮಾಽಭಿಮೃತ್ಯೋ) ಎಂದು ಕೇಳಿಕೊಳ್ಳುತ್ತಾನೆ. "ಸ ತಮಗ್ನಿಂ ಸ್ವರ್ಗಮಧ್ಯೇಽಪಿ ಮೃತ್ಯೋ ಪ್ರಬ್ರೂಹಿ ತ್ವಂ ಶ್ರದ್ಧಧಾನಾಯ ಮಹ್ಯಂ"—ಯಮನೇ, ಸ್ವರ್ಗಕ್ಕೆ ಒಯ್ಯುವ ಅಗ್ನಿಯ ವಿಷಯವನ್ನು ತಿಳಿದಿರುವೆ; ಶ್ರದ್ಧೆಯಿಂದ ಕೇಳುತ್ತಿರುವ ನನಗೆ ಅದನ್ನು ತಿಳಿಸು—ಎಂಬುದೇ ಎರಡನೆಯ ಪ್ರಶ್ನೆ. "ಯೇಯಂ ಪ್ರೇತೇ ವಿಚಿಕಿತ್ಸಾ ಮನುಷ್ಯೇ, ಅಸ್ತೀತ್ಯೇಕೇ ನಾಯಮಸ್ತೀತಿ ಚೈಕೇ । ಏತದ್ವಿದ್ಯಾಮನುಶಿಷ್ಟಸ್ತ್ವಯಾಽಹಂ"—ಮನುಷ್ಯ ಸತ್ತಮೇಲೆ ಒಂದು ಸಂದೇಹ ಬರುತ್ತದೆ; ಅವನು ಇದ್ದಾನೆ, ಎನ್ನುತ್ತಾರೆ, ಕೆಲವರು; ಇಲ್ಲವೆನ್ನುತ್ತಾರೆ, ಇತರರು. ನಿನ್ನಿಂದ ತಿಳಿಸಲ್ಪಟ್ಟು ನಾನು ಇದನ್ನು ಚೆನ್ನಾಗಿ ಖಚಿತವಾಗಿ ಅರಿಯಬೇಕು—ಎಂಬುದು ಮೂರನೆಯ ಪ್ರಶ್ನೆ. ಅಗ್ನಿ, ಜೀವ, ಪರಮಾತ್ಮ ಎಂಬ ಮೂರು ವಿಷಯಗಳಲ್ಲಿ ಚರ್ಚಿಸಲಾಗಿದೆ, ಎಂದು ಶಾಂಕರಭಾಷ್ಯ.]

ಓಂ ಮಹದ್ವಚ್ಚ ಓಂ 8

'ಮಹತ್' ಶಬ್ದದಂತೆಯೇ.

[ಮಹತ್ತತ್ತ್ವ ಸೂಚಕವಾದ ಮಹಚ್ಛಬ್ದ ಮುಖ್ಯವಾಗಿ ಪರಮಾತ್ಮನನ್ನೇ—ಪರಮ ಮಹತ್ತ್ವವಿರುವುದರಿಂದ—ಸೂಚಿಸುವಂತೆ, ಬೇರೆ ಅರ್ಥಗಳಲ್ಲಿ ಪ್ರಸಿದ್ಧವಾಗಿರುವ ಅವ್ಯಕ್ತಾದಿ ಶಬ್ದಗಳೂ ಮುಖ್ಯವಾಗಿ ಪರಮಾತ್ಮನನ್ನೇ ತಿಳಿಸುವುವು.]

ಓಂ ಚಮಸವದವಿಶೇಷಾತ್ ಓಂ 9

ವಿಶೇಷವಿಲ್ಲದಿರುವುದರಿಂದ ಚಮಸಪಾತ್ರೆಯಂತೆಯೇ.

[ಚಮಸವೆಂಬುದು ಯಜ್ಞದಲ್ಲಿಯೇ ಉಪಯೋಗಿಸಲ್ಪಡುವ ಒಂದು ಪಾತ್ರೆಯ ಹೆಸರು. ಬೃಹದಾರಣ್ಯಕ ವಾಕ್ಯ ಹೀಗಿದೆ: "ಇದಂ ತಚ್ಛಿರ ಏಷ ಹ್ಯರ್ವಾಗ್ಬಿಲಶ್ಚಮಸ ಊರ್ಧ್ವಬುಧ್ನಃ"—ಕೆಳಗಡೆ ಬಾಯಿಯುಳ್ಳ, ಮೇಲುಗಡೆ ಉಬ್ಬುಳ್ಳ ಚಮಸ ಈ ನಮ್ಮ ತಲೆ. ಚಮಸ ಶಬ್ದ ತಲೆಯನ್ನು

ಸೂಚಿಸುವುದು. ಹಾಗೆಯೇ ಅವ್ಯಕ್ತಾದಿಶಬ್ದಗಳು ಬೇರೆ ಅರ್ಥದಲ್ಲಿ ಪ್ರಸಿದ್ಧವಾಗಿದ್ದರೂ ಮುಖ್ಯವಾಗಿ ಪರಮಾತ್ಮನಿಗೇ ಅನ್ವಯಿಸುವುವು. ಶ್ರುತಿಯಲ್ಲಿ ಯಾವ ವಿಶೇಷವನ್ನೂ ಹೇಳಿಲ್ಲ.]

ಓಂ ಜ್ಯೋತಿರುಪಕ್ರಮಾತ್ತು, ತಥಾ ಹ್ಯಧೀಯತ ಏಕೇ ಓಂ 10

ಜ್ಯೋತಿಃಶಬ್ದ ಉಪಕ್ರಮದಿಂದ ಬ್ರಹ್ಮನನ್ನೇ ಬೋಧಿಸುವುದು; ಕೆಲವರು ಹಾಗೆಯೇ ಅಧ್ಯಯನ ಮಾಡುತ್ತಾರೆ.

["ವಸಂತೇ ವಸಂತೇ ಜ್ಯೋತಿಷಾ ಯಜೇತ" ಎಂಬ ವಾಕ್ಯದಲ್ಲಿ ಪ್ರತಿ ವಸಂತದಲ್ಲಿಯೂ ಜ್ಯೋತಿಸ್ಸಿನಿಂದ ಯಜ್ಞ ಮಾಡಬೇಕೆಂಬ ಕರ್ಮವಿಧಿ ಕಾಣಬರುತ್ತದೆ. ಜ್ಯೋತಿಃಶಬ್ದ ಕರ್ಮಾರ್ಥದಲ್ಲಿ ಪ್ರಯೋಗಿಸಲ್ಪಟ್ಟಿದ್ದರೂ ಮುಖ್ಯವಾಗಿ ಪರಮಾತ್ಮನೇ ಆ ಶಬ್ದದಿಂದ ವಾಚ್ಯನಾಗುವನು. ಜ್ಯೋತಿಷ್ಟೋಮವೆಂಬ ಯಜ್ಞ ಪ್ರಸಿದ್ಧವಾಗಿದೆ. "ಸರ್ವೇ ವೇದಾಃ ಸರ್ವೇ ಘೋಷಾಃ ಏಕೈವ ವ್ಯಾಹೃತಿಃ ಪ್ರಾಣ ಏವ ಪ್ರಾಣಋಚ ಇತ್ಯೇವ ವಿದ್ಯಾತ್"—ಎಲ್ಲ ವೇದಗಳೂ ಎಲ್ಲ ಶಬ್ದಗಳೂ ಓಂಕಾರವೇ, ಪ್ರಾಣವೇ, ಪ್ರಾಣಋಕ್ಕುಗಳೇ, ಎಂದು ತಿಳಿಯಬೇಕು—ಎನ್ನುವ ಐತರೇಯ ಆರಣ್ಯಕದ ವಾಕ್ಯವನ್ನು ಕೆಲವರು ಅಧ್ಯಯನ ಮಾಡುತ್ತಾರೆ. ಇದರಿಂದ ಎಲ್ಲ ಶಬ್ದಗಳಿಂದಲೂ ಬ್ರಹ್ಮನೇ ಪ್ರತಿಪಾದ್ಯ, ಎಂದು ತಿಳಿಯಬಹುದು.]

ಓಂ ಕಲ್ಪನೋಪದೇಶಾಚ್ಚ ಮಧ್ವಾದಿವದವಿರೋಧಃ ಓಂ 11

ಮಧ್ವಾದಿಗಳಂತೆ ಇದೂ ಪರಮಾತ್ಮನ ಕಲ್ಪನೆಯ ಉಪದೇಶವಾದುದರಿಂದ ವಿರೋಧವಿಲ್ಲ.

[ಮಧುವಿದ್ಯೆ ಮೊದಲಾದವುಗಳಲ್ಲಿ ಮಧು ಮೊದಲಾದ ಶಬ್ದಗಳು ಪರಮಾತ್ಮನನ್ನೇ ಸೂಚಿಸುವುವು. ಹಾಗೆಯೇ ಯಜ್ಞವನ್ನು ವಿವರಿಸುವ ಎಲ್ಲ ಶಬ್ದಗಳಿಗೂ ಪರಬ್ರಹ್ಮನೇ ಮುಖ್ಯ ತಾತ್ಪರ್ಯ. ಇದರಿಂದ ಕರ್ಮಕ್ರಮಗಳ ವಿಷಯದಲ್ಲಿ ವಿರೋಧವಿರುವುದಿಲ್ಲ.]

ಓಂ ನ ಸಂಖ್ಯೋಪಸಂಗ್ರಹಾದಪಿ, ನಾನಾಭಾವಾತ್, ಅತಿರೇಕಾಚ್ಚ ಓಂ 12

ಸಂಖ್ಯೆಯನ್ನು ಹೇಳಿರುವುದರಿಂದ ಪ್ರಧಾನವಲ್ಲ ; ನಾನಾಭಾವ, ಅತಿರೇಕಗಳಿರುವುದರಿಂದ.

[ಬೃಹದಾರಣ್ಯಕದಲ್ಲಿ "ಯಸ್ಮಿನ್ಪಂಚ ಪಂಚಜನಾ ಆಕಾಶಶ್ಚ ಪ್ರತಿಷ್ಠಿತಃ । ತಮೇವ ಮನ್ಯ ಆತ್ಮಾನಂ ವಿದ್ವಾನ್ಬ್ರಹ್ಮಾಮೃತೋಽ-ಮೃತಂ । "—ಯಾವುದರಲ್ಲಿ ಐವರು ಪಂಚಜನರು ಮತ್ತು ಆಕಾಶ ಪ್ರತಿಷ್ಠಿತ ವಾಗಿವೆಯೋ ಆ ಆತ್ಮನನ್ನೇ ಅಮೃತ, ಬ್ರಹ್ಮ ಎಂದು ತಿಳಿಯುತ್ತೇನೆ. ಹಾಗೆ ಅರಿತುಕೊಂಡು ಅಮೃತನಾಗುತ್ತೇನೆ—ಎಂದು ಹೇಳಿದೆ. ಎರಡು ಸಲ ಪಂಚ ಶಬ್ದ ವಿರುವುದರಿಂದ ಸಾಂಖ್ಯರ ಇಪ್ಪತ್ತೈದು ತತ್ತ್ವಗಳನ್ನು ಸೂಚಿಸಿದೆ, ಎಂದು ಭಾವಿಸಬಾರದು. ಅದು ಬಹುಸಂಖ್ಯಾವಾಚಕ, ಅಷ್ಟೇ. ವಿಷ್ಣುವಿಗೆ ಅನೇಕ ರೂಪಗಳಿರುವುದರಿಂದ ಆಕಾಶದಲ್ಲಿ ನಾನಾಭಾವವನ್ನು ತೋರು ತ್ತಾನೆ; ಅವೆಲ್ಲ ಅವನ ಅತಿರಿಕ್ತ ರೂಪಗಳು—ವಿಶೇಷಾಕೃತಿಗಳು.]

ಓಂ ಪ್ರಾಣಾದಯಃ, ವಾಕ್ಯಶೇಷಾತ್ ಓಂ 13

ವಾಕ್ಯಶೇಷದಿಂದ ಪಂಚಜನರು ಪ್ರಾಣಾದಿಗಳು.

[ಪಂಚ ಪಂಚ ಎಂದು ಎರಡಾವೃತ್ತಿ ಹೇಳಿರುವುದು ಬೇರೆ ಬೇರೆ ಶರೀರ ದಲ್ಲಿ ಬೇರೆ ಬೇರೆಯಾಗಿರುವುದನ್ನು ತೋರಿಸುವುದು. ಮುಂದಿನ ವಾಕ್ಯದಲ್ಲಿ "ಪ್ರಾಣಸ್ಯ ಪ್ರಾಣಮುತ ಚಕ್ಷುಷಶ್ಚಕ್ಷುರುತ ಶ್ರೋತ್ರಸ್ಯ ಶ್ರೋತ್ರವಮ್" ಎಂದು ಪ್ರಾಣಾದಿಸ್ಥಾನಗಳಲ್ಲಿ ಪ್ರೇರಕನಾಗಿ ಆಯಾ ಹೆಸರುಗಳನ್ನು ಪಡೆದ ಬ್ರಹ್ಮನನ್ನೇ ಪ್ರಾಣ, ಕಣ್ಣು, ಕಿವಿ, ಅನ್ನ, ಮನಸ್ಸು ಮುಂತಾದ ಶಬ್ದಗಳಿಂದ ಸೂಚಿಸಿದೆ.]

ಓಂ ಜ್ಯೋತಿಷೈಕೇಷಾಂ, ಅಸತ್ಯನ್ನೇ ಓಂ 14

ಅನ್ನವನ್ನು ಹೇಳದಿರುವಾಗ, ಕೆಲವು ಶಾಖೆಗಳಲ್ಲಿ ಜ್ಯೋತಿಃಶಬ್ದದಿಂದ ಪಂಚಸಂಖ್ಯೆ ಕೂಡುವುದು.

[ಕಾಣ್ವಶಾಖೆಯಲ್ಲಿ "ತದ್ದೇವಾ ಜ್ಯೋತಿಷಾಂ ಜ್ಯೋತಿಃ"—ಅದು ಜ್ಯೋತಿಸ್ಸನ್ನೂ ಬೆಳಗುವುದು—ಎಂಬ ಮಾತಿನಿಂದ ತತ್‌ಶಬ್ದವಾಚ್ಯನಾದ ಜ್ಯೋತಿಯನ್ನು ಅನ್ನಕ್ಕೆ ಬದಲಾಗಿ ಸೇರಿಸಿಕೊಳ್ಳಬೇಕು.]

ಓಂ ಕಾರಣತ್ವೇನ ಚಾಽಕಾಶಾದಿಷು ಯಥಾವ್ಯಪದಿಷ್ಟೋಕ್ತೇಃ ಓಂ 15

ಆಕಾಶಾದಿಗಳಲ್ಲಿ ಬ್ರಹ್ಮ ಕಾರಣನಾಗಿರುತ್ತಾನೆ; ಯಾವ ಪ್ರಕಾರದಿಂದ ನಿರ್ದಿಷ್ಟನಾಗಿದ್ದಾನೆಯೋ ಆ ಕಾರಣದಿಂದಲೇ ಹೇಳಲ್ಪಟ್ಟಿದ್ದಾನೆ.

['ಆತ್ಮನ ಆಕಾಶಃ ಸಂಭೂತಃ.....ಆಕಾಶಾದ್ವಾಯುಃ ...”—ಆತ್ಮನಿಂದ ಆಕಾಶ ಹುಟ್ಟಿತು....ಆಕಾಶದಿಂದ ವಾಯು ಹುಟ್ಟಿತು—ಮೊದಲಾಗಿ ಹೇಳುವಲ್ಲಿ ಆಕಾಶಾದಿಗಳಲ್ಲಿ ವಿಷ್ಣುವೇ ಅವಾಂತರ ಕಾರಣನಾಗಿರುತ್ತಾನೆ. “ಸ ಯೋಽತೋಽಶ್ರುತಃ”—ಯಾವನು ಆದುದರಿಂದ ಅಶ್ರುತನಾಗಿದ್ದಾನೆಯೋ ಅವನು—ಇತ್ಯಾದಿ ಶ್ರುತಿಗಳಲ್ಲಿ ನಿರ್ದಿಷ್ಟನಾಗಿರುವಂತೆಯೇ. “ಯ ಆಕಾಶೇ ತಿಷ್ಠನ್—ಯಾವನು ಆಕಾಶದಲ್ಲಿ ಇರುತ್ತಾನೆಯೋ—ಎಂಬ ಬೃಹದಾರಣ್ಯಕ ವಾಕ್ಯವೇ ಮೊದಲಾದುವಲ್ಲಿಯೂ ಆಕಾಶದಲ್ಲಿ ವಿಷ್ಣು ಇರುತ್ತಾನೆಂದು ಹೇಳಿದೆ.]

ಓಂ ಸಮಾಕರ್ಷಾತ್ ಓಂ 16

ಸಮಾಕರ್ಷಿಸಲ್ಪಡುವುದರಿಂದ.

[ಶಬ್ದಗಳೆಲ್ಲ ಪರಮಾತ್ಮನನ್ನೇ ಸೂಚಿಸುವುದಾದರೆ ಇತರ ವಸ್ತುಗಳನ್ನು ಹೇಗೆ ಸೂಚಿಸಬಲ್ಲವು? ಇದು ಆಕ್ಷೇಪ. ಈ ಸೂತ್ರ ಇದಕ್ಕೆ ಉತ್ತರ. ಪರಮಾತ್ಮವಾಚಕ ಶಬ್ದಗಳು ಇತರ ಪದಾರ್ಥಗಳಿಂದ ಸೆಳೆಯಲ್ಪಟ್ಟು ವ್ಯವಹಾರಕ್ಕೆ ಬರುತ್ತವೆ. ಆಗ ಇತರ ಪದಾರ್ಥಗಳನ್ನೂ ಬೋಧಿಸುವುವು.]

ಓಂ ಜಗದ್ವಾಚಿತ್ವಾತ್ ಓಂ 17

ಜಗತ್ತಿನಲ್ಲಿ ವಾಚ್ಯನಾಗುವುದರಿಂದ.

[ಶಬ್ದಗಳು ಮುಖ್ಯವಾಗಿ ಪರಮಾತ್ಮನನ್ನೇ ಸೂಚಿಸುವುವು; ಆದರೆ ಜನರ ವ್ಯವಹಾರ ಸಾಮಾನ್ಯವಾಗಿ ಜಗತ್ತಿನ ವಿಷಯಗಳಲ್ಲಿಯೇ, ಪರಮಾತ್ಮನ ವಿಷಯದಲ್ಲಿ ಅಲ್ಲ. ಆದುದರಿಂದ ಶಬ್ದಗಳಿಗೆ ಜಗತ್ತಿನಲ್ಲಿಯೇ ಪ್ರಸಿದ್ಧಿ ಯುಕ್ತ.]

ಓಂ ಜೀವಮುಖ್ಯಪ್ರಾಣಲಿಂಗಾದಿತಿ ಚೇತ್, ತದ್ವ್ಯಾಖ್ಯಾತಮ್ ಓಂ 18

ಜೀವ, ಮುಖ್ಯಪ್ರಾಣರ ಲಿಂಗಗಳಾದ ಶಬ್ದಗಳಿರುವುದರಿಂದ ಪರಮಾತ್ಮನನ್ನು ಗ್ರಹಿಸುವುದು ಸರಿಯಲ್ಲ, ಎಂದರೆ, ಅದನ್ನು ಅಗಲೇ ಹೇಳಿಯಾಗಿದೆ.

[ಶಬ್ದಗಳ ಲಿಂಗಗಳು ಜೀವನನ್ನೋ ಮುಖ್ಯಪ್ರಾಣನನ್ನೋ ತಿಳಿಸುವುವಲ್ಲ, ಎಂಬ ಆಕ್ಷೇಪಣೆ ಸರಿಯಲ್ಲ. ಬ್ರಹ್ಮನಿಗೆ ಅಧೀನವಾಗಿರುವುದರಿಂದ ಆ ಶಬ್ದಗಳನ್ನು ಹೇಳಿದೆ, ಎಂದು ಹಿಂದೆಯೇ ತಿಳಿಸಿದೆ. "ಅಥ ಯಾಂ ಜೀವೋ ಜಹಾತಿ ಸಾ ಶುಷ್ಯತಿ"—ಯಾವ ದೇಹವನ್ನು ಜೀವ ಬಿಟ್ಟುಬಿಡುವನೋ ಅದು ಒಣಗಿಹೋಗುತ್ತದೆ—ಮತ್ತು "ವಾಯುನಾ ಹಿ ಸರ್ವೇ ಲೋಕಾ ನೇನೀಯಂತೇ"—ವಾಯುವಿಂದ ಎಲ್ಲ ಲೋಕಗಳೂ ಒಯ್ಯಲ್ಪಡುತ್ತವೆ—ಎಂಬ ಶ್ರುತಿಗಳಲ್ಲಿ ಆಯಾ ಭಗವದಧೀನವಾದ ಲಿಂಗಗಳಿರುವುದರಿಂದ, ಭಗವಂತನೊಬ್ಬನೇ ಸ್ವತಂತ್ರ, ಅವನೇ ಮುಖ್ಯವಾಗಿ ವಾಚ್ಯ, ಎನ್ನಬೇಕು. ಉಪಾಸನಾ ಸೌಕರ್ಯಕ್ಕಾಗಿ ಅಂತರ್ಯಾಮಿ ದೃಷ್ಟಿಯಿಂದ ಹಾಗೆ ಹೇಳಿದೆ.]

ಓಂ ಅನ್ಯಾರ್ಥಂ ತು ಜೈಮಿನಿಃ, ಪ್ರಶ್ನವ್ಯಾಖ್ಯಾನಾಭ್ಯಾಮಪಿ, ಚೈವಮೇಕೇ ಓಂ 19

ಬೇರೆ ಪ್ರಯೋಜನವೂ ಇದೆಯೆಂದು ಜೈಮಿನಿಯ ಮತ; ಪ್ರಶ್ನೆ ಉತ್ತರಗಳಿಂದಲೂ ಇದು ತಿಳಿಯಬರುವುದು. ಇತರ ಕೆಲವರೂ ಹೀಗೆ ಹೇಳುವರು.

['ಪರಮಾತ್ಮನ ಜ್ಞಾನದ ಸಂಪಾದನೆಗಾಗಿಯೇ ಕರ್ಮಾದಿಗಳನ್ನು ಶ್ರುತಿ ಹೇಳುವುದು', ಎಂದು ಜೈಮಿನಿ ಅಭಿಪ್ರಾಯಪಡುತ್ತಾನೆ. "ಕಸ್ಮಿನ್ನು ಭಗವೋ ವಿಜ್ಞಾತೇ ಸರ್ವಮಿದಂ ವಿಜ್ಞಾತಂ ಭವತೀತಿ"—ಪೂಜ್ಯರೇ, ಯಾವುದನ್ನು ತಿಳಿದರೆ ಇವೆಲ್ಲವನ್ನೂ ತಿಳಿದಂತಾಗುವುದು?—ಎಂಬ ಛಾಂದೋಗ್ಯದಲ್ಲಿನ ಪ್ರಶ್ನೆಗೆ ಉತ್ತರವಾಗಿ, "ತಸ್ಮೈ ಸ ಹೋವಾಚ, ದ್ವೇ ವಿದ್ಯೇ ವೇದಿತವ್ಯೇ"—ಎರಡು ವಿದ್ಯೆಗಳು (ಪರಾ, ಅಪರಾ) ತಿಳಿಯಲ್ಪಡಬೇಕು. ಎಂದು ಅವನಿಗೆ ಹೇಳಿದನು—ಎಂದು ಹೇಳಿರುವುದು, ಈ ವಿಷಯವನ್ನು ಸಮರ್ಥಿಸುವುದು. ಇದು ಮುಂಡಕೋಪನಿಷತ್ತಿನಲ್ಲಿ ಶೌನಕರ ಪ್ರಶ್ನೆಗೆ ಆಂಗಿರಸರ ಉತ್ತರ. "ಯಸ್ತನ್ನ ವೇದ ಕಿಮೃಚಾ ಕರಿಷ್ಯತಿ"—ಯಾವನು ಆ ಬ್ರಹ್ಮನನ್ನು ಅರಿತಿಲ್ಲವೋ

ಅವನು ಋಕ್ಕಿನಿಂದ ಏನು ಮಾಡುತ್ತಾನೆ?—ಎಂದು ಋಗ್ವೇದದ ಒಂದು ಶಾಖೆ ಹೇಳುತ್ತದೆ.]

ಓಂ ವಾಕ್ಯಾನ್ವಯಾತ್ ಓಂ 20

ವಾಕ್ಯಗಳ ಅನ್ವಯ ಸಂಬಂಧದಿಂದ.

[ಬೇರೆ ಬೇರೆ ಅರ್ಥವಿದ್ದರೂ ಒಟ್ಟಾಗಿ ವಾಕ್ಯಗಳ ಸಮನ್ವಯ ಮಾಡುವಾಗ ವಿಷ್ಣುವೇ ಪ್ರತಿಪಾದ್ಯ. ಕರ್ಮ ಅಪೂರ್ಣ ಹಾಗೂ ಮಿಶ್ರಫಲವನ್ನು ಕೊಡುವುದು; ದೇವತೆಗಳು ಸೃಷ್ಟಿಮಾಡಿದರೂ ಸ್ವತಂತ್ರ ಕಾರಣರಲ್ಲ; ಪ್ರಪಂಚ ಅಪ್ರಧಾನ. ಹೀಗೆ ಒಂದೊಂದೇ ವಿಷಯದಲ್ಲಿ ಬೇರೆಬೇರೆಯಾಗಿ ಕಂಡುಬಂದರೂ ಒಟ್ಟಾಗಿ ಅನ್ವಯಮಾಡುವಾಗ ಈ ಎಲ್ಲ ಗುಣಗಳೂ ಒಬ್ಬನಲ್ಲೇ ಸೇರಿರುವ ಪರಮಾತ್ಮನೇ ಪ್ರತಿಪಾದ್ಯನಾಗಿರುತ್ತಾನೆ.]

ಓಂ ಪ್ರತಿಜ್ಞಾಸಿದ್ಧೇರ್ಲಿಂಗಮಾಶ್ಮರಥ್ಯಃ ಓಂ 21

ಪ್ರತಿಜ್ಞೆಯ ಸಿದ್ಧಿ ಪಡೆಯುವುದಕ್ಕಾಗಿ ಲಿಂಗವಿದೆ, ಎನ್ನುತ್ತಾನೆ, ಆಶ್ಮರಥ್ಯ.

[ಕರ್ಮಾದಿಗಳನ್ನು ಹೇಳುವುದು ಪ್ರತಿಜ್ಞೆಯ ಸಿದ್ಧಿಯನ್ನು ಸೂಚಿಸುವುದಕ್ಕಾಗಿ. "ನಾನ್ಯಃ ಪಂಥಾ ಅಯನಾಯ ವಿದ್ಯತೇ"—ಮೋಕ್ಷಪ್ರಾಪ್ತಿಗೆ ಬೇರೆ ಮಾರ್ಗವೇ ಇಲ್ಲ—ಎಂದು ಪ್ರತಿಜ್ಞೆ ಮಾಡಿ ಆ ವಾಕ್ಯವನ್ನು ಸಿದ್ಧಮಾಡಿಕೊಡಲು ಅಗತ್ಯವಾದ ಕರ್ಮವನ್ನು ವಿವರಿಸಲಾಗಿದೆ. ಇತರ ಕರ್ಮಗಳಿಂದ ಅನಿತ್ಯ ಫಲ ದೊರೆಯುವುದು. ಆದುದರಿಂದ ನಿತ್ಯಫಲಪ್ರಾಪ್ತಿಗೆ ಇದೊಂದೇ ದಾರಿ, ಎಂದು ಹೇಳಲಾಗಿದೆ.]

ಓಂ ಉತ್ಕ್ರಮಿಷ್ಯತ ಏವಂ ಭಾವಾತ್, ಇತ್ಯೌಡುಲೋಮಿಃ ಓಂ 22

ದೇಹದಿಂದ ಹೊರ ಹೊರಡುವ ಜೀವನಿಗೆ ಈ ಭಾವವಿರುವುದರಿಂದ, ಎನ್ನುತ್ತಾನೆ, ಔಡುಲೋಮಿ.

[ದೇಹವನ್ನು ಕಳೆದುಕೊಂಡು ಮೋಕ್ಷವನ್ನು ಅಪೇಕ್ಷಿಸುವವನಿಗೆ ಕರ್ಮಾದಿಗಳು ಸಾಧನವಾಗುವುವು, ಅದರಿಂದ ಅವನ್ನೇ ಹೇಳಿದ್ದಾರೆ, ಎನ್ನುವುದು ಔಡುಲೋಮಿಯ ಅಭಿಪ್ರಾಯ. ಕರ್ಮದಿಂದ ಜ್ಞಾನ ಸಿದ್ಧಿಸುವುದು, ಅದರಿಂದ ಮುಕ್ತಿ, "ತಮೇತಂ ವೇದಾನುವಚನೇನ ಬ್ರಾಹ್ಮಣಾ ವಿವಿದಿಷಂತಿ,

ಯಜ್ಞೇನ ದಾನೇನ ತಪಸಾನಾಶಕೇನ"—ಬ್ರಾಹ್ಮಣರು ವೇದಗಳನ್ನು ಹೇಳುವುದರಿಂದಲೂ, ಯಜ್ಞಮಾಡುವುದರಿಂದಲೂ, ದಾನ ಕೊಡುವುದರಿಂದಲೂ, ನಾಶವಿಲ್ಲದ ತಪಸ್ಸಿನಿಂದಲೂ ಈ ಬ್ರಹ್ಮನನ್ನು ತಿಳಿಯಲು ಅಪೇಕ್ಷೆಪಡುತ್ತಾರೆ—ಎಂಬ ಶ್ರುತಿ ಕರ್ಮದಿಂದ ಜ್ಞಾನಸಾಧನೆಯಾಗುವುದನ್ನೂ ಅದರಿಂದ ಮೋಕ್ಷ ಪ್ರಾಪ್ತಿಯನ್ನೂ ತಿಳಿಸುತ್ತದೆ.]

ಓಂ ಅವಸ್ಥಿತೇರಿತಿ ಕಾಶಕೃತ್ಸ್ನಃ ಓಂ 23

ಒಳಗೆ ಇರುವುದರಿಂದ, ಎಂದು ಕಾಶಕೃತ್ಸನ ಮತ.

[ಎಲ್ಲವೂ ಪರಮಾತ್ಮನಲ್ಲಿ ಅಡಗಿದೆ, ಎಂದು ಹೇಳುವುದಕ್ಕಾಗಿ ಶಾಸ್ತ್ರದ ವಿವರಣೆ ಇದೆ, ಎನ್ನುತ್ತಾನೆ, ಕಾಶಕೃತ್ಸ್ನ. "ಕೃಷ್ಣದ್ವೈಪಾಯನಮತಾದೇಕ-ದೇಶವಿದಃ ಪರೇ ವದಂತಿ । ತೇ ಯಥಾಪ್ರಜ್ಞಂ ನ ವಿರೋಧಃ ಕಥಂಚ ನ"—ವೇದವ್ಯಾಸರ ಮತದ ಒಂದೊಂದು ಭಾಗವನ್ನು ಆಶ್ರಯಿಸಿ ಇತರರು ತಮಗೆ ತಿಳಿದಂತೆ ಹೇಳುತ್ತಾರೆ; ಆದರೆ ಅವರಲ್ಲಿ ಪರಸ್ಪರ ಯಾವ ವಿರೋಧವೂ ಇಲ್ಲ—ಎಂದು ಪದ್ಮಪುರಾಣದಲ್ಲಿ ಹೇಳಿದೆ. ಹೀಗೆ ಜೈಮಿನ್ಯಾದಿಗಳು ಹೇಳಿರುವುದೆಲ್ಲ ನಿಜವೇ, ಆದರೆ ಅವೆಲ್ಲ ಸತ್ಯದ ಒಂದೊಂದು ಭಾಗ ಮಾತ್ರ. ಅವನ್ನೆಲ್ಲ ಒಟ್ಟಾಗಿ ಸಮನ್ವಯಮಾಡಿಕೊಂಡರೆ ಬಾದರಾಯಣರ ಅಭಿಪ್ರಾಯ ತಿಳಿದುಬರುವುದು.]

ಓಂ ಪ್ರಕೃತಿಶ್ಚ, ಪ್ರತಿಜ್ಞಾದೃಷ್ಟಾಂತಾನು-ಪರೋಧಾತ್ ಓಂ 24

ಪ್ರತಿಜ್ಞೆ, ದೃಷ್ಟಾಂತಗಳಿಗೆ ವಿರೋಧವಿಲ್ಲದಿರುವುದರಿಂದ ಪ್ರಕೃತಿ ಶಬ್ದವೂ ಬ್ರಹ್ಮನನ್ನೇ ತಿಳಿಸುವುದು.

[ಸ್ತ್ರೀವಾಚಕ ಶಬ್ದಗಳಾದ ಪ್ರಕೃತಿ ಮೊದಲಾದವುಗಳಿಗೂ ಬ್ರಹ್ಮನೆಂದೇ ಅರ್ಥ ಮಾಡಬೇಕು. ಎಲ್ಲ ಹೆಸರುಗಳೂ ಈ ಬ್ರಹ್ಮನನ್ನೇ ಕುರಿತು ಹೇಳುತ್ತವೆ, ಎನ್ನುವುದು ಪ್ರತಿಜ್ಞೆ. "ಯಥಾ ನದ್ಯಃ ಸ್ಯಂದಮಾನಾಃ ಸಮುದ್ರಾಯಣಾಃ ಸಮುದ್ರಮೇವಾಭಿವಿಶಂತಿ, ಏವಮೇವೈತಾನಿ ನಾಮಾನಿ ಸರ್ವಾಣಿ ಪುರುಷ-ಮಭಿವಿಶಂತಿ"—ಸಮುದ್ರದತ್ತ ಹರಿಯುವ ನದಿಗಳೆಲ್ಲ ಸಮುದ್ರವನ್ನೇ ಪ್ರವೇಶಿಸುವವು; ಹೀಗೆಯೇ ಈ ಎಲ್ಲ ಹೆಸರುಗಳೂ ಪುರುಷನಿಗೇ ಸಲ್ಲುತ್ತವೆ—ಎಂದು ದೃಷ್ಟಾಂತದಿಂದ ಉಪದೇಶ. ಹೀಗೆ ಪ್ರಕೃತಿ ಶಬ್ದವೂ ಪರಮಾತ್ಮವಾಚಕವೇ.]

ಓಂ ಅಭಿಧ್ಯೋಪದೇಶಾಚ್ಚ ಓಂ 25

ಈಶ್ವರೇಚ್ಛೆಯನ್ನು ಅಥವಾ ಈಶ್ವರಸ್ವರೂಪವನ್ನು 'ಪ್ರಕೃತಿ' ಎಂದು ಕರೆದಿರುವುದರಿಂದಲೂ ಪ್ರಕೃತಿಶಬ್ದವಾಚ್ಯ ಬ್ರಹ್ಮನೇ.

["ಸೃಷ್ಟಿ ಮಾಡಬೇಕೆಂಬ ಸಂಕಲ್ಪಕ್ಕೆ ಅಭಿಧ್ಯಾ ಎಂದು ಹೆಸರು" ಎಂದು 'ರತ್ನಪ್ರಭಾ' ತಿಳಿಸುವುದು. ಶ್ವೇತಾಶ್ವತರೋಪನಿಷತ್ತಿನಲ್ಲಿ "ಮಾಯಾಂ ತು ಪ್ರಕೃತಿಂ ವಿದ್ಯಾನ್ಮಾಯಿನಂ ತು ಮಹೇಶ್ವರಂ"—ಮಾಯೆಯನ್ನು ಪ್ರಕೃತಿ ಎಂದೂ ಮಾಯೀ ಎಂದರೆ ಮಹೇಶ್ವರನೆಂದೂ ತಿಳಿಯಬೇಕು, ಎಂದು ಹೇಳಿದೆ. "ಸೋಽಭಿಧ್ಯಾ ಸ ಜೂತಿಃ ಸ ಪ್ರಜ್ಞಾ ಸ ಆನಂದಃ"—ಅವನು ಅಭಿಧ್ಯಾ, ಅವನು ಪ್ರೇರಣೆ, ಅವನು ಪ್ರಜ್ಞೆ, ಅವನು ಆನಂದ—ಎಂದು ಶ್ರುತಿ ಹೇಳುವುದರಿಂದ ಅಭಿಧ್ಯೆ (ಸೃಷ್ಟಿಸಂಕಲ್ಪ) ಅವನ ಸ್ವರೂಪವೇ.]

ಓಂ ಸಾಕ್ಷಾಚ್ಚ, ಉಭಯಾಮ್ನಾನಾತ್ ಓಂ 26

ಈಶ್ವರ ಸ್ತ್ರೀ ಮತ್ತು ಪುರುಷ, ಎಂದು ಎರಡನ್ನೂ ಶ್ರುತಿ ಸಾಕ್ಷಾತ್ತಾಗಿ ಹೇಳಿರುವುದರಿಂದಲೂ.

[ಪೈಂಗಿ ಶ್ರುತಿ, "ಏಷ ಸ್ತ್ರೀ, ಏಷ ಪುರುಷಃ, ಏಷ ಪ್ರಕೃತಿರೇಷ ಆತ್ಮೈಷ ಬ್ರಹ್ಮೈಷ ಲೋಕ ಏಷ ಆಲೋಕೋ, ಯೋಽಸೌ ಹರಿರಾದಿರನಾದಿರನಂತೋಽಂತಃ ಪರಮಃ ಪರಾತ್ ವಿಶ್ವರೂಪಃ"—ಇವನು ಸ್ತ್ರೀ, ಇವನು ಪುರುಷ, ಇವನು ಪ್ರಕೃತಿ, ಇವನು ಆತ್ಮಾ, ಇವನು ಬ್ರಹ್ಮ, ಇವನು ಲೋಕ, ಇವನು ಬೆಳಕು, ಇವನು ಎಲ್ಲಕ್ಕೂ ಆದಿಯೂ ಅಂತ್ಯವೂ ಆದ ಹರಿ, ಇವನು ಅನಾದಿ ಮತ್ತು ಅನಂತ, ಇವನು ಪರಾತ್ಪರ ಮತ್ತು ವಿಶ್ವರೂಪ—ಎಂದು ಹೇಳಿರುವುದರಿಂದ ಈಶ್ವರ ಪ್ರಕೃತಿಯೂ ಪುರುಷನೂ ಆಗಿರುವನೆಂದು ಸಾಕ್ಷಾತ್ತಾಗಿ ತಿಳಿಸುತ್ತದೆ.]

ಓಂ ಆತ್ಮಕೃತೇಃ, ಪರಿಣಾಮಾತ್ ಓಂ 27

ಪ್ರಕೃತಿಯಲ್ಲಿ ಪರಿಮಾಣ ಉಂಟುಮಾಡಿ ತಾನೂ ಪರಿಣಮಿಸಿದ ವಸ್ತುಗಳಲ್ಲಿ ಇರುವುದರಿಂದ.

[ಪ್ರಕೃತಿ=ಪ್ರ+ಕೃತಿ; ಎಂದರೆ ಹೆಚ್ಚಾಗಿ ಕಾರ್ಯ ನಡೆಸುವವ, ಎಂದು ಅರ್ಥ ಮಾಡಬಹುದು. ಆದುದರಿಂದ ಪ್ರಕೃತಿ ಎಂದರೆ ಪರಬ್ರಹ್ಮನೇ.

ತಾನೇ ಪರಿಣಾಮ ಹೊಂದಿಸಿದ ವಸ್ತುಗಳಲ್ಲಿ ವಾಸ ಮಾಡುವುದಕ್ಕಾಗಿ ಅವನು ಬಹುರೂಪಗಳನ್ನು ಪಡೆಯುತ್ತಾನೆ. "ಅಥ ಹ್ಯೆಷ ಆತ್ಮಾ ಪ್ರಕೃತಿಮನು-ಪ್ರವಿಶ್ಯ, ಆತ್ಮಾನಂ ಬಹುಧಾ ಚಕಾರ। ತಸ್ಮಾತ್ ಪ್ರಕೃತಿಃ, ತಸ್ಮಾತ್ ಪ್ರಕೃತಿಃ, ಇತ್ಯಾಚಕ್ಷತೇ"— ಆಮೇಲೆ ಈ ಆತ್ಮನು ಪ್ರಕೃತಿಯೊಳಗೆ ಪ್ರವೇಶ ಮಾಡಿ ತನ್ನನ್ನು ಬಹುರೂಪಿಯನ್ನಾಗಿ ಮಾಡಿಕೊಂಡನು, ಆದುದರಿಂದಲೇ ಅವನು ಪ್ರಕೃತಿ, ಎನ್ನುತ್ತಾರೆ— ಎಂದು ಭಾಲ್ಲವೇಯ ಶ್ರುತಿ ತಿಳಿಸುತ್ತದೆ. ಪ್ರಮಾಣವಿಲ್ಲದಿರುವುದರಿಂದ ಬೇರೆ ರೀತಿಯಲ್ಲಿ ಹೇಳಬಾರದು.]

ಓಂ ಯೋನಿಶ್ಚ ಹಿ ಗೀಯತೇ ಓಂ 28

ಯೋನಿಯೆಂದೂ ಹೇಳಲ್ಪಡುವುದಷ್ಟೆ.

[ತಡೆಯಿಲ್ಲದೆ ಉತ್ಪತ್ತಿಗೆ ಮೂಲವಾದುದು ಪ್ರಕೃತಿ. ಆದುದರಿಂದ ಭೂತಯೋನಿ ಎಂದು ಪ್ರಕೃತಿಗೆ, ಎಂದರೆ ಬ್ರಹ್ಮನಿಗೆ, ಹೆಸರಿದೆ. "ಯದ್ಭೂತ-ಯೋನಿಂ ಪರಿಪಶ್ಯಂತಿ ಧೀರಾಃ" ಎಂದು ಮುಂಡಕ ಶ್ರುತಿ ವಾಕ್ಯವಿದೆ. "ವ್ಯವಧಾನೇನ ಸೂತಿಸ್ತು ಪುಂಸ್ತ್ವಂ ವಿದ್ವದ್ಭಿರುಚ್ಯತೇ । ಸೂತಿಮವ್ಯವ-ಧಾನೇನ ಸ್ತ್ರೀತ್ವಮಾಹುರ್ಮನೀಷಿಣಃ"—ತಡೆದು ತಡೆದು ಸೃಷ್ಟಿ ಮಾಡುವುದು ಪುಂಲಕ್ಷಣ; ನಿರಂತರ ಸೃಷ್ಟಿ ಸ್ತ್ರೀತ್ವದ ಲಕ್ಷಣ—ಎಂದು ಬ್ರಹ್ಮಾಂಡ ಪುರಾಣದಲ್ಲಿ ಹೇಳಿದೆ. ಅಲ್ಲಿಯೇ "ಎರಡೂ ವಿಧ ಸೃಷ್ಟಿಗೆ ಪರಮಾತ್ಮನಾದ ವಾಸುದೇವನೇ ಕಾರಣ. ಆದುದರಿಂದ ಪ್ರಕೃತಿ ಮತ್ತು ಪುರುಷ ಎಂಬ ಎರಡೂ ಶಬ್ದಗಳಿಂದ ಅವನೇ ವಾಚ್ಯನಾಗುವನು" ಎಂದೂ ಹೇಳಲಾಗಿದೆ.]

ಓಂ ಏತೇನ ಸರ್ವೇ ವ್ಯಾಖ್ಯಾತಾ ವ್ಯಾಖ್ಯಾತಾಃ ಓಂ 29

ಇದರಿಂದ ಎಲ್ಲವನ್ನೂ ಹೇಳಿದಂತಾಯಿತು.

[ಈಗ ಶೂನ್ಯ ಮೊದಲಾದ ಎಲ್ಲ ಶಬ್ದಗಳಿಗೂ ವಿಷ್ಣುಪರವಾಗಿಯೇ ಅರ್ಥ ಹೇಳಿದಂತಾಯಿತು. ಎಲ್ಲ ಶಬ್ದಗಳೂ ವಿಷ್ಣುವಿನಲ್ಲಿಯೇ ಸಮನ್ವಯ ಹೊಂದುವುವು. ಮಹೋಪನಿಷತ್ತಿನಲ್ಲಿ "ಏಷ ಹ್ಯೇವ ಶೂನ್ಯಃ, ಏಷ ಹ್ಯೇವ ತುಚ್ಛಃ, ಏಷ ಹ್ಯೇವಾಭಾವಃ, ಏಷ ಹ್ಯೇವಾವ್ಯಕ್ತಃ, ಅದೃಶ್ಯೋಽಚಿಂತ್ಯೋ ನಿರ್ಗುಣಶ್ಚ"—ಇವನೇ ಶೂನ್ಯ, ತುಚ್ಛನೆಂದರೂ ಇವನೇ; ಅಭಾವ, ಅವ್ಯಕ್ತ,

ಅದೃಶ್ಯ, ಅಚಿಂತ್ಯ, ನಿರ್ಗುಣ ಎಂಬ ಶಬ್ದಗಳಿಂದ ವಾಚ್ಯನಾದವನೂ ಇವನೇ— ಎಂದು ಹೇಳಿದೆ.

'ವ್ಯಾಖ್ಯಾತಾ ವ್ಯಾಖ್ಯಾತಾಃ' ಎಂಬ ದ್ವಿರುಕ್ತಿ ಅಧ್ಯಾಯ ಮುಗಿಯಿತು, ಎಂದು ಸೂಚಿಸುವುದು. "ಅಧ್ಯಾಯಾಂತೇ ದ್ವಿರುಕ್ತಿಃ ಸ್ಯಾದ್ವೇದೇ ವಾ ವೈದಿಕೇಽಪಿ ವಾ । ವಿಚಾರೋ ಯತ್ರ ಸಜ್ಯೇತ ಪೂರ್ವೋಕ್ತಸ್ಯಾವಧಾರಣೇ" —ವೇದ ಅಥವಾ ವೈದಿಕ ಸಾಹಿತ್ಯದಲ್ಲಿ ಅಧ್ಯಾಯದ ಕೊನೆಯಲ್ಲಿ ದ್ವಿರುಕ್ತಿ ಬರುವುದು. ಎಲ್ಲಿ ವಿಚಾರ ಮಾಡಲಾಗಿದೆಯೋ ಅಲ್ಲಿ ಹೇಳಿದುದನ್ನು ಚೆನ್ನಾಗಿ ನೆನಪಿನಲ್ಲಿಡುವುದಕ್ಕಾಗಿ ಎರಡು ಬಾರಿ ಉಚ್ಚಾರ ಮಾಡುತ್ತಾರೆ—ಎಂದು ಗರುಡಪುರಾಣ ತಿಳಿಸುತ್ತದೆ. "ಅವಧಾರಣಾರ್ಥಂ ಸರ್ವಸ್ಯಾಪ್ಯುಕ್ತಸ್ಯಾ-ಧ್ಯಾಯಮೂಲತಃ । ದ್ವಿರುಕ್ತಿಂ ಕುರ್ವತೇ ಪ್ರಾಜ್ಞಾ ಅಧ್ಯಾಯಾಂತೇ ವಿನಿರ್ಣಯೇ"—ಅಧ್ಯಾಯದ ಆದಿಯಿಂದ ಹೇಳಿದ ಎಲ್ಲವನ್ನೂ ಚೆನ್ನಾಗಿ ತಿಳಿದುಕೊಳ್ಳುವುದಕ್ಕಾಗಿಯೇ ಅಧ್ಯಾಯದ ಕೊನೆಯಲ್ಲಿ ನಿರ್ಣಯ ಮಾಡುವುದಕ್ಕಾಗಿ ಬುದ್ಧಿವಂತರು ಎರಡಾವೃತ್ತಿ (ಹೇಳಿದುದನ್ನೇ) ಹೇಳುತ್ತಾರೆ— ಎಂದು ವಾರಾಹ ಸಂಹಿತೆಯಲ್ಲಿ ಹೇಳಿದೆ. ಅಧ್ಯಾಯ ಮುಗಿಯಿತೆಂದು ಸೂಚಿಸುವುದಕ್ಕಾಗಿಯೇ ಈ ಸೂತ್ರದಲ್ಲಿ "ವ್ಯಾಖ್ಯಾತಾ ವ್ಯಾಖ್ಯಾತಾಃ" ಎಂದು ಪುನರುಕ್ತಿ ಬಂದಿದೆ.]

ಇಲ್ಲಿಗೆ ಬ್ರಹ್ಮಸೂತ್ರಗಳ ಮೊದಲನೆಯ ಅಧ್ಯಾಯದ ನಾಲ್ಕನೆಯ ಪಾದ ಮುಗಿಯಿತು.

ಎರಡನೆಯ ಅಧ್ಯಾಯ

ಮೊದಲನೆಯ ಪಾದ

ಶ್ರುತಿ ಹೇಳಿದುದನ್ನು ಸಮರ್ಥಿಸಲು ಸ್ಮೃತಿ ಸಹಾಯಕವಾಗುವುದು. ಆದರೆ ವಿರುದ್ಧಾರ್ಥ ಬರುವ ಸ್ಮೃತಿಗಳಿಂದ ಇದು ಸಾಧ್ಯವಾಗದು. ಮೂಲ ಪ್ರಕೃತಿಯೇ ಜಗತ್ತಿಗೆ ಕಾರಣ, ಎಂದು ಕಪಿಲನ ಸಾಂಖ್ಯಮತ. ಮನ್ವಾದಿ ಸ್ಮೃತಿಗಳು ಪರಬ್ರಹ್ಮನೇ ಸೃಷ್ಟಿಗೆ ಕಾರಣ, ಎನ್ನುವವು. ಪರಬ್ರಹ್ಮನನ್ನೇ ಜಗತ್ಕಾರಣನೆಂದು ಒಪ್ಪಿದರೆ ಕಪಿಲಾದಿ ಸ್ಮೃತಿಗಳಿಗೆ ಅವಕಾಶವಿರುವುದಿಲ್ಲ, ಎನ್ನುವ ದೋಷ ಹುಟ್ಟುವುದು, ಎಂದು ಆಕ್ಷೇಪ; ಆದರೆ ಕಪಿಲಾದಿಗಳ ಮಾತನ್ನು ಒಪ್ಪಿದರೆ, ಮನ್ವಾದಿ ಸ್ಮೃತಿಗಳು ವ್ಯರ್ಥವಾಗುವುವಲ್ಲ, ಎಂದು ಸಮಾಧಾನ. ಸರ್ವಸೃಷ್ಟ್ಯಾದಿಕಾರಣನಾದ ನಾರಾಯಣನಲ್ಲಿ ಸರ್ವಶಾಸ್ತ್ರಗಳಿಗೂ ಮುಖ್ಯವೃತ್ತಿಯಿಂದ ಸಮನ್ವಯವನ್ನು ಮೊದಲನೆಯ ಅಧ್ಯಾಯದಲ್ಲಿ ಸಾಧಿಸಿದುದಾಯಿತು. ಹಿಂದೆ ಹೇಳಿದುದರಲ್ಲಿ ಯಾವ ವಿರೋಧವೂ ಇಲ್ಲವೆಂದು ಎರಡನೆಯ ಅಧ್ಯಾಯದಲ್ಲಿ ತೋರಿಸಲಾಗುತ್ತದೆ. ಆದುದರಿಂದ ಇದಕ್ಕೆ 'ಅವಿರೋಧಾಧ್ಯಾಯ'ವೆಂದು ಹೆಸರು. ಇಲ್ಲಿನ ಪ್ರಥಮ ಪಾದದಲ್ಲಿ ಯುಕ್ತಿಯಿಂದ ಆ ಅವಿರೋಧವನ್ನು ತೋರಿಸಲಾಗುವುದು. ಅದರಲ್ಲಿ ಮೊದಲು ಶ್ರುತ್ಯವಿರೋಧ. "ರುದ್ರ, ಕಪಿಲ, ಕಣಾದ ಮೊದಲಾದವರೆಲ್ಲ ಸರ್ವಜ್ಞರೇ; ಅವರ ಮಾತಿಗೆ ವಿರೋಧ ಬಂದರೆ ಅಪ್ರಾಮಾಣ್ಯದೋಷ ಹುಟ್ಟುವುದು" ಎಂಬ ವಾದ ಸರಿಯಲ್ಲ. ಸಂಪೂರ್ಣ ಸರ್ವಜ್ಞನಾದ ವಿಷ್ಣು ಮೊದಲಾದವರ ಪಾಂಚರಾತ್ರಾದಿ ಇತರ ಸ್ಮೃತಿಗಳು ಬೇರೆಯಾಗಿ ತಿಳಿಸುತ್ತವೆ. ಆದುದರಿಂದ ಶ್ರುತಿಯ ಆಧಿಕ್ಯ ಸಿದ್ಧಿಸುತ್ತದೆ.

ಓಂ ಸ್ಮೃತ್ಯನವಕಾಶದೋಷಪ್ರಸಂಗ ಇತಿ ಚೇನ್ನ, ಅನ್ಯಸ್ಮೃತ್ಯನವಕಾಶದೋಷಪ್ರಸಂಗಾತ್ ಓಂ 1

ಬ್ರಹ್ಮನೇ ಜಗತ್ಕಾರಣನೆನ್ನುವುದರಿಂದ 'ಇತರ ಸ್ಮೃತಿಗಳಿಗೆ ಅವಕಾಶ ವಿರುವುದಿಲ್ಲ' ಎಂಬ ದೋಷ ಹುಟ್ಟುವುದು, ಎನ್ನುವುದು ಸರಿಯಲ್ಲ; ಏಕೆಂದರೆ

ನಮ್ಮ ಸಿದ್ಧಾಂತವನ್ನು ನಿರಾಕರಿಸಿದರೆ ಮತ್ತೆ ಬೇರೆ ಸ್ಮೃತಿಗಳಿಗೆ ಅವಕಾಶವಿಲ್ಲದಂತಾಗಿ ದೋಷ ಬರುವುದು.

ಓಂ ಇತರೇಷಾಂ ಚಾನುಪಲಬ್ಧೇಃ ಓಂ 2

ಪ್ರತ್ಯಕ್ಷಕ್ಕೆ ಯೋಗ್ಯವಾದ ಫಲಗಳು ಆ ಇತರ ಸ್ಮೃತಿಗಳಲ್ಲಿ ಕಾಣಬರದಿರುವುದರಿಂದ.

[ಕಾಣಬರುವುವೆಂದು ಹೇಳಲ್ಪಟ್ಟಿರುವ ಫಲಗಳು ಆ ಇತರ ಸ್ಮೃತಿಗಳಲ್ಲಿ ಪ್ರತ್ಯಕ್ಷವಾಗಿ ಸಿಗುವುದಿಲ್ಲ, ಎಲ್ಲೋ ಒಮ್ಮೊಮ್ಮೆ ಹಾಗೆ ಫಲ ಕಾಣಬರಬಹುದು. ಇದರಿಂದ ಅದೃಷ್ಟಫಲವುಳ್ಳ ಕಾರ್ಯದಲ್ಲಿ ಪ್ರವೃತ್ತಿ ಹುಟ್ಟುವುದಿಲ್ಲ.]

ಓಂ ಏತೇನ ಯೋಗಃ ಪ್ರತ್ಯುಕ್ತಃ ಓಂ 3

ಇದರಿಂದ (ಸಾಂಖ್ಯದಂತೆ) ಯೋಗವೂ ನಿರಾಕೃತವಾಯಿತು.

[ಸಾಂಖ್ಯ ಮತ್ತು ಯೋಗಗಳು ಪುರುಷಾರ್ಥಸಾಧಕಗಳೆಂದು ಲೋಕದಲ್ಲಿ ಪ್ರಸಿದ್ಧಿಯಿದೆ. ಶಿಷ್ಯರೂ ಅವನ್ನು ಪರಿಗ್ರಹಿಸಿದ್ದಾರೆ. ಆದರೂ ಅವನ್ನು ನಿರಾಕರಿಸಬೇಕು. ವೇದವನ್ನು ಬಿಟ್ಟು ಸಾಂಖ್ಯಜ್ಞಾನದಿಂದಾಗಲಿ ಯೋಗದ ಅಭ್ಯಾಸದಿಂದಾಗಲಿ ಶ್ರೇಯಸ್ಸು ಆಗುವುದಿಲ್ಲ. ಯೋಗಶಾಸ್ತ್ರದಲ್ಲಿ ಹೇಳಿರುವ ಯೋಗಾಭ್ಯಾಸದ ಫಲ ಪ್ರತ್ಯಕ್ಷಸಿದ್ಧವೆಂದು ತಿಳಿಯಬಾರದು. ಆ ಶಾಸ್ತ್ರದಲ್ಲಿ ಹೇಳಿದಂತೆಯೇ ಅಭ್ಯಾಸ ಮಾಡಿದರೂ ಆ ಕಾಲದಲ್ಲಿಯೇ ಫಲ ಕಾಣಬರುವುದಿಲ್ಲ.]

ಓಂ ನ ವಿಲಕ್ಷಣತ್ವಾದಸ್ಯ, ತಥಾತ್ವಂ ಚ ಶಬ್ದಾತ್ ಓಂ 4

ಶ್ರುತಿಸ್ಮೃತಿಸಮೂಹ ವಿಲಕ್ಷಣವಾದುದರಿಂದ, ಫಲ ಸಿಗುವುದಿಲ್ಲವೆಂಬ ಕಾರಣದಿಂದ ಅಪ್ರಾಮಾಣ್ಯವಿಲ್ಲ ; ಹಾಗೆ ಶಾಸ್ತ್ರದಿಂದ ತಿಳಿದುಬರುವುದು.

[ಶ್ರುತಿ ಮತ್ತು ಅದನ್ನು ಅನುಸರಿಸುವ ಸ್ಮೃತಿಗಳ ವಿಷಯದಲ್ಲಿ ಫಲ ಸಿಗಲಿಲ್ಲವೆಂಬ ಕಾರಣದಿಂದ ಅಪ್ರಾಮಾಣ್ಯವನ್ನು ಹೇಳಬಾರದು. ಶ್ರುತಿ ನಿತ್ಯ ; ಆದುದರಿಂದ ಅದು ಮತ್ತು ಅದನ್ನು ಅನುಸರಿಸುವ ಸ್ಮೃತಿಗಳು ವಿಲಕ್ಷಣವಾಗಿವೆ—ಸಾಮಾನ್ಯ ಗ್ರಂಥಗಳಂತೆ ಅಲ್ಲ. ನಿತ್ಯವಾದುದರಲ್ಲಿ ದೋಷ

ವಿರುವುದಿಲ್ಲ. ಅದು ಸ್ವತಃಪ್ರಮಾಣವಾದುದು. ಹಾಗೆ ಒಪ್ಪದಿದ್ದರೆ ಸರಪಳಿಯಂತೆ ಪ್ರಮಾಣ ಪರಂಪರೆಯನ್ನು ಒದಗಿಸುವುದು ಅಸಾಧ್ಯವಾಗಿ ಅನವಸ್ಥೆ ಎಂಬ ದೋಷ ಹುಟ್ಟುವುದು. "ನ ಚಕ್ಷುರ್ನ ಶ್ರೋತ್ರಂ ನ ತರ್ಕೋ ನ ಸ್ಮೃತಿಃ, ವೇದಾಹ್ಯೇವೈನಂ ವೇದಯಂತಿ—ಕಣ್ಣು, ಕಿವಿ, ತರ್ಕ, ಸ್ಮೃತಿ ಯಾವುದೂ ಅಲ್ಲ, ವೇದಗಳೇ ಬ್ರಹ್ಮನನ್ನು ಯಥಾರ್ಥವಾಗಿ ತಿಳಿಸಬಲ್ಲವು— ಎಂದು ಭಾಲ್ಲವೇಯ ಶ್ರುತಿ. "ವಾಚಾ ವಿರೂಪ, ನಿತ್ಯಯಾ"—ವಿರೂಪ! ನಿತ್ಯವಾದ ವಾಕ್ಕಿನಿಂದ ಹೊಗಳು—ಎಂಬ ಋಗ್ವೇದ ವಾಕ್ಯದಿಂದ ವೇದಗಳ ನಿತ್ಯತ್ವ ತಿಳಿದುಬರುವುದು.]

ಓಂ ದೃಶ್ಯತೇ ತು ಓಂ 5

ಫಲವೂ ಕಾಣಬರುವುದುಂಟು.

[ವೇದೋಕ್ತ ಕರ್ಮಗಳಿಂದ ಪ್ರತ್ಯಕ್ಷವಾಗಿ ಫಲ ಕಾಣಬರುವುದೂ ಉಂಟು. ಅಧಿಕಾರಿಗಳಿಗೆ ಮಾತ್ರ ಫಲ ದೊರೆಯುವುದು. ಮಂತ್ರಸಿದ್ಧಿ ಇಲ್ಲದ ಅನಧಿಕಾರಿಗಳಿಗೆ ಫಲ ಕಾಣಬರದು. ಭವಿಷ್ಯಪುರಾಣದಲ್ಲಿ "ಯದ್ಯೇಪೂಕ್ತಂ ನ ದೃಶ್ಯೇತ ಪೂರ್ವಕರ್ಮಾತ್ರ ಕಾರಣಮ್ । ನಾಪ್ರಾಮಾಣ್ಯಂ ಭವೇ- ದೇಷಾಂ ದೃಶ್ಯತೇ ಹ್ಯಧಿಕಾರತಃ"— ಈ ವೇದಾದಿ ಸ್ವತಃಪ್ರಮಾಣಗ್ರಂಥ ಗಳಲ್ಲಿ ಹೇಳಲ್ಪಟ್ಟ ಯಾವುದೇ ಫಲ ಕಾಣಬರದಿದ್ದರೆ ಅದಕ್ಕೆ ಪೂರ್ವಕರ್ಮವೇ ಕಾರಣವೆಂದು ಹೇಳಬೇಕು. ಇವಕ್ಕೆ ಅಪ್ರಾಮಾಣ್ಯವಿಲ್ಲ, ಅಧಿಕಾರವಿದ್ದಾಗ ಈ ಫಲಗಳು ಕಾಣಬರುವುವು—ಎಂದು ಹೇಳಿದೆ.]

ಓಂ ಅಭಿಮಾನಿವ್ಯಪದೇಶಸ್ತು ವಿಶೇಷಾನು- ಗತಿಭ್ಯಾಮ್ ಓಂ 6

ಅಭಿಮಾನಿದೇವತೆಗಳ ವಿಷಯವನ್ನು ಹೇಳಿರುವುದಾದರೋ, ವಿಶೇಷ ಮತ್ತು ಅನುಗತಿಗಳಿಂದ.

["ಭೂಮಿ ಮಾತನಾಡಿತು", "ಅಗ್ನಿ ಯೋಚಿಸಿತು", ಎಂಬ ಛಾಂದೋಗ್ಯ ವಾಕ್ಯಗಳು ಅಭಿಮಾನಿ ದೇವತೆಗಳನ್ನೇ ಕುರಿತು ಹೇಳಿದೆಯೆಂದು ಅರಿತುಕೊಳ್ಳ ಬೇಕು. "ಆಪೋಽಬ್ರುವನ್" ಎಂಬಲ್ಲಿ 'ಹೇಳಿದವರು' ನೀರಿನ ಅಭಿಮಾನಿ ದೇವತೆಗಳು. ಅವರು ಇತರರಗಿಂತ ವಿಶೇಷ ಸಾಮರ್ಥ್ಯವುಳ್ಳವರು ಹಾಗೂ

ಆದರಿಂದ ಸರ್ವಗತತ್ವ—ಎಲ್ಲದರಲ್ಲಿಯೂ ಇರುವುದು—ಎಂಬ ಗುಣವುಳ್ಳವರು.]

ಓಂ ದೃಶ್ಯತೇ ಚ ಓಂ 7

ಈ ಅಭಿಮಾನಿದೇವತೆಗಳ ಸಾಮರ್ಥ್ಯವನ್ನು ಕಾಣಲೂಬಹುದು.

[ಮಹಾಜ್ಞಾನಿಗಳು ಇಂತಹ ಸಾಮರ್ಥ್ಯವನ್ನು ಪ್ರತ್ಯಕ್ಷವಾಗಿ ನೋಡುವರು. ಭವಿಷ್ಯತ್ಪುರಾಣದಲ್ಲಿ "ಪೃಥಿವ್ಯಾದ್ಯಭಿಮಾನಿನ್ಯೋ ದೇವತಾಃ ಪ್ರಥಿತೌಜಸಃ । ಅಚಿಂತ್ಯಾಃ ಶಕ್ತಯಸ್ತಾಸಾಂ ದೃಶ್ಯಂತೇ ಮುನಿಭಿಶ್ಚ ತಾಃ । ತಾಶ್ಚ ಸರ್ವಗತಾ ನಿತ್ಯಂ ವಾಸುದೇವೈಕಸಂಶ್ರಯಾಃ"—ಪೃಥಿವೀ ಮೊದಲಾದವುಗಳಲ್ಲಿನ ಅಭಿಮಾನಿ ದೇವತೆಗಳು ಪ್ರಸಿದ್ಧ ಸಾಮರ್ಥ್ಯವುಳ್ಳವರು, ಅಚಿಂತ್ಯವಾದ ಅವರ ಶಕ್ತಿಗಳನ್ನು ಮುನಿಗಳು ನೋಡಬಲ್ಲರು. ಆ ದೇವತೆಗಳು ವಾಸುದೇವನ ಆಶ್ರಯ ಪಡೆದು ಯಾವಾಗಲೂ ಎಲ್ಲದರಲ್ಲಿಯೂ ಇರಬಲ್ಲರು—ಎಂದು ಹೇಳಿದೆ.]

ಓಂ ಅಸದಿತಿ ಚೇನ್ನ, ಪ್ರತಿಷೇಧಮಾತ್ರತ್ವಾತ್ ಓಂ 8

ಪ್ರಾಗಭಾವರೂಪವಾದ ಅಸತ್ತೇ ಜಗತ್ಕಾರಣವೆನ್ನುವುದು ಸರಿಯಲ್ಲ; ಅದು ಕೇವಲ ಅಡ್ಡಿಯಾಗುವುದು.

["ಅಸದೇವೇದಮಗ್ರ ಆಸೀತ್"—ಎಲ್ಲಕ್ಕಿಂತ ಮೊದಲು ಅಸತ್ತೇ ಇದ್ದಿತು—ಮತ್ತು "ಅಸತಃ ಸದಜಾಯತ"—ಅಸತ್ತಿನಿಂದ ಸದ್ವಸ್ತು ಹುಟ್ಟಿತು—ಎಂಬುವು ಛಾಂದೋಗ್ಯ ಮತ್ತು ಋಗ್ವೇದಗಳಲ್ಲಿನ ವಾಕ್ಯಗಳು, ಇದರಿಂದ ಅಸತ್—ಸರ್ವಥಾ ಇಲ್ಲದಿರುವುದು ಅಥವಾ ಶೂನ್ಯ—ಜಗತ್ತಿಗೆ ಕಾರಣ, ಎನ್ನುವುದು ಶ್ರುತಿಸಂಮತವಾದ ಅಭಿಪ್ರಾಯವಲ್ಲ, ಎಂದು ಸೂತ್ರದ ಅಭಿಪ್ರಾಯ. ಅಸತ್ತು ಜಗತ್ತಿಗೆ ಕಾರಣವಲ್ಲ, ಅದು ಎಲ್ಲವನ್ನೂ ಪ್ರತಿಷೇಧಿಸುತ್ತದೆ—ಇಲ್ಲವೆನ್ನುತ್ತದೆ—ಅಷ್ಟೇ.]

ಓಂ ಅಪೀತೌ ತದ್ವತ್ಪ್ರಸಂಗಾದಸಮಂಜಸಮ್ ಓಂ 9

ಪ್ರಳಯಕಾಲದಲ್ಲಿಯೂ ಹೀಗೆಯೇ ಆಗಬೇಕಾಗುವುದರಿಂದ, ಇದು ಅಸಮಂಜಸ.

[ಅಸತ್ತಿನಿಂದ ಸತ್—ಜಗತ್ತು—ಹುಟ್ಟಿತು, ಎನ್ನುವುದಾದರೆ, ಪ್ರಳಯ ಕಾಲದಲ್ಲಿಯೂ ಹೀಗೆಯೇ ಎಲ್ಲವೂ ನಾಶಹೊಂದಿ ಮೊದಲಿನ ಅಸತ್ತೇ ಉಳಿಯ ಬೇಕಾಗುವುದು. ಇದು ಅಸಮಂಜಸ—ಜಗತ್ತು ಅಸತ್ತಿನಿಂದ ಅಥವಾ ಅಭಾವ ದಿಂದ ಹುಟ್ಟಿದೆ, ಎಂಬುದು ಸರಿಯಲ್ಲ.]

ಓಂ ನ ತು, ದೃಷ್ಟಾಂತಭಾವಾತ್ ಓಂ 10

ಹಾಗಾಗುವುದಿಲ್ಲ, ದೃಷ್ಟಾಂತವಿರುವುದರಿಂದ.

["ಅಸತ್ತಿನಿಂದ ಜಗತ್ತು ಹುಟ್ಟಿದೆ; ಜಗತ್ತೂ ನಾಶಹೊಂದಿ ಅಸತ್ತೇ ಆಗುವುದು" ಎನ್ನುವುದು ಸರಿಯಾಗದು. ಪ್ರಳಯದಲ್ಲಿ ಯಾವ ಸತ್ತ್ವವೂ ಇರದೆ ಇರುವುದಿಲ್ಲ. ಸತ್ ಪದಾರ್ಥದಿಂದ ಉತ್ಪತ್ತಿಯಾಗುವುದೂ ಹಾಗೂ ನಾಶಹೊಂದಿದಮೇಲೆ ಶೇಷ ಇರುವುದೂ ಕಂಡುಬಂದಿದೆ. ಈ ದೃಷ್ಟಾಂತ ದಿಂದ ಪ್ರಳಯದಲ್ಲಿ ಎಲ್ಲವೂ ಲಯವಾಗಿ ಬಿಡುವುದಿಲ್ಲ.]

ಓಂ ಸ್ವಪಕ್ಷದೋಷಾಚ್ಚ ಓಂ 11

ತನ್ನ ಪಕ್ಷದಲ್ಲಿ ದೋಷವಿರುವುದರಿಂದಲೂ (ಆಕ್ಷೇಪ ಸರಿಯಲ್ಲ).

[ಅಸದ್ವಾದಿಗಳ ಪಕ್ಷದಲ್ಲಿ ದೋಷವಿರುವುದು, ಅವರಿಗೆ ದೃಷ್ಟಾಂತವೇ ಇಲ್ಲ. ಆದುದರಿಂದ ಪ್ರಳಯದಲ್ಲಿ ಅಸತ್ತೇ ಉಳಿದಿರುವುದೆಂದು ಹೇಳು ವುದನ್ನು ಒಪ್ಪಲಾಗದು.]

ಓಂ ತರ್ಕಾಪ್ರತಿಷ್ಠಾನಾದಪ್ಯನ್ಯಥಾಽನುಮೇಯಮಿತಿ ಚೇತ್, ಏವಮಪ್ಯನಿರ್ಮೋಕ್ಷಪ್ರಸಂಗಃ ಓಂ 12

ತರ್ಕ ಅಪ್ರತಿಷ್ಠವಾಗಿರುವುದರಿಂದಲೂ ಬೇರೆ ರೀತಿಯ ಅನುಮಾನ ವನ್ನು ಹೇಳಬಹುದು, ಎನ್ನುವುದಾದರೆ ಹೀಗೂ 'ಮೋಕ್ಷ ಇಲ್ಲ' ಎಂಬ ಪ್ರಸಂಗ ಹುಟ್ಟುವುದು.

["ತರ್ಕ ಇಲ್ಲಿಯವರೆಗೆ ಮಾತ್ರ ಹೋಗಬಹುದು, ಮುಂದೆ ತರ್ಕದ ಮಾರ್ಗ ಸಾಗದು" ಎಂಬ ನಿಯಮವೇನೂ ಇಲ್ಲದಿರುವುದರಿಂದ ಒಂದು ರೀತಿಯ ವಾದಕ್ಕೆ ಪ್ರತಿಯಾಗಿ ಅದಕ್ಕೆ ವಿರುದ್ಧವಾದ ಮತ್ತೊಂದು ವಾದವನ್ನು ತರ್ಕ ದಿಂದ ಸಾಧಿಸಬಹುದು, ಎಂಬುದು ಪೂರ್ವಪಕ್ಷ. ಆದರೆ ಇದು ಸಾಧುವಲ್ಲ. ಹೀಗೆ ಮಾಡಬಹುದಾದರೆ, ಪ್ರಮಾಣಗಳಿಂದ ಸಿದ್ಧವಾಗಿರುವ ಮೋಕ್ಷ ಇಲ್ಲವೇ

ಇಲ್ಲವೆಂದು ಬರೇ ಅನುಮಾನವನ್ನು ಹೇಳಬಹುದು. ಆದುದರಿಂದ ಯಾವುದು ಆಗಮಾದಿ ಪ್ರಮಾಣಸಿದ್ಧವೋ ಅದನ್ನೇ ಒಪ್ಪಬೇಕು ; ಬೇರೆ ಅನುಮಾನವನ್ನು ಬಳಸಬಾರದು. ಮನುಸ್ಮೃತಿಯಲ್ಲಿ "ಆರ್ಷಂ ಧರ್ಮೋಪದೇಶಂ ಚ ವೇದಶಾಸ್ತ್ರಾವಿರೋಧಿನಾ । ಯಸ್ತರ್ಕೇಣಾನುಸಂಧತ್ತೇ ಸ ಧರ್ಮಂ ವೇದ ನೇತರಃ"—ಋಷಿಪ್ರೋಕ್ತವಾದ ಧರ್ಮೋಪದೇಶವನ್ನು ವೇದ ಮತ್ತು ಶಾಸ್ತ್ರ ಗಳಿಗೆ ವಿರೋಧಬಾರದಂತೆ ತರ್ಕದಿಂದ ಯಾವನು ಅನುಸಂಧಾನ ಮಾಡು ವನೋ ಅವನೇ ಧರ್ಮವನ್ನು ತಿಳಿಯುತ್ತಾನೆ, ಇನ್ನಾರೂ ಅಲ್ಲ—ಎಂದು ಹೇಳಿ, ತರ್ಕ ಆಗಮಕ್ಕೆ ಪೋಷಕವಾಗಿಯೇ ಇರಬೇಕೆಂದು ಹೇಳಲಾಗಿದೆ.]

ಓಂ ಏತೇನ ಶಿಷ್ಟಾಪರಿಗ್ರಹಾ ಅಪಿ ವ್ಯಾಖ್ಯಾತಾಃ ಓಂ 13

ಇದರಿಂದ ಸಜ್ಜನರು ಒಪ್ಪದ ಉಳಿದ ಎಲ್ಲ ವಾದಗಳಿಗೂ ವ್ಯಾಖ್ಯಾನ ಮಾಡಿದಂತಾಯಿತು.

[ಸತ್ ಕಾರಣ, ಎಂಬ ವಿಷಯದಲ್ಲಿ ದೃಷ್ಟಾಂತವಿದೆ, ಇತರ ವಾದಗಳಲ್ಲಿ ದೃಷ್ಟಾಂತವಿಲ್ಲ, ಎಂದು ಹೇಳಿ ಅಸದ್ವಾದವನ್ನು ಖಂಡಿಸಿದ ಮೇಲೆ ವೇದ ವಿರುದ್ಧವಾದ, ಆದುದರಿಂದಲೇ ಸಜ್ಜನರಿಗೆ ಸಮ್ಮತವಲ್ಲದ, "ಜಗತ್ತಿಗೆ ಕರ್ತೃವೇ ಇಲ್ಲ, ಅಚೇತನವೇ ಕರ್ತೃ, ಜೀವ ಕರ್ತಾ" ಮೊದಲಾದ ಇತರ ವಾದಗಳನ್ನು ನಿರಾಕರಿಸಿದಂತೆಯೇ ಆಯಿತು. ದುಃಖಾದಿ ವಿಷಯದಲ್ಲಿ ಜೀವ ಹೇಗೆ ಅಸ್ವತಂತ್ರನೋ ಹಾಗೆಯೇ ಸೃಷ್ಟ್ಯಾದಿ ಇತರ ಕಾರ್ಯಗಳಲ್ಲಿಯೂ ಅವನು ಅಸ್ವತಂತ್ರನೇ. ಶ್ರುತಿಗಳಲ್ಲಿ ಹೇಳಿರುವ ಪದಗಳು ಮುಖ್ಯವಾಗಿ ಬ್ರಹ್ಮನನ್ನೇ ಬೋಧಿಸುವುವು. ವಿರೋಧವಿಲ್ಲದಿರುವಾಗ ಅಮುಖ್ಯವೃತ್ತಿ ಯಿಂದ ಪ್ರಧಾನ, ಜೀವ ಮೊದಲಾದ ಶಬ್ದಗಳು ಆಯಾ ವಸ್ತುಗಳನ್ನೇ ನಿರ್ದೇಶಿಸುವುವು. ವಿರೋಧ ಪ್ರಬಲವಾಗಿರುವಾಗ ಆ ಶಬ್ದಗಳಿಂದ ಬ್ರಹ್ಮನೇ ವಾಚ್ಯನಾಗುತ್ತಾನೆ, ಎಂದು ತಿಳಿಯಬೇಕು.]

ಓಂ ಭೋಕ್ತ್ರಾಪತ್ತೇರವಿಭಾಗಶ್ಚೇತ್, ಸ್ಯಾಲ್ಲೋಕವತ್ ಓಂ 14

ಭೋಕ್ತೃತ್ವ ಬರುವುದರಿಂದ ಭೇದವಿಲ್ಲವೆಂದರೆ, ಲೋಕದಲ್ಲಿರು ವಂತೆಯೇ ಶ್ರುತಿಪ್ರಯೋಗವೂ ಆಗುವುದು.

["ಕರ್ಮಾಣಿ ವಿಜ್ಞಾನಮಯಶ್ಚ ಆತ್ಮಾ, ಪರೇಽವ್ಯಯೇ ಸರ್ವ ಏಕೀ-ಭವಂತಿ"—ಎಲ್ಲ ಕರ್ಮಗಳೂ ವಿಜ್ಞಾನಮಯನಾದ ಆತ್ಮನೂ ನಾಶರಹಿತನಾದ ಪರಮಾತ್ಮನಲ್ಲಿ ಸೇರಿ ಒಂದಾಗುವರು—ಎಂಬ ಮುಂಡಕೋಪನಿಷತ್ತಿನಲ್ಲಿ "ಜೀವನು ಬ್ರಹ್ಮನೇ ಆಗಿಬಿಡುವನು, ಅವರಿಬ್ಬರಿಗೆ ಭೇದವೇ ಇಲ್ಲ" ಎಂದು ಹೇಳಿದೆ. ಹಾಗಾದರೆ ಮುಕ್ತಿಗೆ ಮೊದಲೂ ಭೇದ ಇರಬಾರದಲ್ಲ! ಒಬ್ಬ ಮತ್ತೊಬ್ಬನಾಗುವುದು ಶಕ್ಯವಿಲ್ಲವಲ್ಲ! "ನೀರನ್ನು ನೀರಿಗೆ ಸೇರಿಸಿದರೆ ನೀರೇ ಆಗುವುದು", ಎಂಬುದು ಲೋಕವ್ಯವಹಾರದ ಹೇಳಿಕೆ; ಆದರೂ ಒಳಭೇದ ಇದ್ದೇ ಇರುವುದಲ್ಲವೇ? "ಯಥೋದಕಂ ಶುದ್ಧೇ ಶುದ್ಧಮಾಸಿಕ್ತಂ ತಾದೃ-ಗೇವ ಭವತಿ"—ಶುದ್ಧವಾದ ನೀರಿನಲ್ಲಿ ಶುದ್ಧವಾದ ನೀರನ್ನು ಬೆರೆಸಿದರೆ ಅದು ಹಾಗೆಯೇ ಆಗಿಬಿಡುವುದು — ಎಂದು ಶ್ರುತಿವಾಕ್ಯ. ಸ್ಕಾಂದಪುರಾಣದಲ್ಲಿ "ಉದಕಂ ತೂದಕೇ ಸಿಕ್ತಂ ಮಿಶ್ರಮೇವ ಯಥಾ ಭವೇತ್ । ನ ಚೈತದೇವ ಭವತಿ ಯತೋ ವೃದ್ಧಿಃ ಪ್ರದೃಶ್ಯತೇ ॥ ಏವಮೇವ ಹಿ ಜೀವೋಽಪಿ ತಾದಾತ್ಮ್ಯಂ ಪರಮಾತ್ಮನಾ । ಪ್ರಾಪ್ತೋಽಪಿ ನಾಸೌ ಭವತಿ ಸ್ವಾತಂತ್ರ್ಯಾದಿ-ವಿಶೇಷಣಾತ್"—ನೀರಿನೊಡನೆ ನೀರನ್ನು ಸೇರಿಸಿದರೆ ಮಿಶ್ರವೇ ಆದೀತು, ಅದೇ ಆಗಲಾರದು! ನೀರಿನ ಪ್ರಮಾಣ ಹೆಚ್ಚುವುದು ಕಾಣಬರುವುದಿಲ್ಲವೇ? ಹಾಗೆಯೇ ಜೀವನು ಪರಮಾತ್ಮನೊಡನೆ ತಾದಾತ್ಮ್ಯವನ್ನು ಪಡೆದನೆಂದರೂ ಅವನೇ ಆಗಲಾರ, ಏಕೆಂದರೆ ಅವನಿಗೆ ಸ್ವಾತಂತ್ರ್ಯಾದಿಗುಣಗಳು ಬರಲಾರವು—ಎಂದು ಹೇಳಿದೆ.]

ಓಂ ತದನನ್ಯತ್ವಂ, ಆರಂಭಣ-ಶಬ್ದಾದಿಭ್ಯಃ ಓಂ 15

ಕಾರ್ಯಕಾರಣಗಳ ಅನನ್ಯತ್ವ 'ಆರಂಭಣ' ಮೊದಲಾದ ಶಬ್ದಗಳಿಂದ ಸಿದ್ಧವಾಗುವುದು.

[ಲೋಕದಲ್ಲಿ ಒಂದು ಪದಾರ್ಥದ ಸೃಷ್ಟಿಯಾಗುವಾಗ ಸ್ವತಂತ್ರನಾದ ಒಬ್ಬ ಪುರುಷನನ್ನೂ ಅವನಿಗೆ ಇರುವ ಅನೇಕ ಸ್ವತಂತ್ರಸಾಧನಗಳನ್ನೂ ಕಾಣುತ್ತೇವೆ. ಬ್ರಹ್ಮನ ಸೃಷ್ಟಿಯಲ್ಲಿ ಹೀಗಾಗುವುದಿಲ್ಲ. ಸ್ವರೂಪ ಸಾಮರ್ಥ್ಯದಿಂದಲೇ ಅವನು ಸೃಷ್ಟಿ ಮಾಡುವನು. "ಕಿಂ ಸ್ವಿದಾಸೀದಧಿಷ್ಠಾನಂ, ಆರಂಭಣಂ, ಕತಮತ್ ಸ್ವಿತ್ ಕಥಾಽಸೀತ್?"—ಆಗ ಅಧಿಷ್ಠಾನ ಯಾವುದಿತ್ತು,

ಸಾಧನಗಳು ಯಾವುವು, ಅವು ಯಾವ ರೂಪದಲ್ಲಿದ್ದವು—ಎಂಬ ಋಗ್ವೇದದ ಆಕ್ಷೇಪಣೆಯಿಂದ ಸ್ವತಂತ್ರನಾದ ಪರಬ್ರಹ್ಮ ಸೃಷ್ಟಿಗಾಗಿ ಯಾವ ಸಾಧನ ಸಾಮಗ್ರಿಯನ್ನೂ ಅಪೇಕ್ಷಿಸುವುದಿಲ್ಲ, ಎಂದು ತಿಳಿಯಬರುವುದು. ಪರತಂತ್ರ ನಾದವನಿಗೆ ಸಾಧನ ಬೇಕು, ಸ್ವತಂತ್ರನಿಗೇಕೆ ?]

ಓಂ ಭಾವೇ ಚೋಪಲಬ್ಧೇಃ ಓಂ 16

ಸ್ವತಂತ್ರ ಸಾಧನಗಳಿದ್ದರೆ ಅವು ಸಿಗಬೇಕಾಗಿತ್ತು.

[ಪರಬ್ರಹ್ಮನಿಗಿಂತ ಭಿನ್ನವಾದ ಸಾಧನಗಳು ಜಗತ್ತಿನ ಉತ್ಪತ್ತಿಗಾಗಿ ಇದ್ದಿದ್ದರೆ ಅವು ಪ್ರಮಾಣಗಳಿಗೆ ಸಿಗಬೇಕಾಗಿತ್ತು. "ಅನುಕ್ತಂ ಪಂಚಭಿರ್ವೇದೈರ್ನ ವಸ್ತ್ವಸ್ತಿ ಕುತಶ್ಚನ"—ಐದು ವೇದಗಳಿಂದಲೂ ಹೇಳಲ್ಪಡದಿರುವ ವಸ್ತುವೇ ಎಲ್ಲಿಯೂ ಇಲ್ಲ" ಎಂದು ಸ್ಕಾಂದಪುರಾಣ ತಿಳಿಸುತ್ತದೆ.]

ಓಂ ಸತ್ವಾಚ್ಚಾವರಸ್ಯ ಓಂ 17

ಅಧೀನವಾದ ಸಾಧನ ಇರುವುದರಿಂದಲೂ.

["ಅದ್ಭ್ಯಃ ಸಂಭೂತಃ ಪೃಥಿವ್ಯೈ ರಸಾಚ್ಚ, ವಿಶ್ವಕರ್ಮಣಃ ಸಮವರ್ತ-ತಾಧಿ"—ನೀರು, ಭೂಮಿ, ರಸ ಇವುಗಳೊಡನೆ ಪುರುಷ ಹುಟ್ಟಿದನು—ಎಂಬ ತೈತ್ತಿರೀಯ ಆರಣ್ಯಕದ ವಾಕ್ಯದಿಂದ ಬೇರೆ ಸಾಧನಗಳು ಇರುವುದು ಕಂಡು ಬರುತ್ತದೆಯಲ್ಲ, ಎಂದು ಆಕ್ಷೇಪಿಸಿದರೆ ಅವೆಲ್ಲ ಕಡಿಮೆಯ ಅಂತಸ್ತಿನ ಸಾಧನ ಗಳು, ಈಶ್ವರನ ಅಧೀನವಲ್ಲಿಯೇ ಇರುವುವು, ಸ್ವತಂತ್ರಸಾಧನಗಳಲ್ಲ, ಎಂದು ಸಮಾಧಾನ. "ಏಕಃ ಪರಮ ಆಸೀತ್"—ಒಬ್ಬನೇ ಶ್ರೇಷ್ಠ ಆತ್ಮ ಇದ್ದನು— ಎಂದು ಕಾಷಾಯಣ ಶ್ರುತಿ ತಿಳಿಸುವುದು, ಇತರ ವಸ್ತುಗಳು ಅವನ ವಶ ದಲ್ಲಿಯೇ ಇದ್ದವು.]

ಓಂ ಅಸದ್ವ್ಯಪದೇಶಾನ್ನೇತಿ ಚೇನ್ನ, ಧರ್ಮಾಂತರೇಣ ವಾಕ್ಯಶೇಷಾತ್ ಓಂ 18

ಅಸತ್ತನ್ನು ಹೇಳಿರುವುದರಿಂದ ಸೃಷ್ಟಿಗೆ ಮೊದಲು ಯಾವ ಸಾಧನವೂ ಇರಲಿಲ್ಲ, ಎನ್ನುವುದು ಸರಿಯಲ್ಲ; ಧರ್ಮಾಂತರದಿಂದ ಇನ್ನೂ ಕೆಲವು ವಸ್ತು ಗಳನ್ನು ಹೇಳಿರುವುದು ವಾಕ್ಯಶೇಷದಿಂದ ತಿಳಿದುಬರುತ್ತದೆ.

[ಸತ್ತೂ ಇರಲಿಲ್ಲ, ಅಸತ್ತೂ ಇರಲಿಲ್ಲ, ಎನ್ನುವುದು ಸರಿಯಲ್ಲ. ಅವ್ಯಕ್ತತ್ವ, ಪಾರಂತಂತ್ರ್ಯ ಮೊದಲಾದ ಬೇರೆ ಧರ್ಮಗಳಿಂದ ಅಸತ್ತ್ವವನ್ನು

ಹೇಳಲಾಗಿದೆ. ಋಗ್ವೇದದಲ್ಲಿ "ತಮ ಆಸೀತ್"— ಕತ್ತಲೆ ಇತ್ತು—ಎಂಬ ವಾಕ್ಯಶೇಷದಿಂದ ಪ್ರಕೃತ್ಯಾದಿಗಳು ಇದ್ದವು, ಎನ್ನಬೇಕಾಗುತ್ತದೆ. ಅನ್ಯಥಾ-ಪ್ರಮಾಣವಿಲ್ಲ.]

ಓಂ ಯುಕ್ತೇಃ ಶಬ್ದಾಂತರಾಚ್ಚ ಓಂ 19

ಯುಕ್ತಿಯಿಂದಲೂ, ಬೇರೆ ಶ್ರುತಿವಾಕ್ಯಗಳಿಂದಲೂ.

[ಸಾಧನಗಳು ಕಾರ್ಯನಿರ್ವಾಹಕ್ಕಾಗಿ ನೆರವಾಗುವುದು, ಪರಮಾತ್ಮನ ಅಧೀನದಲ್ಲಿರುವುದರಿಂದಲೇ. ಸಾಧನ ಸಂಪತ್ತಿಯೂ ಕೂಡ ಪರಮಾತ್ಮನ ಐಶ್ವರ್ಯವನ್ನೇ—ಪ್ರಭುತ್ವವನ್ನೇ—ಸೂಚಿಸುವುದು. ಇದರಿಂದ ಬೇರೆ ಬೇರೆ ಸಾಧನಗಳಿಂದಲೂ ಪರಮಾತ್ಮ ಸೃಷ್ಟಿ ಮಾಡುತ್ತಾನೆಂಬುದೂ ಸಿದ್ಧವಾಗುವುದು. "ಅದ್ಭ್ಯಃ ಸಂಭೂತೋ ಹಿರಣ್ಯಗರ್ಭ ಇತ್ಯಷ್ಟೌ"—ನೀರಿನ ಜೊತೆಗೇ ಹಿರಣ್ಯಗರ್ಭನೂ ಹುಟ್ಟಿದನು. ಹೀಗೆಯೇ ಅಷ್ಟದಿಕ್ಪಾಲಕರೂ ಹುಟ್ಟಿದರು—ಎಂದು ಮಹಾನಾರಾಯಣೀಯೋಪನಿಷತ್ತು ಹೇಳುತ್ತವೆ.]

ಓಂ ಪಟವಚ್ಚ ಓಂ 20

ಮತ್ತು ಬಟ್ಟೆಯ ಹಾಗೆ.

[ಬಟ್ಟೆ ಮೊದಲಾದವನ್ನು ಬೇರೆ ಸಾಧನಗಳಿಂದ ತಯಾರು ಮಾಡುವುದು ಕಂಡುಬಂದಿದೆ. ಹೀಗೆಯೇ ಕರ್ತೃಭಿನ್ನವಾದ ಸಾಧನಗಳಿಂದ ಸೃಷ್ಟಿ ಸಾಧ್ಯವಾಗುತ್ತದೆ.]

ಓಂ ಯಥಾಪ್ರಾಣಾದಿಃ ಓಂ 21

ಪ್ರಾಣಾದಿಗಳಂತೆ.

[ಪ್ರಾಣಾದಿಗಳು ಸ್ವತಂತ್ರವಲ್ಲ, ಹಾಗೆಯೇ ಇತರ ಸಾಧನಗಳೂ ಸ್ವತಂತ್ರವಲ್ಲ. ಶರೀರೇಂದ್ರಿಯಪ್ರಾಣಾದಿಗಳಲ್ಲಿ ಈಶ್ವರ ಪ್ರವೇಶಿಸುವುದರಿಂದಲೇ ಅವು ಸಾಧನಗಳಾಗುವುವು. "ಪ್ರಕೃತಿಂ ಪುರುಷಂ ಚೈವ ಪ್ರವಿಶ್ಯ ಪುರುಷೋತ್ತಮಃ । ಕ್ಷೋಭಯಾಮಾಸ ಭಗವಾನ್ ಸೃಷ್ಟ್ಯರ್ಥಂ ಜಗತೋ ವಿಭುಃ"—ಜಗತ್ತಿಗೆ ಒಡೆಯನೂ ಪುರುಷೋತ್ತಮನೂ ಆದ ವಿಷ್ಣು ಪ್ರಕೃತಿ ಮತ್ತು ಪುರುಷರೊಳಗೆ ಪ್ರವೇಶ ಮಾಡಿ, ಜಗತ್ತಿನ ಸೃಷ್ಟಿಗಾಗಿ ಅದನ್ನು ಕ್ಷೋಭೆಗೊಳಿಸಿದನು—ಎಂದು ಕೂರ್ಮಪುರಾಣ ತಿಳಿಸುತ್ತದೆ.]

ಓಂ ಇತರವ್ಯಪದೇಶಾತ್ ಹಿತಾಕರಣಾದಿ-ದೋಷಪ್ರಸಕ್ತಿಃ ಓಂ 22

ಬ್ರಹ್ಮನಿಗಿಂತ ಬೇರೆಯಾದ ಜೀವ ಸ್ವಯಂ ಕರ್ತಾ ಎನ್ನುವುದಾದರೆ ಅವನಿಗೆ ಹಿತವನ್ನು ಮಾಡದಿರುವುದು (ಹಾಗೂ ಅಹಿತವನ್ನು ಮಾಡುವುದು) ಮೊದಲಾದ ದೋಷ ಬರುವ ಪ್ರಸಂಗವಿದೆ.

[ಜೀವನೇ ಕರ್ತಾ, ಎನ್ನುವ ಪಕ್ಷದಲ್ಲಿ ತನಗೆ ಹಿತವಾದುದನ್ನು ಮಾಡದಿರುವುದೂ, ಅಹಿತವನ್ನು ಮಾಡುವುದೂ ಇರಬಾರದಷ್ಟೆ. ಜಗತ್ತನ್ನು ಜೀವ ಸೃಷ್ಟಿ ಮಾಡುವುದಾದರೆ ದುಃಖಪ್ರಾಪ್ತಿ ಏಕೆ ಇರಬೇಕು, ಸುಖಪ್ರಾಪ್ತಿ ಏಕೆ ಇರಬಾರದು.' ಆದುದರಿಂದ ಜೀವ ಯಾವ ಕೆಲಸಕ್ಕೂ ಸ್ವತಂತ್ರ ಕರ್ತಾ ಆಗಲಾರ. ಭಗವಂತನಿಗೆ ಅಧೀನನಾಗಿಯೇ ಇದ್ದು ಅವನು ಕೆಲಸ ಮಾಡಬಲ್ಲ.]

ಓಂ ಅಧಿಕಂ ತು ಭೇದನಿರ್ದೇಶಾತ್ ಓಂ 23

ಬ್ರಹ್ಮ ಅಧಿಕಗುಣಶಕ್ತಿಗಳುಳ್ಳವನು, ಹಾಗೆ ಭೇದವನ್ನು ಹೇಳಿರುವುದರಿಂದ.

[ಬ್ರಹ್ಮನಿಗೆ ಜೀವನಿಗಿರುವಂತೆ ಶ್ರಮ, ಚಿಂತೆ ಮೊದಲಾದ ದೋಷಗಳು ಇರುವುದೇ ಇಲ್ಲ; ಅವನಿಗೆ ಅಧಿಕ ಸಾಮರ್ಥ್ಯವಿದೆ. "ಶ್ರೋತಾ ಮಂತಾ ದ್ರಷ್ಟಾಽದೇಷ್ಟಾಽಘೋಷ್ಟಾ ವಿಜ್ಞಾತಾ ಪ್ರಜ್ಞಾತಾ, ಸರ್ವೇಷಾಂ ಭೂತಾನಾ-ಮಂತರಪುರುಷಃ" ಎಂಬ ಐತರೇಯಾರಣ್ಯಕ ವಾಕ್ಯದಿಂದ ಬ್ರಹ್ಮನು "ಕೇಳುವವನು, ಚಿಂತಿಸುವವನು, ನೋಡುವವನು, ಅಪ್ಪಣೆ ಮಾಡುವವನು, ಘೋಷಿಸುವವನು, ತಿಳಿಯುವವನು ಹಾಗೂ ಚೆನ್ನಾಗಿ ತಿಳಿದಿರುವವನು. ಅವನು ಎಲ್ಲ ಪ್ರಾಣಿಗಳ ಅಂತರ್ಯಾಮಿ" ಎಂದು ಸಿದ್ಧವಾಗುತ್ತದೆ. ಎಲ್ಲ ಪ್ರಾಣಿಗಳ—ಸುಖದುಃಖಗಳಿಂದ ಕೂಡಿದ ಜೀವರ—ಅಂತರ್ಯಾಮಿಯಾಗಿದ್ದು ಸುಖವನ್ನೇ ಅನುಭವಿಸುವವನು ಅಧಿಕ ಶಕ್ತಿಯುಳ್ಳವನೇ !]

ಓಂ ಅಶ್ಮಾದಿವಚ್ಚ ತದನುಪಪತ್ತಿಃ ಓಂ 24

ಮತ್ತು ಕಲ್ಲು ಮೊದಲಾದುವಂತೆ ಅದು ಹೊಂದುವುದಿಲ್ಲ.

[ಜೀವನಿಗೆ ಚೈತನ್ಯವಿರುವುದು; ಆದರೂ ಕಲ್ಲು, ಮಣ್ಣುಗಳಂತೆ ಅವನು ಅಸ್ವತಂತ್ರನೇ. ಆದುದರಿಂದಲೂ ಜೀವನಿಗೆ ಸ್ವತಃ ಕರ್ತೃತ್ವವಿಲ್ಲ.

ಕಲ್ಲಿನಂತೆಯೇ ಅಸ್ವತಂತ್ರನಾದ ಜೀವನಿಗೆ ಜಗತ್ತಿನ ಸೃಷ್ಟಿ ಮೊದಲಾದ ಮಹಾ ಕಾರ್ಯಗಳನ್ನು ಮಾಡುವ ಸಾಮರ್ಥ್ಯ ಎಲ್ಲಿಂದ ಬಂದೀತು ?]

ಓಂ ಉಪಸಂಹಾರದರ್ಶನಾನ್ನೇತಿ ಚೇತ್, ಕ್ಷೀರವದ್ಧಿ ಓಂ 25

ತಾನು ಆರಂಭಿಸಿದ ಕಾರ್ಯವನ್ನು ಮುಗಿಸುವುದು ಕಂಡುಬಂದಿದೆ, ಎಂದರೆ, ಹಾಗಲ್ಲ, ಹಾಲಿನಂತೆ ತಾನೆ !

[ಒಬ್ಬ ಮನುಷ್ಯ ತಾನು ಆರಂಭಿಸಿದ ಕೆಲಸವನ್ನು ಮುಗಿಸಿದುದನ್ನು ನೋಡಿ ಜೀವ ಸ್ವತಂತ್ರಕರ್ತಾ, ಎನ್ನಬಾರದು. ಹಸು ಹಾಲು ಕೊಡುವುದು ಅದರಲ್ಲಿರುವ ಪ್ರಾಣದಿಂದಲೇ—ಸತ್ತ ಹಸು ಕರೆಯದಷ್ಟೆ ! ಹಾಗೆಯೇ ಜೀವನಲ್ಲಿ ಕಾರ್ಯದ ಮುಕ್ತಾಯ ಕಂಡುಬಂದರೂ ಅವನು ಅಸ್ವತಂತ್ರನಾದುದರಿಂದ ನಿಜವಾದ ಕರ್ತಾ ಸ್ವತಂತ್ರನಾಗಿರುವ ಪರಮಾತ್ಮನೇ. "ಯ ಆತ್ಮಾನಮಂತರೋ ಯಮಯತಿ" — ಯಾವ ಈಶ ಒಳಗೇ ಇದ್ದು ಜೀವನನ್ನು ನಿಯಂತ್ರಿಸುತ್ತಾನೆಯೋ—ಎಂದು ಬೃಹದಾರಣ್ಯಕದಲ್ಲಿ ಹೇಳಿದೆ.]

ಓಂ ದೇವಾದಿವದಪಿ ಲೋಕೇ ಓಂ 26

ಲೋಕದಲ್ಲಿ ದೇವಾದಿಗಳು ಇರುವಂತೆಯೇ.

[ಕಾರ್ಯ ಮಾಡುವ ಈಶ್ವರ ಕಾಣಬರುವುದಿಲ್ಲವಲ್ಲ, ಎಂದು ವಿರೋಧವನ್ನು ಹೇಳಬಾರದು. ದೇವತೆಗಳಿಗೆ ಇರುವಂತೆಯೇ ಪರಮಾತ್ಮನಿಗೆ ಅದೃಶ್ಯತ್ವ (ಕಣ್ಣಿಗೆ ಕಾಣದಿರುವುದು) ಎಂಬ ಶಕ್ತಿ ಇರುವುದು. ಲೋಕದಲ್ಲಿ ಪಿಶಾಚಗಳಿಗೂ ಅಂತಹ ಶಕ್ತಿ ಇರುವುದು ಕಂಡುಬರುವುದು ; ಇನ್ನು ಪರಮೇಶ್ವರನ ವಿಷಯದಲ್ಲಿ ಏನು ಹೇಳಬೇಕು ?]

ಓಂ ಕೃತ್ಸ್ನಪ್ರಸಕ್ತಿರ್ನಿರವಯವತ್ವಶಬ್ದ-ಕೋಪೋ ವಾ ಓಂ 27

ಎಲ್ಲವೂ ಎಂಬ ಪ್ರಸಕ್ತಿಯಾಗಲಿ, ನಿರವಯವನ್ನು ಹೇಳುವ ವಾಕ್ಯದ ವಿರೋಧವಾಗಲಿ.

[ಜೀವಕರ್ತೃತ್ವಕ್ಕೆ ಇನ್ನೊಂದು ದೋಷವನ್ನು ಹೇಳಬಹುದು. ಒಬ್ಬ ತನ್ನ ಒಂದು ಬೆರಳಿನಿಂದ ಒಂದು ಕೆಲಸವನ್ನು ಮಾಡಿದನೆನ್ನೋಣ. ಆಗ

ಅವನು ತನ್ನ ಪೂರ್ಣಶಕ್ತಿಯನ್ನೆಲ್ಲ ಉಪಯೋಗಿಸಿದನೆಂದು ಹೇಳಬೇಕಾಗುತ್ತದೆ; ಆದರೆ ಇದು ಸರಿಯಲ್ಲ. ಅವನ ಸಾಮರ್ಥ್ಯದ ಒಂದಂಶ ಮಾತ್ರ ಕೆಲಸ ಮಾಡುತ್ತಿರುವುದು ಕಾಣಬರುತ್ತಿದೆ. ಒಂದು ಭಾಗದಿಂದಲೇ ಕೆಲಸ ಮಾಡಿದನೆನ್ನುವುದೂ ಸರಿಯಾಗಲಾರದು, ಏಕೆಂದರೆ ಜೀವನಿಗೆ ಅವಯವಗಳಿಲ್ಲ. "ಅಥ ಯಃ ಸ ಜೀವಃ, ಸ ನಿತ್ಯೋ ನಿರವಯವೋ ಜ್ಞಾತಾಽಜ್ಞಾತಾ, ಸುಖೀ ದುಃಖೀ, ಶರೀರೇಂದ್ರಿಯಸ್ಥಃ"—ಜೀವ ನಿತ್ಯ, ನಿರವಯವ, ತಿಳಿದವ ಹಾಗೂ ತಿಳಿದಿರದವ, ಸುಖೀ ಹಾಗೂ ದುಃಖೀ, ಶರೀರದ ಇಂದ್ರಿಯಗಳಲ್ಲಿರುವವನು—ಎಂದು ಭಾಲ್ಲವೇಯ ಶ್ರುತಿಯಲ್ಲಿ ಹೇಳಿದೆ.]

ಓಂ ಶ್ರುತೇಸ್ತು, ಶಬ್ದಮೂಲತ್ವಾತ್ ಓಂ 28

ಶ್ರುತಿವಾಕ್ಯಗಳಿಂದ, ಈತನ ವಿಷಯದಲ್ಲಿ ಶ್ರುತಿಯೇ ಮೂಲಪ್ರಮಾಣವಾಗಿರುವುದರಿಂದ.

[ಈಶ್ವರನೇ ಸರ್ವಕರ್ತಾ, ಎಂದರೆ ಜೀವನ ವಿಷಯದಲ್ಲಿ ಹೇಳಿದ ಆಕ್ಷೇಪಣೆ ಇರುವುದಿಲ್ಲ. ಈಶನ ವಿಷಯ ಸ್ವತಃ ಪ್ರಮಾಣವಾಗಿರುವ ಶ್ರುತಿಗಳಿಂದಲೇ ಸಿದ್ಧವಾಗುವುದರಿಂದ, ಯುಕ್ತಿಗಳಿಂದ ವಿರೋಧ ಸಲ್ಲದು. "ಯೋಽಸೌ ವಿರುದ್ಧೋಽವಿರುದ್ಧೋ, ಮನುರಮನುಃ, ಅವಾಗ್ವಾಕ್, ಇಂದ್ರೋಽನಿಂದ್ರಃ ಪ್ರವೃತ್ತಿರಪ್ರವೃತ್ತಿಃ, ಸ ಪರಃ ಪರಾತ್ಮಾ"—ಈತ ವಿರುದ್ಧ ಧರ್ಮಗಳುಳ್ಳವನು; ವಿರುದ್ಧ ಹಾಗೂ ಅವಿರುದ್ಧ, ಮನು ಹಾಗೂ ಅಮನು, ವಾಕ್ ಮತ್ತು ಅವಾಕ್, ಇಂದ್ರ ಮತ್ತು ಅನಿಂದ್ರ, ಪ್ರವೃತ್ತಿ ಮತ್ತು ಅಪ್ರವೃತ್ತಿ; ಇವನು ಶ್ರೇಷ್ಠನಾದ ಪರಮಾತ್ಮ—ಎಂದು ಪೈಂಗಿ ಶ್ರುತಿಯೇ ಮೊದಲಾದುವಲ್ಲಿ ಹೇಳಿದೆ. ವೇದಗಳಲ್ಲಿ ಹೇಳಿರುವ ಮಾತುಗಳಿಗೆ ಯುಕ್ತಿಯಿಂದ ವಿರೋಧ ಕಲ್ಪಿಸಬಾರದು, ಎಂದು ಪುರುಷೋತ್ತಮ ತಂತ್ರ ತಿಳಿಸುತ್ತದೆ.]

ಓಂ ಆತ್ಮನಿ ಚೈವಂ ವಿಚಿತ್ರಾಶ್ಚ ಹಿ ಓಂ 29

ಪರಮಾತ್ಮನಲ್ಲಿ ಹೀಗೆ ವಿಚಿತ್ರವಾದ ಶಕ್ತಿಗಳೂ ಇವೆ.

[ಪರಮಾತ್ಮ ಒಬ್ಬನೇ ಅಚಿಂತ್ಯಾದ್ಭುತ ಶಕ್ತಿಯುಳ್ಳವ, ಮತ್ತಾರೂ ಅಲ್ಲ. "ಏಕೋ ವಶೀ ಸರ್ವಭೂತಾಂತರಾತ್ಮಾ ಸರ್ವಾನ್ದೇವಾನೇಕ ಏವಾನುವಿಷ್ಟಃ"—ಸರ್ವಭೂತಗಳಿಗೆ ಅಂತರಾತ್ಮನಾಗಿ ಸರ್ವದೇವತೆಗಳಲ್ಲಿ ಒಬ್ಬನೇ

ಪ್ರವಿಷ್ಟನಾಗಿ ಇರುವವನು ಒಬ್ಬನೇ. ಅವನು ಪರವಶನಲ್ಲ, ಸ್ವತಂತ್ರ—ಎಂದು ಶ್ವೇತಾಶ್ವತರಶ್ರುತಿ ಇದೆ.]

ಓಂ ಸ್ವಪಕ್ಷದೋಷಾಚ್ಚ ಓಂ 30

ಆಕ್ಷೇಪ ಮಾಡುವವನ ಪಕ್ಷದಲ್ಲಿ ದೋಷವಿರುವುದರಿಂದಲೂ.

[ಜೀವಪಕ್ಷದಲ್ಲಿ ಈ ದೋಷಗಳಿರುವುದರಿಂದ ಯುಕ್ತಿ ವಿರೋಧವಿದೆ. ಜೀವನಲ್ಲಿ ಕಾಣಬರುವ ದೋಷಗಳು ಈಶನಲ್ಲಿದ್ದರೆ ಅವು ಗುಣಗಳೇ ಆಗುವುವು; ಈಶನಲ್ಲಿ ನಿರಂತರವಾಗಿ ಗುಣಗಳೇ ಇರುವುವು. ದೋಷ ಇರುವುದೇ ಇಲ್ಲ. ಹೀಗೆ ವಾಕ್ಯವಿದೆ: "ಅಥ ಯಃ ಸದೋಷಃ, ಸಾಂಜನಃ, ಸಜನಿಃ, ಸ ಜೀವೋ, ಯಃ ಸ ನಿರ್ದೋಷೋ ನಿಷ್ಫಲಃ ಸಗುಣಃ ಪರಃ ಪರಮಾತ್ಮಾ"—ಯಾವನು ದೋಷಯುಕ್ತನಾಗಿರುತ್ತಾನೆಯೋ, ಯಾವನು ಪುಣ್ಯಪಾಪಗಳ ಲೇಪ ಉಳ್ಳವನೋ, ಹುಟ್ಟುಳ್ಳವನೋ ಅವನು ಜೀವ! ಯಾವನು ನಿರ್ದೋಷನೋ ಫಲಭೋಗಿಯಲ್ಲವೋ, ಗುಣಪೂರ್ಣನೋ, ಶ್ರೇಷ್ಠನೋ ಅವನು ಪರಮಾತ್ಮಾ—ಎಂದು ಕಾಷಾಯಣ ಶ್ರುತಿ ಹೇಳುತ್ತದೆ.]

ಓಂ ಸರ್ವೋಪೇತಾ ಚ, ತದ್ದರ್ಶನಾತ್ ಓಂ 31

ಸರ್ವಶಕ್ತಿಯುಳ್ಳವನೂ ಕೂಡ, ಹಾಗೆ ಕಂಡುಬರುವುದರಿಂದ.

[ಈಶ್ವರ ವಿಚಿತ್ರ ಶಕ್ತಿಯುಳ್ಳವ ಮಾತ್ರನಲ್ಲ; ಅವನಲ್ಲಿ ಎಲ್ಲ ಶಕ್ತಿಗಳೂ ಇವೆ. "ಸರ್ವೈರ್ಯುಕ್ತಾ ಶಕ್ತಿಭಿರ್ದೇವತಾ ಸಾ, ಪರೇತಿ ಯಾಂ ಪ್ರಾಹುರಜಸ್ರಶಕ್ತಿಮ್" — ಸರ್ವಶಕ್ತಿಗಳಿಂದಲೂ ಕೂಡಿದ ಯಾವನನ್ನು ಸರ್ವಶಕ್ತಿಯುಳ್ಳ ಪರದೇವತೆ, ಎನ್ನುತ್ತಾರೆಯೋ—ಎಂದು ಚತುರ್ವೇದಶಿಖೆ ಹೇಳುತ್ತದೆ.]

ಓಂ ವಿಕರಣತ್ವಾನ್ನೇತಿ ಚೇತ್, ತದುಕ್ತಮ್ ಓಂ 32

ಕರಣೇಂದ್ರಿಯಗಳು ಇಲ್ಲದಿರುವುದರಿಂದ ಈಶ್ವರನಿಗೆ ಕರ್ತೃತ್ವವಿಲ್ಲ, ಎನ್ನುವುದಾದರೆ ಅದಕ್ಕಾಗಿ ಶ್ರುತಿ ಹೇಳಿದೆ.

[ಕಣ್ಣು, ಕೈ, ಕಾಲುಗಳೆಂಬ ಇಂದ್ರಿಯಗಳೇ ಇಲ್ಲದೆ ಬ್ರಹ್ಮ ಹೇಗೆ ಸೃಷ್ಟಿ ಮಾಡಿಯಾನು ? ಎಂಬ ಪ್ರಶ್ನೆ ಸರಿಯಲ್ಲ. "ಅಪಾಣಿಪಾದೋ ಜವನೋ ಗೃಹೀತಾ, ಪಶ್ಯತ್ಯಚಕ್ಷುಃ, ಸ ಶೃಣೋತ್ಯಕರ್ಣಃ"—ಅವನಿಗೆ ಕೈಕಾಲುಗಳಿಲ, ಆದರೂ ಅವನು ಓಡುತ್ತಾನೆ, ಹಿಡಿಯುತ್ತಾನೆ; ಕಣ್ಣಿಲ್ಲದಿದ್ದರೂ ನೋಡುತ್ತಾನೆ; ಕಿವಿಗಳಿಲ್ಲದೆ ಕೇಳುತ್ತಾನೆ — ಎಂದು ಶ್ವೇತಾಶ್ವತರೋಪನಿಷತ್ತು ತಿಳಿಸುತ್ತದೆ. "ಪರಾಸ್ಯ ಶಕ್ತಿರ್ವಿವಿಧೈವ ಶ್ರೂಯತೇ, ಸ್ವಾಭಾವಿಕೀ ಜ್ಞಾನ ಬಲಕ್ರಿಯಾ ಚ"—ಇವನ ಶಕ್ತಿ ಶ್ರೇಷ್ಠವಾಗಿದ್ದು ನಾನಾ ಬಗೆಯಲ್ಲಿ ಕೇಳಲ್ಪಡುತ್ತಿದೆ. ಜ್ಞಾನ, ಬಲ, ಕ್ರಿಯಾತ್ಮಕವಾದ ಇವನ ಶಕ್ತಿ ಸ್ವಾಭಾವಿಕವಾದುದೇ, ಮತ್ತೊಬ್ಬರ ಅನುಗ್ರಹದಿಂದ ಬಂದುದಲ್ಲ—ಮೊದಲಾದ ವಾಕ್ಯಗಳೂ ಇವೆ.]

ಓಂ ನ ಪ್ರಯೋಜನವತ್ತ್ವಾತ್ ಓಂ 33

ಪ್ರಯೋಜನವಿದೆಯೆಂಬ ಕಾರಣದಿಂದ, ಅಲ್ಲ.

[ಜಗತ್ತಿನ ಸೃಷ್ಟಿಯಿಂದ ಪರಮಾತ್ಮನಿಗೆ ಆಗಬೇಕಾದುದು ಏನೂ ಇಲ್ಲ; ಅವನು ಆಪ್ತಕಾಮ. ಆದುದರಿಂದ ತನಗೆ ಪ್ರಯೋಜನವಿದೆಯೆಂಬ ಕಾರಣದಿಂದ ಬ್ರಹ್ಮ ಈ ಜಗತ್ತನ್ನು ಸೃಷ್ಟಿ ಮಾಡಿಲ್ಲ. ಪ್ರಯೋಜನದ ಉದ್ದೇಶವೂ ಇರದೆ ಯಾರೂ ಕಾರ್ಯಪ್ರವೃತ್ತರಾಗುವುದಿಲ್ಲವಲ್ಲ, ಎಂದರೆ ಆಪ್ತಕಾಮನಾದ ಪರಮಾತ್ಮನಿಗೆ ಆಗಬೇಕಾದುದು ಏನೂ ಇಲ್ಲ, "ಅಥೈಷ ಏವ ಪರಮ ಆನಂದಃ" ಇವನೇ ಶ್ರೇಷ್ಠ ಆನಂದ—ಎಂದು ಹೇಳಿರುವುದರಿಂದ ಆನಂದಮಯನಾದ ಪರಮಾತ್ಮನಿಗೆ ಮತ್ತಾವ ಆಸೆ ಇದ್ದೀತು ? ಸ್ವಪ್ರಯೋಜನಕ್ಕಾಗಿ ಅವನು ಸೃಷ್ಟಿ ಮಾಡುತ್ತಿಲ್ಲ.]

ಓಂ ಲೋಕವತ್ತು ಲೀಲಾಕೈವಲ್ಯಮ್ ಓಂ 34

ಬ್ರಹ್ಮನ ಸೃಷ್ಟಿ ಲೀಲೆ ಮಾತ್ರವೇ, ಲೋಕದ ರೀತಿಯಲ್ಲಿಯೇ.

[ಲೋಕದಲ್ಲಿ ಮತ್ತನಾದವನು ಸುಖೋದ್ರೇಕದಿಂದಲೇ ನೃತ್ಯಗಾನಾದಿ ಲೀಲೆಗಳಲ್ಲಿ ತೊಡಗಿರುತ್ತಾನೆ; ಆದರೆ ಅದರಿಂದ ಅವನಿಗೆ ಯಾವ ಪ್ರಯೋಜನದ ಅಪೇಕ್ಷೆಯೂ ಇರುವುದಿಲ್ಲ. ಹೀಗೆಯೇ ಪರಮೇಶ್ವರನು ಕೇವಲ ತನ್ನ ಆನಂದದಿಂದ ಈ ಜಗತ್ತಿನ ಸೃಷ್ಟಿಯಲ್ಲಿ ನಿರತನಾಗಿರುತ್ತಾನೆ. "ದೇವಸ್ಯೈಷ ಸ್ವಭಾವೋಽಯಮಾಪ್ತಕಾಮಸ್ಯ ಕಾ ಸ್ಪೃಹಾ" — ಇದು ಆ ದೇವನ ಸ್ವಭಾವವಷ್ಟೇ, ಆಪ್ತಕಾಮನಾದವನಿಗೆ ಆಸೆ ಯಾವುದು

ಇದ್ದೀತು ? – ಎಂದು ಶ್ರುತಿ ಇದೆ. "ಇಚ್ಛಾಮಾತ್ರಂ ಪ್ರಭೋಃ ಸೃಷ್ಟಿಃ"— ಈಶ್ವರನ ಸೃಷ್ಟಿಯೆಂದರೆ ಅವನ ಇಚ್ಛೆ ಮಾತ್ರವೇ –ಎಂದು ಹೇಳುವ ವಾಕ್ಯ, ಈಶನಿಗೆ ಯಾವ ಪ್ರಯೋಜನವೂ ಇಲ್ಲವೆಂದು ತಿಳಿಸುತ್ತದೆ.]

ಓಂ ವೈಷಮ್ಯನೈರ್ಘೃಣ್ಯೇ ನ, ಸಾಪೇಕ್ಷತ್ವಾತ್, ತಥಾ ಹಿ ದರ್ಶಯತಿ ಓಂ 35

ವೈಷಮ್ಯ, ಕ್ರೌರ್ಯಗಳಿಲ್ಲ, ಏಕೆಂದರೆ ಕರ್ಮದ ಅಪೇಕ್ಷೆ ಇದೆ; ಹಾಗೆಯೇ ಶ್ರುತಿ ಇದೆಯಷ್ಟೆ.

[ಈಶ್ವರನೇ ಎಲ್ಲರಲ್ಲಿಯೂ ನಿಂತು ಕೆಲಸ ಮಾಡುವವನು, ಎಂದರೆ ಅವರವರಿಗೆ ಬೇರೆ ಬೇರೆ ಫಲಗಳು ಬರುವುದು ಕಂಡುಬರುವುದರಿಂದ ಪರಮಾತ್ಮನಿಗೆ ವೈಷಮ್ಯ ಹಾಗೂ ಕ್ರೌರ್ಯಗಳು ಅಂಟಿಕೊಳ್ಳುವುವು, ಎನ್ನಬಾರದು. ಒಬ್ಬನಿಗೆ ಅನಿರೀಕ್ಷಿತವಾಗಿ ಶುಭಫಲ ಬರುವುದಕ್ಕೂ ಮತ್ತೊಬ್ಬನಿಗೆ ಕಾರಣವಿಲ್ಲದೆ ಅನೇಕ ಕಷ್ಟಗಳು ಒದಗುವುದಕ್ಕೂ ಪರಬ್ರಹ್ಮನೇ ಕಾರಣನೇ, ಎಂಬ ಪ್ರಶ್ನೆ ಹುಟ್ಟುವುದು. ಹಾಗಲ್ಲ, ಅವರವರ ಹಿಂದಿನ ಕರ್ಮಗಳಿಗೆ ಅನುಸಾರವಾಗಿ ಪರಮಾತ್ಮ ಅವರಿಂದ ಕೆಲಸ ಮಾಡಿಸಿ ಯೋಗ್ಯಫಲಗಳನ್ನೇ ಕೊಡುತ್ತಾನೆ, ಎನ್ನುತ್ತದೆ, ಸೂತ್ರ. "ಪುಣ್ಯೇನ ಪುಣ್ಯಂ ಲೋಕಂ ನಯತಿ, ಪಾಪೇನ ಪಾಪಂ"– ಪುಣ್ಯದಿಂದ ಪುಣ್ಯಲೋಕಕ್ಕೂ ಪಾಪದಿಂದ ಪಾಪಲೋಕಕ್ಕೂ ಒಯ್ಯುವನು—ಎಂಬ ಷಟ್ಪ್ರಶ್ನ ಶ್ರುತಿಯಿಂದ ಪೂರ್ವಕರ್ಮವೇ ಫಲಪ್ರಾಪ್ತಿಗೆ ಕಾರಣವೆಂದು ತಿಳಿದುಬರುವುದು.]

ಓಂ ನ ಕರ್ಮಾವಿಭಾಗಾದಿತಿ ಚೇನ್ನ, ಅನಾದಿತ್ವಾತ್ ಓಂ 36

ಅಸ್ವತಂತ್ರವಾಗಿರುವುದರಿಂದ ಕರ್ಮವಲ್ಲ, ಎನ್ನಲಾಗದು; ಕರ್ಮ ಅನಾದಿ.

[ಯಾವುದನ್ನು ಗಮನಿಸಿ ಪರಮಾತ್ಮ ಫಲ ಕೊಡುತ್ತಾನೆಯೋ ಅದು ಕರ್ಮವಲ್ಲ, ಆ ಕರ್ಮದ ಪ್ರವೃತ್ತಿಗೂ ಅವನೇ ಕಾರಣ. "ಏಷ ಹ್ಯೇವ ಸಾಧು ಕರ್ಮ ಕಾರಯತಿ ತಂ, ಯಮೇಭ್ಯೋ ಲೋಕೇಭ್ಯ ಉನ್ನಿನೀಷತೇ, ಏಷ ಉ ಏವಾಸಾಧು ಕರ್ಮ ಕಾರಯತಿ ತಂ, ಯಮಧೋ ನಿನೀಷತೇ"— ಯಾವನನ್ನು ಈ ಲೋಕದಿಂದ ಮೇಲಕ್ಕೆ ಒಯ್ಯಲು ಬಯಸುತ್ತಾನೆಯೋ

ಅಂತಹವನಿಂದ ಈ ಪರಮಾತ್ಮನೇ ಒಳ್ಳೆಯ ಕೆಲಸಗಳನ್ನು ಮಾಡಿಸುತ್ತಾನೆ; ಯಾವನನ್ನು ಕೆಳಗೆ ಇಳಿಸಲು ಇಷ್ಟಪಡುವನೋ ಅವನಿಂದ ನಿಂದ್ಯವಾದ ಕರ್ಮಗಳನ್ನು ಮಾಡಿಸುತ್ತಾನೆ — ಎಂದು ಕೌಷೀತಕ ಬ್ರಾಹ್ಮಣದಲ್ಲಿ ಹೇಳಿದೆ. ಇದರಿಂದ ಪರಮಾತ್ಮನಿಗೆ ವೈಷಮ್ಯ ಹೇಳಿದಂತಾಯಿತು. ಆದರೆ ವಾಸ್ತವವಾಗಿ ಹೀಗಲ್ಲ. ಆ ಕರ್ಮವನ್ನು ಪರಮಾತ್ಮ ಮಾಡಿಸಿದರೂ ಅದನ್ನು ಜೀವನು ಮಾಡುವುದಕ್ಕೆ ಅದಕ್ಕಿಂತ ಹಿಂದೆ ಅವನು ಮಾಡಿದ್ದ ಕರ್ಮವೇ ಕಾರಣ. ಹೀಗೆ ಕರ್ಮ ಅನಾದಿ, ಎಂದು ಒಪ್ಪಬೇಕು. "ಕರ್ಮ ಅನಾದಿಯಾಗಿರುವುದರಿಂದಲೇ ಪೂರ್ವಕರ್ಮದ ಕಾರಣದಿಂದ ಮುಂದೆ ಪುಣ್ಯಪಾಪ ಕರ್ಮಗಳನ್ನು ವಿಷ್ಣು ಮಾಡಿಸುತ್ತಾನೆ. ಇದರಲ್ಲಿ ವಿರೋಧವಿಲ್ಲ" ಎಂದು ಭವಿಷ್ಯತ್ಪುರಾಣದಲ್ಲಿ ಹೇಳಿದೆ.]

ಓಂ ಉಪಪದ್ಯತೇ ಚಾಪ್ಯುಪಲಭ್ಯತೇ ಚ ಓಂ 37

ಯುಕ್ತವಾಗಿದೆ ಮತ್ತು ಪ್ರಾಪ್ತವಾಗಿದೆ.

[ಕರ್ಮವನ್ನು ಅಪೇಕ್ಷಿಸಿಯೇ ಮುಂದಿನ ಕೆಲಸವನ್ನು ಈಶನು ಮಾಡಿಸುವುದರಿಂದ ಅವನು ಅಸ್ವತಂತ್ರನಾಗುವುದಿಲ್ಲ. ಅದು ಅವನ ನಿಯಮ, ಅಷ್ಟೇ, "ದ್ರವ್ಯಂ ಕರ್ಮ ಚ ಕಾಲಶ್ಚ ಸ್ವಭಾವೋ ಜೀವ ಏವ ಚ। ಯದನುಗ್ರಹತಃ ಸಂತಿ ನ ಸಂತಿ ಯದುಪೇಕ್ಷಯಾ"—ದ್ರವ್ಯ, ಕರ್ಮ, ಕಾಲ, ಸ್ವಭಾವ, ಜೀವ ಇವೆಲ್ಲ ಪರಮಾತ್ಮನ ಅನುಗ್ರಹದಿಂದಲೇ ಅಸ್ತಿತ್ವ ಪಡೆದಿವೆ; ಅವನು ಉಪೇಕ್ಷಿಸಿದರೆ ಇವು ಇರುವುದೇ ಇಲ್ಲ—ಎಂಬ ವಾಕ್ಯದಿಂದ ಆ ಕರ್ಮವೂ ಈಶಾಧೀನವೇ ಆಗಿದೆ. ಆದರೂ ಈಶ್ವರನಲ್ಲಿ ದೋಷಕಲ್ಪನೆ ಮಾಡಬಾರದು.]

ಓಂ ಸರ್ವಧರ್ಮೋಪಪತ್ತೇಶ್ಚ ಓಂ 38

ಬ್ರಹ್ಮನಲ್ಲಿ ಸರ್ವಧರ್ಮಗಳೂ ಹೊಂದಿಕೊಳ್ಳುವುದರಿಂದಲೂ (ದೋಷವಿಲ್ಲ.)

[ಜ್ಞಾನಾನಂದಾದಿ ಸದ್ಗುಣಗಳೂ ದುಃಖದ್ವೇಷಾದಿ ದೋಷಗಳ ಅಭಾವವೂ ಪರಮಾತ್ಮನಲ್ಲಿ ಹೊಂದಿಕೊಂಡಿವೆ. ಆದುದರಿಂದ ನಿಖಿಲ ಸದ್ಗುಣಪೂರ್ಣನೂ ಸಕಲದೋಷದೂರನೂ ಆದ ನಾರಾಯಣನೇ ಎಲ್ಲಕ್ಕೂ ಮುಖ್ಯ ಕಾರಣನೆಂದು ಸಿದ್ಧವಾಯಿತು.]

ಇಲ್ಲಿಗೆ ಬ್ರಹ್ಮಸೂತ್ರಗಳ ಎರಡನೆಯ ಅಧ್ಯಾಯದ ಮೊದಲನೆಯ ಪಾದ ಮುಗಿಯಿತು.

ಎರಡನೆಯ ಪಾದ

"ಇತರೇಷಾಂ ಚಾನುಪಲಬ್ಧೇಃ" ಎಂದು ಮೊದಲನೆಯ ಪಾದದ ಎರಡನೆಯ ಸೂತ್ರದಲ್ಲಿ ಹೇಳಿರುವಂತೆ ಇತರ ಮತಗಳನ್ನು ಸಾಮಾನ್ಯವಾಗಿ ನಿರಾಕರಿಸಲಾಯಿತು. ಈ ಪಾದದಲ್ಲಿ ಆ ನಿರಾಕರಣ ವಿಶೇಷವಾಗಿ ಮಾಡಲ್ಪಟ್ಟಿದೆ. ನಮ್ಮ ಸಿದ್ಧಾಂತವನ್ನು ಮಂಡಿಸುವುದಕ್ಕೆ ಮೊದಲು ಪೂರ್ವಪಕ್ಷವಾಗಿರುವ ಸಾಂಖ್ಯಾದಿ ಇತರ ಪಕ್ಷಗಳನ್ನು ಖಂಡಿಸಬೇಕಾದುದು ಅತ್ಯಗತ್ಯ. ಪರಪಕ್ಷ ನಿರಾಕರಣ ವ್ಯರ್ಥವಲ್ಲ. ಸಾಂಖ್ಯಾದಿ ಶಾಸ್ತ್ರಗಳು ಸಮ್ಯಗ್ದರ್ಶನಗಳೆಂದು ಹೆಸರು ಪಡೆದಿರುವುದರಿಂದ ಮಂದಮತಿಗಳು ಅವನ್ನೇ ಪ್ರಮಾಣವಾಗಿ ಗ್ರಹಿಸಬಹುದು. ಆದುದರಿಂದ ಅವುಗಳ ಅಸಾರತೆಯನ್ನು ತೋರಿಸಿಯೇ ನಾವು ನಮ್ಮ ಸಿದ್ಧಾಂತವನ್ನು ತಿಳಿಸಬೇಕು. ವೇದಾಂತವಾಕ್ಯಗಳನ್ನು ಅಪೇಕ್ಷಿಸದೆ ಸ್ವತಂತ್ರವಾಗಿಯೂ ಇತರ ಸಿದ್ಧಾಂತಗಳು ಈಗ ಖಂಡಿಸಲ್ಪಡುತ್ತಿವೆ. ಅಚೇತನ ಪ್ರವೃತ್ತಿಯನ್ನು ಹೇಳುವ ಮತವನ್ನು ಸೂತ್ರಕಾರರು ಮೊದಲು ಖಂಡಿಸುತ್ತಾರೆ.

ಓಂ ರಚನಾನುಪಪತ್ತೇಶ್ಚ ನಾನುಮಾನಮ್ ಓಂ 1

ಸ್ವತಃ ಪ್ರವೃತ್ತಿ ಕೂಡುವುದಿಲ್ಲವಾದುದರಿಂದಲೂ ಅನುಮಾನಕ್ಕೆ ವಿಷಯವಾದುದು ಪ್ರಧಾನವಲ್ಲ.

[ಜಗತ್ತಿನ ಹುಟ್ಟಿಗೆ ಕಾರಣವಾದುದು ಚೇತನವೋ, ಅಚೇತನವೋ ಎಂಬುದು ಪ್ರಶ್ನೆ. ಅಚೇತನವಾದ ಪ್ರಧಾನವೇ—ಮೂಲಪ್ರಕೃತಿಯೇ—ಜಗತ್ಕಾರಣವೆಂದು ನಿರೀಶ್ವರಸಾಂಖ್ಯವಾದ, ರಚನೆಯೆಂದರೆ ಸ್ವತಂತ್ರ ಪ್ರವೃತ್ತಿ. ಅನುಮಾನಪರಿಕಲ್ಪಿತವಾದ ಅಚೇತನ ಪ್ರಕೃತಿಗೆ ಅದು ಸಾಧ್ಯವಾಗದು. 'ಚ' ಎಂಬ ಶಬ್ದದಿಂದ 'ಪ್ರಮಾಣವಿಲ್ಲ' ಎಂಬುದನ್ನೂ ಸೂಚಿಸಿದ್ದಾರೆ. ಅಚೇತನವಾಗಿರುವುದರಿಂದ ಗಡಿಗೆಯಂತೆಯೇ ಪ್ರಕೃತಿಯೂ ಸ್ವತಂತ್ರವಾಗಿ ಕಾರ್ಯದಲ್ಲಿ ಪ್ರವರ್ತಿಸಲಾರದು—ಸೃಷ್ಟಿ ಮಾಡಲಾರದು.]

ಓಂ ಪ್ರವೃತ್ತೇಶ್ಚ ಓಂ 2

ಪ್ರವೃತ್ತಿಯ ದೆಸೆಯಿಂದಲೂ.

[ಚೇತನಕ್ಕೆ ಪ್ರವೃತ್ತಿ ಇರುವುದು ಕಂಡುಬಂದಿದೆ— ಅಚೇತನಕ್ಕೆ ಹಾಗಿಲ್ಲ, ಇದೇನೂ ಭ್ರಾಂತಿಯಿಲ್ಲ, ಇದಕ್ಕೆ ವಿರುದ್ಧವಾದ ಪ್ರಮಾಣವೂ ಇಲ್ಲ.]

ಓಂ ಪಯೋಽಂಬುವಚ್ಚೇತ್, ತತ್ರಾಪಿ ಓಂ 3

ಹಾಲು, ನೀರುಗಳಂತೆ, ಎಂದರೆ ಅಲ್ಲಿಯೂ ಕೂಡ.

[‘ಹಾಲು ಮೊಸರಾಗುವುದು, ನೀರು ಹರಿಯುವುದು’ ಎಂದು ಹೇಳುವಲ್ಲಿ ಅಚೇತನದ ಕಾರ್ಯಪ್ರವೃತ್ತಿ ಕಂಡುಬರುವುದು, ಎಂದು ಹೇಳುವುದು ಸರಿಯಾಗದು. ಅಲ್ಲಿಯೂ ಕೂಡ ಚೇತನದ ಪ್ರವೃತ್ತಿ ತಿಳಿದುಬಂದಿದೆ. “ಯೋಽಪ್ಸು ತಿಷ್ಠನ್ ಯೋಽಪೋಽಂತರೋ ಯಮಯತಿ”— ಯಾವ ಬ್ರಹ್ಮ ನೀರಿನೊಳಗೆ ಇದ್ದು ನೀರನ್ನು ನಿಯಂತ್ರಿಸುವನೋ—“ಏತಸ್ಯ ವಾ ಅಕ್ಷರಸ್ಯ ಪ್ರಶಾಸನೇ ಗಾರ್ಗಿ, ಪ್ರಾಚ್ಯೋಽನ್ಯಾ ನದ್ಯಃ ಸ್ಯಂದಂತೇ...”—ಗಾರ್ಗಿ ! ನಾಶರಹಿತನಾದ ಈತನ ಅಪ್ಪಣೆಯಂತೆಯೇ ಕೆಲವು ನದಿಗಳೂ ಪೂರ್ವಕ್ಕೆ ಹರಿಯುತ್ತವೆ...—ಎಂಬ ಬೃಹದಾರಣ್ಯಕದಲ್ಲಿನ ಯಾಜ್ಞವಲ್ಕ್ಯನ ಮಾತು ಗಳಿಂದಲೂ “ಏತೇನ ಹ ವಾವ ಪಯೋ ಮಂಡಂ ಭವತಿ”—ಇವನ ಮಹಿಮೆ ಯಿಂದಲೇ ಹಾಲು ಮೊಸರಾಗುವುದು—ಮುಂತಾದ ಶ್ರುತಿವಾಕ್ಯಗಳಿಂದಲೂ ಕಾರ್ಯಪ್ರವೃತ್ತಿಗೆ ಈಶ್ವರನೇ ಕಾರಣನೆಂದು ಗೊತ್ತಾಗುವುದು.]

ಓಂ ವ್ಯತಿರೇಕಾನವಸ್ಥಿತೇಶ್ಚಾನಪೇಕ್ಷತ್ವಾತ್ ಓಂ 4

ವ್ಯತಿರೇಕದಿಂದ (ಈಶ್ವರನಿರದಿದ್ದರೆ) ಕರ್ಮಾಭಾವದಿಂದ ಅನವಸ್ಥಿತಿ ಹುಟ್ಟುವುದರಿಂದಲೂ ಅಚೇತನ ಜಗತ್ಕಾರಣನೆಂಬ ವಾದ ಅನಪೇಕ್ಷಿತ.

[ಈಶ್ವರಕಲ್ಪನೆ ಇರದಿದ್ದರೆ ಕರ್ಮ ಅಸಂಭಾವಿತವಾಗುವುದು. “ನ ಋತೇ ತ್ವತ್ಕ್ರಿಯತೇ ಕಿಂಚನಾರೇ”—ಎಲೈ ದೇವನೇ, ನಿನ್ನನ್ನು ಬಿಟ್ಟರೆ ಯಾವ ಕೆಲಸವನ್ನೂ ಮಾಡಲಾಗುವುದಿಲ್ಲ—ಎಂಬ ಋಗ್ವೇದವಾಕ್ಯದಿಂದ ಈಶ್ವರನಿರದಿದ್ದರೆ ಕರ್ಮ ಸಾಧ್ಯವಾಗದು. ಆದುದರಿಂದ ಈಶ್ವರಭಿನ್ನವಾದ ಅಚೇತನ ಜಗತ್ಕಾರಣವೆಂದು ಹೇಳುವುದನ್ನು ಒಪ್ಪಲಾಗದು. ಇದು ನಿರೀಶ್ವರ ಸಾಂಖ್ಯ ಮತದ ನಿರಾಕರಣೆ.]

ಓಂ ಅನ್ಯತ್ರಾಭಾವಾಚ್ಚ ನ ತೃಣಾದಿವತ್ ಓಂ 5

ಬ್ರಹ್ಮ ಇರದಿದ್ದರೆ ಜಗತ್ತೇ ಇರದು, ಆದುದರಿಂದಲೂ ಹುಲ್ಲಿನಂತೆ ಅಲ್ಲ.

[ಹುಲ್ಲು ಭೂಮಿಯೊಳಗಿಂದ ಹುಟ್ಟುವುದು, ಅದಕ್ಕಾಗಿ ಮಳೆಯ ‘ಅನುಗ್ರಹ’ ಮಾತ್ರ ಬೇಕು, ಅಷ್ಟೇ; ಹಾಗೆಯೇ ಈಶ್ವರನ ಅನುಗ್ರಹ

ಪಡೆದ ಪ್ರಧಾನದಿಂದಲೇ—ಮೂಲಪ್ರಕೃತಿಯಿಂದಲೇ—ಜಗತ್ತು ಹುಟ್ಟು ವುದು. ಇದು ಈಶ್ವರನನ್ನು ಒಪ್ಪುವ ಸಾಂಖ್ಯರ—ಸೇಶ್ವರ ಸಾಂಖ್ಯರ— ವಾದ. ಇದು ಸರಿಯಲ್ಲವೆನ್ನುತ್ತಾರೆ, ಭಾಷ್ಯಕಾರರು. "ಯಚ್ಚ ಕಿಂಚಿತ್ ಜಗತ್ಯಸ್ಮಿನ್ ದೃಶ್ಯತೇ ಶ್ರೂಯತೇಽಪಿ ವಾ। ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತಃ"—ಈ ಜಗತ್ತಿನಲ್ಲಿರುವ ಯಾವುದೇ ವಸ್ತು ನೋಡಲ್ಪಡು ತ್ತಿದೆಯೋ, ಕೇಳಲ್ಪಡುತ್ತಿದೆಯೋ, ಅದನ್ನೆಲ್ಲ ಒಳಗೂ ಹೊರಗೂ ವ್ಯಾಪಿಸಿ ಕೊಂಡು ನಾರಾಯಣ ಇದ್ದಾನೆ—ಎಂಬ ಮಹಾನಾರಾಯಣೀಯೋಪನಿಷತ್ತು, ಬ್ರಹ್ಮ ಸರ್ವವ್ಯಾಪಿಯೂ ಸರ್ವಶಕ್ತನೂ ಆಗಿದ್ದಾನೆಂದು ತಿಳಿಸುವುದು. ಪ್ರಕೃತಿಗೇ ಸತ್ತಾದಿಗುಣಗಳನ್ನು ಪರಮಾತ್ಮ ಕೊಡುವನೆಂದು 'ಚ' ಶಬ್ದ ತಿಳಿಸುವುದು, ಎಂದು ಆಚಾರ್ಯರ ಅಭಿಪ್ರಾಯ. ದ್ರವ್ಯ, ಕರ್ಮ, ಕಾಲ ಮೊದಲಾದ ಎಲ್ಲವೂ ಪರಮಾತ್ಮನ ಅನುಗ್ರಹದಿಂದಲೇ ಇರಬಲ್ಲವು, ಎಂದೇ ಹೇಳಿರುವುದರಿಂದ, ವಿಂಧ್ಯ, ಪತಂಜಲಿ ಮೊದಲಾದ ಪಂಡಿತರ ನಿರೀಶ್ವರ ವಾದವೂ ಸತ್ಯವಲ್ಲ.]

ಓಂ ಅಭ್ಯುಪಗಮೇಽಪ್ಯರ್ಥಾಭಾವಾತ್ ಓಂ 6

ಒಪ್ಪಿಕೊಂಡರೂ ಯಾವ ಪ್ರಯೋಜನವೂ ಇಲ್ಲದಿರುವುದರಿಂದ.

[ಇದು **ಲೋಕಾಯತರ**—**ಚಾರ್ವಾಕರ**—ಮತದ ಖಂಡನೆ. "ಪ್ರತ್ಯಕ್ಷ ಒಂದೇ ಪ್ರಮಾಣ, ಪ್ರತ್ಯಕ್ಷಸಿದ್ಧವಲ್ಲದುದನ್ನು ಒಪ್ಪಲಾಗದು" ಎಂದು ಹೇಳುವವರು ಚಾರ್ವಾಕರು. ಯಾವ ಸಿದ್ಧಾಂತದಲ್ಲಿ ಪ್ರತ್ಯಕ್ಷಪ್ರಮಾಣವಿಲ್ಲ ವೆಂಬ ಕಾರಣದಿಂದ ಧರ್ಮಾಧರ್ಮಗಳಿಗೆ ಸ್ಥಾನವಿಲ್ಲವೋ, ಅದರಿಂದ ಪ್ರಯೋಜನವೇನು? ತಾನು ಹೇಳುವುದನ್ನು ತಾನೇ ವಿರೋಧಿಸುವುದರಿಂದ ಆ ಮತವನ್ನು ಉಪೇಕ್ಷಿಸಬೇಕು, ಎಂದು ಆಚಾರ್ಯರ ಸಿದ್ಧಾಂತ. ಪ್ರತ್ಯಕ್ಷ ವೊಂದೇ ಪ್ರಮಾಣ, ಎಂದಾದರೂ ಹೇಗೆ ತೀರ್ಮಾನಿಸುವುದು? 'ನನ್ನ ದೇಹ, ನನ್ನ ಮನೆ' ಎಂದು ಹೇಳಿದಾಗ 'ನನ್ನ' ಎಂಬ ಶಬ್ದದಿಂದ ತಿಳಿಯಲ್ಪಡುವ ವಸ್ತು ಪ್ರತ್ಯಕ್ಷಗೋಚರವೇ ?]

ಓಂ ಪುರುಷಾಶ್ಮವದಿತಿ ಚೇತ್, ತಥಾಪಿ ಓಂ 7

ಪುರುಷ—ಕಲ್ಲುಗಳಂತೆ, ಎಂದರೆ ಆಗಲೂ ವಿರೋಧ ಹೋಗುವುದಿಲ್ಲ.

[ಪುರುಷನ ಸಹಕಾರದಿಂದ ಕಲ್ಲು ಸರಿಯುತ್ತದೆ, ಎಂದಾಗ ಪುರುಷನ ಸಹಯೋಗದಿಂದ ಪ್ರಕೃತಿಗೆ ಕರ್ತೃತ್ವವಿದೆ, ಎಂದ ಹಾಗಾಯಿತು; ಇದು **ಸಾಂಖ್ಯವಾದ,** ಇದು ಸರಿಯಲ್ಲ. 'ನಿನ್ನ ಹೊರತು ಯಾರೂ ಏನನ್ನೂ ಮಾಡಲಾರರು' ಎಂಬ ಶ್ರುತಿಯ ಪ್ರಕಾರ ಕಲ್ಲನ್ನು ಎತ್ತುವ, ಸರಿಸುವ, ಎಸೆಯುವ ಪುರುಷಶರೀರದ ಪ್ರವೃತ್ತಿಯೂ ಪರಮಾತ್ಮನ ಅಧೀನದಲ್ಲಿಯೇ ಇದೆಯಷ್ಟೆ. ಈ ದೃಷ್ಟಾಂತ ಸರಿಯಲ್ಲ, ಸಾಂಖ್ಯವಾದ ಅಸಾಧು.]

ಓಂ ಅಂಗಿತ್ವಾನುಪಪತ್ತೇಃ ಓಂ 8

ಅಂಗಿತ್ವ ಹೊಂದದಿರುವುದರಿಂದ.

[ಶರೀರದಿಂದ ಕಾರ್ಯಪ್ರವೃತ್ತವಾದಾಗ ಶರೀರ ಅಂಗ, ಪುರುಷ ಅಂಗೀ. ಅಂಗವನ್ನು ಹಿಡಿದು ಅಂಗೀ ಕೆಲಸ ಮಾಡಿಸುತ್ತಾನೆ, ಎಂಬ ವಾದ ಇಲ್ಲಿ ಸರಿಯಾಗದು. ಪುರುಷ ಅಂಗವೆಂದರೆ ಅಂಗಿತ್ವ ವ್ಯವಹಾರ ಸರಿಹೊಂದು ವುದಿಲ್ಲ; ಪುರುಷ ಅಂಗೀ ಎಂಬುದನ್ನು ಮಾತ್ರ ಎಲ್ಲರೂ ಒಪ್ಪುತ್ತಾರೆ.]

ಓಂ ಅನ್ಯಥಾನುಮಿತೌ ಚ ಜ್ಞಶಕ್ತಿವಿಯೋಗಾತ್ ಓಂ 9

ಶರೀರ ಸಂಬಂಧದಿಂದ ಪುರುಷ ಪ್ರವರ್ತಿಸುವನು. ಎಂದು ಅನುಮಾನ ಮಾಡಿದರೂ, ಸ್ವಸಾಮರ್ಥ್ಯವಿಲ್ಲದಿರುವುದರಿಂದ ಅದನ್ನು ಒಪ್ಪಲಾಗದು.

[ಪುರುಷನಿಗೆ ಅಂಗಿತ್ವ ಹೇಳಿದರೂ ಸರ್ವಸ್ವಾತಂತ್ರ್ಯವಿಲ್ಲದ ಅವನು ಶರೀರವನ್ನು ಪ್ರೇರಿಸುವ ಶಕ್ತಿಯನ್ನು ಪಡೆದಿರುವುದಿಲ್ಲ; ಆದುದರಿಂದ ಸ್ವತಂತ್ರನಾದ ಮತ್ತೊಬ್ಬ ಕರ್ತೃವನ್ನು ಒಪ್ಪಲೇಬೇಕು. ಸಂಸಾರಿಯಾಗಿರುವ ಜೀವನಿಗಿಂತ ಭಿನ್ನನಾದ, ಸರ್ವಶಕ್ತಿಯುಳ್ಳ, ಅಸದೃಶನಾದ ಸರ್ವೇಶ್ವರನ ಅಸ್ತಿತ್ವವನ್ನೂ, ಈ ಚೇತನಾಚೇತನಾತ್ಮಕ ಜಗತ್ತಿನ ಅಸ್ತಿತ್ವವೇ ಆ ಈಶನ ಅಧೀನವಾಗಿರುವುದನ್ನೂ, ಒಪ್ಪದ ವಾದಿಗಳಿಗೆಲ್ಲ ಈ ದೋಷ ಅನ್ವಯಿಸು ವುದು. ಶ್ರೀಹರಿಯೇ ಸರ್ವೋತ್ತಮ, ಜಗತ್ಕಾರಣ ಎಂದು ಶ್ರುತಿ ಪ್ರಮಾಣ ಗಳಿಂದಲೂ ಯುಕ್ತಿಗಳಿಂದಲೂ ಎಲ್ಲರೂ ಒಪ್ಪಬೇಕು.]

ಓಂ ವಿಪ್ರತಿಷೇಧಾಚ್ಚಾಸಮಂಜಸಮ್ ಓಂ 10

ಪರಸ್ಪರ ವಿರುದ್ಧವಾಗಿರುವುದರಿಂದಲೂ ಅಸಮಂಜಸ.

[ಎಲ್ಲ ಶ್ರುತಿ, ಸ್ಮೃತಿ, ಯುಕ್ತಿಗಳಿಗೆ ವಿರುದ್ಧವಾಗಿರುವುದರಿಂದ ಅನೀಶ್ವರ ಮತ ಅಸಮಂಜಸ. "ಶ್ರುತಯಃ ಸ್ಮೃತಯಶ್ಚೈವ ಯುಕ್ತಯಶ್ಚೇಶ್ವರಂ ಪರಮ್ । ವದಂತಿ ತದ್ವಿರುದ್ಧಂ ಯೋ ವದೇತ್ತಸ್ಮಾನ್ನ ಚಾಧಮಃ"—ಶ್ರುತಿ, ಸ್ಮೃತಿ, ಯುಕ್ತಿಗಳೆಲ್ಲ ಪರಮೇಶ್ವರನನ್ನು ಕುರಿತು ಹೇಳುತ್ತವೆ ; ಯಾವನು ಅವುಗಳಿಗೆಲ್ಲ ವಿರೋಧವಾದುದನ್ನು ಹೇಳುವನೋ ಅವನಿಗಿಂತ ನೀಚನಿಲ್ಲ-- ಎಂದು ಪದ್ಮಪುರಾಣ ಹೇಳುತ್ತದೆ.]

ಓಂ ಮಹದ್ದೀರ್ಘವದ್ವಾ ಹ್ರಸ್ವಪರಿಮಂಡಲಾಭ್ಯಾಮ್ ಓಂ 11

ದೊಡ್ಡವೂ ದೀರ್ಘವೂ ಆದ ಚತುರಣುಕಾದಿಗಳಿಂದ ಹೇಗೆ ಕಾರ್ಯ ಹುಟ್ಟುವುದೋ ಹಾಗೆಯೇ ಚಿಕ್ಕದಾಗಿ ಗೋಳಾಕಾರವುಳ್ಳ ದ್ವ್ಯಣುಕಾದಿಗಳಿಂದಲೂ ಹುಟ್ಟಬಹುದು.

[ಪರಮಾಣುವಾದವನ್ನು ಹೂಡಿದ ವೈಶೇಷಿಕರು "ಕಾರಣಬಾಹುಲ್ಯಾತ್, ಕಾರಣಮಹತ್ವಾತ್, ಪ್ರಚಯವಿಶೇಷಾಚ್ಚ ಮಹತ್"—ಅನೇಕ ಕಾರಣಗಳಿರುವುದರಿಂದಲಾಗಲಿ, ಕಾರಣಗಳ ಮಹತ್ತ್ವದಿಂದಾಗಲಿ, ಸಂಚಯವಿಶೇಷದಿಂದಾಗಲಿ ಮಹತ್ಪರಿಮಾಣ ಆರಂಭವಾಗುವುದು—ಎನ್ನುತ್ತಾರೆ. ಮಹತ್ತ್ವಪರಿಮಾಣದ ದೆಸೆಯಿಂದಲೂ ದೀರ್ಘತ್ವಪರಿಮಾಣದ ದೆಸೆಯಿಂದಲೂ ಚತುರಣುಕಾದಿಗಳಿಂದ ಕಾರ್ಯ ಹುಟ್ಟುವಂತೆಯೇ ಹ್ರಸ್ವತ್ವಪರಿಮಾಣದ ದೆಸೆಯಿಂದಲೂ ಗೋಳಾಕಾರಪರಿಮಾಣದ ದೆಸೆಯಿಂದಲೂ ದ್ವ್ಯಣುಕಾದಿಗಳಿಂದ ಆಯಾ ಪರಿಮಾಣವುಳ್ಳ ಕಾರ್ಯ ಉತ್ಪನ್ನವಾಗುವುದು. ಎರಡು ವಿಧ ಪರಿಮಾಣಗಳಿಗೆ ಯಾವ ವೈಶಿಷ್ಟ್ಯವೂ ಇಲ್ಲ ; ಅಥವಾ ಎರಡೂ ಅಣುಗಳು ಕಾರ್ಯದಲ್ಲಿ ಪರಿಣಾಮವನ್ನು ಉಂಟುಮಾಡಲಾರವು.

ಎರಡು ಅಣುಗಳು ಸಂಯೋಗವಾದಾಗ ದ್ವ್ಯಣುಕ ಹುಟ್ಟುವುದು, ಹೀಗೆಯೇ ಮೂರು ದ್ವ್ಯಣುಕಗಳಿಂದ ತ್ರ್ಯಣುಕವೂ ನಾಲ್ಕು ತ್ರ್ಯಣುಕಗಳಿಂದ ಚತುರಣಕವೂ ಹುಟ್ಟುವುವು.

"ಸಂಯೋಗದಿಂದ ಭಿನ್ನಜಾತೀಯ ದ್ರವ್ಯಗಳು ಉತ್ಪನ್ನವಾಗುವುವು. ಆದುದರಿಂದ ಸಜಾತೀಯ ಕಾರ್ಯವನ್ನೇ ಕಾರಣ ಉತ್ಪಾದಿಸಬೇಕೆಂಬ ನಿಯಮವಿಲ್ಲ" ಎಂದು ಶಂಕರಭಾಷ್ಯ.

ಬಿಳಿಯ ನೂಲುಗಳಿಂದ ಬಿಳಿಯ ಬಟ್ಟೆ ಹುಟ್ಟುವುದು ; ಕರಿಯ ಘಣ್ಣಿನಿಂದ ಕರಿಯ ಮಡಕೆ ಉತ್ಪನ್ನವಾಗುವುದು ; ಹೀಗೆಯೇ ಚೇತನನಾದ ಬ್ರಹ್ಮನಿಂದ ಹುಟ್ಟಿದ ಜಗತ್ತೆಲ್ಲ ಚೇತನಮಯವಾಗಬೇಕಿತ್ತು ; ಆದರೆ ಹಾಗಿಲ್ಲ, ಆದುದರಿಂದ ಚೇತನ ಜಗತ್ಕಾರಣವಲ್ಲ.

ಕಾರಣದ್ರವ್ಯದಲ್ಲಿರುವ ಗೋಳಾಕಾರ ಮೊದಲಾದವು ಕಾರ್ಯದ್ರವ್ಯದಲ್ಲಿ ಅದೇ ಗುಣಗಳನ್ನು ಹುಟ್ಟಿಸುವುದಿಲ್ಲ. ಹಾಗೆ ಗೋಳಾಕಾರ ಬರದಿರಲು ಬೇರೊಂದು ಪರಿಣಾಮದಿಂದ ಆಕ್ರಾಂತವಾಗಿರುವುದೇ ಕಾರಣ. **ಪರಮಾಣು ಜಗತ್ಕಾರಣ** ಎಂಬ ಮತವನ್ನು ಇಲ್ಲಿ ನಿರಾಕರಿಸಲಾಗಿದೆ.]

ಓಂ ಉಭಯಥಾಪಿ ನ ಕರ್ಮ, ಅತಸ್ತದಭಾವಃ ಓಂ 12

ಎರಡು ವಿಧದಿಂದಲೂ ಪರಮಾಣುಕಾರ್ಯ ಕೂಡುವುದಿಲ್ಲ, ಆದುದರಿಂದ ಅದು ಇಲ್ಲವೇ ಇಲ್ಲ.

[ಇಚ್ಛೆ ಮೊದಲಾದ ಎಂಟು ಗುಣಗಳು ಈಶ್ವರನಿಗೆ ಇವೆ, ಎಂದು ವೈಶೇಷಿಕರು ಹೇಳುತ್ತಾರೆ. ಈಶ್ವರನ ಆ ಇಚ್ಛೆ ನಿತ್ಯವೋ ಅನಿತ್ಯವೋ ? ಮೊದಲು ನಿತ್ಯವೆಂದು ಒಪ್ಪಿಕೊಳ್ಳೋಣ. ಪ್ರಳಯಕಾಲದಲ್ಲಿ ಪರಮಾಣುಗಳ (ಸೃಷ್ಟಿ) ಕಾರ್ಯವೇನೂ ಆಗುತ್ತಿಲ್ಲ; ಅದು ನಿತ್ಯವಾದ ಈಶ್ವರೇಚ್ಛೆಯಿಂದ, ಎನ್ನುವುದಾದರೆ ಈಗಲೂ—ಯಾವಾಗಲೂ—ಪರಮಾಣುಗಳ ಸಂಯೋಗ ವಿಯೋಗಾದಿ ಕಾರ್ಯಗಳು ಇರಲೇಬಾರದು. ಇದು ಸರಿಯಾಗುವುದಿಲ್ಲ! ಈಶ್ವರೇಚ್ಛೆ ಅನಿತ್ಯವೆನ್ನೋಣವೆಂದರೆ ಅದಕ್ಕೇನೂ ಕಾರಣವಿಲ್ಲವಲ್ಲ! ಎರಡು ವಿಧಗಳಲ್ಲಿಯೂ ಪರಮಾಣುಗಳ ವ್ಯಾಪಾರವೇ ಇಲ್ಲದಿರುವುದರಿಂದ ಯಾವಾಗಲೂ ಅವುಗಳ ಕಾರ್ಯವೇ ಇಲ್ಲ! ವೈದಿಕಮತದಲ್ಲಿ ಈಶ್ವರ ಸರ್ವಶಕ್ತ. ಅಚಿಂತ್ಯಾದ್ಭುತ ವ್ಯಾಪಾರವುಳ್ಳ ಪರಮಾತ್ಮ ಸರ್ವಶಕ್ತ, ಸರ್ವಕರ್ತಾ ಎಂದರೆ ಎಲ್ಲವೂ ಸರಿಹೋಗುತ್ತದೆ. ಕಾಲಕಾಲಗಳಲ್ಲಿ 'ವಿಶೇಷ'ವನ್ನು ಒಪ್ಪುವುದರಿಂದ ಸೃಷ್ಟಿ, ಸ್ಥಿತಿ, ಸಂಹಾರಗಳಾಗುವುವು.]

ಓಂ ಸಮವಾಯಾಭ್ಯುಪಗಮಾಚ್ಚ, ಸಾಮ್ಯಾದನವಸ್ಥಿತೇಃ ಓಂ 13

ಸಮವಾಯವನ್ನು ಒಪ್ಪಿರುವುದರಿಂದಲೂ, ಸಾಮ್ಯದಿಂದ ಅನವಸ್ಥೆಯುಂಟಾಗಿರುವುದರಿಂದಲೂ.

[ಎರಡು ಪದಾರ್ಥಗಳಿಗೆ ನಿತ್ಯವಾಗಿ ಇರುವ ಸಂಬಂಧವನ್ನು ಸಮವಾಯಸಂಬಂಧವೆಂದು ವೈಶೇಷಿಕರು ಕರೆಯುತ್ತಾರೆ. ಗುಣ–ಗುಣೀ, ಮಣ್ಣು–ಮಡಕೆ, ಬಿಳುಪು–ಬಟ್ಟೆ, ಅವಯವ–ಅವಯವಿ, ಕಾರಣ–ಕಾರ್ಯ, ಇವಕ್ಕೆ ಸಮವಾಯ ಸಂಬಂಧವಿದೆ, ಎನ್ನುತ್ತಾರೆ. ಅವುಗಳಿಗೆ ಭಿನ್ನತ್ವ, ಸಾಮ್ಯಗಳಿರುವುದರಿಂದ ಮತ್ತೊಂದು ಸಮವಾಯವನ್ನು ಕಲ್ಪಿಸಬೇಕು. ಹೀಗಾಗಿ 'ಅನವಸ್ಥೆ'—ನೆಲೆಯೇ ಇಲ್ಲದಿರುವಿಕೆ –ಎಂಬ ದೋಷ ಹುಟ್ಟುವುದು. ಕಾರ್ಯ–ಕಾರಣ ಎಂಬಲ್ಲಿ ಮೊದಲನೆಯ ಸಮವಾಯಸಂಬಂಧವೇ ಸಿದ್ಧಿಸದಿರುವಾಗ ಮುಂದಿನದು ಸಿದ್ಧಿಸುವುದೇ ಇಲ್ಲ. ಮೊದಲನೆಯ ಸಂಬಂಧಕ್ಕೆ ಸ್ವನಿರ್ವಾಹಕತ್ವವನ್ನು ಒಪ್ಪಿದರೆ ಸಮವಾಯದ ಆವಶ್ಯಕತೆಯೇ ಇರುವುದಿಲ್ಲ.]

ಓಂ ನಿತ್ಯಮೇವ ಚ, ಭಾವಾತ್ ಓಂ 14

ನಿತ್ಯವಾಗಿರುವುದರಿಂದ (ಪರಮಾಣುಗಳ ಕಾರ್ಯವೂ) ನಿತ್ಯವಾಗಿಯೇ ಇರಬೇಕು.

[ಪರಮಾಣುಗಳು ನಿತ್ಯ, ಸಮವಾಯಸಂಬಂಧವೂ ನಿತ್ಯ, ನಿಮಿತ್ತ ಕಾರಣವಾದ ಕಾಲವೂ ನಿತ್ಯ; ಆದುದರಿಂದ ಕಾರ್ಯವೂ ನಿತ್ಯವಾಗಿ ಆಗುತ್ತಿರಬೇಕು, ಇಲ್ಲವೇ ಯಾವಾಗಲೂ ಆಗಬಾರದು.]

ಓಂ ರೂಪಾದಿಮತ್ತ್ವಾಚ್ಚ ವಿಪರ್ಯಯಃ, ದರ್ಶನಾತ್ ಓಂ 15

ರೂಪಾದಿಗಳಿರುವುದರಿಂದ ಪರಮಾಣುಗಳು ಅನಿತ್ಯವೂ ಆಗಬಹುದು; ಹಾಗೆ ಕಂಡುಬಂದಿದೆ.

[ವೇದಪ್ರಾಮಾಣ್ಯವಿಲ್ಲದೆ ಅನುಮಾನವನ್ನೇ ಪ್ರಬಲ ಪ್ರಮಾಣವನ್ನಾಗಿ ನಂಬಿದವರಿಗೆ ಪರಮಾಣುಗಳ ನಿತ್ಯತ್ವಕ್ಕೆ ಬದಲು ಅನಿತ್ಯತ್ವವೇ ಕಾಣಬರುವುದು. ಲೋಕದಲ್ಲಿ ಹಾಗೆ ಕಂಡುಬಂದಿದೆ. "ರೂಪ, ರಸ, ಗಂಧ, ಸ್ಪರ್ಶಾದಿಗಳನ್ನು ಪಡೆದ ಎಲ್ಲ ಪದಾರ್ಥಗಳೂ ಒಂದಲ್ಲ ಮತ್ತೊಂದು ಕಾಲದಲ್ಲಿ ನಾಶವಾಗುವುವು. ಪರಮಾಣುಗಳಿಗೆ ಆ ಗುಣಗಳಿರುವುದರಿಂದ ಅವೂ ನಾಶವಾಗುವುವು. ಆದುದರಿಂದ ಅವು ಅನಿತ್ಯ." ಇದು ಪರಮಾಣು ನಿತ್ಯವೆಂಬ ನಂಬಿಕೆಗೆ ವಿರುದ್ಧವಾದ ಅನುಮಾನ.]

ಓಂ ಉಭಯಥಾ ಚ ದೋಷಾತ್ ಓಂ 16

ನಿತ್ಯತ್ವವನ್ನು ಒಪ್ಪಿದರೂ ದೋಷ, ಅನಿತ್ಯತ್ವವನ್ನು ಒಪ್ಪಿದರೂ ದೋಷ ಇರುವುದರಿಂದ.

[ಹೇಗೂ ಪರಮಾಣುಕಾರಣವಾದಕ್ಕೆ ದೋಷ ತಪ್ಪದು. ಪರಮಾಣುಗಳು ನಿತ್ಯವೆಂದು ಒಪ್ಪಿದರೆ ಅವುಗಳ ಕಾರ್ಯವೂ ನಿತ್ಯವಾಗಿ, ಎಲ್ಲವೂ ನಿತ್ಯವಾಗಬೇಕಾಗುವುದು. ಕೆಲವು ನಿತ್ಯ ಮತ್ತೆ ಕೆಲವು ಅನಿತ್ಯ ಆಗಿರಲು ವಿಶೇಷ ಪ್ರಮಾಣವೇನಿಲ್ಲ. ಪರಮಾಣು ಅನಿತ್ಯವೆಂದರೆ ಕಾರಣವೇ ಇಲ್ಲದಿರುವಾಗ ಕಾರ್ಯೋತ್ಪತ್ತಿ—ಜಗತ್ತಿನ ಸೃಷ್ಟಿಯೇ—ಅಸಂಭವವಾಗುವುದು.]

ಓಂ ಅಪರಿಗ್ರಹಾಚ್ಚಾತ್ಯಂತಮನಪೇಕ್ಷಾ ಓಂ 17

ಶಿಷ್ಟರು ಸ್ವೀಕರಿಸದೆ ಇರುವುದರಿಂದಲೂ ಈ ವಾದವನ್ನು ಸಂಪೂರ್ಣವಾಗಿ ಉಪೇಕ್ಷಿಸಬೇಕು.

[ಶ್ರುತಿ ಸ್ಮೃತಿಗಳು ವೈಶೇಷಿಕರ ಈ ಪರಮಾಣುವಾದವನ್ನು ಒಪ್ಪಿಲ್ಲ. ಆದುದರಿಂದ ಇದನ್ನು ಮುಖ್ಯವಾಗಿ ಉಪೇಕ್ಷಿಸಲೇಬೇಕು. ಮಹಾಭಾರತದ ಮೋಕ್ಷಧರ್ಮದಲ್ಲಿ "ಆನ್ವೀಕ್ಷಿಕೀಂ ತರ್ಕವಿದ್ಯಾಮನುರಕ್ತೋ ನಿರರ್ಥಕಾಂ"—ವ್ಯರ್ಥವಾದ, ನೋಡಿದ್ದಂತೆ ದೋಷಯುಕ್ತ ಉತ್ಪ್ರೇಕ್ಷೆ ಮಾಡುವ ತರ್ಕವಿದ್ಯೆಯಲ್ಲಿ ಆಸಕ್ತನಾದವ—ಎಂದು ನರಿಯ ರೂಪ ಧರಿಸಿದ ಇಂದ್ರನ ಮಾತಿನಲ್ಲಿ ಹೇಳಿದೆ.]

ಓಂ ಸಮುದಾಯ ಉಭಯಹೇತುಕೇಽಪಿ ತದಪ್ರಾಪ್ತಿಃ ಓಂ 18

ಸಮುದಾಯ ಎರಡು ಕಾರಣಗಳುಳ್ಳದುದು, ಎಂದರೂ ಅದು ಸಿದ್ಧಿಸುವುದಿಲ್ಲ.

[ಬೌದ್ಧರ ಪರಮಾಣುಪುಂಜವಾದವನ್ನು ಇಲ್ಲಿ ನಿರಾಕರಿಸಲಾಗುತ್ತದೆ. ಬೌದ್ಧರಲ್ಲಿ ನಾಲ್ಕು ಬಗೆಯವರಿದ್ದಾರೆ. (1) ಸರ್ವವಸ್ತುಗಳ ಅಸ್ತಿತ್ವವನ್ನು ಒಪ್ಪುವ ಸರ್ವಾಸ್ತಿವಾದಿಗಳು, ಇವರಲ್ಲಿ (ಎ) **ಸೌತ್ರಾಂತಿಕರು** ಮತ್ತು (ಬಿ) **ವೈಭಾಷಿಕರು**, ಎಂಬ ಎರಡು ಬಗೆಯವರಿದ್ದಾರೆ; ಇವರಿಬ್ಬರೂ ಪರಮಾಣುಗಳು ಒಟ್ಟೊಟ್ಟಾಗಿಯೇ ಇರುವುವೆಂದೂ, ಜಗತ್ತು ಕ್ಷಣಿಕವೆಂದೂ

ಹೇಳುವರು. (2) ಜ್ಞಾನದ ಅಸ್ತಿತ್ವವನ್ನು ಮಾತ್ರ ಒಪ್ಪುವವರು ವಿಜ್ಞಾನ ವಾದಿಗಳು. (3) ಎಲ್ಲವೂ ಶೂನ್ಯವೇ, ಎನ್ನುವ ಶೂನ್ಯವಾದಿಗಳು. ಇಲ್ಲಿ ಸರ್ವಾಸ್ತಿವಾದಿಗಳ ಪರಮಾಣುಪುಂಜವಾದವನ್ನು ನಿರಾಕರಿಸಲಾಗಿದೆ. ಒಂದೇ ಪರಮಾಣು, ಪರಮಾಣುಪುಂಜಕ್ಕೆ ಕಾರಣವಾಗದು, ಅದರಿಂದ ಸಮುದಾಯ ಹುಟ್ಟದು. ಎರಡು ಮೂರು (ಅಥವಾ ಹೆಚ್ಚು) ಪರಮಾಣುಗಳು ಒಟ್ಟಾಗಿ ಸೇರಿಯೇ ಕಾರ್ಯ ಮಾಡುವುವು, ಎಂದರೆ ಅನ್ಯೋನ್ಯಾಶ್ರಯ ದೋಷ ಹುಟ್ಟುವುದು, (ಎರಡು ಮೂರು ಸೇರಿದರೇ ಸಮುದಾಯವಾಗುವುದು, ಸಮುದಾಯವೆಂದರೇ ಎರಡು ಮೂರು ಸೇರಬೇಕಾಗುವುದು.) ಎರಡು ಮೂರು ಸೇರಲಾರವು, ಎಂದರೆ ಎರಡನೆಯದರ ಅಪೇಕ್ಷೆಯಿಲ್ಲದೆ ಸಮುದಾಯ ಯಾವಾಗಲೂ ಇದ್ದಂತಾಯಿತು, ಅಥವಾ ಸಮುದಾಯ ಯಾವಾಗಲೂ ಆಗುವುದೇ ಇಲ್ಲ. ಆನಂದತೀರ್ಥರು ಅನುವ್ಯಾಖ್ಯಾನದಲ್ಲಿ ವೈಭಾಷಿಕ-ಸೌತ್ರಾಂತಿಕ ಮತವನ್ನು ಹೀಗೆ ಸಂಗ್ರಹಿಸಿದ್ದಾರೆ: "ಜಗತ್ತು ಸ್ವಾಭಾವಿಕ ವಾಗಿ ಕ್ಷಣಿಕ. ಕಾಲ ಕರ್ಮಗಳ ನಿಮಿತ್ತದಿಂದ ಅಣುಗಳು ಸೇರಿ ಸಮುದಾಯ ಗಳಾಗುವುವು. ಸೃಷ್ಟಿಕಾಲದಲ್ಲಿ ಅಣುಗಳು ಪರಸ್ಪರ ಸೇರುವುವು." ಆದರೆ ಸಮುದಾಯ ಒಂದೇ ಪರಮಾಣುವಿನಿಂದ ಹುಟ್ಟಲಾರದು. ಸಮುದಾಯ ವಾಗುವುದರಿಂದ ಎರಡು (ಅಥವಾ ಹೆಚ್ಚು) ಪರಮಾಣುಗಳು ಒಂದೇ ಕೆಲಸ ಮಾಡಲಾರವು. ಹೀಗೆ ಅನ್ಯೋನ್ಯಾಶ್ರಯ ದೋಷ ಹುಟ್ಟುವುದರಿಂದ ಸಮುದಾಯ ಕಲ್ಪನೆಯೇ ತಪ್ಪು. ಸಮುದಾಯಗಳಿಂದ ಬೇರೆ ಸಮುದಾಯ ಗಳು ಹುಟ್ಟಿವೆ ಅಥವಾ ಅನೇಕ ಅಣುಗಳಿಂದ ಸಮುದಾಯ ಉತ್ಪನ್ನವಾಗಿದೆ, ಎಂದು ಎರಡು ವಿಧವಾಗಿ ಹೇಳಿದರೂ ಸಮುದಾಯ ಸಿದ್ಧಿಸುವುದಿಲ್ಲ, ಎಂದು ಸೂತ್ರದ ತಾತ್ಪರ್ಯ.]

ಓಂ ಇತರೇತರಪ್ರತ್ಯಯತ್ವಾದಿತಿ ಚೇನ್ನ, ಉತ್ಪತ್ತಿಮಾತ್ರನಿಮಿತ್ತತ್ವಾತ್ ಓಂ 19

ಒಂದಕ್ಕೊಂದು ಕಾರಣವಾಗಿರುವುದರಿಂದ, ಎನ್ನುವುದು ಸರಿಯಲ್ಲ, ಏಕೆಂದರೆ ಅವು ಉತ್ಪತ್ತಿಗೆ ಮಾತ್ರ ನಿಮಿತ್ತವಾಗಿವೆ.

["ಯಾವಾಗಲೂ ಪರಮಾಣುಗಳ ಸಮುದಾಯ ಇದ್ದೇ ಇರುತ್ತದೆ, ಅದರ ವಿಷಯವನ್ನು ತಿಳಿಸುವಾಗ ವ್ಯವಹಾರಕ್ಕಾಗಿ ಅದಕ್ಕೆ ಸಂಬಂಧಪಟ್ಟ

ಇನ್ನೊಂದು ಸಮುದಾಯದ ವಿಷಯವನ್ನೂ ತಿಳಿಸಬೇಕಾಗುವುದು" ಎನ್ನುವುದು ಸರಿಯಲ್ಲ. ಒಂದೇ ಕಾರ್ಯವನ್ನು — ಉತ್ಪತ್ತಿ — ಮಾಡಿ ಆ ಸಮುದಾಯ ನಾಶಹೊಂದುವುದರಿಂದ ಈ ಬಗೆಯ ವ್ಯವಹಾರ ನಡೆಯುವುದಿಲ್ಲ. ಕಾರಣವಿದ್ದಾಗ ಕಾರ್ಯ ನಡೆಯಲೇಬೇಕಷ್ಟೆ. "ವಸ್ತು ಒಂದು ಕ್ಷಣಮಾತ್ರ ಇದ್ದು ನಾಶಹೊಂದುವುದು" ಎಂದು ಕ್ಷಣಭಂಗುರವಾದಿಗಳಾದ ಬೌದ್ಧರ ನಿಯಮ. ಆದುದರಿಂದ ಮೊದಲು 'ಅದು, ಇದು' ಎಂದು ಬೇರೆ ಬೇರೆಯಾಗಿ ಕಂಡುಬರುವ ಅಣುಗಳನ್ನು ಅವುಗಳ ಅನ್ಯೋನ್ಯಾಪೇಕ್ಷೆಯಿಂದ ನೋಡುವುದೂ, ಅವನ್ನು ಸಮುದಾಯವೆಂದು ವ್ಯವಹರಿಸುವುದೂ ಸರಿಹೊಂದುವುದಿಲ್ಲ.]

ಓಂ ಉತ್ತರೋತ್ಪಾದೇ ಚ ಪೂರ್ವನಿರೋಧಾತ್ ಓಂ 20

ಉತ್ತರ (ಕ್ಷಣ) ಹುಟ್ಟುವಾಗ ಪೂರ್ವ ನಾಶವಾಗುವುದರಿಂದ.

[ಕಾರ್ಯ ಹುಟ್ಟಿದಕೂಡಲೆ ಕಾರಣ ನಾಶವಾಗುವುದರಿಂದಲೂ ಮುಂದೆ ವಿಶೇಷಕಾರ್ಯ ಹುಟ್ಟದು. ಮೊದಲಿನ ಕಾರ್ಯವನ್ನು ನಿರೋಧಿಸುವುದರಿಂದ—ಅದು ಅಸಾಧ್ಯವೆಂದು ತೋರಿಸುವುದರಿಂದ—ಮುಂದಿನ ಕಾರ್ಯದ ವಿಷಯದಲ್ಲಿಯೂ ಅದನ್ನೇ ಹೇಳಬೇಕು. ಕಾರ್ಯಾಂತರ ಮಾಡುವಷ್ಟು ಕಾಲದವರೆಗೆ ಕಾರಣ ಇರುವುದೇ ಇಲ್ಲ.]

ಓಂ ಅಸತಿ ಪ್ರತಿಜ್ಞೋಪರೋಧಃ, ಯೌಗಪದ್ಯಮನ್ಯಥಾ ಓಂ 21

ಕಾರಣವಿಲ್ಲದಿರುವಾಗ ಪ್ರತಿಜ್ಞೆಗೆ ತಡೆ ಹುಟ್ಟುವುದು, ಹಾಗಿರದಿದ್ದರೆ ಎರಡಕ್ಕೂ ಒಂದೇ ಕಾಲವಾಗಬೇಕು.

[ಕಾರಣ ನಾಶಹೊಂದಿದಾಗ—ಹೊಂದಿದ ಕ್ಷಣದಲ್ಲಿಯೇ—ಕಾರ್ಯ ಹುಟ್ಟುವುದು, ಎಂದರೆ 'ಕಾರ್ಯಕ್ಕೆ ಅದು ಕಾರಣ' ಎಂಬ ಮಾತೇ ಸುಳ್ಳಾಗುವುದು. ಆ ಕಾರ್ಯೋತ್ಪತ್ತಿಯ ಕಾಲದಲ್ಲಿ (ಕ್ಷಣದಲ್ಲಿ) ಮಾತ್ರ ಕಾರಣವಿರುವುದು, ಎಂದರೆ ಅದು ನಷ್ಟವಾಗಲು ಕಾರಣವೇ ಇರುವುದಿಲ್ಲ. ಆ ಕಾರಣವೂ ಇರುವುದಾದರೆ ಏಕಕಾಲದಲ್ಲಿ ಅನೇಕ ಕಾರಣಗಳು (ಕಾರಣ-

ಪರಂಪರೆ) ಇರಬೇಕೆಂದು ಸಿದ್ಧವಾಗುವುದು ! ಕಾರಣವಿದ್ದರೆ ಕಾರ್ಯ ಆಗಿಯೇ ಆಗುವುದು, ಎಂಬ ನಿಯಮವಿರುವುದರಿಂದ ನಾಶಕ್ಕೆ ಪರಂಪರೆ ಇರುವುದೂ, ಇಲ್ಲದಿರುವುದೂ ಒಟ್ಟಿಗೇ ಆಗಬೇಕು !]

ಓಂ ಪ್ರತಿಸಂಖ್ಯಾಽಪ್ರತಿಸಂಖ್ಯಾನಿರೋಧಾಪ್ರಾಪ್ತಿಃ, ಅವಿಚ್ಛೇದಾತ್ ಓಂ 22

ಪ್ರತಿಸಂಖ್ಯಾನಿರೋಧ ಮತ್ತು ಅಪ್ರತಿಸಂಖ್ಯಾನಿರೋಧ ಇವು ಪ್ರಾಪ್ತವಾಗುವುದಿಲ್ಲ ; ವಿಚ್ಛೇದವಿಲ್ಲದಿರುವುದರಿಂದ.

[ಬುದ್ಧಿಪೂರ್ವಕವಾಗಿ ವಸ್ತುಗಳನ್ನು ನಾಶಮಾಡುವುದು ಪ್ರತಿಸಂಖ್ಯಾ-ನಿರೋಧ; ವಸ್ತುಗಳು ತಾವಾಗಿ ನಾಶ ಹೊಂದುವುದು ಅಪ್ರತಿಸಂಖ್ಯಾನಿರೋಧ; ಇವೆರಡನ್ನೂ ಖಂಡಿಸಿದೆ. ಕಾರಣವಿರುವಾಗ ಕಾರ್ಯ ಆಗಲೇಬೇಕೆಂಬ ನಿಯಮವಿದೆಯಷ್ಟೆ. ಘಟದ (ಗಡಿಗೆಯ) ಎಲ್ಲ ಅವಸ್ಥೆಗಳಲ್ಲಿಯೂ ಮಣ್ಣಿರುವುದು, ಮಣ್ಣಿಗೆ ನಾಶವೇ ಇಲ್ಲ. ಹೀಗೆ ವಿಚ್ಛೇದ ಇಲ್ಲದಿರುವುದರಿಂದ —ಸತ್ಪದಾರ್ಥ ಪೂರ್ಣವಾಗಿ ನಾಶ ಹೊಂದದಿರುವುದರಿಂದ— ಕಾರ್ಯಕಾರಣಗಳ ಆತ್ಯಂತಿಕ ನಾಶವಾಗಲಿ ಕೆಲವು ಸಂತಾನಗಳನ್ನು ಬಿಟ್ಟು ಹೋಗುವ ನಾಶವಾಗಲಿ ಸಾಧ್ಯವಾಗುವುದಿಲ್ಲ.]

ಓಂ ಉಭಯಥಾ ಚ ದೋಷಾತ್ ಓಂ 23

ಎರಡು ಬಗೆಗಳಿಂದಲೂ ದೋಷವಿರುವುದರಿಂದ.

[ಕಾರಣವಿದ್ದರೆ ಅದರಿಂದ ಕಾರ್ಯ ಆಗಲೇಬೇಕೆಂಬುದು ನಿಯಮ. ಯಾವಾಗಲೂ ಕಾರ್ಯ ಇದ್ದೇ ಇರುವುದು—ಅದು ನಾಶವಾಗಲು ಕಾರಣವಿಲ್ಲ. ಕಾರ್ಯ ಇದ್ದೇ ಇರುವುದಾದರೆ ಕಾರ್ಯಕಾರಣಭಾವ ಹೋಗಿಬಿಡುತ್ತದೆ. ಆ ನಿಯಮವೇ ಇಲ್ಲವೆನ್ನುವುದಾದರೆ ಕಾರ್ಯ ಹುಟ್ಟುವುದೇ ಇಲ್ಲ.]

ಓಂ ಆಕಾಶೇ ಚ, ಅವಿಶೇಷಾತ್ ಓಂ 24

ಆಕಾಶದಲ್ಲಿಯೂ, ವಿಶೇಷವಿಲ್ಲದಿರುವುದರಿಂದ.

["ದೀಪಾದಿಗಳಲ್ಲಿ ಕಂಡುಬರುವ ಪರಿಮಾಣವಿಶೇಷಗಳಿಂದ (ಹೆಚ್ಚುಕಡಿಮೆ ಪ್ರಕಾಶಗಳಿಂದ) ಅವುಗಳ ಕ್ಷಣಿಕತ್ವ ಸಿದ್ಧವಾಗುವುದು, ಹೀಗೆಯೇ ಇತರ ಎಲ್ಲ ಕಾರ್ಯಗಳ ಕ್ಷಣಿಕತ್ವವನ್ನೂ ಊಹಿಸಿಕೊಳ್ಳಬಹುದು."

ಎನ್ನುವುದಾದರೆ ಇದಕ್ಕೆ ಪ್ರತಿಯಾಗಿ, "ಆಕಾಶಾದಿಗಳಲ್ಲಿ ಪರಿಮಾಣವಿಶೇಷ ಗಳು ಕಾಣಬರದಿರುವುದರಿಂದ ಅವಕ್ಕೆ ಅಕ್ಷಣಿಕತ್ವವನ್ನು ಊಹಿಸಬಹುದು, ಹಾಗೆಯೇ ಇತರ ವಸ್ತುಗಳ ಅಕ್ಷಣಿಕತ್ವವೂ ಸಿದ್ಧವಾಗುವುದು" ಎನ್ನಬಹುದು. ಇದು ಕ್ಷಣಿಕವಾದದ ನಿರಾಕರಣೆ, ಪ್ರಪಂಚದ ವಸ್ತುಗಳು ಕ್ಷಣಿಕವಲ್ಲ, ಎಂದು ಹೇಳಿದ ಹಾಗಾಯಿತು.]

ಓಂ ಅನುಸ್ಮೃತೇಶ್ಚ ಓಂ 25

ಅನುಸ್ಮರಣದಿಂದಲೂ (ಈ ವಾದ ಸರಿಯಲ್ಲ).

[ಒಂದು ವಸ್ತುವನ್ನು ನೋಡಿದಾಗ 'ಅದೇ ಇದು' ಎಂಬ ಇನ್ನೊಂದು ವಸ್ತುವಿನ ಪ್ರತ್ಯಭಿಜ್ಞೆ—ಜ್ಞಾಪಕದ ಗುರುತು —ಹುಟ್ಟುವುದು. ಆ ಪ್ರತ್ಯಭಿಜ್ಞೆ ಭ್ರಾಂತಿ ಎನ್ನುವುದಾದರೆ ವಿಶೇಷ ದರ್ಶನವೂ ಭ್ರಾಂತಿಯೇ ಆದೀತು. ಜ್ಞಾಪಕ ಬರುವುದರಿಂದ, 'ಆ ವಸ್ತು ನಷ್ಟವಾಗಿ ಅಂತಹುದೇ ಬೇರೊಂದು ಬಂದಿತು' ಎಂದು ತೋರುವುದಿಲ್ಲ. ಆದುದರಿಂದ ಕ್ಷಣಿಕತೆ ಕೂಡುವುದಿಲ್ಲ. ಜ್ಞಾಪಕ ಭ್ರಾಂತಿ ಮೂಲಕವಾದರೆ ಪೂರ್ವೋತ್ತರ ವಸ್ತುಗಳಲ್ಲಿ ಪ್ರತಿವಾದಿ ಕಲ್ಪಿಸುವ ಭೇದವೂ ಭ್ರಾಂತಿ ಮೂಲಕವೇ ಎನ್ನಬಹುದು, ಪ್ರತ್ಯಭಿಜ್ಞೆಯಿಂದ ವಸ್ತುವಿನ ಸ್ಥಿರತ್ವವೇ ಸಿದ್ಧವಾಗುವುದು.]

ಓಂ ನಾಸತಃ, ಅದೃಷ್ಟತ್ವಾತ್ ಓಂ 26

ಕಾಣಬರುವುದಿಲ್ಲವಾದುದರಿಂದ ಅಸತ್ತಿನಿಂದ (ಸೃಷ್ಟಿ) ಇಲ್ಲ.

[ಜಗತ್ಸೃಷ್ಟಿಗೆ ಅಸತ್ತು—ಶೂನ್ಯ—ಕಾರಣವಲ್ಲ, ಏಕೆಂದರೆ ಹಾಗೆ ಅಸತ್ತು ಏನನ್ನಾದರೂ ಉತ್ಪಾದನೆ ಮಾಡಿದುದು ಎಲ್ಲಿಯೂ ಕಂಡುಬರು ವುದಿಲ್ಲ. ಕಾರಣವಾದ ಅಸತ್ತು ದೃಶ್ಯವಾದರೆ ಅಪಸಿದ್ಧಾಂತ. ಅದೃಶ್ಯವಾದ ಅಸತ್ತು ಸತ್ಪದಾರ್ಥಗಳನ್ನು ಸೃಷ್ಟಿಮಾಡಿರುವುದನ್ನು ಪ್ರಮಾಣಪೂರ್ವಕವಾಗಿ ನೋಡಲಾಗಿಲ್ಲ. ಇದು ಶೂನ್ಯವಾದದ ನಿರಾಕರಣೆ.]

ಓಂ ಉದಾಸೀನಾನಾಮಪಿ ಚೈವಂ ಸಿದ್ಧಿಃ ಓಂ 27

ಉದಾಸೀನವಾಗಿರುವುವುಗಳಿಗೂ ಹೀಗೆಯೇ ಸಿದ್ಧಿಯಾಗಬೇಕು.

[ಅಸತ್ತು ಕಾರಣವಾಗುವುದಾದರೆ ಉದಾಸೀನವಾದವೂ ಕಾರಣವಾಗ ಬೇಕು. ಬಿಡಬೇಕು ಅಥವಾ ಸ್ವೀಕರಿಸಬೇಕು, ಎಂಬ ಬುದ್ಧಿವ್ಯಾಪಾರವೇ ಇಲ್ಲದಿರುವ ಗಗನಕುಸುಮಾದಿಗಳು (ಆಕಾಶಪುಷ್ಪ) ಶೂನ್ಯದಂತೆಯೇ ಜಗತ್ತಿನ

ಉತ್ಪತ್ತಿಗೆ ಕಾರಣವಾಗಬಹುದು, ಅವು ಗಂಧ ಮೊದಲಾದವನ್ನು ಕೊಡಬಹುದು. ಹಾಗಿಲ್ಲವೆಂದರೆ ಗಗನಕುಸುಮ ಮತ್ತು ಶೂನ್ಯ ಎರಡೂ ಕಾರಣವಾಗಲಾರವು. ಇಲ್ಲದೇ ಇರುವುದರಿಂದ ಗಗನಪುಷ್ಪ ಶೂನ್ಯಪ್ರಾಯವೇ; "ಶೂನ್ಯದಿಂದ ಜಗದುತ್ಪತ್ತಿ ಒಪ್ಪುವುದಾದರೆ ಹಸುವಿನ ಕೊಂಬಿನಂತೆಯೇ, ಸರ್ವಥಾ ಇಲ್ಲದಿರುವ ಬೆಕ್ಕಿನ ಕೊಂಬೂ ನಮಗೆ ಗಾಯ ಮಾಡಬಹುದು," ಎಂದು 'ಅನುವ್ಯಾಖ್ಯಾನ'ದಲ್ಲಿ ಆಚಾರ್ಯರು ಹೇಳಿದ್ದಾರೆ. "ಏನಾದರೂ ಕೆಲಸ ಮಾಡಬೇಕೆಂದಿರುವವನು ಸತ್ಯವಾದ ಯಾವ ಕಾರಣವನ್ನೂ ಸ್ವೀಕರಿಸಬೇಕಾಗಿಲ್ಲ. ಅದಕ್ಕಾಗಿ ಪ್ರಯತ್ನವನ್ನೂ ಮಾಡಬೇಕಾಗಿಲ್ಲ; ಏಕೆಂದರೆ ಶೂನ್ಯವೇ ಎಲ್ಲ ಇಷ್ಟಾರ್ಥಗಳನ್ನೂ ಸಾಧಿಸಿಕೊಡುವುದು" ಎಂದು ವಿವರಿಸಿದ್ದಾರೆ.]

ಓಂ ನಾಭಾವಃ, ಉಪಲಬ್ಧೇಃ ಓಂ 28

ಜಗತ್ತಿನ ಅಭಾವವಿಲ್ಲ, ಅದು ನಮ್ಮ ಅನುಭವಕ್ಕೆ ಸಿಕ್ಕಿರುವುದರಿಂದ.

[ಜಗತ್ತೇ ಶೂನ್ಯವೆಂದು ಹೇಳಲಾಗದು. ಅದನ್ನು ನಾವು ನೋಡಬಹುದು, ಇಂದ್ರಿಯಗಳಿಂದ ಸಾಕ್ಷಾತ್ಕರಿಸಿಕೊಳ್ಳಬಹುದು.]

ಓಂ ವೈಧರ್ಮ್ಯಾಚ್ಚ ನ ಸ್ವಪ್ನಾದಿವತ್ ಓಂ 29

ವೈಧರ್ಮ್ಯವಿರುವುದರಿಂದಲೂ ಸ್ವಪ್ನಾದಿಗಳಂತೆ ಜಗತ್ತು ಮಿಥ್ಯಾಭೂತವಾದುದು (ಶೂನ್ಯ) ಅಲ್ಲ.

[ಸ್ವಪ್ನಕಾಲದಲ್ಲಿ ನಾವು ಅನೇಕ ವಿಷಯಗಳನ್ನು ನೋಡುವೆವು, ಆದರೆ ಸ್ವಪ್ನ ಮುಗಿದಮೇಲೆ "ಈಗ ನೋಡಿದುದು ಬರೇ ಸ್ವಪ್ನ! ಅದು ನಿಜವಾದ ಹಾವಲ್ಲ" ಮೊದಲಾದ ಅನುಭವ ಹುಟ್ಟುವುದು. ಆದರೆ ಈ ಪ್ರಪಂಚದ ವಿಷಯದಲ್ಲಿ ಅಂಥ ಅನುಭವ ಆಗುವುದಿಲ್ಲ. ಇದು ಪ್ರಪಂಚವಲ್ಲ, ಎಂಬ ಜ್ಞಾನ ಹುಟ್ಟಲು ಕಾರಣವಿಲ್ಲ. ಇಲ್ಲಿಗೆ ಅಸದಧಿಕರಣ—**ಅಸದ್ವಾದ**—ಮುಗಿಯಿತು.

ಓಂ ನ ಭಾವಃ, ಅನುಪಲಬ್ಧೇಃ ಓಂ 30

ಅಸ್ತಿತ್ವವಿಲ್ಲ, ಹಾಗೆ ಉಪಲಬ್ಧಿ ಇಲ್ಲದಿರುವುದರಿಂದ.

[ಜಗತ್ತಿನ ಸೃಷ್ಟಿಗೆ ವಿಜ್ಞಾನವೇ ಕಾರಣವೆಂಬ ವಿಜ್ಞಾನವಾದವನ್ನು ಈಗ ನಿರಾಕರಿಸಲಾಗುವುದು. ಈ ಜಗತ್ತು ಬರೇ ವಿಜ್ಞಾನಮಯವಾದುದಲ್ಲ, ಆ ವಿಧವಾದ ಅನುಭವವಿಲ್ಲ. "ಜ್ಞಾನವೇ ತಿಳಿಯಲ್ಪಡುವ ಎಲ್ಲ ಪದಾರ್ಥಗಳ

ಆಕಾರಗಳನ್ನೂ ಪ್ರಕಾಶವಾಗುವಂತೆ ಮಾಡುವುದು, ಅಲ್ಲಿ ಸಂತತಿಭೇದ — ಪರಂಪರೆಯಾಗಿ ಒಂದರಿಂದ ಹುಟ್ಟುವ ಮತ್ತೊಂದರೊಡನೆ ಭೇದ-ತನ್ನಲ್ಲಿಯೇ ಇರುವ ಭೇದ ಮತ್ತು ಇತರ ವಸ್ತುಗಳೊಡನೆ ಇರುವ ಭೇದ, ಇವೆಲ್ಲವೂ ಅಜ್ಞಾನದಿಂದ ಆವರಿಸಲ್ಪಟ್ಟ ವಸ್ತುಗಳಲ್ಲಿ ಕಲ್ಪಿತವಾಗಿ ತೋರುವುವು" ಎಂಬುದೂ ಸರಿಯಲ್ಲ. ಎಂದು 'ಅನುವ್ಯಾಖ್ಯಾನ'ದಲ್ಲಿ ಹೇಳಿದೆ. ಜಗತ್ತು ಕೇವಲ ವಿಜ್ಞಾನಮಯವಾಗಿ ಕಾಣಬರುವ ಅನುಭವವಿಲ್ಲ. ಆದುದರಿಂದ ವಿಜ್ಞಾನವಾದ ಅಸಮಂಜಸ.]

ಓಂ ಕ್ಷಣಿಕತ್ವಾಚ್ಚ ಓಂ 31

ಕ್ಷಣಿಕತ್ವ ಇರುವುದರಿಂದಲೂ.

[ಜ್ಞಾನ ಕ್ಷಣಿಕವಾಗಿದೆ. ಜ್ಞೇಯ (ತಿಳಿಯಲ್ಪಡಬೇಕಾದ) ಪದಾರ್ಥಗಳು ನಿತ್ಯ, ಎಂದು ಹೇಳಲ್ಪಟ್ಟಿದೆ. ಆದುದರಿಂದ ಕ್ಷಣಿಕವಾಗಿರುವುದಕ್ಕೂ ಶಾಶ್ವತವಾಗಿರುವುದಕ್ಕೂ ಐಕ್ಯ ಕೂಡುವುದಿಲ್ಲ. 'ಅನುಸ್ಮೃತೇಶ್ಚ' ಎಂಬ (26) ಸೂತ್ರವನ್ನು ನೋಡಿ.]

ಓಂ ಸರ್ವಥಾಽನುಪಪತ್ತೇಃ ಓಂ 32

ಸರ್ವವಿಧದಲ್ಲಿಯೂ ಅನುಪಪನ್ನವಾಗಿರುವುದರಿಂದ.

[ಪ್ರಮಾಣವಿಲ್ಲದಿರುವುದರಿಂದಲೂ ಎಲ್ಲ ಶ್ರುತಿಸ್ಮೃತಿಗಳಿಗೆ ವಿರುದ್ಧವಾಗಿರುವುದರಿಂದಲೂ ಈ ಬೌದ್ಧ ಪಕ್ಷಗಳನ್ನು ಸ್ವೀಕರಿಸಬಾರದು. **ಮಾಧ್ಯಮಿಕರ** ಶೂನ್ಯವಾದವನ್ನು ಇದು ನಿರಾಕರಿಸುತ್ತದೆ. ಪ್ರತ್ಯಕ್ಷ ಕ್ಷಣಿಕತ್ವ ಕಲ್ಪನೆ, ಪರೋಕ್ಷ ಪ್ರತ್ಯಕ್ಷ ಬಿಂಬ ಪ್ರತಿಬಿಂಬ ರೂಪ ಎರಡು ಜಗತ್ತುಗಳ ಕಲ್ಪನೆ, ಶೂನ್ಯ ವಿಜ್ಞಾನಗಳ ಅದ್ವೈತ ಕಲ್ಪನೆ, ಇವುಗಳ ಪ್ರಕಟನೆಯಲ್ಲಿಯಾಗಲಿ ಮರೆಮಾಚುವುದರಲ್ಲಿಯಾಗಲಿ ವೇದಬಾಹ್ಯರಾದ ಬೌದ್ಧರ ಪಕ್ಷಗಳು ಸಮಂಜಸವಾಗುವುದಿಲ್ಲ, ಏಕೆಂದರೆ ನಿತ್ಯರಾದ ಜೀವಬ್ರಹ್ಮರನ್ನು ಅವರು ಅಂಗೀಕರಿಸುವುದಿಲ್ಲ. ಸರ್ವಪ್ರಮಾಣಗಳಿಗೆ ವಿರುದ್ಧವಾದುದರಿಂದಲೂ ಅವು ಗ್ರಾಹ್ಯವಲ್ಲ. **ಅದ್ವೈತವಾದ** ಪ್ರಚ್ಛನ್ನ ಬೌದ್ಧವಾದವೇ ಆಗಿರುವುದರಿಂದ ಅದೂ ನಿರಾಕೃತವಾಯಿತೆಂದು ತಿಳಿಯಬೇಕು.]

ಓಂ ನೈಕಸ್ಮಿನ್ನಸಂಭವಾತ್ ಓಂ 33

ಒಂದರಲ್ಲಿಯೇ ವಿರುದ್ಧ ಧರ್ಮಗಳು ಸಂಭವಿಸುವುದಿಲ್ಲವಾದುದರಿಂದ.

[ಇದು ಜೈನರ 'ಸ್ಯಾದ್ವಾದ'ವನ್ನು ದೂಷಿಸುವ ಸೂತ್ರ. ಜೈನರು—ಕ್ಷಪಣಕರು—ಈ ಪ್ರಪಂಚವನ್ನು ವಿವರಿಸುವಾಗ ಇದಕ್ಕೆ ಏಳು ಬಗೆಗಳನ್ನು ಹೇಳುತ್ತಾರೆ. "ಅದು ಇರಬಹುದು, ಇಲ್ಲದಿರಬಹುದು, ಇದ್ದೂ ಇಲ್ಲದಿರಬಹುದು, ಇವು ಮೂರೂ ಅಲ್ಲದಿರಬಹುದು, ಬೇರೆ ಯಾವ ರೀತಿಯಲ್ಲಿ ಯಾದರೂ ಇರಬಹುದು." ಹೀಗೆಂದು ಹೇಳುವ ಅವರ ಮಾತು—ಸ್ಯಾದ್ವಾದ—ಒಂದೇ ವಸ್ತುವಿನಲ್ಲಿ ಅನ್ವಯಿಸಲಾರದು; ಅವನ್ನೆಲ್ಲ ಕಾಣಲಾಗದುದರಿಂದ ಅದು ಅಸಂಭವ.]

ಓಂ ಏವಂ ಚ, ಆತ್ಮಾಕಾತ್ಸ್ನ್ಯರ್ಮ್ ಓಂ 34

ಹೀಗೆಯೇ ಆತ್ಮನ ಸರ್ವವ್ಯಾಪ್ತತ್ವವೂ ಕೂಡುವುದಿಲ್ಲ.

[ಆತ್ಮನ ಕಾಯಪರಿಮಾಣತ್ವ ಸರಿಯಲ್ಲ. "ಆತ್ಮ ತಾನು ಪ್ರವೇಶಿಸುವ ದೇಹದಷ್ಟೇ ಪರಿಮಿತಿಯುಳ್ಳವ, ಎಂದರೆ ಆತ್ಮನ ಗಾತ್ರ ಅವನು ಆಶ್ರಯಿಸಿರುವ ದೇಹದ ಗಾತ್ರದಷ್ಟೇ" ಎಂದು ಜೈನರು ಹೇಳುವುದು ಸರಿಯಾಗುವುದಿಲ್ಲ. ಹಾಗೆ ಅಣುದೇಹದಲ್ಲಿ ಅಣುವಾಗಿರುವ ಆತ್ಮ, ಆನೆ ಮೊದಲಾದ ದೊಡ್ಡ ದೇಹಗಳನ್ನು ಪಡೆದಾಗ, ಅವನು ಪೂರ್ಣವಾಗಿ ಆ ದೊಡ್ಡ ದೇಹವನ್ನು ಆಕ್ರಮಿಸಲಾರ. ಹಾಗೆಯೇ ಆನೆಯಲ್ಲಿರುವ ಜೀವ ಸೊಳ್ಳೆಯ ದೇಹದಲ್ಲಿ ಪ್ರವೇಶ ಮಾಡುವಾಗ ಸ್ವಲ್ಪಭಾಗ ಮಾತ್ರ ಒಳಗೆ ಹೋಗಿ ಉಳಿದುದು ಹೊರಗೇ ಇರಬೇಕಾಗುತ್ತದೆ.]

ಓಂ ನ ಚ ಪರ್ಯಾಯಾದಪ್ಯವಿರೋಧಃ, ವಿಕಾರಾದಿಭ್ಯಃ ಓಂ 35

ಬೇರೆ ವಿಧದಲ್ಲಿ ಹೇಳಿದರೂ ವಿರೋಧಬಾರದೆ ಇರದು, ವಿಕಾರಾದಿಗಳ ದೆಸೆಯಿಂದ.

[ಆತ್ಮನಿಗೆ ನಿರ್ದಿಷ್ಟವಾದ ಒಂದು ಗಾತ್ರವನ್ನು ಒಪ್ಪದೆ, "ಹಾಗಾದರೆ ಆಯಾ ಶರೀರಗಳಲ್ಲಿ ಅವನು ಪ್ರವೇಶಿಸಿದಾಗ ಅಲ್ಲಲ್ಲಿ ಆಯಾ ದೇಹಗಳ ಪರಿಮಾಣವನ್ನೇ ಆತ್ಮ ಪಡೆಯುವನು" ಎಂದು ಪರ್ಯಾಯವಾಗಿ ಹೇಳುವುದೂ ಸಮಂಜಸವಲ್ಲ. ಹಾಗೆ ಹೇಳಿದರೆ ಆತ್ಮನಿಗೆ ವಿಕಾರ, ಅನಿತ್ಯತ್ವ ಮುಂತಾದವನ್ನು ಒಪ್ಪಬೇಕಾಗುವುದು.]

ಓಂ ಅಂತ್ಯಾವಸ್ಥಿತೇಶ್ಚ, ಉಭಯನಿತ್ಯತ್ವಾತ್, ಅವಿಶೇಷಾತ್ ಓಂ 36

ಅಂತ್ಯಪರಿಮಾಣ ನಿತ್ಯವಾಗಿರುವುದರಿಂದ ಎರಡೂ ನಿತ್ಯವಾಗಿರಬೇಕು, ವಿಶೇಷವಿಲ್ಲದುದರಿಂದ.

[ನಿಯತ ಪರಿಮಾಣವೇ ಇರದಿದ್ದರೆ ನಿತ್ಯವಾದ ಸ್ವರೂಪವೇ ಇಲ್ಲ ವೆಂದಾಗುವುದು. ಅಂತ್ಯಾವಸ್ಥೆಯಲ್ಲಿ—ಮೋಕ್ಷದಲ್ಲಿ—ಅಂಥ ಪರಿಮಾಣವನ್ನು ಹೊಂದಲು ಆವಶ್ಯಕವಾದ ಶರೀರವೂ ನಿತ್ಯವಾಗಿರಬೇಕಾಗುವುದು. ಇದರಿಂದ ಆತ್ಮ ಮತ್ತು ಅವನ ಶರೀರ ಎರಡೂ ನಿತ್ಯವಾಗಿರಬೇಕಾಗುವುದು; ವಿಶೇಷ ವೇನೂ ಇಲ್ಲದಿರುವುದರಿಂದ ಎಲ್ಲ ಶರೀರಗಳೂ—ಸಂಸಾರದಲ್ಲಿರುವುವೂ—ನಿತ್ಯವೇ ಆಗಿರಬೇಕಲ್ಲ! ಇದು ಅಸಂಗತ. "ದೇಹವ್ಯಾಪ್ತಿ ಎಂಬುದು ಎಂತಹ ವಿಶೇಷ? ಮನುಷ್ಯ ಮರವಾಗಿ ಹುಟ್ಟಿದಾಗ ಏನಾಗುವುದು? ಮರಗಳಿಗೆ ಸಂಗೀತದಿಂದ ಪುಷ್ಪಫಲಪ್ರಾಪ್ತಿಯೂ, ಸ್ಪರ್ಶದಿಂದ ಸಣ್ಣದಾಗುವಿಕೆಯೂ, ರಸದಿಂದ ಏಕಪ್ರಕಾರ ಸ್ಥಿತಿಯೂ ಕಾಣಬರುವುದಿಲ್ಲವೇ? ಆಗ ಅದಕ್ಕೆ ಆತ್ಮವಿಲ್ಲ, ಎಂದು ಹೇಳಬಹುದೇ? ಇವನ್ನೆಲ್ಲ ಪರಿಶೀಲಿಸಿಯೇ ವೇದಜ್ಞ ರಾದ ಬಾದರಾಯಣ ಮುನಿಗಳು ಆತ್ಮ ಅಕಾತ್ಸ್ನ್ಯ—ಸಂಪೂರ್ಣವ್ಯಾಪಿ ಯಲ್ಲ—ಎಂದು ಹೇಳಿದರು" ಎಂದು ಪೂರ್ಣಪ್ರಜ್ಞರು ಅನುವ್ಯಾಖ್ಯಾನದಲ್ಲಿ ಹೇಳಿದ್ದಾರೆ.]

ಓಂ ಪತ್ಯುರಸಾಮಂಜಸ್ಯಾತ್ ಓಂ 37

ಪತಿಗೆ ಅಸಾಮಂಜಸ್ಯವಿರುವುದರಿಂದ (ಜಗತ್ಕಾರಣತ್ವ ಕೂಡುವುದಿಲ್ಲ).

[ಪಶುಪತಿ, ಶಕ್ತಿ ಮೊದಲಾದ ದೇವತೆಗಳು ಜಗತ್ತಿನ ಸೃಷ್ಟಿಗೆ ಕಾರಣರಲ್ಲ, ಎಂದು ಸೂತ್ರಕಾರರ ಅಭಿಪ್ರಾಯ. ಸದಾಶಿವನು "ಸರ್ವಜ್ಞತ್ವಾದಿ ಸರ್ವಗುಣ ಪರಿಪೂರ್ಣ, ಚಿತ್ರಮಯವಾದ ಈ ಜಗತ್ತಿನ ಸೃಷ್ಟಿಗೆ ಕಾರಣ, ಯಾವ ದೋಷವೂ ಇಲ್ಲದವ, ಪಶುಪತಿ" ಎಂದು ಕೆಲವರು ಹೇಳುತ್ತಾರೆ. ಅನೇಕ ಶ್ರುತಿಗಳಿಗೆ ವಿರುದ್ಧವಾದ ಈ ವಿಷಯ ಅಸಮಂಜಸವಾಗುವುದು. ಆದುದ ರಿಂದ ಪಾಶುಪತಮತದವರು ಹೇಳುವಂತೆ ಪಶುಪತಿ ಸೃಷ್ಟಿಕರ್ತನಲ್ಲ. ಅವನಿಗೆ ಪಾರತಂತ್ರ್ಯ, ಹುಟ್ಟು ಸಾವುಗಳು, ಅಜ್ಞತ್ವ, ಪ್ರಳಯವಾದಾಗ ಇಲ್ಲದಿರುವಿಕೆ ಮೊದಲಾದ ದೋಷಗಳಿವೆ. "ಅಹಂ ರುದ್ರಾಯ ಧನುರಾತನೋಮಿ"—

ನಾನು ರುದ್ರನಿಗಾಗಿ ಧನುಸ್ಸನ್ನು ಧರಿಸುವೆ—"ಯಂ ಕಾಮಯೇ ತಂ ತಮುಗ್ರಂ ಕೃಣೋಮಿ" ಯಾವನನ್ನು ಬೇಕಾದರೂ ನಾನು ರುದ್ರನನ್ನಾಗಿ ಮಾಡುತ್ತೇನೆ—"ಏಕೋ ನಾರಾಯಣ ಆಸೀತ್, ನ ಬ್ರಹ್ಮಾ, ನೇಶಾನೋ ನಾಗ್ನೀಷೋಮೌ"—ಮೊದಲು ನಾರಾಯಣನೊಬ್ಬನೇ ಇದ್ದನು, ಆಗ ಬ್ರಹ್ಮನೂ ಇರಲಿಲ್ಲ, ರುದ್ರನೂ ಇರಲಿಲ್ಲ, ಅಗ್ನಿಚಂದ್ರರೂ ಇರಲಿಲ್ಲ— ಮುಂತಾದ ಶ್ರುತಿಗಳು ಪಶುಪತಿ ಅಸ್ವತಂತ್ರನೆಂದು ತಿಳಿಸುತ್ತವೆ. ಇದರಿಂದ 'ಪಶುಪತಿ ಜಗತ್ಕರ್ತಾ', ಎಂಬುದು ಅಸಮಂಜಸ.]

ಓಂ ಸಂಬಂಧಾನುಪಪತ್ತೇಶ್ಚ ಓಂ 38

ಸಂಬಂಧ ಕೂಡುವುದಿಲ್ಲವಾದುದರಿಂದಲೂ.

[ಪಾಶುಪತರು ಶಿವನಿಗೆ ಶರೀರವಿಲ್ಲವೆನ್ನುವರು. ಆದುದರಿಂದ ಶರೀರ ವನ್ನು ಬಿಟ್ಟ ಆತ್ಮನಂತೆ, ಜಗತ್ತಿಗೆ ಕರ್ತೃವಾಗಿ ಅವನಿಗೆ ಸಂಬಂಧವಿರುವುದಿಲ್ಲ. ಮೃತಪುರುಷ ಹೇಗೆ ಕರ್ತೃವಾಗಲಾರನೋ ಹಾಗೆಯೇ ಅಶರೀರನಾದ ಪಶುಪತಿ ಜಗತ್ಕಾರಣನಾಗಲಾರ.]

ಓಂ ಅಧಿಷ್ಠಾನಾನುಪಪತ್ತೇಶ್ಚ ಓಂ 39

ಅಧಿಷ್ಠಾನ ಹೊಂದದೆ ಇರುವುದರಿಂದಲೂ.

[ಗಡಿಗೆ ಮಾಡುವ ಕುಂಬಾರ—ಕರ್ತಾ—ನೆಲ ಮೊದಲಾದ ಅಧಿಷ್ಠಾನದ (ನೆಲೆ) ಮೇಲೆ ನಿಂತು ಕೆಲಸ ಮಾಡುತ್ತಾನೆ. ಕುಂಬಾರನಿಗಿರುವಂಥ ಅಧಿಷ್ಠಾನ ಪಶುಪತಿಗೆ ಇರುವುದಿಲ್ಲ.]

ಓಂ ಕರಣವಚ್ಚೇನ್ನ, ಭೋಗಾದಿಭ್ಯಃ ಓಂ 40

ಇಂದ್ರಿಯಗಳಂತೆ, ಎಂದರೆ ಅದು ಸರಿಯಲ್ಲ, ಭೋಗ ಮೊದಲಾದುವುಗಳಿಂದ.

["ಈ ಜಗತ್ತೇ ಆ ಪಶುಪತಿಗೆ ಇಂದ್ರಿಯಗಳಂತೆ ಅಧಿಷ್ಠಾನ ರೂಪ ದಲ್ಲಿದೆ, ನಿತ್ಯವಾಗಿದ್ದರೂ ಒಂದು ಭಾವದಿಂದ ಅದು ಸರಿಹೊಂದುವುದು" ಎನ್ನುವುದು ಸರಿಯಲ್ಲ ; ಏಕೆಂದರೆ ಅಗ ಪಶುಪತಿಗೆ ಭೋಗಾದಿಗಳು ಪ್ರಾಪ್ತ ವಾಗಬೇಕಾದೀತು. ಶರೀರಗತವಾದ ಉತ್ಪತ್ತಿ ವಿನಾಶಗಳೂ ಸುಖದುಃಖಾನು ಭವಗಳೂ ಪಶುಪತಿಗೆ ಪ್ರಾಪ್ತವಾಗುವುವು. ಆದುದರಿಂದ ಈ ಜಗತ್ತು ಪಶುಪತಿಯ ಶರೀರವಾಗುವುದಿಲ್ಲ.]

ಓಂ ಅಂತವತ್ತ್ವಮಸರ್ವಜ್ಞತಾ ವಾ ಓಂ 41

ಈ ವಾದದಿಂದ ಅವನಿಗೆ ಅಂತವತ್ತ್ವವೋ ಅಸರ್ವಜ್ಞತೆಯೋ ಪ್ರಾಪ್ತವಾಗುವುದು.

[ಜಗತ್ತಿನ ಸೃಷ್ಟಿಕರ್ತಾ ಅನಂತನೂ ಸರ್ವಜ್ಞನೂ ಆಗಿರಬೇಕು. ಪಶುಪತಿಗೆ ಶರೀರವಿದೆಯೆಂದರೆ ಅದು ಕೊನೆಗಾಣುವುದರಿಂದ ಅಂತವತ್ತ್ವ—ಕೊನೆ ಇರುವುದು—ಎಂಬ ದೋಷ ಬರುವುದು. ಶರೀರವಿಲ್ಲ, ಎಂದರೆ ಅವನಿಗೆ ಜ್ಞಾನವೂ ಇರುವುದಿಲ್ಲ, ಶರೀರವುಳ್ಳವನಿಗೇ ಜ್ಞಾನವಿರುವುದು ಕಂಡು ಬಂದಿದೆ. ವಿಷ್ಣುವಿನ ವಿಷಯದಲ್ಲಿ ಈ ಬಗೆಯ ದೋಷ ಹುಟ್ಟುವುದಿಲ್ಲ, ಅದು ಶ್ರುತಿಯಿಂದಲೇ ಪರಿಹಾರ ಹೊಂದುವುದು. ಭಗವಂತ ಯಾವ ಸ್ವರೂಪದಲ್ಲಿರುವನೋ ಹಾಗೆಯೇ ಅಭಿವ್ಯಕ್ತನಾಗುವನು. "ಕಿಮಾತ್ಮಕೋ ಭಗವಾನ್ ? ಜ್ಞಾನಾತ್ಮಕ ಐಶ್ವರ್ಯಾತ್ಮಕಃ ಶಕ್ತ್ಯಾತ್ಮಕ ಇತಿ"—ಭಗವಂತನ ಸ್ವರೂಪವೇನು? ಅವನು ಜ್ಞಾನಾತ್ಮಕ, ಐಶ್ವರ್ಯಾತ್ಮಕ ಹಾಗೂ ಶಕ್ತ್ಯಾತ್ಮಕ—ಜ್ಞಾನೈಶ್ವರ್ಯ ಶಕ್ತ್ಯಾದಿಗುಣಗಳೇ ಪರಮಾತ್ಮನ ದೇಹವಾಗಿರುವುದರಿಂದ ಅವನಲ್ಲಿ ಆಕ್ಷೇಪಣೆಗೆ ಕಾರಣವೇ ಇರುವುದಿಲ್ಲ.]

ಓಂ ಉತ್ಪತ್ತ್ಯಸಂಭವಾತ್ ಓಂ 42

ಉತ್ಪತ್ತಿ ಅಸಂಭವವಾದುದರಿಂದ.

[ಶಾಕ್ತೇಯರು ಶಕ್ತಿ ಸರ್ವಜ್ಞಳು, ಎಲ್ಲವನ್ನೂ ಮಾಡಬಲ್ಲಳು, ಸದಾಶಿವನೇ ಮೊದಲಾದವರೂ ಅವಳ ಅಧೀನದಲ್ಲಿಯೇ ಇರುವರು, ಎಂದು ಹೇಳುತ್ತಾ ಶಕ್ತಿಯೇ ಜಗದುತ್ಪತ್ತಿಗೆ ಕಾರಣಳೆನ್ನುತ್ತಾರೆ. **ಶಾಕ್ತೇಯರಲ್ಲಿ ಮಹಾಂತರು, ಮಧ್ಯಮರು, ಕ್ಷುದ್ರರು** ಎಂಬ ಬಗೆಗಳುಂಟು. ಮೊದಲನೆಯವರು ಶಕ್ತಿಗೆ ಸೃಷ್ಟಿಗಾಗಿ ಪುರುಷನ ಅಗತ್ಯವಿಲ್ಲ, ಎನ್ನುವರು. ಮಧ್ಯಮರು ಅವಳ ಅಂಗಭೂತವಾಗಿ ಪ್ರಿಯನಾದ ಶಿವನಿರುವನು, ಎನ್ನುತ್ತಾರೆ. ಕೊನೆಯವರಾದ ಕ್ಷುದ್ರರು ಮಹೇಶ್ವರನೇ ಸರ್ವಜ್ಞತ್ವಾದಿ ಗುಣಗಳುಳ್ಳವ, ಶಕ್ತಿಗೆ ತಕ್ಕ ಪುರುಷ, ಎನ್ನುವರು. ಈ ಸೂತ್ರದಲ್ಲಿ **ಮಹಾವಾಮಪಕ್ಷದವರ ಶಕ್ತಿವಾದವನ್ನು** ನಿರಾಕರಿಸಲಾಗಿದೆ. ಪುರುಷನ ಅನುಗ್ರಹವಿಲ್ಲದೆ ಉತ್ಪತ್ತಿ ಅಸಂಭವ ಎಂದು ಸೂತ್ರದ ಅಭಿಪ್ರಾಯ, ಸ್ತ್ರೀಪುರುಷರ ಸಂಪರ್ಕದಿಂದಲೇ ಸೃಷ್ಟಿಯಾಗುತ್ತಿದೆ; ಬರೇ ಸ್ತ್ರೀಯರಿಂದ ಅದು ಸಾಧ್ಯವಲ್ಲ. ಆದುದರಿಂದ

ಶಕ್ತಿಯೇ ಸೃಷ್ಟಿಕಾರಿಣೀ, ಎಂಬ ಮಹಾಪಾಮುಪಕ್ಷದ ಶಾಕ್ತೇಯರ ವಾದ ಸಾಧುವಲ್ಲ. ಶಿವನ ಅನುಗ್ರಹದಿಂದ ಶಕ್ತಿ ಜಗತ್ತಿನ ಸೃಷ್ಟಿ ಮಾಡುವಳು, ಎಂಬ **ಮಧ್ಯಮುಪಕ್ಷದವರ** ವಾದವೂ ಸರಿಯಲ್ಲ.]

ಓಂ ನ ಚ ಕರ್ತುಃ ಕರಣಮ್ ಓಂ 43

ಕರ್ತೃವಿನ ದೆಸೆಯಿಂದ ಕರಣ ಹುಟ್ಟದು.

[ಪುರುಷನನ್ನು ಸೃಷ್ಟಿಗೆ ಅಂಗವಾಗಿ ಒಪ್ಪುವುದಾದರೂ ಜ್ಞಾನ, ಐಶ್ವರ್ಯಾದಿ ಸಾಧನಗಳು ಅವನಿಗೆ ಇಲ್ಲದಿರುವುದರಿಂದ ಸೃಷ್ಟಿಕಾರ್ಯದಲ್ಲಿ ಅವನು ಶಕ್ತಿಗೆ ಸಹಾಯಕನಾಗಲಾರ. ಆದುದರಿಂದ ಮೂರನೆಯ ಪಕ್ಷದವರ ಶಕ್ತಿವಾದವೂ ಸಾಧುವಲ್ಲ. 'ದೇಹವಿಲ್ಲದಿದ್ದರೂ ಈಶ್ವರ ಸರ್ವಜ್ಞ' ಎನ್ನುವ **ಅಣುಪಾಮುಪಕ್ಷವಾದ** (ಕ್ಷುದ್ರ ಶಕ್ತಿಪಕ್ಷದ ನಿಲುವು) ಸರಿಯಲ್ಲ.]

ಓಂ ವಿಜ್ಞಾನಾದಿಭಾವೇ ವಾ ತದಪ್ರತಿಷೇಧಃ ಓಂ 44

ಶಿವನಿಗೆ ವಿಜ್ಞಾನ ಮೊದಲಾದ ಕರಣಗಳಿವೆಯೆಂದರೂ ಉತ್ಪತ್ತ್ಯಸಂಭವದೋಷ ತಪ್ಪದು.

[ವಿಜ್ಞಾನಾದಿಗಳು ಸೃಷ್ಟಿಗೆ ಕಾರಣವೆನ್ನುವುದಾದರೆ, ಆ ತರ್ಕ 'ಈಶ್ವರನೇ ಸೃಷ್ಟಿಗೆ ಕಾರಣ' ಎಂಬುದರಲ್ಲಿ ಸೇರಿಹೋಗುವುದು. ಆದರೆ ಶಿವಕರ್ತೃತ್ವವೂ ಮೊದಲೇ ನಿರಾಕೃತವಾಗಿದೆ.]

ಓಂ ವಿಪ್ರತಿಷೇಧಾಚ್ಚ ಓಂ 45

ವಿರೋಧವನ್ನು ಹೇಳಿರುವುದರಿಂದಲೂ ಇದು ಅಸಂಗತ.

[ಎಲ್ಲ ಶ್ರುತಿ, ಸ್ಮೃತಿ ಮೊದಲಾದವುಗಳಿಗೂ ಈ ವಾದ ವಿರುದ್ಧವಾಗಿರುವುದರಿಂದ ಇದು ಅಸಂಗತ. ಆ ಪ್ರಮಾಣಗ್ರಂಥಗಳೆಲ್ಲ ಪರಬ್ರಹ್ಮನನ್ನುಳಿದು ಇತರರಿಂದ ಜಗದುತ್ಪತ್ತಿಯನ್ನು ವಿರೋಧಿಸುವುವು. ಆದುದರಿಂದ **ಶಾಕ್ತೇಯಮತ** ಅಸಮಂಜಸ.]

ಇಲ್ಲಿಗೆ ಬ್ರಹ್ಮಸೂತ್ರಗಳ ಎರಡನೆಯ ಅಧ್ಯಾಯದ ಎರಡನೆಯ ಪಾದ ಮುಗಿಯಿತು.

*

ಮೂರನೆಯ ಪಾದ

ಜೀವ, ಪರಮಾತ್ಮ, ಅಧಿಭೂತ, ಅಧಿದೈವಗಳ ವಿಷಯದಲ್ಲಿ ಶ್ರುತಿಗಳಲ್ಲಿ ಆಪಾತತಃ (ಮೇಲುನೋಟದಲ್ಲಿ) ಕಾಣಬರುವ ವಿರೋಧವನ್ನು ಈ ಅಧ್ಯಾಯದಲ್ಲಿ ನಿವಾರಿಸಲಾಗುತ್ತದೆ.

ಓಂ ನ ವಿಯತ್, ಅಶ್ರುತೇಃ ಓಂ 1

ಆಕಾಶ ಉತ್ಪತ್ತಿ ಇಲ್ಲದುದಲ್ಲ, ಹಾಗೆ ಶ್ರುತಿ ಹೇಳುವುದಿಲ್ಲ.

[ಅನೇಕ ವಸ್ತುಗಳ ಉತ್ಪತ್ತಿಯನ್ನು ಶ್ರುತಿ ತಿಳಿಸುತ್ತದೆ. ವಾಯು, ತೇಜಸ್ಸು, ನೀರು, ಭೂಮಿ ಮೊದಲಾದವುಗಳ ಉತ್ಪತ್ತಿಯನ್ನು ಛಾಂದೋಗ್ಯೋಪನಿಷತ್ತಿನಲ್ಲಿ ಕಾಣಬಹುದು; ಆದರೆ ಆಕಾಶದ ಉತ್ಪತ್ತಿಯನ್ನು ಅಲ್ಲಿ ಹೇಳಿಲ್ಲ; ಬ್ರಹ್ಮ ಹುಟ್ಟಿದುದನ್ನೂ ಎಲ್ಲಿಯೂ ಹೇಳಿಲ್ಲ, ಅವನ ಅನುತ್ಪತ್ತಿಯನ್ನು ಹೇಳಿದೆ. ಅಜ, ಅಜಾಯಮಾನ, ಮುಂತಾದ ಶಬ್ದಗಳು ಪರಮಾತ್ಮ ಉತ್ಪತ್ತಿರಹಿತನೆಂದು ತಿಳಿಸುವುವು. ಆದರೆ ಆಕಾಶದ ವಿಷಯದಲ್ಲಿ ಅನುತ್ಪತ್ತಿಸೂಚಕ ಶ್ರುತಿವಾಕ್ಯಗಳೂ ಇಲ್ಲ. ಆದುದರಿಂದ ಆಕಾಶ ಅನುತ್ಪನ್ನ— ಹುಟ್ಟು ಇಲ್ಲದುದು — ಆಗಲಾರದು.]

ಓಂ ಅಸ್ತಿ ತು ಓಂ 2

ಆದರೆ ಶ್ರುತಿ ಇದೆ.

[ಆಕಾಶದ ಉತ್ಪತ್ತಿಯನ್ನು ಶ್ರುತಿ ತಿಳಿಸುತ್ತದೆ. "ಆತ್ಮನ ಆಕಾಶಃ ಸಂಭೂತಃ" — ಆತ್ಮನಿಂದ ಆಕಾಶ ಹುಟ್ಟಿತು — ಎಂಬ ತೈತ್ತಿರೀಯ ಉಪನಿಷತ್ತಿನ ವಾಕ್ಯ ಆಕಾಶದ ಉತ್ಪತ್ತಿಯನ್ನು ಹೇಳುತ್ತದೆ.]

ಓಂ ಗೌಣ್ಯಸಂಭವಾತ್ ಓಂ 3

ಆಕಾಶದ ಅನುತ್ಪತ್ತಿಯನ್ನು ತಿಳಿಸುವ ಶ್ರುತಿ ಗೌಣ (ಅಮುಖ್ಯ) ವಾದುದು, ಅಸಂಭವವಾದುದರಿಂದ.

["ಅನಾದಿರ್ವಾ ಆಕಾಶಃ ಶೂನ್ಯೋಽಲೌಕಿಕಃ"—ಆಕಾಶ ಶೂನ್ಯ, ಅಲೌಕಿಕ ಹಾಗೂ ಅನಾದಿ—ಮೊದಲಾಗಿ ಹೇಳುವ ಶ್ರುತಿಗಳನ್ನು ಮುಖ್ಯವಾಗಿ ಇಟ್ಟುಕೊಳ್ಳದೆ ಗೌಣವೆಂದೇ ಭಾವಿಸಬೇಕು; ಬೇರೆ ವಿಧವಾಗಿ ಭಾವಿಸಿದರೆ ಉತ್ಪತ್ತಿಶ್ರುತಿಗಳು ಅನೇಕವಾಗಿರುವುದೇ ಅಸಂಭವವಾಗುವುದು.]

ಓಂ ಶಬ್ದಾಚ್ಚ ಓಂ 4

ಶ್ರುತಿಯಿಂದಲೂ.

["ಅಥ ಹ ವಾವ ನಿತ್ಯಾನಿ, ಪುರುಷಃ ಪ್ರಕೃತಿರಾತ್ಮಾ ಕಾಲ ಇತಿ। ಅಥ ಯಾನ್ಯನಿತ್ಯಾನಿ ಪ್ರಾಣಃ ಶ್ರದ್ಧಾ ಭೂತಾನಿ ಭೌತಿಕಾನೀತಿ। ಯಾನಿ ಹ ವಾ ಉತ್ಪತ್ತಿಮಂತಿ ತಾನ್ಯನಿತ್ಯಾನಿ। ಯಾನಿ ಹ ವಾ ಅನುತ್ಪತ್ತಿಮಂತಿ ತಾನಿ ನಿತ್ಯಾನಿ। ನ ಹ್ಯೇತಾನಿ ಕದಾಚನೋತ್ಪದ್ಯಂತೇ ನ ಲೀಯಂತೇ ಪುರುಷಃ ಪ್ರಕೃತಿರಾತ್ಮಾ ಕಾಲ ಇತಿ। ಅಥೈತಾನ್ಯುತ್ಪತ್ತಿಮಂತಿ ಚಾನುತ್ಪತ್ತಿಮಂತಿ ಚ, ಪ್ರಾಣಃ ಶ್ರದ್ಧಾಽಕಾಶ ಇತಿ ಭಾಗಶೋ ಹ್ಯುತ್ಪದ್ಯಂತೇ"—ಭಾಲ್ಲವೇಯ ಶ್ರುತಿ ಹೀಗೆ ಹೇಳುತ್ತದೆ: 'ಮುಂದೆ ನಿತ್ಯವಾದವು:—ಪುರುಷ, ಪ್ರಕೃತಿ, ಆತ್ಮಾ ಮತ್ತು ಕಾಲ. ತರುವಾಯ ಅನಿತ್ಯವಾದವು:—ಪ್ರಾಣ, ಶ್ರದ್ಧೆ, ಭೂತಗಳು, ಭೌತಿಕವಸ್ತುಗಳು. ಯಾವುದಕ್ಕೆ ಉತ್ಪತ್ತಿ ಇದೆಯೋ ಅವು ಅನಿತ್ಯಗಳು, ನಾಶವುಳ್ಳವು; ಯಾವುವುಗಳಿಗೆ ಉತ್ಪತ್ತಿಯಿಲ್ಲವೋ ಅವು ನಿತ್ಯ, ನಾಶವೂ ಇಲ್ಲದವು. ನಿತ್ಯವಾದವು ಹುಟ್ಟುವುದೂ ಇಲ್ಲ, ಸಾಯುವುದೂ ಇಲ್ಲ—ಪುರುಷ, ಪ್ರಕೃತಿ, ಆತ್ಮಾ ಮತ್ತು ಕಾಲ. ಕೆಲವಕ್ಕೆ ಉತ್ಪತ್ತಿಯೂ ಉಂಟು, ಉತ್ಪತ್ತಿ ಇಲ್ಲದಿರುವುದೂ ಉಂಟು. ಪ್ರಾಣ, ಶ್ರದ್ಧಾ, ಆಕಾಶ ಇವು ಭಾಗಶಃ ಉತ್ಪತ್ತಿ ಪಡೆಯುತ್ತವೆ." ಈ ಶ್ರುತಿಯಿಂದ ಆಕಾಶದ ಉತ್ಪತ್ತಿಯನ್ನು ಒಪ್ಪಿಕೊಳ್ಳಬೇಕು.]

ಓಂ ಸ್ಯಾಚ್ಚೈಕಸ್ಯ, ಬ್ರಹ್ಮಶಬ್ದವತ್ ಓಂ 5

ಒಂದೇ ವಸ್ತುವಿಗೆ ಉತ್ಪತ್ತಿ, ಅನುತ್ಪತ್ತಿಗಳನ್ನು ಅನ್ವಯಿಸಬಹುದು, ಬ್ರಹ್ಮಶಬ್ದದಂತೆ.

[ಗೌಣ, ಮುಖ್ಯಾರ್ಥಗಳನ್ನು ಗಮನಿಸಿ ಒಂದೇ ವಸ್ತುವಿಗೆ ಉತ್ಪತ್ತಿ ಇದೆ ಅಥವಾ ಉತ್ಪತ್ತಿ ಇಲ್ಲ, ಎಂದು ಹೇಳಬಹುದು. ಶ್ರುತಿಯಲ್ಲಿ ಬ್ರಹ್ಮಶಬ್ದವನ್ನು 'ಪರಬ್ರಹ್ಮ, ಪರಮಾತ್ಮಾ' ಎಂಬರ್ಥದಲ್ಲಿ ಮುಖ್ಯಾರ್ಥ ದಿಂದ ಪ್ರಯೋಗ ಮಾಡಲಾಗುವುದು; ಗೌಣಾರ್ಥವನ್ನು ಉಪಯೋಗಿಸಿದಾಗ ಸಾಮಾನ್ಯವಾಗಿ ಚತುರ್ಮುಖ ಬ್ರಹ್ಮನನ್ನೂ ಅದೇ ಶಬ್ದದಿಂದ ಹೇಳಬಹುದು. ಹೀಗೆ ಆಕಾಶದ ವಿಷಯದಲ್ಲಿ ಗೌಣಾರ್ಥ ಬರುವ ಅನುತ್ಪತ್ತಿ ಶಬ್ದವಿದೆ.]

ಓಂ ಪ್ರತಿಜ್ಞಾಹಾನಿರವ್ಯತಿರೇಕಾತ್, ಶಬ್ದೇಭ್ಯಃ ಓಂ 6

ಅವ್ಯತಿರೇಕದಿಂದ ಪ್ರತಿಜ್ಞಾಹಾನಿಯಾಗುವುದು, ಶ್ರುತಿಗಳಿಂದ.

[ಬ್ರಹ್ಮನನ್ನು ಬಿಟ್ಟು ಉಳಿದವು ನಿತ್ಯವೆಂದರೆ "ಇದಂ ಸರ್ವಮಸೃಜತ"—ಇದೆಲ್ಲವನ್ನೂ ಬ್ರಹ್ಮ ಸೃಷ್ಟಿ ಮಾಡಿದನು—ಎಂಬ ತೈತ್ತಿರೀಯ ವಾಕ್ಯದಿಂದ ಪ್ರತಿಜ್ಞಾಭಂಗವಾಗುವುದು. ಆಕಾಶ ಆ ಬ್ರಹ್ಮೇತರ ಪದಾರ್ಥಗಳಿಂದ ಭಿನ್ನವಾಗಿ ವಿಶೇಷ ಗುಣ ಪಡೆದುದೇನೂ ಅಲ್ಲ. "ಆತ್ಮಾ ವಾ ಇದಮೇಕ ಏವಾಗ್ರ ಆಸೀತ್" ಮೊದಲಾದ ಶ್ರುತಿಗಳು ಬ್ರಹ್ಮ ಒಬ್ಬನೇ ಮೊದಲು ಇದ್ದನು, ಎಂದು ಹೇಳಿರುವುದರಿಂದ ಆಕಾಶ ಆಮೇಲೆ ಉತ್ಪನ್ನವಾಯಿತು, ಎಂದೇ ತಿಳಿಯಬೇಕು.]

ಓಂ ಯಾವದ್ವಿಕಾರಂ ವಿಭಾಗಃ, ಲೋಕವತ್ ಓಂ 7

ವಿಕಾರವಾಗುವವರೆಗೆ ವಿಭಾಗವಿರುವುದು, ಲೋಕದಲ್ಲಿರುವಂತೆ.

[ವಿಭಕ್ತವಾಗುವುದು, ಎಂದರೇ ವಿಕಾರಿತ್ವ ಸಿದ್ಧಿಸುವುದು. ಲೋಕದಲ್ಲಿ ಯಾವುದು ವಿಕಾರ ಹೊಂದಬಲ್ಲದೋ ಅದೇ ವಿಭಕ್ತವಾಗುವುದು, ಎಂದರೆ ಉತ್ಪನ್ನವಾಗುವುದು. ಬೃಹತ್ಸಂಹಿತೆಯಲ್ಲಿ ಹೀಗೆ ಹೇಳಿದೆ: "ಏಕೋಽವಿಭಕ್ತಃ ಪರಮಃ ಪುರುಷೋ ವಿಷ್ಣುರುಚ್ಯತೇ"—ಪುರುಷೋತ್ತಮನಾದ ವಿಷ್ಣು ಒಬ್ಬನೇ ಮುಖ್ಯವಾಗಿ ಅವಿಭಕ್ತ ಹಾಗೂ ಅವಿಕಾರೀ. "ಪ್ರಕೃತಿಃ ಪುರುಷಃ ಕಾಲಸ್ತ್ರಯ ಏತೇ ವಿಭಾಗತಃ । ಚತುರ್ಥಸ್ತು ಮಹಾನ್ ಪ್ರೋಕ್ತಃ ಪಂಚಮ್ಯೋಽಹಂಕೃತಿರ್ಮತಾ । ತದ್ವಿಭಾಗೇನ ಜಾಯಂತೇ ಆಕಾಶಾದ್ಯಾಃ ಪೃಥಕ್ ಪೃಥಕ್"—ಪ್ರಕೃತಿ, ಪುರುಷ, ಕಾಲ (ಭೂ, ಶ್ರೀ, ದುರ್ಗಾ) ಈ ಮೂವರೂ ಭಾಗ ಹೊಂದುವರು; ನಾಲ್ಕನೆಯದು ಮಹತ್ತತ್ತ್ವ, ಐದನೆಯದು ಅಹಂಕಾರತತ್ತ್ವ; ಈ ಐದು ತತ್ತ್ವಗಳ ವಿಭಾಗದಿಂದ ಆಕಾಶಾದಿಗಳು ಬೇರೆ ಬೇರೆಯಾಗಿ ಹುಟ್ಟುವುವು. ವಿಭಾಗವುಳ್ಳದುದು ವಿಕಾರ ಮತ್ತು ಉತ್ಪತ್ತಿಗಳನ್ನು ಪಡೆಯುವುದು. ಇಲ್ಲಿಗೆ ವಿಯದಧಿಕರಣ ಮುಗಿಯಿತು.]

ಓಂ ಏತೇನ ಮಾತರಿಶ್ವಾ ವ್ಯಾಖ್ಯಾತಃ ಓಂ 8

ಇದರಿಂದ ವಾಯುವನ್ನೂ ವಿವರಿಸಿದಂತೆಯೇ ಆಯಿತು.

[ಹಿಂದೆ ತಿಳಿಸಿದ ರೀತಿಯಲ್ಲಿಯೇ ಮುಖ್ಯಪ್ರಾಣ ಗೌಣದೃಷ್ಟಿಯಿಂದ ಉತ್ಪತ್ತಿಯಿಲ್ಲದವನು, ಮುಖ್ಯ ತಾತ್ಪರ್ಯದಿಂದ ಉತ್ಪತ್ತಿಯುಳ್ಳವನೇ. "ಸಾ ವಾ ಏಷಾ ದೇವತಾ, ಅನಾದಿಃ, ಯೋಽಯಂ ಪವತೇ"— (ಯಾವಾಗಲೂ) ಬೀಸುತ್ತಿರುವ ಈ ದೇವತೆ ಅನಾದಿ—ಮುಂತಾದ ಶ್ರುತಿ ವಾಕ್ಯಗಳಿಂದ ವಾಯುವಿಗೆ ಉತ್ಪತ್ತಿಯಿಲ್ಲ, ಎಂದು ತಿಳಿದುಬರುವುದು. ಆದರೆ "ಆಕಾಶಾದ್ವಾಯುಃ" ಇತ್ಯಾದಿ ವಾಕ್ಯಗಳು ವಾಯುವಿನ ಉತ್ಪತ್ತಿಯನ್ನು ಸೂಚಿಸುವುವು. ಹೀಗೆ ಮುಖ್ಯ ಮತ್ತು ಅಮುಖ್ಯವೃತ್ತಿಗಳನ್ನು ಗಮನಿಸಿ, ಮುಖ್ಯವೃತ್ತಿಯಿಂದ ವಾಯು ಉತ್ಪತ್ತಿಯುಳ್ಳವನು, ಅಮುಖ್ಯವೃತ್ತಿಯಿಂದ ಉತ್ಪತ್ತಿರಹಿತನು, ಎಂದು ನಿಶ್ಚಯಿಸಬೇಕು.]

ಓಂ ಅಸಂಭವಸ್ತು, ಸತೋಽನುಪಪತ್ತೇಃ ಓಂ 9

ಸದ್ವಸ್ತುವಿನ ಉತ್ಪತ್ತಿ ಅಸಂಭವ, ಏಕೆಂದರೆ ಅದಕ್ಕೆ ಉಪಪತ್ತಿ ಇಲ್ಲ.

["ಅಸದ್ವಾ ಇದಮಗ್ರ ಆಸೀತ್, ತತೋ ವೈ ಸದಜಾಯತ", "ಅಸತಃ ಸದಜಾಯತ" ಮುಂತಾದ ಶ್ರುತಿಗಳಿಂದ 'ಮೊದಲು ಅಸತ್ತೇ ಇದ್ದದ್ದು, ಆ ಅಸತ್ತಿನಿಂದ ಸತ್ ಹುಟ್ಟಿತು' ಎಂದು ತೋರುವುದು. ಹೀಗೆ ಅಸತ್ತಿನಿಂದ ಸತ್—ಇಲ್ಲದಿರುವುದರಿಂದ, ಇರುವುದು—ಹುಟ್ಟುವುದಿಲ್ಲ. ಹಾಗೂ ಅದು ಕಂಡುಬಂದಿಲ್ಲವಾದುದರಿಂದ ಅನುಪಪತ್ತಿ. ಶ್ರುತಿಗಳನ್ನು ಉದಾಹರಿಸಿ 'ಅಸತ್' ಶಬ್ದ ಬ್ರಹ್ಮನನ್ನು ಬೋಧಿಸುವುದು, ಎಂದು ಪೂರ್ಣಪ್ರಜ್ಞರು ಸಾಧಿಸಿದ್ದಾರೆ. "ಬ್ರಹ್ಮಾ ವಾ ಅಸತ್, ಸದ್ವಾವ ಪ್ರಾಣಃ..."—ಬ್ರಹ್ಮನೇ ಅಸತ್ತು, ಸತ್ತೇ ಪ್ರಾಣ—ಎಂದು ಪೈಂಗಿ ಶ್ರುತಿ.]

ಓಂ ತೇಜೋಽತಸ್ತಥಾ ಹ್ಯಾಹ ಓಂ 10

ತೇಜಸ್ಸು ಇದರಿಂದಲೇ ಹುಟ್ಟುವುದು; ಹಾಗೆಯೇ ಶ್ರುತಿ ಹೇಳುತ್ತದೆ.

["ವಾಯೋರಗ್ನಿಃ" ಎಂದು ಶ್ರುತಿ ಹೇಳುವಾಗ ಬ್ರಹ್ಮನನ್ನು ಬಿಟ್ಟು ಬೇರೆಯವರಿಂದ ತೇಜಸ್ಸು ಹುಟ್ಟುವುದಿಲ್ಲ, ಎಂದು ತಿಳಿಯಬೇಕು. ಪರಮಾತ್ಮನ ದೆಸೆಯಿಂದಲೇ ಅದು ಹುಟ್ಟುವುದು.]

ಓಂ ಆಪಃ ಓಂ 11

ನೀರು (ಬ್ರಹ್ಮನಿಂದಲೇ ಹುಟ್ಟುತ್ತದೆ).

["ಅಗ್ನೇರಾಪಃ"—ಬೆಂಕಿಯಿಂದ ನೀರು ಹುಟ್ಟಿತು—ಎಂದು ಹೇಳಿದ್ದರೂ ಬ್ರಹ್ಮನಿಂದಲೇ ಆಕಾಶ, ವಾಯು, ಅಗ್ನಿ, ನೀರುಗಳ ಸೃಷ್ಟಿಯಾಗುವುದು. ಅದು ಆದಿಸೃಷ್ಟಿ. "ಬ್ರಹ್ಮೈವೇದಮಗ್ರ ಆಸೀತ್ತದಪ್ರೋऽಸೃಜತ"—ಈ ಬ್ರಹ್ಮನೇ ಮೊದಲು ಇದ್ದದ್ದು, ಅವನು ನೀರನ್ನು ಸೃಷ್ಟಿಮಾಡಿದನು—ಎಂದು ಶ್ರುತಿವಾಕ್ಯವಿದೆ. "ಕರ್ತಾ ಸರ್ವಸ್ಯ ವೈ ವಿಷ್ಣುರೇಕ ಏವ ನ ಸಂಶಯಃ । ಇತರೇಷಾಂ ತು ಸತ್ತಾದ್ಯಾ ಯುತ ಏವ ತದಾಜ್ಞಯಾ"—ಎಲ್ಲ ಕಾರ್ಯವನ್ನೂ ಮಾಡುವವ ವಿಷ್ಣುವೇ, ಸಂಶಯವಿಲ್ಲ. ಇತರರ ಅಸ್ತಿತ್ವ ಮೊದಲಾದವು ಆತನ ಅಪ್ಪಣೆಯಿಂದಲೇ ಹುಟ್ಟುವುವು—ಎಂದು ಭವಿಷ್ಯತ್ಪುರಾಣ ಹೇಳುತ್ತದೆ.]

ಓಂ ಪೃಥಿವೀ, ಅಧಿಕಾರರೂಪ-ಶಬ್ದಾಂತರಾದಿಭ್ಯಃ ಓಂ 12

ಅಧಿಕಾರ (ವಿಷಯ), ರೂಪ, ಶಬ್ದಾದಿಗಳಿಂದ ಪೃಥಿವಿಯೇ ಹೇಳಲ್ಪಟ್ಟಿದೆ.

[ಛಾಂದೋಗ್ಯದಲ್ಲಿ "ತಾ ಆಪ ಐಕ್ಷಂತ, ಬಹ್ವ್ಯಃ ಸ್ಯಾಮ ಪ್ರಜಾಯೇಮಹೀತಿ । ತಾ ಅನ್ನಮಸೃಜಂತ"—ನೀರು (ನೀರಿನ ಅಭಿಮಾನಿದೇವತೆ) 'ನಾವು ಹೆಚ್ಚಾಗಿ ಪ್ರಜಾಸೃಷ್ಟಿ ಮಾಡೋಣ' ಎಂದು ನೋಡಿತು, ಅದು ಅನ್ನವನ್ನು ಸೃಷ್ಟಿಮಾಡಿತು—ಎಂದು ಹೇಳಿದೆ. ಇಲ್ಲಿ ಅನ್ನವೆಂದು ಹೇಳಿರುವುದು ಪೃಥಿವಿಯನ್ನು ಸೂಚಿಸುತ್ತದೆ. ಛಾಂದೋಗ್ಯದಲ್ಲಿ "ಯತ್ಕೃಷ್ಣಂ ತದನ್ನಸ್ಯ"—ಅನ್ನದ ಕಪ್ಪುಬಣ್ಣ ಪೃಥಿವಿಗೆ ಸೇರಿಕೊಳ್ಳುತ್ತದೆ—ಎಂದು ಹೇಳಿದೆ. ತೈತ್ತಿರೀಯದಲ್ಲಿ "ಪೃಥಿವೀ ವಾವ ಅನ್ನಂ"—ಪೃಥಿವಿಯೇ ಅನ್ನ—ಎಂದು ಶ್ರುತಿ ಹೇಳಿರುವುದರಿಂದಲೂ ಪೃಥಿವಿಯೇ ಅಲ್ಲಿ ಅನ್ನಶಬ್ದದಿಂದ ಹೇಳಲ್ಪಡುತ್ತಿದೆ.]

ಓಂ ತದಭಿಧ್ಯಾನಾದೇವ ತು ತಲ್ಲಿಂಗಾತ್ಸಃ ಓಂ 13

ಅವನ ಅಭಿಧ್ಯಾನದಿಂದಲೇ ಸೃಷ್ಟಿ; ಅವನ ಲಿಂಗವೇ ಇರುವುದರಿಂದ ಅವನೇ ಕರ್ತಾ.

[ಸೃಷ್ಟಿಗೆ ವಿಷ್ಣುವೇ ಕಾರಣನೆಂದರೂ ಬಂಧ, ಲಯಾದಿಗಳಿಗೆ ರುದ್ರಾದಿಗಳು ಕಾರಣರಾಗಿರುವಂತೆ ಕೆಲವು ವಾಕ್ಯಗಳಿಂದ ತೋರಿಬರುತ್ತದೆ. ಆ ವಿಷಯವನ್ನು ಇಲ್ಲಿ ನಿರ್ಧರಿಸಲಾಗಿದೆ. "ಅವನಲ್ಲಿ ಮನಸ್ಸನ್ನು ಅರ್ಪಿಸಿ ತತ್ತ್ವಚಿಂತನೆ

ಮಾಡುವುದರಿಂದ ಕೊನೆಯಲ್ಲಿ ವಿಶ್ವಬಂಧಕವಾದ ಮಾಯೆ ಕಳೆದುಹೋಗುವುದು" ಎಂದು ಶ್ವೇತಾಶ್ವರೋಪನಿಷತ್ತು ತಿಳಿಸುತ್ತದೆ. ಅವನ ಅಭಿಧ್ಯಾನ-ನಿಮಿತ್ತತ್ವಲಿಂಗದಿಂದ ವಿಷ್ಣುವೇ ಮುಖ್ಯಕಾರಣನೆಂದು ಹೇಳಬಹುದು. "ಯ ಇದಂ ಸರ್ವಂ ವಿಲಾಯಯತಿ ಸ ಹರಿಃ ಪರಃ ಪರಮಾತ್ಮಾ—ಈ ಎಲ್ಲವನ್ನೂ ಯಾವನು ನಾಶಪಡಿಸುವನೋ ಅವನು ಪರಮಾತ್ಮನಾದ ಶ್ರೀಹರಿ—ಮುಂತಾಗಿ ಶ್ರುತಿಗಳು ಪ್ರತಿಪಾದಿಸುತ್ತವೆ. "ಸೃಷ್ಟ್ಯಾದಿಕಂ ಸಮಸ್ತಂ ತು ವಿಷ್ಣೋರೇವ ಪರಾದ್ಭವೇತ್"—ಸೃಷ್ಟಿ ಮೊದಲಾದ ಎಲ್ಲ ಕಾರ್ಯಗಳೂ ಶ್ರೇಷ್ಠದೇವತೆಯಾದ ವಿಷ್ಣುವಿನಿಂದಲೇ ಆಗುವುವು—ಎಂದು ಸ್ಕಾಂದಪುರಾಣದಲ್ಲಿದೆ. "ಸ ಬ್ರಹ್ಮಣಾ ವಿಸೃಜತಿ, ಸ ರುದ್ರೇಣ ವಿಲಾಯಯತಿ, ಸೋಽನುತ್ಪತ್ತಿರಲಯಃ, ಏಕ ಏವ ಹರಿಃ ಪರಃ ಪರಾನಂದಃ"—ಅವನು ಬ್ರಹ್ಮನಿಂದ ಸೃಷ್ಟಿ ಮಾಡಿಸುತ್ತಾನೆ, ರುದ್ರನಿಂದ ನಾಶಗೊಳಿಸುತ್ತಾನೆ. ಅವನಿಗೆ ಉತ್ಪತ್ತಿಲಯಗಳಿಲ್ಲ; ಅವನೊಬ್ಬನೇ ಹರಿ, ಪರಮಾತ್ಮಾ, ಶ್ರೇಷ್ಠ ಆನಂದ ಪಡೆದಿರುವವ—ಎಂದು ಮಹೋಪನಿಷತ್ತಿನಲ್ಲಿದೆ.]

ಓಂ ವಿಪರ್ಯಯೇಣ ತು ಕ್ರಮಃ, ಅತ ಉಪಪದ್ಯತೇ ಚ ಓಂ 14

ವಿಪರೀತ (ವಿರುದ್ಧ) ರೀತಿಯಲ್ಲಿ ಕ್ರಮವನ್ನು ಹೇಳಿದೆ, ಆದುದರಿಂದ ಹೊಂದುತ್ತದೆ.

[ಕ್ರಮವನ್ನು ಅನುಸರಿಸಿ ಪ್ರಳಯವನ್ನು ಭಾಲ್ಲವೇಯ ಶ್ರುತಿ ಹೇಳುತ್ತದೆ. ಚತುರ್ವೇದ ಶಿಖೆಯಲ್ಲಿ ವ್ಯುತ್ಕ್ರಮ ರೀತಿಯಿಂದ—ವಿರುದ್ಧ ರೀತಿಯಿಂದ—ಲಯವನ್ನು ಹೇಳಿದೆ. ಇದನ್ನು ಪರಿಹರಿಸಲು ಈ ಸೂತ್ರ ಪ್ರಸಕ್ತವಾಗಿದೆ. "ಪ್ರಳಯದ ವಿಷಯದಲ್ಲಿ ಕ್ರಮವಚನವೂ ವಿಪರೀತ ಕ್ರಮವನ್ನು ಅಪೇಕ್ಷಿಸುತ್ತದೆ" ಎಂದು ಸೂತ್ರದ ತಾತ್ಪರ್ಯ. "ಅನುರೂಪಃ ಕ್ರಮಃ ಸೃಷ್ಟೌ ಪ್ರತಿರೂಪೋ ಲಯೇ ಕ್ರಮಃ । ಇತಿ ಕ್ರಮೇಣ ಭಗವಾನ್ ಸೃಷ್ಟಿ-ಸಂಹಾರಕೃದ್ಧರಿಃ"—ಸೃಷ್ಟಿಯಲ್ಲಿ ಒಂದು ಕ್ರಮವಿದ್ದರೆ ಲಯದಲ್ಲಿ ಅದಕ್ಕೆ ವಿಪರೀತವಾದ ಕ್ರಮವೇ ಇರುವುದು. ಹೀಗೆ ಒಂದೊಂದು ಕ್ರಮವನ್ನು ಅನುಸರಿಸಿಯೇ ಹರಿಯು ಸೃಷ್ಟಿಯನ್ನೂ ಸಂಹಾರವನ್ನೂ ಮಾಡುತ್ತಾನೆ—ಎಂದು ಪದ್ಮಪುರಾಣದಲ್ಲಿ ಹೇಳಿದೆ.]

ಓಂ ಅಂತರಾ ವಿಜ್ಞಾನಮನಸೀ ಕ್ರಮೇಣ ತಲ್ಲಿಂಗಾದಿತಿ ಚೇನ್ನ, ಅವಿಶೇಷಾತ್ ಓಂ 15

ಲಿಂಗವಿರುವುದರಿಂದ ವಿಜ್ಞಾನ (ಬುದ್ಧಿ) ಮನಸ್ಸುಗಳನ್ನು ಹೊರತು ವಿಪರೀತ ಕ್ರಮವಿದೆ, ಎಂದರೆ ಅದು ಸರಿಯಲ್ಲ. ಅದಕ್ಕಾಗಿ ವಿಶೇಷ ಪ್ರಮಾಣವಿಲ್ಲ.

["ಪ್ರಾಣಾನ್ಮನಃ, ಮನಸಶ್ಚ ವಿಜ್ಞಾನಂ"—ಪ್ರಾಣದಿಂದ ಮನಸ್ಸು, ಮನಸ್ಸಿನಿಂದ ವಿಜ್ಞಾನ—ಮತ್ತು "ಯಚ್ಛೇದ್ವಾಙ್ಮನಸಿ ಪ್ರಾಜ್ಞಸ್ತದ್ಯಚ್ಛೇತ್ ಜ್ಞಾನ ಆತ್ಮನಿ"—ಪ್ರಾಜ್ಞನು ವಾಕ್ಕನ್ನು ಮನಸ್ಸಿನಲ್ಲಿಯೂ ಮನಸ್ಸನ್ನು ಬುದ್ಧಿಯಲ್ಲಿಯೂ ಲಯ ಮಾಡಿಕೊಳ್ಳಬೇಕು" ಮೊದಲಾದ ಲಿಂಗಗಳ ಪ್ರಕಾರ ಬುದ್ಧಿ ಮನಸ್ಸುಗಳ ಹೊರತು ಲಯದಲ್ಲಿ ವಿಪರೀತ ಕ್ರಮವಿದೆ, ಎಂದು ಹೇಳಿದರೆ ಅದು ಸರಿಯಾಗದು. ಏಕೆಂದರೆ ಹಾಗೆ ತಿಳಿಸುವ ಯಾವ ಪ್ರಮಾಣವೂ ಇಲ್ಲ.]

ಓಂ ಚರಾಚರವ್ಯಪಾಶ್ರಯಸ್ತು ಸ್ಯಾತ್, ತದ್ವ್ಯಪದೇಶೋ ಭಾಕ್ತಃ, ತದ್ಭಾವಭಾವಿತ್ವಾತ್ ಓಂ 16

ಚರಾಚರ ವಸ್ತುಗಳ ವಿಷಯದಲ್ಲಿ ಮಾಡಿರುವ ವ್ಯಪದೇಶ ಭಾಗಾಪೇಕ್ಷೆಯಿಂದಲೇ, ಹಾಗೆ ಭಾವಿಸಲ್ಪಟ್ಟಿರುವುದರಿಂದ.

['ಮನಸಶ್ಚ ವಿಜ್ಞಾನಂ'—ಮನಸ್ಸಿನಿಂದ ಬುದ್ಧಿ—ಎಂದು ಹೇಳಿರುವುದು ಅಚರವಾದ ವಸ್ತುಗಳ ಮತ್ತು ಚರವಾದ ಮನಸ್ಸಿನ **ಸಮಾ**ಲೋಚನೆಯಿಂದ ವಿಜ್ಞಾನ ಹುಟ್ಟುವುದನ್ನು ತಿಳಿಸುವುದು. ಭಾಗಾಪೇಕ್ಷೆಯಿಂದ ಹೀಗೆ ಹೇಳಲಾಗಿದೆ, ವಿಜ್ಞಾನತತ್ತ್ವದೃಷ್ಟಿಯಿಂದಲ್ಲ. ಸ್ಕಾಂದಪುರಾಣದಲ್ಲಿ ಹೀಗೆ ಹೇಳಿದೆ: "ಪರಾದವ್ಯಕ್ತಮುತ್ಪನ್ನಮವ್ಯಕ್ತಾತ್ತು ಮಹಾಂಸ್ತಥಾ । ವಿಜ್ಞಾನತತ್ತ್ವಂ ಮಹತಃ ಸಮುತ್ಪನ್ನಂ ಚತುರ್ಮುಖಾತ್ । ವಿಜ್ಞಾನತತ್ತ್ವಾತ್ತು ಮನೋ ಮನಸ್ತತ್ತ್ವಾಚ್ಚ ಖಾದಿಕಂ । ಏವಂ ಬಾಹ್ಯಾ ಪರಾ ಸೃಷ್ಟಿರಂತಸ್ತದ್ವ್ಯಕ್ತ್ಯಪೇಕ್ಷಯಾ । ವಿಪರೀತಕ್ರಮೋ ಜ್ಞೇಯೋ ಯಸ್ಮಾದಂತೇ

ಹರೇರ್ದೃಶಿಃ"—ಪರಮಾತ್ಮನಿಂದ ಅವ್ಯಕ್ತವಾದ ಪ್ರಕೃತಿಯೂ, ಪ್ರಕೃತಿಯಿಂದ ಮಹತ್ತತ್ತ್ವವೂ, ಮಹತ್ತತ್ತ್ವದಿಂದ (ಬ್ರಹ್ಮನಿಂದ) ವಿಜ್ಞಾನವೂ, ವಿಜ್ಞಾನತತ್ತ್ವದಿಂದ ಮನಸ್ಸೂ ಹುಟ್ಟಿದವು. ಮನಸ್ಸಿನಿಂದ ಆಕಾಶಾದಿಗಳು ಹುಟ್ಟಿದವು. ವ್ಯಕ್ತಿಗಳನ್ನು ಗಮನಿಸಿ ಹೀಗೆ ಬಾಹ್ಯ ಸೃಷ್ಟಿಯಾಯಿತು. ಅಂತರಿಂದ್ರಿಯಗಳಲ್ಲಿ ವಿಪರೀತಕ್ರಮವನ್ನು ತಿಳಿಯಬೇಕು. ಏಕೆಂದರೆ ಕೊನೆಯಲ್ಲಿ ಪರಮಾತ್ಮನ ಕರುಣಾಪೂರ್ಣದೃಷ್ಟಿ ಬರುವುದು.]

ಓಂ ನಾತ್ಮಾ, ಅಶ್ರುತೇಃ, ನಿತ್ಯತ್ವಾಚ್ಚ ತಾಭ್ಯಃ ಓಂ 17

ಪರಮಾತ್ಮ ವಿನಾಶಿಯಲ್ಲ, ಅವನ ಲಯ ಶ್ರುತವಾಗಿಲ್ಲ ; ಶ್ರುತಿಗಳ ಪ್ರಕಾರ ಅವನು ನಿತ್ಯನೂ ಹೌದು.

["ಸ ಇದಂ ಸರ್ವಂ ವಿಲಾಪ್ಯಾಂತಸ್ತಮಸಿ ವಿಲೀನಃ, ತದ್ವಿಲಾಪ್ಯ ವ್ಯತ್ತಿಷ್ಠತೇ...ಏಕ ಏವ"—ಆ ಪರಮಾತ್ಮ ಇದೆಲ್ಲವನ್ನೂ ತಮಸ್ಸಿನಲ್ಲಿ ವಿಲೀನಗೊಳಿಸಿ ತಾನೂ ನಿಗೂಢನಾಗಿರುತ್ತಾನೆ, ಆದನ್ನೂ ನಾಶ ಮಾಡಿ ತಾನೊಬ್ಬನೇ ಏಳುತ್ತಾನೆ—ಎಂದು ಹೇಳಿರುವುದರಿಂದ ಪರಮಾತ್ಮನಿಗೆ ಲಯವಿಲ್ಲ. "ನಿತ್ಯೋ ನಿತ್ಯಾನಾಂ" ಮೊದಲಾದ ಶ್ರುತಿಗಳಿಂದ ಅವನು ನಿತ್ಯರಲ್ಲಿ ನಿತ್ಯನೂ ಆಗಿರುವನೆಂದು ತಿಳಿದುಬರುವುದು. ತಾನು ನಿತ್ಯವಾಗಿರುವುದರಿಂದಲೂ ಬ್ರಹ್ಮ ತಾನು ಮಾತ್ರ ಲಯ ಹೊಂದುವುದಿಲ್ಲ.]

ಓಂ ಜ್ಞೋಽತ ಏವ ಓಂ 18

ಜೀವನೂ ಈ ಪರಮಾತ್ಮನಿಂದಲೇ ಉತ್ಪತ್ತಿ ಪಡೆಯುವನು.

["ನಿತ್ಯೋ ನಿತ್ಯಾನಾಂ" ಎಂಬ ಕಠಶ್ರುತಿಯಲ್ಲಿ ಜೀವರೂ ನಿತ್ಯರೆಂದು ತಿಳಿದುಬರುವುದು. "ಸರ್ವ ಏತ ಆತ್ಮಾನೋ ವ್ಯುಚ್ಚರಂತಿ" ಎಂಬ ಶ್ರುತಿಯಿಂದ 'ಈ ಎಲ್ಲ ಜೀವರೂ ಉತ್ಪತ್ತಿ ಹೊಂದುವರು' ಎಂದು ತಿಳಿದು ಬರುತ್ತದೆ. ಈ ವಿರೋಧವನ್ನು ಪರಿಹರಿಸಲು ಜೀವ ಪರಮಾತ್ಮನಿಂದ ಉತ್ಪತ್ತಿ ಪಡೆಯುವನೆಂದು ಹೇಳಿದೆ. ಕಾಷಾಯಣಶ್ರುತಿ ಹೀಗೆ ತಿಳಿಸುತ್ತದೆ: "ತೇ ವಾ ಏತೇ ಚಿದಾತ್ಮಾನೋಽವಿನಷ್ಟಾಃ ಪರಂ ಜ್ಯೋತಿರ್ನಿವಿಶಂತ್ಯ-ವಿನಷ್ಟಾ ಏವೋತ್ಪದ್ಯಂತೇ ನ ವಿನಶ್ಯಂತಿ ಕದಾಚನ"—ಚಿದಾತ್ಮಕರಾದ

ಈ ಜೀವರು ನಾಶಹೊಂದದೆಯೇ ಪ್ರಳಯಕಾಲದಲ್ಲಿ ಪರಮಾತ್ಮನಲ್ಲಿ ಸೇರಿ ಕೊಳ್ಳುತ್ತಾರೆ. ಹಾಗೆ ನಾಶಹೊಂದದೆಯೇ ಇದ್ದು ಮತ್ತೆ ಉತ್ಪತ್ತಿ ಪಡೆಯುತ್ತಾರೆ; ಜೀವರಿಗೆ ಯಾವಾಗಲೂ ಸರ್ವಥಾ ಲಯವಿಲ್ಲ.]

ಓಂ ಯುಕ್ತೇಶ್ಚ ಓಂ 19

ಯುಕ್ತಿಯಿಂದಲೂ.

["ನಾಶಹೊಂದದೆಯೇ ಇದ್ದು ಪುನಃ ಹುಟ್ಟುತ್ತಾರೆ' ಎನ್ನುವುದರಲ್ಲಿ ವಿರೋಧ ಕಾಣಬರುವುದು. ಆದರೆ ನಿತ್ಯವಾದ ಜೀವರು ನಿತ್ಯನಾದ ಪರಮಾತ್ಮ ನಿಂದ ಉಪಾಧಿಯ ಅಪೇಕ್ಷೆಯಿಂದ ಉತ್ಪತ್ತಿ ಪಡೆಯುತ್ತಾರೆ, ಎಂಬುದು ಯುಕ್ತವಾಗಿದೆ. ಪಾಂಚಭೌತಿಕ ದೇಹಸಂಯೋಗವೇ ಆತ್ಮನಿಗೆ ಉತ್ಪತ್ತಿ, ಎಂದು ಭಾವಿಸಬೇಕು. ದೇಹವೆಂಬ ಉಪಾಧಿಯೊಳಗೆ ಸೇರಿಕೊಂಡಾಗ ಹುಟ್ಟು, ಅದನ್ನು ಬಿಟ್ಟುಹೋದಾಗ ಸಾವು.]

ಓಂ ಉತ್ಕ್ರಾಂತಿಗತ್ಯಾಗತೀನಾಮ್ ಓಂ 20

ಉತ್ಕ್ರಮಣ, ಗಮನ, ಆಗಮನಗಳಿರುವುದರಿಂದ.

["ವ್ಯಾಪ್ತಾ ಹ್ಯಾತ್ಮಾನಃ"—ಜೀವರು ವ್ಯಾಪ್ತರು—ಎಂದು ಕಾಷಾಯಣ ಶ್ರುತಿ ಹೇಳುತ್ತದೆ. "ಅಣುರ್ಹ್ಯೇಷ ಆತ್ಮಾ—ಈ ಆತ್ಮ ಅಣು—ಎಂದು ಗೌತಮಶ್ರುತಿ ಹೇಳುತ್ತದೆ. ಆದರೆ ಜೀವ ಅಣುವೋ ಅಲ್ಲವೋ, ಎಂಬ ಸಂದೇಹ ಬರುವುದು. ಜೀವ ಅಣುವೇ, ಎಂದು ಸಿದ್ಧಾಂತ ಮಾಡಲಾಗಿದೆ, ಅದಕ್ಕೆ ಕಾರಣಗಳುಂಟು. ಪೌಷ್ಯಾಯಣಶ್ರುತಿ ಹೀಗೆ ಹೇಳುತ್ತದೆ: "ಸೋಽಸ್ಮಾಚ್ಛರೀರಾದುತ್ಕ್ರಮ್ಯಾಮುಂ ಲೋಕಮಭಿಗಚ್ಛತಿ, ಅಮುಷ್ಮಾದಿಮಂ ಲೋಕಮಾಗಚ್ಛತಿ, ಸ ಗರ್ಭೀಭವತಿ, ಸ ಪ್ರಸೂಯತೇ, ಸ ಕರ್ಮ ಕುರುತೇ" —ಜೀವ ಈ ಶರೀರ ಬಿಟ್ಟು ಹೊರಟು ಆ ಲೋಕಕ್ಕೆ ಹೋಗುತ್ತಾನೆ (ಗತಿ), ಅಲ್ಲಿಂದ ಮತ್ತೆ ಈ ಲೋಕಕ್ಕೆ ಬರುತ್ತಾನೆ (ಆಗತಿ); ಆಮೇಲೆ ಗರ್ಭವಾಗು ತ್ತಾನೆ, ತರುವಾಯ ಪ್ರಸವ ಪಡೆಯುತ್ತಾನೆ, ಮತ್ತೆ ಪುನಃ ಕರ್ಮ ಮಾಡು ತ್ತಾನೆ—ಇದೆಲ್ಲ ಕಾರ್ಯ ಮಾಡುವ ಜೀವನ ರೂಪ ಅಣುವೇ.]

ಓಂ ಸ್ವಾತ್ಮನಾ ಚೋತ್ತರಯೋಃ ಓಂ 21

ಉತ್ತರ ವಾಕ್ಯಗಳ ಪ್ರಕಾರ ಉತ್ಕ್ರಮಣಾದಿಗಳು ಪರಮಾತ್ಮನ ಜೊತೆಯಲ್ಲಿಯೇ ಆಗುವುವು.

[ಪೌಷ್ಯಾಯಣ ಶ್ರುತಿಯು ಮುಂದಿನ ವಾಕ್ಯದಲ್ಲಿ "ಸ ಏತೇನೈವ ಸ್ವಾತ್ಮನಾ ಪರೇಣೇಮಂ ಗರ್ಭಮನುಪ್ರವಿಶತಿ, ಪರೇಣ ಜಾಯತೇ, ಪರೇಣ ನೀಯತೇ, ಪರೇಣ ಉನ್ನೀಯತೇ, ತಂ ವಾ ಏತಮಭಿವದಂತಿ ಸ್ವಾತ್ಮೇತಿ"— ಜೀವನು ಸ್ವತಂತ್ರನಾದ ಪರಮಾತ್ಮನ ಜೊತೆಗೇ ಈ ಲೋಕದಲ್ಲಿ ಗರ್ಭ ದೊಳಗೆ ಪ್ರವೇಶ ಮಾಡುತ್ತಾನೆ, ಪರಮಾತ್ಮನ ಜೊತೆಗೇ ದೇಹ ಪಡೆದು ಹೊರಬೀಳುತ್ತಾನೆ, ಅವನೊಡನೆ ಇದ್ದೇ ಕರ್ಮ ಮಾಡುತ್ತಾನೆ, ಆ ಪರಮಾತ್ಮ ನಿಂದಲೇ ಒಯ್ಯಲ್ಪಡುವನು, ಮೇಲಕ್ಕೊ ಹೋಗುವನು. ಆ ಶ್ರೇಷ್ಠ ಆತ್ಮ ನನ್ನೇ ಪರಮಾತ್ಮನೆನ್ನುತ್ತಾರೆ,—ಎಂದು ಹೇಳಿದೆ.]

ಓಂ ನಾಣುರತಚ್ಛ್ರುತೇರಿತಿ ಚೇನ್ನ, ಇತರಾಧಿಕಾರಾತ್ ಓಂ 22

'ಅಣುವಲ್ಲ, ಅದಲ್ಲವೆಂದು ಬೋಧಿಸುವ ಶ್ರುತಿಯಿದೆ' ಎನ್ನುವುದು ಸರಿಯಲ್ಲ; ಏಕೆಂದರೆ ಅದು ಮತ್ತೊಬ್ಬನ ಪ್ರಕರಣವಾಗಿದೆ.

["ವ್ಯಾಪ್ತಾ ಹ್ಯಾತ್ಮಾನಃ" ಎಂಬ ಕಾಷಾಯಣಶ್ರುತಿಯ ಪ್ರಕಾರ ಜೀವ ಅಣುವಲ್ಲ, ಎನ್ನುವುದು ಸರಿಯಲ್ಲ. ಆ ಶ್ರುತಿ ಜೀವನ ವಿಷಯವನ್ನು ತಿಳಿಸುವುದಿಲ್ಲ. ಅದು ಪರಮಾತ್ಮಬೋಧಕ. "ಆತ್ಮಾನಃ" ಎಂಬ ಬಹುವಚನ ಶಬ್ದವಿರುವುದರಿಂದ "ಜೀವರು" ಎಂದೇ ಅರ್ಥ ಮಾಡಬೇಕಾಗಿಲ್ಲ. ಒಬ್ಬನೇ ಆದ ಭಗವಂತನನ್ನು ಏಕವಚನದಲ್ಲಿಯೂ ದ್ವಿವಚನದಲ್ಲಿಯೂ ಬಹುವಚನ ದಲ್ಲಿಯೂ ಹೇಳಿದೆಯೆಂದು ಭವಿಷ್ಯತ್ಪುರಾಣ ಹೇಳುತ್ತದೆ. "ಏಕಶಬ್ದೈ-ರ್ದ್ವಿಶಬ್ದೈಶ್ಚ ಬಹುಶಬ್ದೈಶ್ಚ ಕೇಶವಃ । ಏಕ ಏವೋಚ್ಯತೇ ವೇದೈಸ್ತಾವತಾ ನಾಸ್ಯ ಭಿನ್ನತಾ".]

ಓಂ ಸ್ವಶಬ್ದೋನ್ಮಾನಾಭ್ಯಾಂ ಚ ಓಂ 23

ಆತ್ಮಶಬ್ದ ಮತ್ತು ಅಪರಿಮಿತ ಸ್ವರೂಪಲಿಂಗ, ಇವುಗಳಿಂದ ಪರಬ್ರಹ್ಮನೇ.

["ಆತ್ಮಾऽಮೇಯಃ ಪರಂ ಬ್ರಹ್ಮ ಪರಾನಂದಾದಿಕಾಭಿಧಾಃ । ವದಂತಿ ವಿಷ್ಣುಮೇವೈಕಂ ನಾನ್ಯತ್ರಾಸಾಂ ಗತಿಃ ಕ್ವಚಿತ್"—ಆತ್ಮಾ, ಅಮೇಯ, ಪರಬ್ರಹ್ಮ, ಪರಾನಂದ ಮೊದಲಾದ ಶಬ್ದಗಳು ಮುಖ್ಯವಾಗಿ ವಿಷ್ಣುವನ್ನೇ ಹೇಳುವುವು; ಆ ಶಬ್ದಗಳಿಗೆ ಬೇರೆ ಗತಿಯೇ ಇಲ್ಲ, ಅವು ಇತರರಿಗೆ

ಅನ್ವಯಿಸುವುದೇ ಇಲ್ಲ—ಎಂದು ಕೂರ್ಮಪುರಾಣ ಹೇಳುತ್ತದೆ. ಆದುದರಿಂದ ಬ್ರಹ್ಮನನ್ನೇ ಶ್ರುತಿ ತಿಳಿಸುವುದು, ಜೀವನನ್ನಲ್ಲ.]

ಓಂ ಅವಿರೋಧಃ, ಚಂದನವತ್ ಓಂ 24

ಯಾವ ವಿರೋಧವೂ ಇಲ್ಲ, ಚಂದನದಂತೆ.

[ಜೀವ ಅಣುವಾಗಿದ್ದರೂ ಶರೀರವನ್ನೆಲ್ಲ ವ್ಯಾಪಿಸಿಕೊಂಡಿರುತ್ತಾನೆ. ಇದಕ್ಕೆ ನಿದರ್ಶನ, ಚಂದನ. ಗಂಧದ ಒಂದು ತೊಟ್ಟು ಮೈಯ ಯಾವ ಭಾಗದ ಮೇಲಿದ್ದರೂ ವಾಸನೆ ಶರೀರವನ್ನೆಲ್ಲ ವ್ಯಾಪಿಸಿಕೊಳ್ಳುವುದಿಲ್ಲವೇ, ಹಾಗೆಯೇ.]

ಓಂ ಅವಸ್ಥಿತಿವೈಶೇಷ್ಯಾದಿತಿ ಚೇನ್ನ, ಅಭ್ಯುಪಗಮಾದ್ಧೃದಿ ಹಿ ಓಂ 25

ವಿಶೇಷ ಸ್ಥಾನದಲ್ಲಿರುವುದು, ಎನ್ನುವುದು ಸರಿಯಲ್ಲ, ಹೃದಯದಲ್ಲಿರುವುದು ಒಪ್ಪಿದೆಯಷ್ಟೆ.

[ಚಂದನಬಿಂದು ದೇಹದ ಕೆಲವೆಡೆ ಹೆಚ್ಚಾಗಿಯೂ ಮತ್ತು ಕೆಲವೆಡೆ ಕಡಿಮೆಯಾಗಿಯೂ ಇದ್ದು ಕೆಲಸ ಮಾಡುವುದು ಕಂಡುಬಂದಿದೆ. ಜೀವನಿಗೆ ಹಾಗೆ ದೇಹದಲ್ಲಿ ವಿಶೇಷಸ್ಥಾನಗಳನ್ನು ಹೇಳಿಲ್ಲವಲ್ಲ, ಎನ್ನಲಾಗದು. “ಹೃದಿ ಹ್ಯೇಷ ಆತ್ಮಾ”—ಈ ಆತ್ಮ ಹೃದಯದಲ್ಲಿ ಇರುತ್ತಾನಷ್ಟೆ—ಎಂದು ಪ್ರಶ್ನೋಪನಿಷತ್ತು ದೇಹದಲ್ಲಿ ಆತ್ಮನಿಗೆ ಒಂದು ವಿಶಿಷ್ಟ ಸ್ಥಾನವನ್ನು ನಿರ್ದೇಶಿಸುತ್ತದೆ.]

ಓಂ ಗುಣಾದ್ವಾ, ಆಲೋಕವತ್ ಓಂ 26

ಅಥವಾ ಗುಣದಿಂದ, ಬೆಳಕಿನಂತೆ.

[ಬೆಳಕಿನ ಮೂಲವಾದ ಜ್ಯೋತಿ ಒಂದೆಡೆಯೇ ಇರುತ್ತದೆ; ಆದರೆ ಅದರ ಪ್ರಕಾಶವೆಂಬ ಗುಣ ಅನೇಕ ಪ್ರದೇಶಗಳಲ್ಲಿ ವ್ಯಾಪ್ತವಾಗಿರುವುದನ್ನು ನೋಡಬಹುದು. ಹೀಗೆಯೇ ಜೀವರೂಪದಿಂದಲೇ ವ್ಯಾಪ್ತಿ ಇರದಿದ್ದರೂ ಚಿದ್ಗುಣದಿಂದ ದೇಹದಲ್ಲಿ ವ್ಯಾಪ್ತಿ ಇರುವುದು.]

ಓಂ ವ್ಯತಿರೇಕೋ ಗಂಧವತ್, ತಥಾ ಹಿ ದರ್ಶಯತಿ ಓಂ 27

ಗಂಧದಂತೆ ಆತ್ಮನ ಅಂಶಗಳು ಹೊರಬೀಳುತ್ತವೆ; ಶ್ರುತಿಯೂ ಹೀಗೆ ಹೇಳುತ್ತದೆ.

["ಸ ನಿತ್ಯೋ ನಿರವಯುವಃ ಪುಣ್ಯಯುಕ್ಪಾಪಯುಕ್ಚ, ಸ ಇಮಂ ಲೋಕಮಮುಂ ಚಾವರ್ತಯತೇ, ಸ ವಿಮುಚ್ಯತೇ, ಸ ಏಕಧಾ, ನ ಸಪ್ತಧಾ ನ ದಶಧಾ" —ಆ ಜೀವ ನಿತ್ಯ, ನಿರವಯುವ; ಪುಣ್ಯದಿಂದಲೂ ಪಾಪದಿಂದಲೂ ಕೂಡಿದವ; ಅವನು ಈ ಲೋಕ ಪರಲೋಕಗಳಲ್ಲಿ ಸುತ್ತಿ ಬರುತ್ತಿರುತ್ತಾನೆ; ಅವನು ಮುಕ್ತಿಹೊಂದುವನು; ಅವನು ಒಬ್ಬನೇ, ಏಳು ಬಗೆಯುವನಲ್ಲ, ಹತ್ತು ಬಗೆಯುವನೂ ಅಲ್ಲ—ಎಂಬ ಗೌಪವನಶ್ರುತಿ "ಜೀವ ಒಬ್ಬನೇ, ಅವನಿಗೆ ಬಹುತ್ವವಿಲ್ಲ", ಎಂದು ಹೇಳುತ್ತದೆ "ಸ ಪಂಚಧಾ ಸಪ್ತಧಾ ದಶಧಾ ಭವತಿ ಶತಧಾ ಚ ಸಹಸ್ರಧಾ, ಸ ಗಚ್ಛತಿ ಸ ಮುಚ್ಯತೇ"—ಅವನು ಐದು, ಏಳು, ಹತ್ತು, ನೂರು, ಸಾವಿರ ಬಗೆಗಳುಳ್ಳವ; ಅವನು ಇಲ್ಲಿಂದಲ್ಲಿಗೆ ಹೋಗು ತ್ತಾನೆ. ಸಂಸಾರದಿಂದ ಬಿಡುಗಡೆಹೊಂದುತ್ತಾನೆ—ಎಂದು ಪಾರಾಶರ್ಯಾಯಣ ಶ್ರುತಿ ಅವನ ಬಹುರೂಪತ್ವವನ್ನು ಹೇಳುತ್ತದೆ. ಈ ವಿರೋಧವನ್ನು ಈ ಸೂತ್ರ ಪರಿಹರಿಸುತ್ತದೆ. ಪುಷ್ಪದ ಗಂಧ (ವಾಸನೆ) ಪುಷ್ಪದಿಂದ ಹೊರಗೆ ಹೋಗು ವಂತೆಯೇ ಜೀವನ ಅಂಶಗಳು ಆತ್ಮನನ್ನು ಬಿಟ್ಟು ಬೇರೆಯಾಗುತ್ತವೆ, ಎಂದು ಶ್ರುತಿಯ ತಾತ್ಪರ್ಯ.]

ಓಂ ಪೃಥಗುಪದೇಶಾತ್ ಓಂ 28

ಜೀವ ಪರಮಾತ್ಮನಿಗಿಂತ ಭಿನ್ನ, ಹಾಗೆ ಉಪದೇಶವಿರುವುದರಿಂದ.

["ತತ್ತ್ವಮಸಿ", "ಅಹಂ ಬ್ರಹ್ಮಾಸ್ಮಿ" ಎಂಬ ವಾಕ್ಯಗಳಿಂದ ಜೀವ ಬ್ರಹ್ಮರಿಗೆ ಅಭೇದ ಇರುವಂತೆ ತಿಳಿದುಬರುವುದು. "ನಿತ್ಯೋ ನಿತ್ಯಾನಾಂ, ಚೇತನಶ್ಚೇತನಾನಾಂ", "ದ್ವಾ ಸುಪರ್ಣಾ" ಎಂಬ ವಾಕ್ಯಗಳು ಭೇದವನ್ನೇ ಪ್ರತಿಪಾದಿಸುವುವು. ಈ ಇಬ್ಬಗೆಯ ವಾಕ್ಯಗಳ ವಿರೋಧವನ್ನು ಪರಿಹರಿಸು ವುದಕ್ಕಾಗಿ ಈ ಸೂತ್ರ ಪ್ರವೃತ್ತವಾಗಿದೆ. "ಭಿನ್ನೋಽಚಿಂತ್ಯಃ ಪರಮೋ ಜೀವಸಂಘಾತ್, ಪೂರ್ಣಃ ಪರೋ ಜೀವಸಂಘೋ ಹ್ಯಪೂರ್ಣಃ । ಯತ- ಸ್ತ್ವಸೌ ನಿತ್ಯಮುಕ್ತೋ, ಹ್ಯಯಂ ಚ ಬಂಧಾನ್ಮೋಕ್ಷಂ ತತ ಏವಾಭಿ- ವಾಂಛೇತ್"—ಪರಮಾತ್ಮ ಜೀವಸಮೂಹಗಳಿಂದ ಭಿನ್ನನು. ಅಚಿಂತ್ಯನು ಹಾಗೂ ಶ್ರೇಷ್ಠನು; ಪರಾತ್ಮ ಪೂರ್ಣ, ಜೀವರೆಲ್ಲ ಅಪೂರ್ಣರು; ಪರಮಾತ್ಮ

ನಿತ್ಯಮುಕ್ತನಾಗಿರುವುದರಿಂದ ತನ್ನ ಬಂಧನದಿಂದ ಮೋಕ್ಷವನ್ನು ಜೀವನು ಆ ಈಶನ ದೆಸೆಯಿಂದಲೇ ಅಪೇಕ್ಷಿಸಬೇಕು—ಎಂದು ಕೌಶಿಕಶ್ರುತಿ ಉಪಪತ್ತಿ ಪೂರ್ವಕವಾಗಿ ಜೀವೇಶಭೇದವನ್ನು ಹೇಳುತ್ತದೆ.]

ಓಂ ತದ್ಗುಣಸಾರತ್ವಾತ್ತು ತದ್ವ್ಯಪದೇಶಃ, ಪ್ರಾಜ್ಞವತ್ ಓಂ 29

ಬ್ರಹ್ಮನ ಗುಣಗಳನ್ನು ತನ್ನ ಸಾರವಾಗಿ ಪಡೆದಿರುವುದರಿಂದ ಹಾಗೆ ಅಭೇದವ್ಯಪದೇಶವಿದೆ, ಪ್ರಾಜ್ಞನಂತೆ.

[ಬ್ರಹ್ಮನ ಗುಣಗಳಾದ ಜ್ಞಾನಾನಂದಾದಿಗಳು ಜೀವನಿಗೆ ಸಾರಭೂತ ವಾಗಿ, ಸ್ವರೂಪವಾಗಿ ಇವೆ. ಆ ದೃಷ್ಟಿಯಿಂದ ಜೀವಬ್ರಹ್ಮರಿಗೆ ಐಕ್ಯವನ್ನು ಹೇಳಬಹುದು. ಸರ್ವಗುಣಾತ್ಮಕನಾದ ಬ್ರಹ್ಮನಿಗೆ ಸರ್ವಾತ್ಮತ್ವ ಕೂಡುವುದು; ಆದುದರಿಂದ 'ಎಲ್ಲವೂ ಬ್ರಹ್ಮ' ಎಂಬ ವಾಕ್ಯ ಸಾರ್ಥಕವಾಗುವುದು.]

ಓಂ ಯಾವದಾತ್ಮಭಾವಿತ್ವಾಚ್ಚ ನ ದೋಷಃ, ತದ್ದರ್ಶನಾತ್ ಓಂ 30

ಪರಮಾತ್ಮನೊಂದಿಗೇ ಯಾವಾಗಲೂ ಇರುವುದರಿಂದ ದೋಷವಿಲ್ಲ. ಇದು ಶ್ರುತಿಯಲ್ಲಿ ಕಂಡುಬರುತ್ತದೆ.

[ಜೀವನಿಗೂ ಉತ್ಪತ್ತಿಯನ್ನು ಹೇಳಿದೆ. ಆದರೆ "ಜೀವ ಅನಾದಿ ಪುಣ್ಯಪಾಪಗಳಿಂದ ಬದ್ಧನಾಗಿದ್ದು ಪರಮಾತ್ಮನಿಂದ ಮುಕ್ತಿ ಪಡೆದು ಆನಂತ್ಯವನ್ನು ಹೊಂದುತ್ತಾನೆ" ಎಂಬ ಶ್ರುತಿವಾಕ್ಯದ ಪ್ರಕಾರ ಅನಾದಿ ಕರ್ಮ ಸಂಬಂಧವೂ ಆನಂತ್ಯಾಪ್ತಿಯೂ ಕೂಡುವುದಿಲ್ಲ, ಎಂದರೆ ವಿರೋಧ ಹುಟ್ಟು ತ್ತದೆ. ಅದರ ಪರಿಹಾರಕ್ಕಾಗಿ ಈ ಸೂತ್ರ. "ಯಾವತ್ಪರಮಾತ್ಮಾ ತಿಷ್ಠತ್ಯ-ನಾದ್ಯನಂತತ್ವೇನ, ಏವಂ ಜೀವೋಽಪಿ । ನಿತ್ಯಃ ಪರೋ, ನಿತ್ಯೋ ಜೀವೋ ಅನಿತ್ಯಾಸ್ತಸ್ಯ ಧಾತವಃ । ಅತ ಉತ್ಪದ್ಯತೇ ಚ ಮ್ರಿಯತೇ ಚ ವಿಮುಚ್ಯತೇ ಚ"—ಪರಮಾತ್ಮ ನಿತ್ಯ; ಜೀವನೂ ನಿತ್ಯ; ಜೀವನ ಧಾತುಗಳು ಅನಿತ್ಯ. ಪರಮಾತ್ಮ ಅನಾದ್ಯನಂತನಾಗಿ ನಿತ್ಯನಾಗಿರುವವರೆಗೆ ಜೀವನೂ ನಿತ್ಯ. ಧಾತುಗಳು ಅನಿತ್ಯವಾದುದರಿಂದ ಅವನು ಹುಟ್ಟುತ್ತಾನೆ, ಸಾಯುತ್ತಾನೆ, ಮೋಕ್ಷ ಪಡೆಯುತ್ತಾನೆ—ಎಂದು ಅಗ್ನಿವೇಶ್ಯ ಶ್ರುತಿಯಿಂದ ವಿಷಯ ಸ್ಪಷ್ಟ ವಾಗುತ್ತಿದೆ.]

ಓಂ ಪುಂಸ್ತ್ವಾದಿವತ್ತು, ಅಸ್ಯ ಸತೋಽಭಿ-ವ್ಯಕ್ತಿಯೋಗಾತ್ ಓಂ 31

ಪುರುಷತ್ವಾದಿಗಳಂತೆ, ಜೀವನಿಗೆ ಇದ್ದೇ ಇರುವ ಗುಣಗಳು ಮುಂದೆ ವ್ಯಕ್ತವಾಗುವುವು.

[ಪರಮಾತ್ಮನಂತೆಯೇ ಜೀವನೂ ಜ್ಞಾನಾನಂದಾದಿ ಸ್ವರೂಪನೇ. ಆದರೆ ಅವನ ಗುಣಗಳು ಯಾವಾಗಲೂ ಸ್ಪಷ್ಟವಾಗಿ ತೋರಿಬರುವುದಿಲ್ಲ. ಸಂಸಾರದಿಂದ ಮುಕ್ತಿ ಹೊಂದಿದ ಮೇಲೆ ಅವು ಸ್ಪಷ್ಟಪಡುವುವು. "ಸ ದುಃಖಾದ್ವಿಮುಕ್ತ ಆನಂದೀಭವತಿ, ಸೋಽಜ್ಞಾನಾದ್ವಿಮುಕ್ತೋ ಜ್ಞಾನೀ ಭವತಿ, ಸೋಽಬಲಾದ್ವಿಮುಕ್ತೋ ಬಲೀ ಭವತಿ, ಸ ನಿತ್ಯೋ ನಿರಾತಂಕೋಽವತಿಷ್ಠತೇ"—ಜೀವನು ದುಃಖದಿಂದ ಮುಕ್ತನಾಗಿ ಆನಂದಸ್ವರೂಪಿಯಾಗುವನು, ಅಜ್ಞಾನವನ್ನು ತೊರೆದು ಜ್ಞಾನಿಯಾಗುವನು, ದೌರ್ಬಲ್ಯವನ್ನು ನೀಗಿಕೊಂಡು ಪ್ರಬಲನಾಗುವನು, ನಿತ್ಯನೂ ಆತಂಕರಹಿತನೂ ಆಗಿ ಇರುವನು —ಎಂದು ಮುಕ್ತಾವಸ್ಥೆಯಲ್ಲಿ ಜೀವನ ಜ್ಞಾನಾನಂದಾದಿ ರೂಪವತ್ತ್ವವನ್ನು ಪೈಂಗಿ ಶ್ರುತಿ ಹೇಳುತ್ತದೆ. ಮನುಷ್ಯನಿಗೆ ಪುಂಸ್ತ್ವವಿದ್ದರೂ ಅದು ಸ್ಪಷ್ಟವಾಗಿ ಅಭಿವ್ಯಕ್ತವಾಗುವುದು ಹುಡುಗ ಯೌವನದಲ್ಲಿ ಕಾಲಿಟ್ಟಮೇಲೆಯೇ. ಹಾಗೆಯೇ ಜೀವನ ಆನಂದಾದಿ ಗುಣಗಳು ಅವನು ಮುಕ್ತನಾದ ಮೇಲೆಯೇ ಸ್ಪಷ್ಟವಾಗಿ ತೋರಿಬರುವುವು, ಎಂದು ಸೂತ್ರದ ತಾತ್ಪರ್ಯ.]

ಓಂ ನಿತ್ಯೋಪಲಬ್ಧ್ಯನುಪಲಬ್ಧಿಪ್ರಸಂಗೋಽನ್ಯತರ-ನಿಯಮೋ ವಾಽನ್ಯಥಾ ಓಂ 32

ಹಾಗಾಗದಿದ್ದರೆ ನಿತ್ಯವೂ ಜ್ಞಾನವಾಗಲಿ ನಿತ್ಯವೂ ದುಃಖವಾಗಲಿ ಉಂಟಾದೀತು ; ಅಥವಾ ಅವೆರಡೂ ಯಾವಾಗಲೂ ಉಂಟಾದೀತು.

[ಕಾಲಾಂತರದಲ್ಲಿ ಜೀವನ ಗುಣಗಳು ಅಭಿವ್ಯಕ್ತವಾಗುವುವು, ಎಂಬುದನ್ನು ಒಪ್ಪಿಕೊಳ್ಳದಿದ್ದರೆ ದೇವತೆಗಳಿಗೆ ನಿತ್ಯವಾಗಿ ಜ್ಞಾನಾನಂದಾದಿ ಗುಣಗಳು ಇರುವುದೂ, ಅಸುರರಿಗೆ ಅವು ಯಾವಾಗಲೂ ಇಲ್ಲದಿರುವುದೂ ಸಿದ್ಧವಾಗುವುದು ; ಆದರೆ ಇದು ಅಸಂಗತ. "ನಿತ್ಯಾನಂದೋ ನಿತ್ಯಜ್ಞಾನೋ ನಿತ್ಯಬಲಃ ಪರಾತ್ಮಾ, ನೈವಮಸುರಾ, ಏವಮನೇವಂ ಚ ಮನುಷ್ಯಾಃ"—

ಪರಮಾತ್ಮ ನಿತ್ಯವಾಗಿ ಆನಂದವುಳ್ಳವ, ನಿತ್ಯವಾಗಿ ಜ್ಞಾನವುಳ್ಳವ, ನಿತ್ಯವಾಗಿಯೇ ಬಲವುಳ್ಳವ; ಅಸುರರು ಹೀಗೆ ಜ್ಞಾನಾನಂದಬಲಗಳನ್ನು ಯಾವಾಗಲೂ ಪಡೆದಿರುವುದಿಲ್ಲ; ಮನುಷ್ಯರು ಹೀಗೆ ಕೆಲವು ಕಾಲ ಈ ಗುಣಗಳನ್ನು ಪಡೆಯದೆ ಇದ್ದು ಮುಂದೆ ಕೆಲವು ಕಾಲದ ತರುವಾಯ ಇವನ್ನು ಪಡೆಯುವರು —ಎಂದು ಅಗ್ನಿವೇಶ್ಯ ಶ್ರುತಿ ಹೇಳುತ್ತದೆ.]

ಓಂ ಕರ್ತಾ ಶಾಸ್ತ್ರಾರ್ಥವತ್ತ್ವಾತ್ ಓಂ 33

ಜೀವ ಕರ್ತಾ, ಏಕೆಂದರೆ ಶಾಸ್ತ್ರಗಳು ಅರ್ಥವತ್ತಾಗಿರುವುದರಿಂದ.

[ಜೀವ ಕರ್ತಾ ಆಗಬಲ್ಲನೋ, ಪರಮಾತ್ಮನೇ ಯಾವಾಗಲೂ ಕರ್ತಾ ಆಗಿರುವನೋ, ಎಂಬುದು ಸಂದೇಹ. ಈಶನ ಸೃಷ್ಟ್ಯಾದಿಕರ್ತೃತ್ವವನ್ನು ಒಪ್ಪಲಾಗಿದೆ. 'ಜೀವನೂ ಕೂಡ ಕರ್ತಾ ಆಗಬಲ್ಲ' ಎಂದು ಈ ಸೂತ್ರ ತಿಳಿಸುತ್ತದೆ. ಜೀವನಿಗೆ ಕರ್ತೃತ್ವ ಇರದಿದ್ದರೆ ಶಾಸ್ತ್ರಗಳು ಅಪ್ರಯೋಜಕವಾಗುವುವು. "ಸತ್ಯಂ ವದ, ಧರ್ಮಂ ಚರ" ಮೊದಲಾಗಿ ಶಾಸ್ತ್ರಗಳು ಜೀವನಿಗೆ ಕರ್ಮಗಳನ್ನು ವಿಧಿಸುತ್ತವೆ. ಅವನಿಗೆ ಕರ್ತೃತ್ವವನ್ನು ಒಪ್ಪದಿದ್ದರೆ ಶಾಸ್ತ್ರದ ಅಪ್ಪಣೆ ವ್ಯರ್ಥವಾಗುವುದಲ್ಲವೇ ?]

ಓಂ ವಿಹಾರೋಪದೇಶಾತ್ ಓಂ 34

ಜೀವನಿಗೆ ವಿಹಾರವನ್ನು ಹೇಳಿರುವುದರಿಂದಲೂ.

[ಛಾಂದೋಗ್ಯ ಉಪನಿಷತ್ತಿನಲ್ಲಿ, "ಸ ತತ್ರ ಪರ್ಯೇತಿ ಜಕ್ಷನ್ ಕ್ರೀಡನ್ ರಮಮಾಣಃ, ಸ್ತ್ರೀಭಿರ್ವಾ ಯಾನೈರ್ವಾ ಜ್ಞಾತಿಭಿರ್ವಾಽಜ್ಞಾತಿಭಿರ್ವಾ"—ಜೀವನು ಹೆಂಗಸರೊಂದಿಗೆ, ರಥಗಳಲ್ಲಿ, ಜ್ಞಾತಿಗಳ ಅಥವಾ ನೆಂಟರಲ್ಲದವರ ಜೊತೆಗೆ ಕೂಡಿಕೊಂಡು ಸುತ್ತುತ್ತಿರುತ್ತಾನೆ, ಆಟವಾಡುತ್ತಾನೆ, ವಿಹರಿಸುತ್ತಾನೆ—ಎಂದು ಹೇಳಿದೆ. ಮುಕ್ತಿಯಲ್ಲಿ ಹೀಗೆ ಜೀವನ ವಿಷಯದಲ್ಲಿ ನಾನಾ ಕ್ರೀಡೆಗಳನ್ನು ಹೇಳಿರುವುದರಿಂದ ಅವನು ಕರ್ತಾ ಆಗಿರುವನು.]

ಓಂ ಉಪಾದಾನಾತ್ ಓಂ 35

ಕರಣಗಳ ಸ್ವೀಕಾರವನ್ನು ಹೇಳಿರುವುದರಿಂದಲೂ.

[ಲೋಕದಲ್ಲಿ ಜೀವ ತನ್ನ ಕಾರ್ಯಕ್ಕೆ ಅಗತ್ಯವಾದ ಸಾಧನಗಳನ್ನು ಸ್ವೀಕರಿಸುವುದರಿಂದ ಅವನು ಕರ್ತಾ.]

ಓಂ ವ್ಯಪದೇಶಾಚ್ಚ ಕ್ರಿಯಾಯಾಂ, ನ ಚೇನ್ನಿರ್ದೇಶವಿಪರ್ಯಯಃ ಓಂ 36

ಕಾರ್ಯದಲ್ಲಿ ಕರ್ತೃತ್ವವನ್ನು ಹೇಳಿರುವುದರಿಂದಲೂ ; ಹಾಗಿರದಿದ್ದರೆ ಬೇರೆ ಬಗೆಯ ಉಪದೇಶವಾಗಬೇಕಿತ್ತು.

["ಆತ್ಮಾನಮೇವ ಲೋಕಮುಪಾಸೀತ"—ಪರಮಾತ್ಮನೇ ನಮಗೆ ಆಶ್ರಯನೆಂದು ಉಪಾಸನೆ ಮಾಡಬೇಕು—ಎಂದು ಕಾರ್ಯಪ್ರವೃತ್ತಿಗಾಗಿ ಉಪದೇಶ ಮಾಡಲಾಗಿದೆ. ಆದುದರಿಂದ ಜೀವನಿಗೆ ಕರ್ತೃತ್ವವಿದೆ. ಹಾಗಿರದೆ ಪರಮಾತ್ಮನೊಬ್ಬನಿಗೇ ಕರ್ತೃತ್ವವಿದ್ದರೆ "ಆತ್ಮಾನಮೇವ ಲೋಕಂ" ಎಂಬುದಕ್ಕೆ ಬದಲಾಗಿ "ಆತ್ಮೈವ ಲೋಕಂ" ಎಂಬ ನಿರ್ದೇಶ ಬರುತ್ತಿತ್ತು.]

ಓಂ ಉಪಲಬ್ಧಿವದನಿಯಮಃ ಓಂ 37

ಜ್ಞಾನಪ್ರಾಪ್ತಿಯಲ್ಲಿ ಹೇಗೋ ಹಾಗೆ ಇಲ್ಲಿಯೂ ನಿಯಮವಿಲ್ಲ.

[ಜ್ಞಾನ ಸಂಪಾದಿಸಿಕೊಳ್ಳುವಲ್ಲಿ 'ಸುರೂಪ, ಸುಗಂಧ, ಸುಸ್ವರವಾದುವನ್ನೇ ತಿಳಿದುಕೊಳ್ಳುವೆ, ಅಹಿತವಾದುವನ್ನು ತಿಳಿಯುವುದಿಲ್ಲ' ಎಂಬ ನಿಯಮವೇನೂ ಇಲ್ಲ. ಹಾಗೆಯೇ ಕರ್ಮದಲ್ಲಿಯೂ ನಿಯಮವಿಲ್ಲ; ಇಷ್ಟವಾದುವನ್ನೂ ಅನಿಷ್ಟವಾದುವನ್ನೂ ಮಾಡಬಹುದು. ಇದರಿಂದ ಜೀವನಿಗೆ ಸ್ವತಂತ್ರ ಕರ್ತೃತ್ವವಿಲ್ಲವೆಂದು ಸ್ಪಷ್ಟವಾಗುವುದು. ಇದಕ್ಕೆ ಕಾರಣ ಮುಂದಿನ ಸೂತ್ರದಲ್ಲಿದೆ.]

ಓಂ ಶಕ್ತಿವಿಪರ್ಯಯಾತ್ ಓಂ 38

ಶಕ್ತಿಯ ವ್ಯತ್ಯಾಸವಿರುವುದರಿಂದ.

[ಪರಮಾತ್ಮ ಸರ್ವಶಕ್ತ, ಜೀವ ಅಲ್ಪಶಕ್ತ. ಆದುದರಿಂದ ಜೀವ ಎಲ್ಲವನ್ನೂ ನಿರ್ವಹಿಸಬಲ್ಲ ಸ್ವತಂತ್ರ ಕರ್ತೃವಲ್ಲ.]

ಓಂ ಸಮಾಧ್ಯಭಾವಾಚ್ಚ ಓಂ 39

ಸಮಾಧಾನ ಸ್ಥಿತಿಯ ಅಭಾವದಿಂದಲೂ.

[ಜೀವನಿಗೆ ತನ್ನ ಮನಸ್ಸಿನ ಮೇಲೆ ಹತೋಟಿ ಇರುವುದು ದುಃಸಾಧ್ಯ. "ಮನೋ ದುರ್ನಿಗ್ರಹಂ ಚಲಂ"—ಮನಸ್ಸನ್ನು ನಿಗ್ರಹಿಸುವುದು ಕಷ್ಟ, ಅದು

ಚಂಚಲವಾಗಿಯೇ ಇರುವುದು—ಎಂದು ಭಗವದ್ಗೀತೆಯಲ್ಲಿ ಹೇಳಿದೆ. ಸಮಾಧಾನ ಸ್ಥಿತಿ ಇಲ್ಲದಿರುವ ಮನಸ್ಸನ್ನು ಪಡೆದಿರುವ ಜೀವ ಅಸ್ವತಂತ್ರನೇ.]

ಓಂ ಯಥಾ ಚ ತಕ್ಷಾ, ಉಭಯಥಾ ಓಂ 40

ಬಡಗಿಯಂತೆ ಎರಡೂ ಬಗೆಯುವನು.

[ಬಡಗಿ ಮರಗೆಲಸ ಮಾಡುತ್ತಾನೆ; ಆದುದರಿಂದ ಅವನು ಕರ್ತೃ, ಎನ್ನಬಹುದು. ಆದರೆ ಆ ಬಡಗಿ ಯಜಮಾನನ ಇಚ್ಛೆಯಂತೆಯೇ, ಪ್ರೇರಣೆಯಂತೆಯೇ ಕೆಲಸ ಮಾಡುತ್ತಾನೆ; ಆದುದರಿಂದ ಅವನಿಗೆ ಸ್ವಾತಂತ್ರ್ಯವಿಲ್ಲ. ತನಗೆ ಬೇಕಾದ ಕೆಲಸವನ್ನು ಮಾಡಲು ಸ್ವಾತಂತ್ರ್ಯವನ್ನು ಬಡಗಿ ಪಡೆಯದೆ ಇದ್ದರೂ ತನಗೆ ನಿಯಮಿಸಲ್ಪಟ್ಟ ಕಾರ್ಯವನ್ನು ನಿರ್ವಹಿಸುವಷ್ಟು ಕರ್ತೃತ್ವವನ್ನು ಅವನು ಹೊಂದಿರುತ್ತಾನೆ. ಇದನ್ನೇ "ಪರಮಾತ್ಮ ಅಂತರ್ಯಾಮಿಯಾಗಿ ನಿಯಮಿಸುತ್ತಾನೆ" ಎಂದು ಹೇಳುತ್ತಾರೆ.]

ಓಂ ಪರಾತ್ತು ತತ್, ಶ್ರುತೇಃ ಓಂ 41

ಈ ಕರ್ತೃತ್ವ ಜೀವನಿಗೆ ಬರುವುದು ಪರಮಾತ್ಮನಿಂದಲೇ, ಹಾಗೆ ಶ್ರುತಿ ಇರುವುದರಿಂದ.

[ಪರಮಾತ್ಮನ ಇಚ್ಛೆ, ಪ್ರೇರಣೆಗಳಿಗೆ ಅನುಸಾರವಾಗಿ ಜೀವ ಕೆಲಸ ಮಾಡುತ್ತಾನೆ, ಎಂದರೂ ಆ ಕರ್ತೃತ್ವಶಕ್ತಿಯೂ ಪರಮಾತ್ಮನಿಂದಲೇ—ಅವನ ಅನುಗ್ರಹದಿಂದಲೇ ಹುಟ್ಟುವುದು. "ಕರ್ತೃತ್ವಂ ಕಾರಣತ್ವಂ ಚ ಸ್ವಭಾವಶ್ಚೇತನಾ ಧೃತಿಃ। ಯತ್ಪ್ರಸಾದಾದಿಮೇ ಸಂತಿ ನ ಸಂತಿ ಯದುಪೇಕ್ಷಯಾ"—ಕಾರ್ಯನಿರ್ವಾಹಕತ್ವ, ಕಾರಣತ್ವ, ಸ್ವಭಾವ, ಚೇತನಾ, ಧೈರ್ಯ ಇವೆಲ್ಲವೂ ಆ ಪರಮಾತ್ಮನ ಅನುಗ್ರಹದಿಂದಲೇ ಇರುವುವು. ಅವನು ಉಪೇಕ್ಷೆ ಮಾಡಿ ಉದಾಸೀನನಾದಾಗ ಇವೊಂದೂ ಇರುವುದಿಲ್ಲ—ಎಂದು ಪೈಂಗಿ ಶ್ರುತಿ ಹೇಳುತ್ತದೆ.]

ಓಂ ಕೃತಪ್ರಯತ್ನಾಪೇಕ್ಷಸ್ತು ವಿಹಿತಪ್ರತಿಷೇಧಾವೈಯರ್ಥ್ಯಾದಿಭ್ಯಃ ಓಂ 42

ವಿಹಿತ ಮತ್ತು ಪ್ರತಿಷಿದ್ಧಗಳ ವ್ಯರ್ಥವಾಗದಿರುವಿಕೆಯೇ ಮೊದಲಾದ ಕಾರಣಗಳಿಂದ ಜೀವ ಪ್ರಯತ್ನ ಮಾಡುವುದು ಪ್ರೇರಕನಾದ ಪರಮಾತ್ಮನ ಅನುಗ್ರಹದಿಂದಲೇ.

["ಪೂರ್ವಕರ್ಮ ಪ್ರಯತ್ನಂ ಚ ಸಂಸ್ಕಾರಂ ಚಾಪ್ಯಪೇಕ್ಷ್ಯ ತು। ಈಶ್ವರಃ ಕಾರಯೇತ್ಸರ್ವಂ ತಚ್ಚೇಶ್ವರಕೃತಂ ಸ್ವಯಮ್"—ಜೀವನ ಪೂರ್ವ ಕರ್ಮ, ಪ್ರಯತ್ನ, ಸಂಸ್ಕಾರ ಇವನ್ನು ಪರಿಗಣಿಸಿಯೇ ಈಶನು ಎಲ್ಲ ಕಾರ್ಯ ಗಳನ್ನೂ ಮಾಡಿಸುವನು. ಅವೆಲ್ಲ ಸಾಕ್ಷಾತ್ತಾಗಿ ಈಶ್ವರನಿಂದಲೇ ಮಾಡಲ್ಪಟ್ಟಂತಾಗುವುದು—ಎಂದು ಭವಿಷ್ಯತ್ಪುರಾಣದಲ್ಲಿ ಹೇಳಿದೆ. ಇದರಿಂದ ಪರಮಾತ್ಮನಿಗೆ ವೈಷಮ್ಯದೋಷ ತಟ್ಟುವುದಿಲ್ಲ. ಶಾಸ್ತ್ರದಲ್ಲಿ ವಿಹಿತ ಮತ್ತು ನಿಷಿದ್ಧ ಕರ್ಮಗಳನ್ನು ಭಗವಂತನೇ ಹೇಳಿರುವುದರಿಂದ ಅವು ಸಾರ್ಥಕವಾಗು ವುದಕ್ಕಾಗಿ ಜೀವ ತನ್ನ ಕಾರ್ಯದಲ್ಲಿ ಪ್ರವೃತ್ತನಾಗಬೇಕು. ಅವನನ್ನು ಪ್ರೇರಿಸಿ ಕೆಲಸ ಮಾಡಿಸುವುದರಲ್ಲಿ ಕರ್ತೃತ್ವ ಆ ಪರಮಾತ್ಮನಿಗೇ ಸೇರಿದುದು, ಅಸ್ವತಂತ್ರನಾದ ಜೀವನಿಗಲ್ಲ.]

ಓಂ ಅಂಶೋ ನಾನಾವ್ಯಪದೇಶಾತ್, ಅನ್ಯಥಾ ಚಾಪಿ ದಾಶಕಿತವಾದಿತ್ವಮಧೀಯತ ಏಕೇ ಓಂ 43

ಬೇರೆ ಬೇರೆ ರೀತಿಗಳಲ್ಲಿ ಹೇಳಿರುವುದರಿಂದ ಜೀವ ಬ್ರಹ್ಮನ ಅಂಶ. ಬೇರೆ ವಿಧದಲ್ಲಿಯೂ ಬೆಸ್ತ, ಕಿತವ ಮೊದಲಾದ ರೂಪದಲ್ಲಿ ಬ್ರಹ್ಮ ಇದೆ, ಎಂದೂ ಕೆಲವರು ಅಧ್ಯಯನ ಮಾಡುತ್ತಾರೆ.

["ಅಂಶಾ ಏವ ಹೀಮೇ ಜೀವಾ ಅಂಶೀ ಹಿ ಪರಮೇಶ್ವರಃ। ಸ್ವಯ-ಮಂಶೈರಿದಂ ಸರ್ವಂ ಕಾರಯತ್ಯಚಲೋ ಹರಿಃ"—ಈ ಜೀವರೆಲ್ಲ ಅಂಶಗಳು, ಪರಮೇಶ್ವನೇ ಅಂಶೀ; ತನ್ನ ಅಂಶಗಳಿಂದಲೇ ಈ ಕೆಲಸಗಳನ್ನೆಲ್ಲ ಅಚಲ ನಾದ ಹರಿ ಮಾಡಿಸುತ್ತಾನೆ—ಎಂಬ ಗೌಪವನ ಶ್ರುತಿ "ಜೀವರು ಈಶನ ಅಂಶ ಗಳು" ಎನ್ನುತ್ತದೆ. "ನೈವಾಂಶೋ ನ ಸಂಬಂಧೋ ನಾಽಪೇಕ್ಷ್ಯೋ ಜೀವಃ ಪರಸ್ಯ"—ಪರಮಾತ್ಮನಿಗೆ ಜೀವ ಅಂಶನಲ್ಲ, ಸಂಬಂಧಿಯಲ್ಲ, ಅಪೇಕ್ಷ್ಯನೂ ಅಲ್ಲ—ಎಂದು ಭಾಲ್ಲವೇಯ ಶ್ರುತಿ ಹೇಳುತ್ತದೆ. ಈ ವಿರೋಧದ ಪರಿಹಾರ ಕ್ಕಾಗಿ ಈ ಸೂತ್ರ ಹೊರಟಿದೆ. ಇದು 'ಜೀವ ಬ್ರಹ್ಮನ ಅಂಶವೇ' ಎನ್ನುತ್ತದೆ. 'ದ್ವಾ ಸುಪರ್ಣಾ' ಮೊದಲಾದ ಶ್ರುತಿಗಳೂ ಭೇದವನ್ನೇ ತಿಳಿಸಿ ಜೀವ ಪರಮಾತ್ಮನ ಅಂಶವೆಂದು ಬೋಧಿಸುತ್ತವೆ. "ಬ್ರಹ್ಮ ಬೆಸ್ತ, ಬ್ರಹ್ಮ ಜೂಜು ಕೋರ, ಬ್ರಹ್ಮ ದಾಸ" ಹೀಗೆಂದು ಅಭೇದವನ್ನು ಕೆಲವರು ಪಠಿಸುತ್ತಾರೆ. "ಅಂಶೋ ಹ್ಯೇಷ ಪರಸ್ಯ, ಭಿನ್ನಂ ಹ್ಯೇನಮಧೀಯಿರೇ, ಅಭಿನ್ನಂ ಹ್ಯೇನ-ಮಧೀಯಿರೇ"—ಜೀವ ಪರಮಾತ್ಮನ ಅಂಶವೇ, ಅವನನ್ನು ಭಿನ್ನನೆಂದು

ಕೆಲವರೂ, ಭಿನ್ನನಲ್ಲವೆಂದು ಕೆಲವರೂ ಅಧ್ಯಯನ ಮಾಡಿದರು—ಎಂದು
ಅಗ್ನಿವೇಶ್ಯ ಶ್ರುತಿ ಹೇಳುವುದು. ಆದುದರಿಂದ ಭೇದಾಭೇದಗಳು ಮುಖ್ಯ
ವಲ್ಲ, ಅಂಶ-ಅಂಶೀ ಎಂಬ ಸಂಬಂಧ ಮುಖ್ಯವಾಗಿ ಗಮನಿಸಬೇಕಾದುದು.]

ಓಂ ಮಂತ್ರವರ್ಣಾತ್ ಓಂ 44

ಶ್ರುತಿಯಿಂದಲೂ ಜೀವ ಬ್ರಹ್ಮನ ಅಂಶವೇ.

["ಪಾದೋಽಸ್ಯ ವಿಶ್ವಾ ಭೂತಾನಿ"—ಎಲ್ಲ ಪ್ರಾಣಿಗಳೂ ಇವನ ಒಂದು
ಪಾದ—ಎಂಬ ಪುರುಷಸೂಕ್ತದಿಂದ ಜೀವನ ಅಂಶತ್ವ ವ್ಯಕ್ತವಾಗುವುದು.]

ಓಂ ಅಪಿ ಸ್ಮರ್ಯತೇ ಓಂ 45

ಸ್ಮೃತಿಯಲ್ಲಿಯೂ ಹೀಗೆ ಹೇಳಿದೆ.

["ಮಮೈವಾಂಶೋ ಜೀವಲೋಕೇ ಜೀವಭೂತಃ ಸನಾತನಃ"—
ಪ್ರಾಣಿಲೋಕದಲ್ಲಿ ಸನಾತನನಾಗಿ ಜೀವನಾಗಿರುವವನು ನನ್ನ ಅಂಶವೇ—
ಎಂದು ಭಗವದ್ಗೀತೆ ತಿಳಿಸುತ್ತದೆ.]

ಓಂ ಪ್ರಕಾಶಾದಿವನ್ನೈವಂ ಪರಃ ಓಂ 46

ಪ್ರಕಾಶಾದಿಗಳಂತೆ ಪರಮಾತ್ಮ ಹೀಗಲ್ಲ.

[ತನ್ನ ಮತ್ಸ್ಯಾದಿ ಅವತಾರಗಳ ವಿಷಯದಲ್ಲಿ ಹೀಗಲ್ಲ. ಕಾಲಾಗ್ನಿ
ಮತ್ತು ಮಿಂಚು ಹುಳುವಿನ ಬೆಳಕು ಒಂದೇ ತೇಜಸ್ಸಿನ ಅಂಶಗಳಾದರೂ
ಬೇರೆ ಬೇರೆ ರೀತಿಯವು. ಅಭಿಮಾನಿದೇವತೆಗಳ ವಿವಕ್ಷೆಯಿಂದ ಹೀಗೆ ಬೇರೆ
ಯಾಗುವುದು, ಪರಮಾತ್ಮನ ಅಂಶಗಳಲ್ಲಿ ಭೇದವಿಲ್ಲ.]

ಓಂ ಸ್ಮರಂತಿ ಚ ಓಂ 47

ವ್ಯಾಸಾದಿ ಸ್ಮೃತಿಕಾರರೂ ಹೀಗೆ ಹೇಳುತ್ತಾರೆ.

[ಜೀವನಿಗೆ ಭಿನ್ನಾಂಶತ್ವವನ್ನೂ ಮತ್ಸ್ಯಾದಿರೂಪಗಳಿಗೆ ಅಭಿನ್ನಾಂಶತ್ವ
ವನ್ನೂ ವ್ಯಾಸಾದಿಗಳು ಹೇಳುತ್ತಾರೆ. "ತದೇವ ನಾಣುಮಾತ್ರೋಽಪಿ
ಭೇದಃ ಸ್ವಾಂಶಾಂಶಿನೋಃ ಕ್ವಚಿತ್। ವಿಭಿನ್ನಾಂಶೋಽಲ್ಪಶಕ್ತಿಃ ಸ್ಯಾತ್ಕಿಂಚಿತ್ಸಾ-
ದೃಶ್ಯಮಾತ್ರಯುಕ್"—ಪರಮಾತ್ಮನ ಅಂಶಕ್ಕೂ ಅಂಶಿಗೂ ಅಣುಮಾತ್ರವೂ
ಭೇದವಿಲ್ಲ. ಭೇದವುಳ್ಳ ಅಂಶನಾದ ಜೀವ ಅಲ್ಪಶಕ್ತಿಯುಳ್ಳವನೂ ಸ್ವಲ್ಪ
ಮಾತ್ರ ಸಾದೃಶ್ಯವುಳ್ಳವನೂ ಆಗಿರುತ್ತಾನೆ—ಎಂದು ವರಾಹ ಪುರಾಣ.]

ಓಂ ಅನುಜ್ಞಾಪರಿಹಾರೌ, ದೇಹಸಂಬಂಧಾತ್ ಜ್ಯೋತಿರಾದಿವತ್ ಓಂ 48

ಜೀವನಿಗೆ ದೇಹಸಂಬಂಧವಿರುವುದರಿಂದ ಈಶ್ವರನ ಅನುಜ್ಞಾನಾಧೀನ ಗಳಾದ ಪ್ರವೃತ್ತಿಮೋಕ್ಷಗಳು ಉಂಟಾಗುತ್ತವೆ, ಜ್ಯೋತಿರಾದಿಗಳಂತೆ.

[ಜೀವ ಪರಮಾತ್ಮನ ಅಂಶವೇ ಆಗಿದ್ದರೂ ಅವನಿಗೆ ದೇಹಸಂಬಂಧ ಇರುವುದರಿಂದ ಪರಮಾತ್ಮನ ಅನುಜ್ಞೆಯಂತೆ ಪ್ರವೃತ್ತಿ ಮತ್ತು ಬಂಧ ನಿವೃತ್ತಿಗಳು ಅವನಿಗೆ ಆಗುವುವು, ಜೀವನನ್ನು ಪರಮಾತ್ಮ ಒಳಗೇ ನಿಯಂತ್ರಿ ಸುವುದರಿಂದ. ಕಣ್ಣಿಗೆ ಅಭಿಮಾನಿದೇವತೆಗಳು ಸೂರ್ಯನಿಂದ ಭಿನ್ನರಾಗಿ ದ್ದರೂ ಅವರು ಸೂರ್ಯಾದಿಗಳಿಂದ ಅನುಗ್ರಾಹ್ಯರಾಗಿರುವರು.]

ಓಂ ಅಸಂತತೇಶ್ಚಾವ್ಯತಿಕರಃ ಓಂ 49

ಅಪೂರ್ಣಶಕ್ತಿಯುಳ್ಳ ಜೀವನಿಗೂ ಮತ್ಸ್ಯಾದಿರೂಪಗಳಿಗೂ ಸಾಮ್ಯವಿಲ್ಲ.

[ಚತುರ್ವೇದ ಶಿಖೆಯಲ್ಲಿ "ತಾನಿ ಹ ವಾ ಏತಾನಿ ಸರ್ವಾಣಿ ಪೂರ್ಣಾನಿ, ಸರ್ವಾಣ್ಯನಂತಾನಿ, ಸರ್ವಾಣ್ಯಸಂಮಿತಾನಿ । ಅಥಾವರಾಃ ಸರ್ವ ಏವಾ- ಪೂರ್ಣಾಃ ಸರ್ವ ಏವ ಬಧ್ಯಂತೇಽಥ ಮುಚ್ಯಂತೇ ಚ ಕೇಚನ"—ಪರಮಾತ್ಮ ನಿಗೆ ನಾನಾ ರೂಪಗಳಿವೆ, ಇವೆಲ್ಲ ರೂಪಗಳೂ ಪೂರ್ಣವೂ ಅನಂತವೂ ಅಪರಿಮೇಯವೂ ಆಗಿವೆ; ಇನ್ನು ಪರಮಾತ್ಮನ ಅಧೀನದಲ್ಲಿರುವ ಎಲ್ಲ ಜೀವರೂ ಅಪೂರ್ಣರು, ಎಲ್ಲರೂ ಬಂಧನೆಗೆ ಒಳಪಡುತ್ತಾರೆ, ಅವರಲ್ಲಿ ಕೆಲವರು ಮುಕ್ತರೂ ಆಗುತ್ತಾರೆ—ಎಂದು ಹೇಳಿದೆ.]

ಓಂ ಆಭಾಸ ಏವ ಚ ಓಂ 50

ಮತ್ತು ಜೀವ ಪ್ರತಿಬಿಂಬವೇ.

["ರೂಪಂ ರೂಪಂ ಪ್ರತಿರೂಪೋ ಬಭೂವ" ಎಂದು ಋಗ್ವೇದ ಹೇಳುವುದರಿಂದ ಪರಮಾತ್ಮ–ಜೀವರು ಬಿಂಬ–ಪ್ರತಿಬಿಂಬಭಾವವನ್ನು ಹೊಂದಿರುವರು. ಅವರಿಬ್ಬರೂ ಸಮಾನರಲ್ಲ.]

ಓಂ ಅದೃಷ್ಟಾನಿಯಮಾತ್ ಓಂ 51

ಅದೃಷ್ಟಕ್ಕೆ ನಿಯಮವಿಲ್ಲದಿರುವುದರಿಂದ.

[ಬಿಂಬ-ಪ್ರತಿಬಿಂಬಗಳಲ್ಲಿ ವೈಚಿತ್ರ್ಯ ಹೇಗೆ ಬರುವುದು? ಈಶ್ವರನ ಪ್ರತಿಬಿಂಬಗಳಾದ ಜೀವರೆಲ್ಲ ಒಂದೇ ರೀತಿ ಇರಬೇಕಲ್ಲವೇ? ಇದೆಲ್ಲ ಅದೃಷ್ಟ ಫಲ ಎಂದರೆ ಅದೃಷ್ಟಕ್ಕೆ ನಿಯಮವಿಲ್ಲವಲ್ಲ! ಅನಾದಿಯಾದ ಜ್ಞಾನ, ಕರ್ಮ ಮೊದಲಾದವುಗಳ ವೈಚಿತ್ರ್ಯದಿಂದ ಪ್ರತಿಬಿಂಬಗಳಲ್ಲಿಯೂ ವೈಚಿತ್ರ್ಯ ಕಾಣಬರುತ್ತದೆ, ಎಂದು ಸೂತ್ರದ ತಾತ್ಪರ್ಯ.]

ಓಂ ಅಭಿಸಂಧ್ಯಾಧಿಷ್ವಪಿ ಚೈವಂ ಓಂ 52

ಅಭಿಸಂಧಿ ಮೊದಲಾದವುಗಳಲ್ಲಿಯೂ ಹೀಗೆಯೇ.

[ಇಚ್ಛೆ, ದ್ವೇಷ, ಸುಖ, ದುಃಖ ಮೊದಲಾದ ಅಭಿಸಂಧಿಗಳಲ್ಲಿ ವೈಚಿತ್ರ್ಯ ತೋರಿಬರುವುದೂ ಅದೃಷ್ಟದ ವೈಚಿತ್ರ್ಯದಿಂದಲೇ. 'ಚ' ಶಬ್ದ ಪ್ರತಿಕ್ಷಣದಲ್ಲಿಯೂ ವೈಚಿತ್ರ್ಯವಿದೆ, ಎಂದು ಸೂಚಿಸುವುದು.]

ಓಂ ಪ್ರದೇಶಾದಿತಿ ಚೇನ್ನ, ಅಂತರ್ಭಾವಾತ್ ಓಂ 53

ಸ್ಥಾನ ವಿಶೇಷಗಳ ಭೇದದಿಂದ ಎನ್ನುವುದು ಸರಿಯಲ್ಲ, ಒಳಗೇ ಇರುವುದರಿಂದ.

[ಸ್ವರ್ಗ ಭೂಮ್ಯಾದಿ ಪ್ರದೇಶಗಳಿಂದ ವೈಚಿತ್ರ್ಯ ಹುಟ್ಟುವುದಿಲ್ಲ. ಅಲ್ಲಿ ವೈಚಿತ್ರ್ಯ ಹುಟ್ಟಲು ಅದೃಷ್ಟ ಕರ್ಮಫಲವೇ ಕಾರಣವಷ್ಟೆ. ಒಂದೇ ಪ್ರದೇಶ ದಲ್ಲಿರುವ ಭಿನ್ನಭಿನ್ನ ಜನರಿಗೆ ವೈಚಿತ್ರ್ಯ ಇರುವುದನ್ನು ನೋಡಬಹುದು. ವೈಚಿತ್ರ್ಯಕ್ಕೆ ಬೀಜ ಒಳಗೇ ಇವೆ.]

ಇಲ್ಲಿಗೆ ಬ್ರಹ್ಮಸೂತ್ರಗಳ ಎರಡನೆಯ ಅಧ್ಯಾಯದ ಮೂರನೆಯ ಪಾದ ಮುಗಿಯಿತು.

ನಾಲ್ಕನೆಯ ಪಾದ

ಯುಕ್ತಿ, ಶ್ರುತಿಗಳಿಂದ ವಿರುದ್ಧವಾಗಿ ತೋರಿಬರುವ ಶ್ರುತಿಗಳಿಗೆ ಯುಕ್ತಿಗಳಿಂದ ವಿರೋಧವನ್ನು ಈ ಪಾದದಲ್ಲಿ ಪರಿಹರಿಸಲಾಗುವುದು. ಹಿಂದೆ ಆಕಾಶಾದಿಗಳ ವಿಷಯದಲ್ಲಿ ವಿರೋಧವನ್ನು ನಿವಾರಿಸಲಾಯಿತು. ಈಗ ಪ್ರಾಣಾದಿಗಳ ವಿಷಯದಲ್ಲಿಯೂ ಸಂಶಯ ಪರಿಹಾರ ಮಾಡಲಾಗುತ್ತದೆ.

ಓಂ ತಥಾ ಪ್ರಾಣಾಃ ಓಂ 1

ಹಾಗೆಯೇ ಪ್ರಾಣಗಳೂ.

[ಆಕಾಶಾದಿಗಳು ಹೇಗೆ ಪರಮಾತ್ಮನಿಂದ ಉತ್ಪತ್ತಿ ಪಡೆಯುತ್ತವೋ ಹಾಗೆಯೇ ಪ್ರಾಣಗಳೂ ಅವನಿಂದಲೇ ಹುಟ್ಟುವುವು. "ಪ್ರಾಣಾ ಏವಾನಾದಯಃ, ಪ್ರಾಣಾ ನಿತ್ಯಾಃ"—ಪ್ರಾಣಗಳೇ ಅನಾದಿಯಾದವು, ಪ್ರಾಣಗಳು ನಿತ್ಯ—ಎಂದು ಕಾಷಾಯಣಶ್ರುತಿಯಿದೆ. ಅದರಲ್ಲಿ ಪ್ರಾಣಗಳು ಹುಟ್ಟುವುದಿಲ್ಲ, ಎಂದು ಹೇಳಲ್ಪಟ್ಟಿದೆ. "ಏತಸ್ಮಾಜ್ಜಾಯತೇ ಪ್ರಾಣೋ ಮನಃ ಸರ್ವೇಂದ್ರಿಯಾಣಿ ಚ"—ಈ ಪರಮಾತ್ಮನ ದೆಸೆಯಿಂದಲೇ ಪ್ರಾಣ, ಮನಸ್ಸು, ಎಲ್ಲ ಇಂದ್ರಿಯಗಳೂ ಹುಟ್ಟುವುವು ಎಂದು ಮುಂಡಕೋಪನಿಷತ್ತು ಪ್ರಾಣೋತ್ಪತ್ತಿಯನ್ನು ಹೇಳುತ್ತದೆ. ಈ ವಿರೋಧವನ್ನು ಪರಿಹರಿಸಿ 'ಆಕಾಶದಂತೆಯೇ ಪ್ರಾಣಗಳೂ ಹುಟ್ಟುವುವು' ಎಂದು ನಿರ್ಣಯಿಸಿದೆ.]

ಓಂ ಗೌಣ್ಯಸಂಭವಾತ್ ಓಂ 2

ಅನಾದಿತ್ವಶ್ರುತಿ ಗೌಣ ಅನಾದಿಯನ್ನು ತಿಳಿಸುವುದು, ಮುಖ್ಯಾರ್ಥದಲ್ಲಿ ಅನಾದಿತ್ವ ಅಸಂಭವ.

["ನಿತ್ಯಾನ್ಯೇತಾನಿ ಸೌಕ್ಷ್ಮ್ಯೇಣ ಹೀಂದ್ರಿಯಾಣಿ ತು ಸರ್ವಶಃ । ತೇಷಾಂ ಭೂತೈರುಪಚಯಃ ಸೃಷ್ಟಿಕಾಲೇ ವಿಧೀಯತೇ"—ಸೂಕ್ಷ್ಮರೂಪದಿಂದ ಇಂದ್ರಿಯಗಳು ಸರ್ವಥಾ ನಿತ್ಯವೇ. ಪಂಚಭೂತಗಳೊಡನೆ ಸೃಷ್ಟಿಕಾಲದಲ್ಲಿ ಅವು ಸೇರಿಕೊಂಡಾಗ ಅಭಿವೃದ್ಧಿ ಹೊಂದುವುವು—ಎಂದು ಭವಿಷ್ಯತ್ಪರ್ವದಲ್ಲಿ ಹೇಳಿದೆ.]

ಓಂ ಪ್ರತಿಜ್ಞಾನುಪರೋಧಾಚ್ಚ ಓಂ 3

ಪ್ರತಿಜ್ಞೆಗೆ ಅವಿರೋಧವಾಗಿರುವುದಕ್ಕೋಸ್ಕರವೂ.

["ಸ ಇದಂ ಸರ್ವಮಸೃಜತ"—ಅವನು ಇದೆಲ್ಲವನ್ನೂ ಸೃಷ್ಟಿಮಾಡಿದನು —ಎಂಬ ತೈತ್ತಿರೀಯ ವಾಕ್ಯದಿಂದ ಜಗದುತ್ಪತ್ತಿಯನ್ನು ಹೇಳಿರುವುದರಿಂದ, ಆ ಮಾತಿಗೆ ವಿರೋಧ ಬಾರದಿರಲು ಪ್ರಾಣಗಳ—ಇಂದ್ರಿಯಗಳ—ಉತ್ಪತ್ತಿಯನ್ನು ಒಪ್ಪಬೇಕು. ಈ ಸೂತ್ರ ಶಾಂಕರರಾಮಾನುಜ ಭಾಷ್ಯಗಳಲ್ಲಿಲ್ಲ.]

ಓಂ ತತ್ಪ್ರಾಕ್ಶ್ರುತೇಶ್ಚ ಓಂ 4

ಅದಕ್ಕೆ ಹಿಂದಿನ ಶ್ರುತಿವಾಕ್ಯಗಳಿಂದಲೂ.

["ಮನಃ ಸರ್ವೇಂದ್ರಿಯಾಣಿ ಚ"—ಮನಸ್ಸು ಮತ್ತು ಎಲ್ಲ ಇಂದ್ರಿಯ ಗಳೂ ಹುಟ್ಟುತ್ತವೆ—ಎಂಬ ಮುಂಡಕಶ್ರುತಿವಾಕ್ಯದಿಂದ ಮನಸ್ಸಿನ ಉತ್ಪತ್ತಿ ಯನ್ನು ಇತರ ಇಂದ್ರಿಯಗಳ ಉತ್ಪತ್ತಿಗಿಂತ ಮೊದಲೇ ಹೇಳಲಾಗಿದೆ. ಇದರಿಂದ ಮನಸ್ಸಿನ ಉತ್ಪತ್ತಿಯಿಲ್ಲ, ಎನ್ನುವುದು ಸರಿಯಲ್ಲ. ಅನುತ್ಪತ್ತಿ ಯನ್ನು ಹೇಳುವ ಶ್ರುತಿಗೆ ಅಲ್ಪವೃದ್ಧಿಯೇ ತಾತ್ಪರ್ಯ.]

ಓಂ ತತ್ಪೂರ್ವಕತ್ವಾದ್ವಾಚಃ ಓಂ 5

ವಾಗಿಂದ್ರಿಯಕ್ಕೆ ಉತ್ಪತ್ತಿ ಇದೆ, ಅದಕ್ಕೆ ಹಿಂದೆ ಇರುವುದರಿಂದ.

["ವಾಗ್ವಾವ ನಿತ್ಯಾ, ನ ಹ್ಯೇಷೋತ್ಪದ್ಯತೇಽಸ್ಯಾಂ ಹಿ ಶ್ರುತಿರಪ- ತಿಷ್ಠತೇ"—ವಾಕ್ ನಿತ್ಯ, ಇದು ಹುಟ್ಟುವುದಿಲ್ಲ, ಇದರಲ್ಲಿಯೇ ಶ್ರುತಿ ಇರುವುದು —ಎಂದು ಪೌಷ್ಯಾಯಣ ಶ್ರುತಿಯಲ್ಲಿ ಯುಕ್ತಿಪೂರ್ವಕವಾಗಿ ವಾಕ್ಕಿನ ಉತ್ಪತ್ತಿರಾಹಿತ್ಯವನ್ನು ಹೇಳಲಾಗಿದೆ. ಆದುದರಿಂದ ಈ ಸೂತ್ರ ಪ್ರಸಕ್ತ ವಾಗಿದೆ. "ಮನ ಏವ ಪೂರ್ವರೂಪಂ, ವಾಗುತ್ತರರೂಪಂ"—ಮನಸ್ಸೇ ಮೊದಲಿನ ರೂಪ, ವಾಕ್ಕು ಮುಂದಿನ ರೂಪ—ಎನ್ನುವ ಐತರೇಯ ಆರಣ್ಯಕದ ವಾಕ್ಯದಿಂದ ವಾಕ್ಕಿಗೆ ಅನುತ್ಪತ್ತಿ ಕೂಡುವುದಿಲ್ಲ, ಅದು ಉತ್ಪತ್ತಿಯುಳ್ಳದುದೇ.]

ಓಂ ಸಪ್ತ, ಗತೇರ್ವಿಶೇಷಿತತ್ವಾಚ್ಚ ಓಂ 6

ಪ್ರಾಣಗಳು ಏಳು, ಹಾಗೆ ತಿಳಿದುಬಂದಿದೆ ಮತ್ತು ವಿಶೇಷಿತವಾಗಿದೆ.

[ಪ್ರಾಣಗಳ—ಇಂದ್ರಿಯಗಳ—ಸಂಖ್ಯೆಯ ವಿಷಯದಲ್ಲಿ ಶ್ರುತಿಗಳ ಭಿನ್ನಾಭಿಪ್ರಾಯವಿದೆ. "ಸಪ್ತ ಪ್ರಾಣಾಃ ಪ್ರಭವಂತಿ ತಸ್ಮಾತ್"—ಅವನಿಂದ ಏಳು ಪ್ರಾಣಗಳು ಹುಟ್ಟುತ್ತವೆ—ಎಂದು ಮುಂಡಕೋಪನಿಷತ್ತು ಹೇಳುತ್ತದೆ. "ದ್ವಾದಶ ವಾ ಏತೇ ಪ್ರಾಣಾಃ"—ಈ ಪ್ರಾಣಗಳು ಹನ್ನೆರಡು —ಎಂದು ಕೌಂಡಿನ್ಯಶ್ರುತಿಯಲ್ಲಿದೆ. ಹೀಗೆಯೇ ಹತ್ತು, ಹನ್ನೊಂದು ಪ್ರಾಣಗಳನ್ನೂ ಕೆಲವೆಡೆ ವರ್ಣಿಸಲಾಗಿದೆ. ಈ ವಿಷಯದ ನಿರ್ಣಯಕ್ಕಾಗಿ ಪ್ರಾಣಗಳು ಏಳೇ, ಎಂದು ಈ ಸೂತ್ರ ಹೇಳುತ್ತದೆ. ಜ್ಞಾನೇಂದ್ರಿಯಗಳು ಏಳೆಂದು ಮುಂಡಕ ಶ್ರುತಿ ಹೇಳುತ್ತದೆ. ಅಲ್ಲಿಯೇ "ಗುಹಾಶಯಾಯಾಂ ನಿಹಿತಾಃ ಸಪ್ತ ಸಪ್ತ" ಎಂದೂ ಹೇಳಲಾಗಿದೆ. "ಏಳು ಜ್ಞಾನೇಂದ್ರಿಯಗಳೂ ಐದು ಕರ್ಮೇಂದ್ರಿಯ ಗಳೂ ಇರುವುದರಿಂದ ದೇಹದಲ್ಲಿ ಹನ್ನೆರಡು ಪ್ರಾಣಗಳಿವೆ ಎಂದು ಭವಿಷ್ಯತ್ಪ್ರವಚನವಿದೆ.]

ಓಂ ಹಸ್ತಾದಯಸ್ತು ಸ್ಥಿತೇಽತೋ ನೈವಮ್ ಓಂ 7

ಹಸ್ತಾದಿಗಳು ಕರ್ಮಕ್ಕೆ ಉಪಯುಕ್ತವಾದುದರಿಂದ ಹೀಗಲ್ಲ.

[ಹಸ್ತಾದಿಗಳು ಕರ್ಮೇಂದ್ರಿಯಗಳಾದುದರಿಂದಲೇ ಜ್ಞಾನೇಂದ್ರಿಯಗಳ ಜೊತೆಗೇ ಅವನ್ನು ಸೇರಿಸಿಲ್ಲ ಆದುದರಿಂದಲೇ ಪ್ರಾಣಗಳು ಏಳು. "ಉದ್ಗತಿ-ಹೇತುತ್ವಾತ್ ಜ್ಞಾನಂ ಗತಿರಿಹೋಚ್ಯತೆ"—ಮೇಲಕ್ಕೆ ಹೋಗಲು ಕಾರಣ ಭೂತವಾದುದರಿಂದ ಜ್ಞಾನವನ್ನು 'ಗತಿ'ಯೆಂದು ಇಲ್ಲಿ ಹೇಳಲಾಗಿದೆ—ಎಂದು ವಾಯುಪ್ರೋಕ್ತದಲ್ಲಿದೆ.]

ಓಂ ಅಣವಶ್ಚ ಓಂ 8

ಮತ್ತು ಪ್ರಾಣಗಳು ಅಣುಗಳಾಗಿವೆ.

[ಪ್ರಾಣಗಳು ಅಣುಗಳೇ ಆಗಿದ್ದರೂ ತಮ್ಮ ತೇಜಸ್ಸಿನಿಂದ ವ್ಯಾಪ್ತವಾಗುವುವು. ದೂರಶ್ರವಣ ದರ್ಶನ ಯುಕ್ತಿಗಳಿಂದಲೂ ಇದನ್ನು ತಿಳಿಯಬಹುದು. "ಅಣುಭಿಃ ಪಶ್ಯತ್ಯಣುಭಿಃ ಶೃಣೋತಿ, ಪ್ರಾಣಾ ವಾ ಅಣವಃ, ಪ್ರಾಣೈರ್ಹ್ಯೇತದ್ಭವತಿ" ಎಂಬ ಕೌಂಡಿನ್ಯಶ್ರುತಿಯಿಂದ ಪ್ರಾಣಗಳು ಅಣುಗಳೇ ಎಂದು ಗೊತ್ತಾಗುತ್ತದೆ. ಶಾಂಡಿಲ್ಯ ಶ್ರುತಿಯೂ "ತದ್ಯಥಾ ಹ್ಯಣುನಶ್ಚಕ್ಷುಷಃ ಪ್ರಕಾಶೋ ವ್ಯಾತತಃ, ಏವಮೇವಾಸ್ಯ ಪುರುಷಸ್ಯ ಪ್ರಕಾಶೋ ವ್ಯಾತತಃ, ಅಣುರ್ಹ್ಯೇವೈಷ ಪುರುಷೋ ಭವತಿ"—ಅಣುವಾಗಿರುವ ಕಣ್ಣಿನಿಂದ ಪ್ರಕಾಶ ಹರಡಿರುವಂತೆಯೇ ಈ ಪುರುಷನ ಪ್ರಕಾಶವೂ ಹಬ್ಬಿರುವುದು. ಆದುದರಿಂದ ಈ ಪುರುಷ ಅಣುವೇ ಆಗಿರುವನು – ಎಂದು ತಿಳಿಸುವುದು.]

ಓಂ ಶ್ರೇಷ್ಠಶ್ಚ ಓಂ 9

ಮುಖ್ಯಪ್ರಾಣನೂ ಉತ್ಪತ್ತಿಯುಳ್ಳವನೇ.

["ನೈಷ ಪ್ರಾಣ ಉದೇತಿ" ಎಂಬ ವಾಕ್ಯ ಪ್ರಾಣನ ಅನುತ್ಪತ್ತಿಯನ್ನು ಹೇಳುವುದು. "ಆತ್ಮನ ಏಷ ಪ್ರಾಣೋ ಜಾಯತೇ"—ಪರಮಾತ್ಮನಿಂದ ಪ್ರಾಣ ಹುಟ್ಟುತ್ತದೆ – ಎನ್ನುತ್ತದೆ, ಪ್ರಶ್ನೋಪನಿಷತ್ತು. ಸೂತ್ರದ ನಿರ್ಧಾರ, ಮುಖ್ಯಪ್ರಾಣನಿಗೂ ಉತ್ಪತ್ತಿಯಿದೆ, ಎಂದೇ. ಸೂಕ್ಷ್ಮರೂಪದಿಂದ ಇದ್ದೇ ಇರುವುದು, ಸ್ಥೂಲರೂಪದಿಂದ ಹುಟ್ಟುವುದು, ಎಂದು ಗೌಪವನ ಶ್ರುತಿ ಹೇಳುತ್ತದೆ. "ಪ್ರಾಣೋ ವಾವ ಜ್ಯೇಷ್ಠಶ್ಚ ಶ್ರೇಷ್ಠಶ್ಚ"—ಪ್ರಾಣನೇ ಜ್ಯೇಷ್ಠ ಹಾಗೂ ಶ್ರೇಷ್ಠ—ಎಂಬ ಛಾಂದೋಗ್ಯ ವಾಕ್ಯದಿಂದ

ಮುಖ್ಯಪ್ರಾಣ ಶ್ರೇಷ್ಠನೆಂದು ಸೂತ್ರಕಾರರ ಮತ. ಅದಕ್ಕಾಗಿಯೇ 'ಶ್ರೇಷ್ಠ' ಶಬ್ದವನ್ನು ಬಳಸಿದ್ದಾರೆ.]

ಓಂ ನ ವಾಯುಕ್ರಿಯೇ, ಪೃಥಗುಪದೇಶಾತ್ ಓಂ 10

ಬಾಹ್ಯವಾಯುವನ್ನಾಗಲಿ, ಚೇಷ್ಟಾರೂಪಕ್ರಿಯೆಯನ್ನಾಗಲಿ ಹೇಳಿಲ್ಲ, ಬೇರೆಯಾಗಿಯೇ ಹೇಳಿರುವುದರಿಂದ.

[ಪ್ರಾಣೋತ್ಪತ್ತಿ ಶ್ರುತಿಯಲ್ಲಿ ಇವೆರಡನ್ನೂ ಹೇಳಿಲ್ಲ. "ಚೇಷ್ಟಾಯಾಂ ಬಾಹ್ಯವಾಯೌ ಚ ಮುಖ್ಯಪ್ರಾಣೇ ಚ ಗೀಯತೇ। ಪ್ರಾಣಶಬ್ದಸ್ತ್ರಿಷು ಹ್ಯೇಷು ಮುಖ್ಯೇ ಮುಖ್ಯಃ ಪ್ರಕೀರ್ತಿತಃ"—ಚೇಷ್ಟೆ, ಹೊರಗಿನ ಗಾಳಿ, ಮುಖ್ಯಪ್ರಾಣ ಎಂಬ ಮೂರು ಅರ್ಥಗಳಲ್ಲಿ ಪ್ರಾಣಶಬ್ದ ಉಪಯೋಗಿಸಲ್ಪಡುವುದು, ಇವುಗಳಲ್ಲಿ ಪ್ರಮುಖವಾದುದು ಮುಖ್ಯಪ್ರಾಣ. "ವಾಯುರ್ಭೀಮೋ ಭೀಮನಾದೋ ಮಹೌಜಾಃ, ಸರ್ವೇಷಾಂ ಚ ಪ್ರಾಣಿನಾಂ ಪ್ರಾಣಭೂತಃ। ಅನಾವೃತ್ತಿರ್ದೇಹಿನಾಂ ದೇಹಪಾತೇ, ತಸ್ಮಾದ್ವಾಯುರ್ದೇವದೇವೋ ವಿಶಿಷ್ಟಃ" ಎಂದು ಮಹಾಭಾರತದಲ್ಲಿ ಮುಖ್ಯಪ್ರಾಣನ ಮಹಿಮೆಯನ್ನು ಹೇಳಿದೆ.]

ಓಂ ಚಕ್ಷುರಾದಿವತ್ತು, ತತ್ಸಹಶಿಷ್ಟ್ಯಾದಿಭ್ಯಃ ಓಂ 11

ಆದರೆ ಕಣ್ಣು ಮೊದಲಾದ ಇಂದ್ರಿಯಗಳಂತೆ ಪ್ರಾಣವೂ ಜೀವನಿಗೆ ಕರಣವೇ, ಅವುಗಳೊಡನೆಯೇ ಉಪದೇಶಿಸಿರುವುದು ಮೊದಲಾದ ಕಾರಣಗಳಿಂದ.

[ಕಣ್ಣು ಮೊದಲಾದವುಗಳಂತೆಯೇ ಮುಖ್ಯಪ್ರಾಣನೂ ಪರಮಾತ್ಮನ ವಶದಲ್ಲಿಯೇ ಇರುವನು. "ಸರ್ವಂ ಹ್ಯೇವೈತತ್ ಪರಮೇಽವತಿಷ್ಠತೇ, ಪ್ರಾಣಶ್ಚ ಪ್ರಾಣಾಶ್ಚ ಪ್ರಾಣಿನಶ್ಚ, ಸ ಹ್ಯೇಕ ಏವೈತಾನ್ನಯತಿ, ಉನ್ನಯತಿ, ವಶೀಕರೋತಿ"—ಪ್ರಾಣ, ಪ್ರಾಣಗಳು, ಮತ್ತು ಪ್ರಾಣಿಗಳು ಎಂಬ ಇವೆಲ್ಲ ಪರಮಾತ್ಮನಲ್ಲಿಯೇ ನೆಲೆಗೊಂಡಿವೆ, ಅವನೊಬ್ಬನೇ ಇವನ್ನೆಲ್ಲ ಒಯ್ಯುತ್ತಾನೆ, ಮೇಲಕ್ಕೆ ತರುತ್ತಾನೆ, ತನ್ನ ವಶದಲ್ಲಿ ಇಟ್ಟುಕೊಳ್ಳುತ್ತಾನೆ—ಎಂದು ಗೌಪವನ

ಶ್ರುತಿ, ಕಣ್ಣು ಮೊದಲಾದವುಗಳೊಡನೆ ಮುಖ್ಯಪ್ರಾಣನನ್ನೂ ಪರಮಾತ್ಮ ವಶಮಾಡಿಕೊಂಡಿರುವುದನ್ನು ತಿಳಿಸುವುದು.]

ಓಂ ಅಕರಣತ್ವಾಚ್ಚ ನ ದೋಷಃ, ತಥಾ ಹಿ ದರ್ಶಯತಿ ಓಂ 12

ಮುಖ್ಯಪ್ರಾಣ ಕರಣವಲ್ಲ, ಎಂದರೂ ದೋಷವಿಲ್ಲ, ಹಾಗೆಯೇ ಶ್ರುತಿ ಹೇಳುತ್ತದೆ.

[ಇತರ ಪ್ರಾಣಗಳಿಗೆ ಕರಣತ್ವವಿದೆ, ಮುಖ್ಯಪ್ರಾಣನಿಗೆ ಕರಣತ್ವವಿಲ್ಲ, ಎಂದರೆ ಇತರ ಪ್ರಾಣಗಳಿಗಿಂತ ಮುಖ್ಯಪ್ರಾಣ ಉತ್ತಮನೆಂದೇ ಆಯಿತು; ಆದುವರಿಂದ ದೋಷವೇನೂ ಇಲ್ಲ. "ತಾನಿ ಹ ವಾ ಏತಾನಿ ಸರ್ವಾಣಿ ಕರಣಾನಿ, ಅಥ ಪ್ರಾಣ ಏವಾಕರಣಃ ತಸ್ಮಾನುಖ್ಯಸ್ತಸ್ಮಾನ್ಮುಖ್ಯಃ, ಇತ್ಯಾಚಕ್ಷತೇ" — ಇವೆಲ್ಲವೂ (ಇಂದ್ರಿಯಗಳು) ಕರಣಗಳು, ಪ್ರಾಣನೊಬ್ಬನೇ ಅಕರಣ, ಆದುದರಿಂದ ಅವನು ಮುಖ್ಯ, ಅವನು ಮುಖ್ಯ, ಎನ್ನುತ್ತಾರೆ— ಎಂದು ಮಾಂಡವ್ಯ ಶ್ರುತಿ ಹೇಳುತ್ತದೆ.]

ಓಂ ಪಂಚವೃತ್ತಿರ್ಮನೋವದ್ವ್ಯಪದಿಶ್ಯತೇ ಓಂ 13

ಮನಸ್ಸಿನಂತಯೇ ಪ್ರಾಣನೂ ಪಂಚವೃತ್ತಿಯುಳ್ಳವನೆಂದು ಹೇಳಲ್ಪಟ್ಟಿದೆ.

[ಮನಸ್ಸು, ಬುದ್ಧಿ, ಅಹಂಕಾರ, ಚಿತ್ತ, ಚೇತನ ಎಂದು ಐದು ಬಗೆಯಾಗಿ ಮನಸ್ಸು ಹೇಳಲ್ಪಟ್ಟಿದೆ. ಅದರಿಂದ ಹುಟ್ಟಿದ ಪಂಚವೃತ್ತಿ (ವ್ಯಾಪಾರ) ಉಳ್ಳದುದು, ಎಂದೂ ಹೇಳಲಾಗಿದೆ. ಇವೈದನ್ನೂ ಪಂಚ ದಾಸರೆಂದು ಕರೆದಿದ್ದಾರೆ. ಹಾಗೆಯೇ ಪ್ರಾಣನಿಗೂ ಪಂಚವೃತ್ತಿಯಿದೆ. ಮುಖ್ಯಪ್ರಾಣನೂ ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನಗಳೆಂಬ ಐದು ರೂಪಗಳುಳ್ಳವನು, ಪ್ರಾಣಾದಿ ಐದು ದಾಸರುಳ್ಳವನು, ಪ್ರಾಣದಿಂದ ಪ್ರಾಣ, ಅಪಾನದಿಂದ ಅಪಾನ, ವ್ಯಾನದಿಂದ ವ್ಯಾನ, ಉದಾನದಿಂದ ಉದಾನ, ಸಮಾನದಿಂದ ಸಮಾನ, ಹೀಗೆ ಐವರು ದಾಸರು ಹುಟ್ಟುವರು.]

ಓಂ ಅಣುಶ್ಚ ಓಂ 14

ಮುಖ್ಯಪ್ರಾಣ ಅಣುವೂ ಆಗಿದ್ದಾನೆ.

["ಸ ವಾ ಏಷ ಪ್ರಾಣೋಽಣುಮಹಾನ್ನಾಮಾ, ಅಂತರ್ವಾಽಣುರ್ಬಹಿರ್ಮಹಾನ್, ಪ್ರಾಣೋ ವಾ ಈಶಿತವ್ಯೇಶ ಈಶೋ ಹ್ಯಸೌ ಸರ್ವಸ್ಯೇಶಿತವ್ಯಶ್ಚ ಪರಸ್ಯ"—ಈ ಮುಖ್ಯಪ್ರಾಣ ಅಣುಮಹಾನ್ ಎಂಬ ಹೆಸರುಳ್ಳವ; ದೇಹದ ಒಳಗೆ ಅಣು, ಹೊರಗೆ ವ್ಯಾಪ್ತನಾಗಿ ಮಹಾನ್; ಪ್ರಾಣ, ಈಶ ಹಾಗೂ ಈಶಿತವ್ಯ; ಎಲ್ಲ ಜೀವರಿಗೆ ಈಶ, ಪರಮಾತ್ಮನಿಗೆ ಈಶಿತವ್ಯ—ಎಂದು ಕೌಂಡಿನ್ಯ ಶ್ರುತಿಯಿದೆ. ಸರ್ವಜಗತ್ತನ್ನೂ ವ್ಯಾಪಿಸಿರುವ ಈ ಪ್ರಾಣ ಅಣುವಾಗಿಯೂ ಇರುವನು.]

ಓಂ ಜ್ಯೋತಿರಾದ್ಯಧಿಷ್ಠಾನಂ ತು ತದಾಮನನಾತ್ ಓಂ 15

ಜ್ಯೋತಿ ಮೊದಲಾದವುಗಳಿಗೆ ಅಧಿಷ್ಠಾನನಾದವನು ಬ್ರಹ್ಮ, ಹಾಗೆ ಶ್ರುತಿಯಿದೆ.

[ಪ್ರಾಣಾದಿಗಳು ಕರಣ; ಜೀವನಿಗೆ ಪ್ರಾಣಾದಿ ಇಂದ್ರಿಯಗಳು ಕರಣ, ಎಂದು ಹೇಳಲಾಗಿದೆ. "ಕಣ್ಣು, ಕಿವಿ, ವಾಕ್ ಮೊದಲಾದವು ಬ್ರಹ್ಮನ ಕರಣಗಳು, ಅವುಗಳಿಂದ ಬ್ರಹ್ಮ ಕೆಲಸಗಳನ್ನು ಮಾಡಿಸುತ್ತಾನೆ" ಎಂದು ಕಾಷಾಯಣ ಶ್ರುತಿ ತಿಳಿಸುವುದು. ಜ್ಯೋತಿರಾದಿಗಳಿಗೆ ಅಧಿಷ್ಠಾನನಾದವನು ನಿಯಾಮಕನಾದ ಬ್ರಹ್ಮನೇ. ಅವನು ಕಣ್ಣು, ಕಿವಿ ಮೊದಲಾದ ಇಂದ್ರಿಯಗಳನ್ನು ಪ್ರೇರಿಸಿ ಕೆಲಸ ಮಾಡಿಸುತ್ತಾನೆ. "ಯಶ್ಚಕ್ಷುಷಿ ತಿಷ್ಠನ್"—ಯಾವನು ಕಣ್ಣಿನಲ್ಲಿ ನಿಂತು—ಎಂದು ಬೃಹದಾರಣ್ಯಕ, ಬ್ರಹ್ಮನ ಕರಣ ಕಣ್ಣು, ಎಂದು ತಿಳಿಸುತ್ತದೆ.]

ಓಂ ಪ್ರಾಣವತಾ, ಶಬ್ದಾತ್ ಓಂ 16

ಪ್ರಾಣವುಳ್ಳ ಜೀವನಿಂದಲೇ ಕಣ್ಣು ಮೊದಲಾದ ಇಂದ್ರಿಯಗಳ ಸಹಾಯದಿಂದ ಕೆಲಸ ಮಾಡಿಸುತ್ತಾನೆ, ಶ್ರುತಿ ಹೇಳುವುದರಿಂದ.

["ಏಷ ಹ್ಯೇನೇನಾತ್ಮನಾ ಚಕ್ಷುಷಾ ದರ್ಶಯತಿ, ಶ್ರೋತ್ರೇಣ ಶ್ರಾವಯತಿ, ಮನಸಾ ಮಾನಯತಿ, ಬುದ್ಧ್ಯಾ ಬೋಧಯತಿ, ತಸ್ಮಾದೇತಾವಾಹುಃ ಸೃತಿರಸೃತಿರಿತಿ"—ಪರಮಾತ್ಮ ಜೀವನಿಂದ ಕಣ್ಣಿನಿಂದ ತೋರಿಸುತ್ತಾನೆ, ಕಿವಿಯಿಂದ ಕೇಳಿಸುತ್ತಾನೆ, ಮನಸ್ಸಿನಿಂದ ಮನನ ಮಾಡಿಸುತ್ತಾನೆ. ಬುದ್ಧಿಯಿಂದ ತಿಳಿಸುತ್ತಾನೆ..." ಎಂದು ಭಾಲ್ಲವೇಯ ಶ್ರುತಿ ಹೇಳುತ್ತದೆ. ತನ್ನ ಕರಣಗಳ ಮೂಲಕವೇ ಪರಮಾತ್ಮ ಜೀವನಿಂದ ನೋಡಿಸುವುದು, ಕೇಳಿಸುವುದು.

ಮುಂತಾದ ಕಾರ್ಯಗಳನ್ನು ಮಾಡಿಸುವುದರಿಂದ ಶ್ರುತಿಗಳಲ್ಲಿ ವಿರೋಧ ವೇನೂ ಇಲ್ಲ.]

ಓಂ ತಸ್ಯ ಚ ನಿತ್ಯತ್ವಾತ್ ಓಂ 17

ಜೀವ–ಕರಣಗಳ ಸಂಬಂಧ ಅನಾದಿ ಹಾಗೂ ನಿತ್ಯ ಆಗಿರುವುದರಿಂದಲೂ.

[ಕರಣಗಳು ಜೀವನ ಇಂದ್ರಿಯಗಳು, ಎಂದು ಶ್ರುತಿ ಹೇಳುವುದು ಯುಕ್ತವಾಗಿದೆ. ಅವುಗಳ ಸಂಬಂಧ ಅನಾದಿ ಹಾಗೂ ನಿತ್ಯ. "ಕರಣೈರ್ವಾವ ನ ವಿಯುಜ್ಯತೇ, ಜೀವ ದೇಹದೊಡನೆಯೇ ವಿಯೋಗ ಹೊಂದುವನು, ಕರಣ ಗಳೊಡನೆ ವಿಯೋಗ ಪಡೆಯುವುದಿಲ್ಲ—ಎಂದು ಗೌಪವನ ಶ್ರುತಿ ಹೇಳುತ್ತದೆ. 'ಚ' ಶಬ್ದದಿಂದ ಕರಣಸಂಬಂಧ ಸೂಚಿತವಾಗುವುದು.]

ಓಂ ತ ಇಂದ್ರಿಯಾಣಿ, ತದ್ವ್ಯಪದೇಶಾತ್, ಅನ್ಯತ್ರ ಶ್ರೇಷ್ಠಾತ್ ಓಂ 18

ಮುಖ್ಯಪ್ರಾಣನನ್ನುಳಿದು ಇತರವು ಇಂದ್ರಿಯಗಳು, ಅವನನ್ನು ಶ್ರೇಷ್ಠನೆಂದು ಬೇರೆಯಾಗಿ ಹೇಳಿದೆ.

[ಜ್ಞಾನೇಂದ್ರಿಯಗಳು ಐದು, ಕರ್ಮೇಂದ್ರಿಯಗಳು ಐದು, ಮನಸ್ಸು, ಬುದ್ಧಿ ಸೇರಿ ಇಂದ್ರಿಯಗಳು ಹನ್ನೆರಡು. "ದ್ವಾದಶೈವೇಂದ್ರಿಯಾಣ್ಯಾಹುಃ ಪ್ರಾಣೋ ಮುಖ್ಯಸ್ತ್ವನಿಂದ್ರಿಯಮ್ । ದ್ರವತಾಂ ಹೀಂದ್ರಿಯಾಣಾಂ ತು ನಿಯಂತಾ ಪ್ರಾಣ ಏಕರಾಟ್"—ಹನ್ನೆರಡನ್ನೇ ಇಂದ್ರಿಯಗಳನ್ನಾಗಿ ಹೇಳು ತ್ತಾರೆ, ಮುಖ್ಯಪ್ರಾಣ ಅನಿಂದ್ರಿಯ; ದ್ರವಿಸುತ್ತಿರುವ ಇಂದ್ರಿಯಗಳಿಗೆ ನಿಯಾಮಕನಾಗಿರುವವನು ಪ್ರಭುವಾದ ಮುಖ್ಯಪ್ರಾಣನೇ — ಎಂದು ಪೌತ್ರಾಯಣ ಶ್ರುತಿ.]

ಓಂ ಭೇದಶ್ರುತೇಃ ಓಂ 19

ಭೇದಶ್ರುತಿ ಇರುವುದರಿಂದ.

[ಪೌತ್ರಾಯಣ ಶ್ರುತಿಯಲ್ಲಿ "ಸ್ಥಿತ ಏವ ಹೀದಂ ಮುಖ್ಯಪ್ರಾಣಃ ಕರೋತಿ ಕಾರಯತಿ, ಬಲತಿ ಬಾಲಯತಿ, ಧತ್ತೇ ಧಾರಯತಿ, ಪ್ರಭುಂ ವಾ ಏನಮಾಹುಃ । ಅಥೇಂದ್ರಿಯಾಣಿ ನ ಸ್ಥಿತಾನಿ ನ ಕುರ್ವಂತಿ ನ ಕಾರಯಂತಿ ನ ಬಲಂತಿ ನ ಬಾಲಯಂತಿ, ನ ದಧತೇ ನ ಧಾರಯಂತಿ । ತಾನಿ ವಾ ಏತಾನ್ಯ- ಬಲಾನಿ ತಸ್ಮಾದಾಹುರಿಂದ್ರಿಯಾಣಿ ಕರಣಾನಿ"—ಮುಖ್ಯಪ್ರಾಣ ಸ್ಥಿರನೇ;

ಅವನು ಕೆಲಸ ಮಾಡುತ್ತಾನೆ, ಮಾಡಿಸುತ್ತಾನೆ...। ಆಮೇಲೆ ಇಂದ್ರಿಯ ಗಳಾದರೋ ಸ್ಥಿರವಲ್ಲ; ಅವು ಕೆಲಸ ಮಾಡಲಾರವು, ಮಾಡಿಸಲಾರವು...। ಈ ಅಬಲವಾದ ಇಂದ್ರಿಯಗಳನ್ನು ಈ ಕಾರಣದಿಂದ ಕರಣಗಳೆನ್ನುತ್ತಾರೆ—ಎಂದು ಮುಖ್ಯಪ್ರಾಣನಿಗೂ ಇತರ ಪ್ರಾಣಗಳಿಗೂ ಭೇದವನ್ನು ಹೇಳಿದೆ.]

ಓಂ ವೈಲಕ್ಷಣ್ಯಾಚ್ಚ ಓಂ 20

ವೈಲಕ್ಷಣ್ಯವಿರುವುದರಿಂದಲೂ ಕರಣಗಳು ಬೇರೆಯೇ.

["ಇಂದ್ರಿಯಗಳ ಕಾರ್ಯಪ್ರವೃತ್ತಿ ಜೀವನ ಅಧೀನದಲ್ಲಿಯೇ ಮುಖ್ಯ ಪ್ರಾಣನ ಅಧೀನದಲ್ಲಿಲ್ಲ" ಎನ್ನುತ್ತಾರೆ, ಭಾಷ್ಯಕಾರರು. ಪ್ರಶ್ನೋಪನಿಷತ್ತಿನಲ್ಲಿ "ಪ್ರಾಣಾಗ್ನಯ ಏವೈತಸ್ಮಿನ್ಪುರೇ ಜಾಗ್ರತಿ"—ಉಳಿದ ಇಂದ್ರಿಯಗಳು ಸುಪ್ತ ವಾಗಿರುವಾಗ ಮುಖ್ಯಪ್ರಾಣರೂಪ ಅಗ್ನಿಗಳೇ ಈ ದೇಹದಲ್ಲಿ ಜಾಗೃತ ವಾಗಿದ್ದು ಕೆಲಸ ಮಾಡುತ್ತವೆ—ಎಂದು ಸ್ಪಷ್ಟವಾಗಿ ಮುಖ್ಯಪ್ರಾಣನ ವಿಲಕ್ಷಣ ವ್ಯಾಪಾರವನ್ನು ತಿಳಿಸಲಾಗಿದೆ.]

ಓಂ ಸಂಜ್ಞಾಮೂರ್ತಿಕ್ಲೃಪ್ತಿಸ್ತು ತ್ರಿವೃತ್ಕುರ್ವತಃ, ಉಪದೇಶಾತ್ ಓಂ 21

ನಾಮರೂಪಗಳ ಕಲ್ಪನೆಯಾದರೋ ಮೂರು ಮೂರಾಗಿ ಮಾಡುವ ವನದು, ಹಾಗೆ ಉಪದೇಶವಿರುವುದರಿಂದ.

[ನಾಮರೂಪಗಳ ಸೃಷ್ಟಿ ಪರಮಾತ್ಮನಿಂದಲೇ ಆಗುವುವು. "ಸರ್ವಾಣಿ ರೂಪಾಣಿ ವಿಚಿತ್ಯ ಧೀರೋ ನಾಮಾನಿಕೃತ್ವಾಽಭಿವದನ್ಯ ಆಸ್ತೇ" ಎಂಬ ಶ್ರುತಿಯಿಂದ 'ಪರಮಾತ್ಮನೇ ಎಲ್ಲ ವಸ್ತುಗಳಿಗೂ ರೂಪಗಳನ್ನು ಕಲ್ಪಿಸಿ ಅವುಗಳಿಗೆ ಹೆಸರನ್ನಿಟ್ಟು ಕರೆಯುತ್ತಾನೆ' ಎಂದು ತಿಳಿದುಬರುವುದು. "ತಾಸಾಂ ತ್ರಿವೃತಂ ತ್ರಿವೃತಮೇಕೈಕಾಂ ಕರವಾಣಿ"—ನಾಮರೂಪಗಳಲ್ಲಿ ಒಂದೊಂದನ್ನೂ ಮೂರು ಮೂರಾಗಿ ಮಾಡುತ್ತೇನೆ—ಎಂದು ಛಾಂದೋಗ್ಯದಲ್ಲಿ ಅವನ್ನು ವಿಂಗಡಿಸುವುದನ್ನು ತಿಳಿಸಲಾಗಿದೆ.]

ಓಂ ಮಾಂಸಾದಿ ಭೌಮಂ, ಯಥಾಶಬ್ದ-ಮಿತರಯೋಶ್ಚ ಓಂ 22

ಶ್ರುತಿಗಳ ಪ್ರಕಾರ ಮಾಂಸಾದಿಗಳು ಭೂಮಿಯ ಕಾರ್ಯ; ಮಜ್ಜಾದಿ ಗಳು ಜಲ–ತೇಜಸ್ಸುಗಳ ಕಾರ್ಯ.

["ಅದ್ಭ್ಯೋ ಹೀದಮುತ್ಪದ್ಯತೇ, ಆಪೋ ವಾವ ಮಾಂಸಮಸ್ಥಿ ಚ ಭವತಿ, ಆಪಃ ಶರೀರಂ, ಆಪ ಏವೇದಂ ಸರ್ವಂ"—ನೀರಿನಿಂದ ಈ ಶರೀರ ಹುಟ್ಟುತ್ತದೆ, ನೀರೇ ಮಾಂಸ ಮೂಳೆಗಳಾಗುತ್ತದೆ, ನೀರೇ ಶರೀರ, ಇದೆಲ್ಲವೂ ನೀರೇ — ಎಂದು ಕೌಂಡಿನ್ಯಶ್ರುತಿ ಹೇಳುತ್ತದೆ. ಮಹಾಭಾರತದಲ್ಲಿಯೂ "ಅಮ್ಮಯಂ ತು ಯತೋ ಮಾಂಸಮತಸ್ತೃಪ್ತಿಶ್ಚ ಮಾಂಸತಃ"—ಮಾಂಸ ನೀರಿನ ವಿಕಾರ, ಆದುದರಿಂದಲೇ ಮಾಂಸದಿಂದ ತೃಪ್ತಿ ಹುಟ್ಟುವುದು— ಎಂದು ಹೇಳಿದೆ. ಆದರೆ "ಪೃಥಿವೀ ಶರೀರಮಾಕಾಶ ಆತ್ಮಾ"—ಶರೀರ ಪೃಥ್ವೀತತ್ತ್ವಕ್ಕೆ ಸೇರಿದುದು, ಆತ್ಮ ಆಕಾಶತತ್ತ್ವಕ್ಕೆ ಸೇರಿದುದು—ಎಂದು ಬೃಹದಾರಣ್ಯಕದಲ್ಲಿ ಹೇಳಿದೆ. ಈ ವಿರೋಧವನ್ನು ಪರಿಹರಿಸಲು ಸೂತ್ರ ಪ್ರವೃತ್ತವಾಗಿದೆ. "ಯತ್ಕಠಿನಂ ಸಾ ಪೃಥಿವೀ, ಯದ್ದ್ರವಂ ತದಾಪಃ, ಯದುಷ್ಣಂ ತತ್ತೇಜಃ"—ಯಾವ ಭಾಗ ಗಟ್ಟಿಯಾಗಿದೆಯೋ ಅದು ಪೃಥಿವೀ ತತ್ತ್ವಕ್ಕೆ ಸೇರಿದುದು, ಯಾವುದು ದ್ರವವೋ ಅದು ನೀರಿನ ಭಾಗ, ಯಾವುದು ಉಷ್ಣತೆ ಪಡೆದಿದೆಯೋ ಅದು ತೇಜೋಮಯ—ಎಂದು ಶ್ರುತಿ ಹೇಳಿರುವುದ ರಿಂದ ಮಾಂಸಾದಿಕಠಿನಭಾಗಗಳು ಮಾತ್ರ ಭೂಮಿತತ್ತ್ವಕ್ಕೆ ಸೇರಿದವು, ಇಡೀ ಶರೀರವಲ್ಲ, ಎನ್ನುತ್ತಾರೆ, ಭಾಷ್ಯಕಾರರು. ಪಂಚಭೂತಾತ್ಮಕವಾದ ಶರೀರದ ನಾನಾ ಭಾಗಗಳು ಬೇರೆ ಬೇರೆ ತತ್ತ್ವಗಳಿಗೆ ಸೇರಿವೆ, ಎಂದು ಅಭಿಪ್ರಾಯ.]

ಓಂ ವೈಶೇಷ್ಯಾತ್ತು ತದ್ವಾದಸ್ತದ್ವಾದಃ ಓಂ 23

ವೈಶೇಷ್ಯದ ಕಾರಣದಿಂದ 'ಅದು' ಎಂಬ ವಾದವಿದೆ.

[ಪಂಚಭೂತಗಳ—ಪೃಥಿವ್ಯಾದಿಗಳ—ವಿಶೇಷ ರೀತಿಯ ಸಂಯೋಗ ವಿರುವುದರಿಂದಲೇ ವಿಶೇಷ ವ್ಯವಹಾರ ಹುಟ್ಟುವುದು. ಯಾವ ಭೂತ ಹೆಚ್ಚಾಗಿ ಕಾಣಬರುವುದೋ ಅದನ್ನು ವಿಶೇಷವಾಗಿ ಹೇಳಬೇಕಾಗುವುದು. ಅಧ್ಯಾಯ ಮುಗಿದುದನ್ನು ಸೂಚಿಸುವುದಕ್ಕಾಗಿ ಈ ಸೂತ್ರದಲ್ಲಿ 'ತದ್ವಾದಃ, ತದ್ವಾದಃ' ಎಂದು ಪುನರುಕ್ತಿ ಬಂದಿದೆ.]

ಇಲ್ಲಿಗೆ ಬ್ರಹ್ಮಸೂತ್ರಗಳ ಎರಡನೆಯ ಅಧ್ಯಾಯದ ನಾಲ್ಕನೆಯ ಪಾದ ಮುಗಿಯಿತು.

ಮೂರನೆಯ ಅಧ್ಯಾಯ

ಮೊದಲನೆಯ ಪಾದ

ಈ ಅಧ್ಯಾಯದಲ್ಲಿ ಮೋಕ್ಷಸಾಧನವನ್ನು ಕುರಿತು ವಿಚಾರ ಮಾಡಲಾಗುವುದು. ಸಾಂಸಾರಿಕ ಸುಖದುಃಖಗಳನ್ನು ಅನುಭವಿಸಿದವನಿಗೇ ವೈರಾಗ್ಯ ಬಂದು ಅವನು ಮೋಕ್ಷವನ್ನು ಬಯಸುತ್ತಾನೆ. ಆದುದರಿಂದ ವೈರಾಗ್ಯಕ್ಕೆ ಕಾರಣವಾದ ಜೀವನ ಗಮನಾಗಮನಗಳ ಸ್ವರೂಪವನ್ನು ಈ ಪಾದದಲ್ಲಿ ಹೇಳಿದೆ.

ಓಂ ತದಂತರಪ್ರತಿಪತ್ತೌ ರಂಹತಿ ಸಂಪರಿಷ್ವಕ್ತಃ, ಪ್ರಶ್ನನಿರೂಪಣಾಭ್ಯಾಮ್ ಓಂ 1

ಜೀವನು ದೇಹಾಂತರವನ್ನು ಪಡೆಯಬೇಕಾದಾಗ ಸೂಕ್ಷ್ಮಭೂತಗಳಿಂದ ಆವರಿಸಲ್ಪಟ್ಟು ಹೋಗುತ್ತಾನೆ. ಇದು ಪ್ರಶ್ನೋತ್ತರಗಳಿಂದ ತಿಳಿದುಬರುತ್ತದೆ.

["ಪಂಚಭೂತಗಳ ಬಂಧವೇ ಬಂಧನ; ಬಂಧನವೇ ಸಂಸಾರ. ಮರಣ ಕಾಲದಲ್ಲಿಯೇ ಮೋಕ್ಷಪ್ರಾಪ್ತಿ. ಆದುದರಿಂದ ಸಾಧನೆಗಳು ಏಕೆ ಬೇಕು?" ಎಂದು ಪೂರ್ವಪಕ್ಷ. ವೈರಾಗ್ಯ ಪಡೆಯುವುದಕ್ಕಾಗಿ ಜೀವನ ಗತಿಯನ್ನು ಇಲ್ಲಿ ತಿಳಿಸಬೇಕು. ಹಿಂದಿನ ಶರೀರವನ್ನು ಬಿಟ್ಟಮೇಲೆ ಮತ್ತೊಂದು ದೇಹವನ್ನು ಪಡೆಯುವುದಕ್ಕಾಗಿ ಭೂತಗಳಿಂದ ಬದ್ಧನಾಗಿಯೇ ಜೀವ ಹೋಗುತ್ತಾನೆ, ಎಂದು ಸೂತ್ರದ ಸಿದ್ಧಾಂತ. ಇದು ಛಾಂದೋಗ್ಯದಲ್ಲಿನ ಪ್ರಶ್ನೆ-ಪರಿಹಾರಗಳಿಂದ ದೃಢಪಡುತ್ತದೆ.]

ಓಂ ತ್ರ್ಯಾತ್ಮಕತ್ವಾತ್ತು ಭೂಯಸ್ತ್ವಾತ್ ಓಂ 2

ಮೂರು ಭೂತಗಳನ್ನು ಒಳಗೊಂಡಿರುವುದರಿಂದ, ಎಂದರೆ ಹೆಚ್ಚಾಗಿರುವುದರಿಂದ ನೀರೇ.

[ನೀರಿನಿಂದ ಆವರಿಸಲ್ಪಟ್ಟು ಜೀವ ಹೋಗುತ್ತಾನೆ, ಎಂದು ಶ್ರುತಿಯಿಂದ ತಿಳಿದುಬರುವುದು. ದೇಹ ಮೂರು ಭೂತಗಳನ್ನು ಒಳಗೊಂಡಿದೆ. ಅದರಲ್ಲಿ ತೇಜಸ್ಸು, ಅಪ್ (ನೀರು) ಮತ್ತು ಪೃಥ್ವೀ ಎಂಬ ಮೂರು ಭೂತಗಳ ಕಾರ್ಯ ಕಂಡುಬರುತ್ತದೆ. ಆದರೆ ನೀರಿನ ಅಂಶ ಅತ್ಯಧಿಕವಾಗಿರುವುದರಿಂದ "ಇತಿ

ಂಚಮ್ಯಾಮಾಹುತೌ, ಆಪಃ ಪುರುಷವಚಸೋ ಭವಂತಿ"—ನೀರು ಪುರುಷನ ೆಸರನ್ನು ಪಡೆಯುತ್ತದೆ—ಎಂದು ಛಾಂದೋಗ್ಯದಲ್ಲಿ ಹೇಳಿದೆ. ಆದುದರಿಂದ ೀರು ಮೂರು ಭೂತಗಳನ್ನೂ ಒಳಗೊಂಡು ಅಪ್‌ಶಬ್ದ ಹೊಂದಿದೆ.]

ಓಂ ಪ್ರಾಣಗತೇಶ್ಚ ಓಂ 3

ಪ್ರಾಣದ ಗತಿಯನ್ನು ಹೇಳಿರುವುದರಿಂದಲೂ.

["ಯತ್ರ ವಾ ಭೂತಾನಿ, ತತ್ರ ಕರಣಾನಿ, ನಿತ್ಯಾನಿ ಹ ವಾ ಏತಾನಿ ೂತಾನಿ ಕರಣಾನಿ ಚ। ನೈತಾನಿ ಕದಾಚಿದ್ವಿಯುಜ್ಯಂತೇ ನ ಚ ವಿಲೀಯಂತೇ" —ಎಲ್ಲಿ ಭೂತಗಳಿರುವುವೋ ಅಲ್ಲಿ ಪ್ರಾಣಗಳೂ ಇರುವುವು; ಇವು ಎರಡೂ ಿತ್ಯಗಳು, ಪರಸ್ಪರ ವಿಯೋಗ ಹೊಂದಲಾರವು—ಎಂದು ಭಾಲ್ಲವೇಯಶ್ರುತಿ ಿಳಿಸುತ್ತದೆ. ಆದುದರಿಂದ ಭೂತಗಳೊಡನೆ ಸಂಬದ್ಧನಾಗಿಯೇ ಜೀವ ಹೋಗುತ್ತಾನೆ.]

ಓಂ ಅಗ್ನ್ಯಾದಿಶ್ರುತೇರಿತಿ ಚೇನ್ನ, ಭಾಕ್ತತ್ವಾತ್ ಓಂ 4

ಅಗ್ನ್ಯಾದಿಗತಿಗಳನ್ನು ಶ್ರುತಿ ಹೇಳುವುದರಿಂದ (ಪ್ರಾಣೇಂದ್ರಿಯಗಳು ಜೀವನೊಡನೆ) ಹೋಗುವುದಿಲ್ಲ, ಎನ್ನುವುದು ಸರಿಯಲ್ಲ; ಭಾಗತಃ ಅಗ್ನ್ಯಾದಿ ಗಳು ಪ್ರಾಪ್ತವಾಗುವುವು.

["ಯತ್ರಾಸ್ಯ ಪುರುಷಸ್ಯ ಮೃತಸ್ಯಾಗ್ನಿಂ ವಾಗಪ್ಯೇತಿ, ವಾತಂ ಪ್ರಾಣಃ" —ಮೃತಪುರುಷನ ವಾಕ್ಕು ಅಗ್ನಿಯಲ್ಲಿ ಬೆರೆತುಹೋಗುತ್ತದೆ, ಪ್ರಾಣವು ವಾಯುವಿನೊಡನೆ ಸೇರಿಹೋಗುವುದು—ಎಂಬ ಬೃಹದಾರಣ್ಯಕ ವಾಕ್ಯದಿಂದ 'ಪ್ರಾಣ ಜೀವನೊಡನೆ ಹೋಗುವುದಿಲ್ಲ', ಎನ್ನುವುದು ತಪ್ಪು. "ಪುರುಷಸ್ಯ ಮೃತೌ ಬ್ರಹ್ಮನ್ ಪ್ರಾಣಾ ಭಾಗತ ಏವ ತು। ಅಧಿದೈವಂ ಪ್ರಾಪ್ನುವಂತಿ ಭಾಗತೋऽನುವ್ರಜಂತಿ ತಮ್ । ಪುನಃ ಶರೀರಸಂಪ್ರಾಪ್ತೌ ತಮೇವಾನು ವಿಶಂತಿ ಚ"—ಮನುಷ್ಯ ಮೃತನಾದಾಗ ಪ್ರಾಣಗಳ ಒಂದು ಭಾಗ ಅಗ್ನ್ಯಾದಿ ದೇವತೆಗಳನ್ನು ಸೇರಿಕೊಳ್ಳುತ್ತದೆ, ಮತ್ತೊಂದು ಭಾಗದಿಂದ ಜೀವನಲ್ಲಿಯೇ ಸೇರಿ ಅವನನ್ನು ಹಿಂಬಾಲಿಸುತ್ತದೆ. ಮತ್ತೆ ಜೀವನಿಗೆ ಇನ್ನೊಂದು ಶರೀರ ಬಂದಾಗ ಅದರೊಳಗೇ ಸೇರಿಕೊಳ್ಳುವುದು—ಎಂದು ಬ್ರಾಹ್ಮ ಪುರಾಣದಲ್ಲಿ ಹೇಳಿದೆ.]

ಓಂ ಪ್ರಥಮೇಽಶ್ರವಣಾದಿತಿ ಚೇನ್ನ, ತಾ ಏವ ಹ್ಯುಪಪತ್ತೇಃ ಓಂ 5

ಪ್ರಥಮಾಗ್ನಿಯ ವಿಷಯದಲ್ಲಿ ನೀರಿನ ಮಾತಿಲ್ಲದುದರಿಂದ ಇದು ಸರಿಯಲ್ಲ. ಎನ್ನುವುದನ್ನು ನಾವು ಒಪ್ಪುವುದಿಲ್ಲ, ಏಕೆಂದರೆ ಅದೇ ನೀರನ್ನೇ ಅಲ್ಲಿಯೂ ಹೇಳಿದೆ: ಹೊಂದುವುದರಿಂದ ಅದು ಯುಕ್ತವೇ.

[ಪ್ರಥಮಾಗ್ನಿಯ ವಿಷಯದಲ್ಲಿ ಶ್ರದ್ಧೆಯೇ ಹೋಮದ್ರವ್ಯವೆಂದು ಹೇಳಿದೆ, ನೀರನ್ನಲ್ಲ, ಎಂದು ಆಕ್ಷೇಪಣೆ ; ನೀರೇ ಶ್ರದ್ಧೆ, ಎಂದು ಸಮಾಧಾನ. "ತಸ್ಮಿನ್ನೇತಸ್ಮಿನ್ನಗ್ನೌ ದೇವಾಃ ಶ್ರದ್ಧಾಂ ಜುಹ್ವತಿ" —ಆ ಪ್ರಥಮಾಗ್ನಿಯಲ್ಲಿ ದೇವತೆಗಳು ಶ್ರದ್ಧೆಯನ್ನೇ ಹೋಮ ಮಾಡುತ್ತಾರೆ—ಎಂದು ಶ್ರುತಿವಾಕ್ಯ. ಪ್ರಸ್ತುತವಾದ ಆ ನೀರೇ ಶ್ರದ್ಧಾರೂಪದಿಂದ ಹೋಮ ಮಾಡಲ್ಪಡುವುದು. 'ಶ್ರದ್ಧಾಮಯನಾಗಿದ್ದು ಪುಣ್ಯಕರ್ಮಗಳನ್ನೇ ಮಾಡುತ್ತಿರುವವನು ಪ್ರಧಾನ ಭೂತಗಳೊಡನೆಯೇ ಸ್ವರ್ಗಕ್ಕೆ ಹೋಗುತ್ತಾನೆ,' ಎಂಬ ವಾಕ್ಯವಿದೆ. ಮೃತ ಪುರುಷ ಸ್ವರ್ಗಸುಖವನ್ನು ಅನುಭವಿಸಲೋಸುಗ ಚಂದ್ರಲೋಕಕ್ಕೆ ಒಯ್ಯಲ್ಪಡುತ್ತಾನೆ. ಪುಣ್ಯವೆಲ್ಲ ವ್ಯಯಹೊಂದಿದ ಮೇಲೆ, ಜ್ಯೋತಿರ್ಮಯವೂ ಆಹ್ಲಾದಕರವೂ ಆದ ದೇಹವುಳ್ಳ ಜೀವನು ತನ್ನ ದೇಹ ಕ್ರಮವಾಗಿ ಕ್ಷೀಣಿಸುತ್ತಿರುವುದನ್ನು ನೋಡುವನು. ಕೊನೆಗೆ ಅವನನ್ನು ಮಳೆಯಲ್ಲಿ (ಪರ್ಜನ್ಯ) ಎಸೆದು ಬಿಡುವರು. ಒಂದು ವರ್ಷದಲ್ಲಿ ಅವನು ಪೃಥಿವಿಗೇ ಬಂದು ಬತ್ತ ಮೊದಲಾದ ಶರೀರಗಳಲ್ಲಿ ಸೇರಿಬಿಡುವನು. ಅಲ್ಲಿಂದ ಅನ್ನದ ಮೂಲಕ ಪುರುಷನ ವೀರ್ಯದೊಳಗೆ ಸೇರಿ ತಾಯಿಯ ದೇಹದೊಳಗೆ ಸೇರಿಕೊಳ್ಳುವನು. ಇದು **ಪಂಚಾಹುತಿ.**]

ಓಂ ಅಶ್ರುತತ್ವಾದಿತಿ ಚೇನ್ನ, ಇಷ್ಟಾದಿಕಾರಿಣಾಂ ಪ್ರತೀತೇಃ ಓಂ 6

ಶ್ರುತಿಯಲ್ಲಿ ಹೇಳದಿರುವುದರಿಂದ ಇಲ್ಲವೆನ್ನುವುದು ಸರಿಯಲ್ಲ, ಇಷ್ಟಾ-ಪೂರ್ತಾದಿಗಳನ್ನು ಮಾಡಿದವರ ಗತಿ ತಿಳಿದುಬಂದಿರುವುದರಿಂದ.

[ಅಗ್ನಿ ಮೊದಲಾದುವುಗಳ ಗತಿ ಪ್ರತ್ಯಕ್ಷದಿಂದ ತಿಳಿಯಲ್ಪಟ್ಟಿದೆ. ಭೂತಗಳ ಜೊತೆಗೆ ಹೋಗುವುದನ್ನು ಪ್ರತ್ಯಕ್ಷವಾಗಿ ಕೇಳಿಲ್ಲದುದರಿಂದ, ಅದು

ಶಿಯುಕ್ತವೆನ್ನಬಾರದು. ಕೌಂತರವ್ಯ ಶ್ರುತಿ, "ಅಥೈನಂ ಯಜಮಾನಂ ಕಿಂ ನ ಸಹಾತಿ, ಭೂತಾನ್ಯೇವ। ಭೂತೈರೇವ ಗಚ್ಛತಿ, ಭೂತೈರ್ಭುಂಕ್ತೇ, ಭೂತೈ-ರುತ್ಪದ್ಯತೇ, ಭೂತೈಶ್ಚರತಿ, ಭೂತೈರ್ವಿಚರತಿ"—ಆಮೇಲೆ ಯಜಮಾನನನ್ನು ಯಾವುದು ಬಿಡುವುದಿಲ್ಲ? ಭೂತಗಳೇ ! ಭೂತಗಳೊಡನೆಯೇ ಅವನು ಹೋಗು ತ್ತಾನೆ, ಭೂತಗಳೊಡನೆಯೇ ಅನುಭವಿಸುತ್ತಾನೆ, ಭೂತಗಳ ಜೊತೆಗೇ ಹುಟ್ಟು ತ್ತಾನೆ, ಭೂತಗಳೊಡನೆಯೇ ಓಡಾಡುತ್ತಾನೆ— ಎಂದು ಹೇಳುತ್ತದೆ. ಇದು ಇಷ್ಟಾಪೂರ್ತ ಮೊದಲಾದ ಯಜ್ಞಗಳನ್ನು ಮಾಡಿ ಮಡಿದವನ ಮುಂದಿನ ಗತಿಯನ್ನು ತಿಳಿಸುತ್ತದೆ.]

ಓಂ ಭಾಕ್ತಂ ವಾ, ಅನಾತ್ಮವಿತ್ತ್ವಾತ್, ತಥಾ ಹಿ ದರ್ಶಯತಿ ಓಂ 7

ಇಷ್ಟಾದಿಯಜ್ಞಗಳನ್ನು ಮಾಡಿದವರು ಸೋಮರಸವನ್ನು ಕುಡಿದು ಅಮೃತರಾಗುವರು, ಎಂಬುದು ಗೌಣಾರ್ಥಕ, ಅವರಿಗೆ ಆತ್ಮಜ್ಞಾನವಾಗಿರ ದಿರುವುದರಿಂದ ; ಹಾಗೆಯೇ ದರ್ಶನವಿದೆಯಷ್ಟೆ.

["ಅಪಾಮ ಸೋಮಂ, ಅಮೃತಾ ಅಭೂಮ"—ಸೋಮರಸವನ್ನು ಕುಡಿದೆವು, ಮರಣವನ್ನು ಮೀರಿ ಅಮೃತರಾದೆವು—ಎಂಬ ಋಗ್ವೇದವಾಕ್ಯಕ್ಕೆ ಪರಿಹಾರವನ್ನು ಈ ಸೂತ್ರ ಸೂಚಿಸುವುದು. ಅಮೃತತ್ವ ಭಾಗತಃ ಒಪ್ಪ ಬೇಕಾದ್ದು, ಅದು ಕಾಮ್ಯಕರ್ಮದಿಂದ ದೊರೆಯುವ ಫಲ. ಮಿತವಾದ ಕಾಲದಲ್ಲಿ ಆಗುವ ಸ್ವರ್ಗಸುಖ, ನಿತ್ಯವಾದ ಮೋಕ್ಷಸುಖವಲ್ಲ. "ನಾನ್ಯಃ ಪಂಥಾ ಅಯನಾಯ ವಿದ್ಯತೇ"—ಮೋಕ್ಷಪ್ರಾಪ್ತಿಗೆ ಬ್ರಹ್ಮಜ್ಞಾನವನ್ನು ಬಿಟ್ಟು ಬೇರೆ ದಾರಿಯೇ ಇಲ್ಲ—ಎಂದು ಸ್ಪಷ್ಟವಾಗಿ ಹೇಳಿರುವುದೇ ಮುಖ್ಯಾರ್ಥ. ಸೂತ್ರದಲ್ಲಿ 'ವಾ'—ಅಥವಾ—ಎಂಬ ಶಬ್ದದಿಂದ ಆತ್ಮಜ್ಞಾನ ಪಡೆದು ಕರ್ಮ ಮಾಡುವವನು ಪರೋಕ್ಷವಾಗಿ ಅಮೃತತ್ವವನ್ನು ಪಡೆಯುವನು, ಎಂದು ತಿಳಿದುಬರುವುದು. 'ಕರ್ಮಣಾ ಜ್ಞಾನಮಾತನೋತಿ, ಜ್ಞಾನೇನ ಅಮೃತೀ-ಭವತಿ, ಅಥಾಮೃತಾನಿ ಕಾರ್ಯಾಣಿ ಯತ ಏವಮಮೃತಂ ನಯತಿ" — ಕರ್ಮ ಮಾಡಿ ಜ್ಞಾನ ಪಡೆಯುತ್ತಾನೆ, ಜ್ಞಾನದಿಂದ ಅಮೃತನಾಗುತ್ತಾನೆ ; ಆದುದ ರಿಂದ ಕರ್ಮಗಳೂ ಅಮೃತತ್ವ ಸಾಧನವೇ (ಪರಂಪರೆಯಾಗಿ), ಏಕೆಂದರೆ ಅವು ಅಮೃತತ್ವದ ಕಡೆಗೆ ಒಯ್ಯುತ್ತವೆ—ಎಂದು ಶ್ರುತಿವಾಕ್ಯವಿದೆ.]

ಓಂ ಕೃತಾತ್ಯಯೇಽನುಶಯವಾನ್, ದೃಷ್ಟಸ್ಮೃತಿಭ್ಯಾಂ ಓಂ 8

ಮಾಡಿದ್ದ ಕರ್ಮ ಭೋಗದಿಂದ ಸವೆದ ಮೇಲೆ, ಸ್ವಲ್ಪಮಟ್ಟಿಗೆ ಉಳಿದೇ ಇರುತ್ತದೆ. ಹಾಗೆ ಶ್ರುತಿ ಸ್ಮೃತಿಗಳಿವೆ.

[ಕರ್ಮಗಳ—ಪುಣ್ಯಪಾಪಗಳ—ಫಲವನ್ನು ಅನುಭವಿಸಿದಾಗ ಎಲ್ಲ ಕರ್ಮವೂ ಕಳೆದುಹೋಗುವುದಿಲ್ಲ. ಉಳಿದ ಕರ್ಮದ ಸಲುವಾಗಿ ಜೀವ ಈ ಲೋಕದಲ್ಲಿ ಪುನಃ ಹುಟ್ಟುತ್ತಾನೆ. ಆಗ ಮತ್ತೆ ಕರ್ಮ ಮಾಡಿ ಈ ಲೋಕವನ್ನು ಬಿಡುತ್ತಾನೆ. ಹೀಗೆ ಭೂಲೋಕ, ಸ್ವರ್ಗ, ನರಕಗಳಲ್ಲಿ ಮತ್ತೆ ಮತ್ತೆ ಜೀವ ಸಂಚರಿಸುತ್ತಿರುತ್ತಾನೆ. ಒಮ್ಮೆ ಸತ್ತವನು ಆಗಲೇ ಸಂಸಾರಚಕ್ರದಿಂದ ಬಿಡುಗಡೆ ಹೊಂದಲಾರ. "ತತಃ ಶೇಷೇಣೇಮಂ ಲೋಕಮಾಯಾತಿ, ಪುನಃ ಕರ್ಮ ಕುರುತೇ, ಪುನರ್ಗಚ್ಛತಿ, ಪುನರಾಗಚ್ಛತಿ"—ಆಮೇಲೆ ಉಳಿದಿರುವ ಕರ್ಮದಿಂದಾಗಿ ಈ ಲೋಕಕ್ಕೇ ಬರುತ್ತಾನೆ, ಮತ್ತೆ ಕರ್ಮ ಮಾಡುತ್ತಾನೆ, ತರುವಾಯ ಪುನಃ ಹೋಗುತ್ತಾನೆ, ಮತ್ತೆ ಬರುತ್ತಾನೆ—ಎಂದು ಶ್ರುತಿಯಿದೆ. "ಭುಕ್ತಶೇಷಾನುಶಯವಾನಿಮಾಂ ಪ್ರಾಪ್ಯ ಭುವಂ ಪುನಃ"—ಅನುಭವಿಸಿದ ಮೇಲೆ ಉಳಿದಿರುವ ಕರ್ಮವನ್ನು ಹೊಂದಿಯೇ ಮತ್ತೆ ಈ ಭೂಮಿಗೆ ಬಂದು—ಎಂಬ ಸ್ಮೃತಿಯೂ ಇದೆ.]

ಓಂ ಯಥೇತಮನೇವಂ ಚ ಓಂ 9

ಹೋದ ಮಾರ್ಗದಿಂದಲೂ ಅಥವಾ ಬೇರೆ ಮಾರ್ಗದಿಂದಲೂ ಜೀವ ಭೂಮಿಗೆ ಇಳಿಯುತ್ತಾನೆ.

["ಧೂಮಾದಭ್ರಮಭ್ರಾದಾಕಾಶಮಾಕಾಶಾಚ್ಚಂದ್ರಲೋಕಂ, ಯಥೇತಮಾಕಾಶಂ, ಆಕಾಶಾದ್ವಾಯುಂ, ವಾಯುರ್ಭೂತ್ವಾ ಧೂಮೋ ಭವತಿ, ಧೂಮೋ ಭೂತ್ವಾಽಭ್ರಂ ಭವತಿ, ಅಭ್ರಂ ಭೂತ್ವಾ ಮೇಘೋ ಭವತಿ, ಮೇಘೋ ಭೂತ್ವಾ ಪ್ರವರ್ಷತಿ"—ಹೊಗೆಯಿಂದ ಮೋಡ, ಮೋಡದಿಂದ ಆಕಾಶ, ಆಕಾಶದಿಂದ ಚಂದ್ರಲೋಕ; ಹೀಗೆ ಹೋಗಿ ಹಿಂದಿರುಗಿ ಬರುವಾಗ ಆಕಾಶಕ್ಕೆ ಬಂದು ಆಕಾಶದಿಂದ ವಾಯು, ವಾಯುವಾಗಿ ಹೊಗೆ, ಧೂಮವಾಗಿ ಮೋಡ, ಮೋಡವಾಗಿ ಮಳೆಯಾಗಿ ಬೀಳುತ್ತಾನೆ—ಎಂದು ಕಾಷಾಯಣ

ಶ್ರುತಿ ಹೇಳುತ್ತದೆ. ಜೀವ ತಾನು ಅಥವಾ ಇತರರು ಬಂದ ದಾರಿಯಲ್ಲೇ ಹೋಗುತ್ತಾನೆ, ಅಥವಾ ಬೇರೆಯಾಗಿಯೂ ಹೋಗುತ್ತಾನೆ.]

ಓಂ ಚರಣಾದಿತಿ ಚೇನ್ನ, ತದುಪಲಕ್ಷಣಾರ್ಥೇತಿ ಕಾಷ್ಣಾರ್ಜಿನಿಃ ಓಂ 10

ಆಚಾರದಿಂದ, ಎಂದರೆ 'ಅಲ್ಲ, ಶ್ರುತಿ ಅದರ ಉಪಲಕ್ಷಣ ಮಾತ್ರವೇ', ಎನ್ನುತ್ತಾನೆ, ಕಾಷ್ಣಾರ್ಜಿನಿ.

[ಕರ್ಮಶೇಷದಿಂದ ಪುನರ್ಜನ್ಮ ಬರುವುದಿಲ್ಲ, ಆಚಾರದಿಂದಲೇ, ಎಂದು ಆಕ್ಷೇಪ. "ತದ್ಯ ಇಹ ರಮಣೀಯಚರಣಾ ರಮಣೀಯಾಂ ಯೋನಿಮಾಪದ್ಯಂತೇ, ಕಪೂಯಚರಣಾಃ ಕಪೂಯಾಂ" — ಇಲ್ಲಿ ಯಾರು ಒಳ್ಳೆಯ ಯಜ್ಞಾದಿ ಕರ್ಮಾಚರಣೆ ಮಾಡುತ್ತಾರೆಯೋ ಅವರು ಉತ್ತಮ ಯೋನಿಗಳಲ್ಲಿ ಜನ್ಮ ಪಡೆಯುತ್ತಾರೆ. ಯಾರು ದುಷ್ಟಾಚಾರ ನಿರತರೋ ಅವರು ದುಷ್ಟಯೋನಿಗಳಲ್ಲಿ ಹುಟ್ಟುತ್ತಾರೆ — ಎಂದು ಛಾಂದೋಗ್ಯೋಪನಿಷತ್ತು ತಿಳಿಸುತ್ತದೆ. ಕರ್ಮಾಂಗವಾದ ಸದಾಚಾರ ಶುದ್ಧಿಯನ್ನೂ ದುರಾಚಾರ ಅಶುದ್ಧಿಯನ್ನೂ ಒದಗಿಸುವುದು, ಎಂದರೆ ಯಜ್ಞಾದಿಗಳ ಉಪಲಕ್ಷಣವೇ ಚರಣಶ್ರುತಿ, ಎಂದು ಕಾಷ್ಣಾರ್ಜಿನಿಯ ಮತ. ಚರಣವೆಂದರೆ ಬರೇ ಸ್ನಾನಾದಿ ಆಚಾರವಲ್ಲ.]

ಓಂ ಆನರ್ಥಕ್ಯಮಿತಿ ಚೇನ್ನ, ತದಪೇಕ್ಷತ್ವಾತ್ ಓಂ 11

ಚರಣಶಬ್ದವೇ ವ್ಯರ್ಥ, ಎಂದರೆ, ಹಾಗಲ್ಲ, ಅದರ ಉಪಯುಕ್ತತೆ ಇದೆ.

[ಸತ್ಕರ್ಮ, ದುಷ್ಕರ್ಮಗಳಿಂದಲೇ ಫಲಪ್ರಾಪ್ತಿಯಾಗುವುದರಿಂದ 'ಆಚಾರ'ವೆಂಬ ಶಬ್ದ ಏಕೆ ಬೇಕು ? ಇದು ಆಕ್ಷೇಪಣೆ. ಒಳ್ಳೆಯ ಕರ್ಮಕ್ಕೆ ಒಳ್ಳೆಯ ಆಚಾರವೂ ಅಗತ್ಯವಾಗಿರುವುದರಿಂದ ಚರಣಶಬ್ದ ವ್ಯರ್ಥವಲ್ಲ. ಎಂದು ಸಮಾಧಾನ. ಕರ್ಮ ಶೀಲವನ್ನು ಅಪೇಕ್ಷಿಸುತ್ತದೆ. ಸದಾಚಾರಿಯಾಗಿಯೇ ಸತ್ಕರ್ಮ ಮಾಡಬೇಕು.]

ಓಂ ಸುಕೃತದುಷ್ಕೃತೇ ಏವ, ಇತಿ ತು ಬಾದರಿಃ ಓಂ 12

ಸುಕೃತ ಮತ್ತು ದುಷ್ಕೃತಗಳೇ, ಎಂದು ಬಾದರಿಯ ಅಭಿಪ್ರಾಯ.

["ಧರ್ಮಂ ಚರತ ಮಾऽಧರ್ಮಂ"—ಧರ್ಮವನ್ನು ಆಚರಿಸಿ, ಅಧರ್ಮವನ್ನು ಬಿಡಿ—ಎಂದು ಹೇಳುವ ವಾಡಿಕೆ ಇದೆ. ಆದುದರಿಂದ ಆಚಾರಶಬ್ದದಿಂದ ಕರ್ಮವೂ ಸೇರಿಕೊಳ್ಳುತ್ತದೆ. ಇದರಿಂದಾಗಿ ಸತ್ಕರ್ಮ ದುಷ್ಕರ್ಮಗಳೇ ಚರಣಶಬ್ದದಿಂದ ಹೇಳಲ್ಪಟ್ಟಿವೆ, ಎಂದು ಬಾದರಿ ಹೇಳುತ್ತಾನೆ. 'ತು' ಶಬ್ದದಿಂದ ಇದೇ ತಮ್ಮ ಸಿದ್ಧಾಂತವೂ, ಎಂದು ಬಾದರಾಯಣರ ಅಭಿಪ್ರಾಯ.]

ಓಂ ಅನಿಷ್ಟಾದಿಕಾರಿಣಾಮಪಿ ಚ ಶ್ರುತಮ್ ಓಂ 13

ಪಾಪಕರ್ಮಗಳನ್ನು ಮಾಡಿದವರಿಗೂ ಗಮನಾಗಮನವಿದೆ, ಎಂದು ಶ್ರುತಿ ಇದೆ.

[ಭಾಲ್ಲವೇಯ ಶ್ರುತಿಯಲ್ಲಿ "ತದ್ಯ ಇಹ ಶುಭಾಕೃತೋ ಯೇ ವಾऽಶುಭಕೃತಃ, ತೇऽಶುಭಮನುಭೂಯಾऽವರ್ತಂತೇ, ಪುನಃ ಕರ್ಮ ಕುರ್ವಂತಿ ಪುನರ್ಗಚ್ಛಂತಿ ಪುನರಾಗಚ್ಛಂತಿ"—ಇಲ್ಲಿ ಯಾರು ಶುಭಕರ್ಮಗಳನ್ನು ಮಾಡುವುದಿಲ್ಲವೋ ಮತ್ತು ಯಾರು ಅಶುಭಕರ್ಮಗಳನ್ನು ಮಾಡುವರೋ ಅವರು ಅನಿಷ್ಟ ಫಲಗಳನ್ನು (ನರಕದಲ್ಲಿ) ಅನುಭವಿಸಿ ಮತ್ತೆ ಇಲ್ಲಿಗೇ ಬರುತ್ತಾರೆ; ಪುನಃ ಅವರೇ ಕರ್ಮ ಮಾಡುತ್ತಾರೆ, ಪುನಃ ಹೋಗುತ್ತಾರೆ ಮತ್ತು ಬರುತ್ತಾರೆ—ಎಂದು ಹೇಳಿದೆ. ಪುಣ್ಯಕರ್ಮ ಮಾಡಿದವರು ಸ್ವರ್ಗಲೋಕಕ್ಕೆ ಹೋಗಿ ಸತ್ಫಲಗಳನ್ನು ಅನುಭವಿಸಿ ಹಿಂದಿರುಗಿ ಇಲ್ಲಿಗೇ ಬರುವಂತೆ ದುಷ್ಕರ್ಮ ಮಾಡಿದವರೂ ನರಕಕ್ಕೆ ಹೋಗಿ ದುಃಖ ಅನುಭವಿಸಿ ಹಿಂದಕ್ಕೆ ಬರುತ್ತಾರೆ.]

ಓಂ ಸಂಯಮನೇ ತ್ವನುಭೂಯೇತರೇಷಾಮಾರೋಹಾವರೋಹೌ, ತದ್ಗತಿದರ್ಶನಾತ್ ಓಂ 14

ನರಕದಲ್ಲಿ ದುಃಖವನ್ನು ಅನುಭವಿಸಿದ ಮೇಲೆ ಅನಿಷ್ಟಕರ್ಮ ಮಾಡಿದವರಲ್ಲಿ ಕೆಲವರಿಗೆ ಊರ್ಧ್ವಗತಿ, ಇತರರಿಗೆ ಅಧೋಗತಿ ಆಗುವುವು. ಹಾಗೆ ಗತಿಯ ದರ್ಶನವಿರುವುದರಿಂದ.

[ಸಂಯಮನ ಎಂದರೆ ಪಾಪದ ಕೊನೆಯ ಗತಿ—ನರಕ. ನರಕವಾಸದಿಂದ ಕರ್ಮಫಲವನ್ನು ಅನುಭವಿಸಿದವರಲ್ಲಿ ಮುಂದೆ ಕೆಲವರು ಸ್ವರ್ಗಾದಿ

ಲೋಕಗಳಿಗೆ—ಮೇಲಕ್ಕೆ—ಹೋಗುತ್ತಾರೆ. ಕೆಲವರು ನಿತ್ಯನರಕಕ್ಕೆ ಇಳಿಯು ತ್ತಾರೆ. "ಸರ್ವೇ ವಾ ಏತೇऽಶುಭಕೃತಃ ಸಂಯಮನೇ ಪ್ರಪತಂತಿ, ತತ್ರ ಹಿ ಯೇ ಪರದ್ವಿಷಃ ಶ್ರುತಿದ್ವಿಷಸ್ತದವಮಂತಾರಃ ಶಠಾ ಮೂರ್ಖಾ ಇತಿ, ತೇ ವೈ ತತೋऽವರುಹ್ಯ ತಮಸಿ ಪ್ರಪತಂತಿ, ನೈವೈತ ಉತ್ತಿಷ್ಠಂತೇऽಪಿ ಕರ್ಹಿಚಿ-ದ್ವಿವ್ರಂ ವಾ ಏತದಿತ್ಯಾಹುಃ, ಅಥ ಯೇऽನ್ಯೇ ಬ್ರಹ್ಮದ್ವಿಷಃ ಸ್ತೇನಾಃ ಸುರಾಪಾ ಇತಿ ತೇ ವೈ ತದನುಭೂಯೇಮಂ ಲೋಕಮನುವ್ರಜಂತಿ"—ಅಶುಭ ಕರ್ಮ ಮಾಡಿದ ಇವರೆಲ್ಲ ನರಕದಲ್ಲಿ ಬೀಳುತ್ತಾರೆ; ಅವರಲ್ಲಿ ಪರಮಾತ್ಮನಲ್ಲಿ ದ್ವೇಷ ಮಾಡುವವರೂ, ಗುರುದ್ವೇಷಿಗಳೂ, ವೇದಗಳನ್ನು ದ್ವೇಷಿಸುವವರೂ ಮತ್ತು ನಿಂದಿಸುವವರೂ, ಗೂಢದ್ವೇಷಿಗಳೂ (ಶಠ), ಮೂರ್ಖರು ಇವರೆಲ್ಲ ನರಕದಿಂದಲೂ ಮುಂದೆ ಕೆಳಕ್ಕೆ ಇಳಿದು ನಿತ್ಯವಾದ ಅಂಧಂತಮಸ್ಸಿನಲ್ಲಿ ಬೀಳುತ್ತಾರೆ. ಅಲ್ಲಿಂದ ಅವರು ಯಾವಾಗಲೂ ಏಳಲಾರರು; ಮತ್ತೆ ಇತರರಾದ ಬ್ರಾಹ್ಮಣದ್ವೇಷಿಗಳು, ಕಳ್ಳರು, ಮದ್ಯಪಾನ ಮಾಡುವವರು ಮುಂತಾದವರು ನರಕದಲ್ಲಿ ದುಃಖವನ್ನು ಅನುಭವಿಸಿದ ಮೇಲೆ ಈ ಲೋಕದಲ್ಲಿ ಪುನಃ ಹುಟ್ಟಿ ಬರುತ್ತಾರೆ—ಎಂದು ಕೌಂಠರವ್ಯ ಶ್ರುತಿ ಹೇಳುತ್ತದೆ.]

ಓಂ ಸ್ಮರಂತಿ ಚ ಓಂ 15

ಸ್ಮೃತಿಗಳೂ ಇವೆ.

["ತತ್ರ ಭುಂಕ್ತ್ವಾ ಪತಂತ್ಯೇವ ಯೇ ದ್ವಿಷಂತಿ ಜನಾರ್ದನಂ। ಮಹಾ-ತಮಸಿ ಮಗ್ನಾನಾಂ ನ ತೇಷಾಮುತ್ಥಿತಿಃ ಕ್ವಚಿತ್। ಇತರೇಷಾಂ ತು ಪಾಪಾನಾಂ ವ್ಯುತ್ಥಾನಂ ವಿದ್ಯತೇऽಪಿ ಚ" — ನರಕದಲ್ಲಿ ದುಃಖವನ್ನು ಅನುಭವಿಸಿದ ಮೇಲೆ, ವಿಷ್ಣುದ್ವೇಷಿಗಳು ಪಂಚಕಷ್ಟವೆಂಬ ಮಹಾತಮಸ್ಸಿನಲ್ಲಿ ಬಿದ್ದೇ ಬೀಳುವರು, ಕತ್ತಲೆಯಲ್ಲಿ ಮುಳುಗಿದ ಅವರು ಅಲ್ಲಿಂದ ಮೇಲಕ್ಕೆ ಏಳಲಾರರು. ಇತರ ಪಾಪಿಗಳಿಗೆ, ಎದ್ದು ಈ ಲೋಕಕ್ಕೆ ಬರುವ ಅವಕಾಶ ವಿದೆ— ಎಂದು ಸ್ಮೃತಿ ತಿಳಿಸುವುದು.]

ಓಂ ಅಪಿ ಸಪ್ತ ಓಂ 16

ಏಳು ನರಕಗಳೂ ಇವೆ.

["ರೌರವ, ಮಹಾರೌರವ, ವಹ್ನಿ, ವೈತರಣೀ, ಕುಂಭೀಪಾಕ ಎಂಬ ಐದು ಅನಿತ್ಯ ನರಕಗಳಿವೆ. ತಾಮಿಸ್ರ, ಅಂಧತಾಮಿಸ್ರ ಎಂಬ ಎರಡೂ

ನಿತ್ಯನರಕಗಳು. ಈ ಏಳು ಪ್ರಧಾನ ನರಕಗಳು. ಇವುಗಳಲ್ಲಿ ಒಂದಕ್ಕಿಂತ ಅದರ ಮುಂದಿನದು ಪ್ರಬಲವಾದುದು. ಪ್ರಧಾನ ನರಕಗಳನ್ನು ಹೇಳಿದುದರಿಂದ ಇನ್ನೂ ಅನೇಕ ನರಕಗಳುಂಟೆಂದು ತಿಳಿಯಬೇಕು. ಈ ವಿಷಯ ಮಹಾಭಾರತದಲ್ಲಿ ಹೀಗೆ ಹೇಳಲ್ಪಟ್ಟಿದೆ: "ರೌರವೋಽಥ ಮಹಾಂಶ್ಚೈವ ವಹ್ನಿರ್ವೈತರಣೀ ತಥಾ । ಕುಂಭೀಪಾಕ ಇತಿ ಪ್ರೋಕ್ತಾನ್ಯನಿತ್ಯನರಕಾಣಿ ತು । ತಾಮಿಸ್ರಶ್ಚಾಂಧತಾಮಿಸ್ರೋ ದ್ವೌ ನಿತ್ಯೌ ಸಂಪ್ರಕೀರ್ತಿತೌ । ಇತಿ ಸಪ್ತ ಪ್ರಧಾನಾನಿ ಬಲೀಯಸ್ತ್ವುತ್ತರೋತ್ತರಂ । ಏತಾನಿ ಕ್ರಮಶೋ ಗತ್ವೈವಾರೋಹೋಥಾವರೋಹಣಮ್".]

ಓಂ ತತ್ರಾಪಿ ಚ ತದ್ವ್ಯಾಪಾರಾದವಿರೋಧಃ ಓಂ 17

ಅಲ್ಲಿಯೂ ಕೂಡ ಅವನ ವ್ಯಾಪಾರವಿರುವುದರಿಂದ ವಿರೋಧವಿಲ್ಲ.

[ಜಗತ್ತಿನ ಸೃಷ್ಟಿಸ್ಥಿತ್ಯಾದಿ ಕಾರ್ಯಗಳಿಗೆ ಈಶ್ವರ ಕಾರಣ, ಆದರೆ ಅವನು ನರಕದಲ್ಲಿಯೂ ಇರುವನೇ? ಇದನ್ನು ಪರಿಹರಿಸಬೇಕಾಗಿದೆ. ಪೌತ್ರಾಯಣಶ್ರುತಿ ಹೀಗೆ ಹೇಳುವುದು: "ಸ ಸ್ವರ್ಗೇ ಸ ಭೂಮೌ ಸ ನರಕೇ ಸೋಽಂಧೇ ತಮಸಿ ಪ್ರವೃತ್ತಿಕೃದೇಕ ಏವಾನುವಿಷ್ಟಃ, ನಾಸೌ ದುಃಖಭುಗೀಶ್ವರಃ ಪ್ರಭುತ್ವಾತ್ಸರ್ವಂ ಪಶ್ಯತಿ, ಸರ್ವಂ ಕಾರಯತಿ" ...ಆ ಪರಮಾತ್ಮ ಸ್ವರ್ಗದಲ್ಲಿ, ಭೂಮಿಯಲ್ಲಿ, ನರಕದಲ್ಲಿ, ಅಂಧಂತಮಸ್ಸಿನಲ್ಲಿಯೂ ಇದ್ದಾನೆ. ಎಲ್ಲ ಜೀವರೊಡನೆ ಸೇರಿ ಮುಖ್ಯವಾಗಿ ಕಾರ್ಯಪ್ರವೃತ್ತಿ ಮಾಡಿಸುತ್ತಾನೆ. ಆ ಈಶ್ವರ ತಾನು ದುಃಖವನ್ನು ಅನುಭವಿಸುವುದಿಲ್ಲ, ಪ್ರಭುವಾದುದರಿಂದ; ಎಲ್ಲವನ್ನೂ ನೋಡುತ್ತಾನೆ, ಎಲ್ಲವನ್ನೂ ಮಾಡಿಸುತ್ತಾನೆ. ಆದುದರಿಂದ ಈಶ ನರಕದಲ್ಲಿಯೂ ಇದ್ದು ಜೀವನಿಗೆ ಕರ್ಮಕ್ಕೆ ತಕ್ಕ ಫಲ ವಿಧಿಸುತ್ತಾನೆ, ಅವನಿಗೆ ಆ ಕರ್ಮ ಮತ್ತು ಫಲಗಳ ಲೇಪವಿಲ್ಲ.]

ಓಂ ವಿದ್ಯಾಕರ್ಮಣೋರಿತಿ ತು ಪ್ರಕೃತತ್ವಾತ್ ಓಂ 18

ವಿದ್ಯಾಪಥ, ಕರ್ಮಪಥ ಎಂಬ ಎರಡು ಮಾರ್ಗಗಳು ಇಲ್ಲಿ ಪ್ರಕೃತವಾಗಿರುವುದರಿಂದ.

["ಅಥೈತಯೋಃ ಪಥೋಃ" ಎಂಬ ಶ್ರುತಿಯಿಂದ ಪ್ರಾಣಿಗಳ ಗತಿ ಸ್ವತಂತ್ರವಾಗಿರುವಂತೆ ತೋರುತ್ತದೆ, ಎಂಬ ಆಕ್ಷೇಪಕ್ಕೆ ಇಲ್ಲಿ ಉತ್ತರವಿದೆ. 'ಇವೆರಡರಲ್ಲಿ' ಎಂಬ ಶಬ್ದ ವಿದ್ಯಾಮಾರ್ಗ, ಕರ್ಮಮಾರ್ಗಗಳನ್ನು ಸೂಚಿಸುತ್ತದೆ. ಇವು ಪ್ರಕೃತ ವಿಷಯಗಳಾಗಿವೆ. "ಪಂಚಾಗ್ನಿವಿದ್ಯೆ ಮೊದಲಾದುವನ್ನು ಪಡೆದು ಅರ್ಚಿರಾದಿ ಮಾರ್ಗಗಳಲ್ಲಿ ಹೋಗುಪವರು ಕೆಲವರು. ಇಷ್ಟಾದಿ ಕರ್ಮಗಳನ್ನು ಮಾಡಿ ಧೂಮಾದಿಮಾರ್ಗಗಳಲ್ಲಿ ಹೋಗುವವರು ಕೆಲವರು. ಇವೆರಡರಲ್ಲಿಯೂ ಹೋಗಲಾಗದ ಜೀವ ಪಶುವಾಗುತ್ತಾನೆ, ನರಕಕ್ಕೆ ಹೋಗುತ್ತಾನೆ ಅಥವಾ ತಮಸ್ಸಿಗೇ ಹೋಗುತ್ತಾನೆ" ಎಂದು ಮಹಾಭಾರತ ತಿಳಿಸುತ್ತದೆ.]

ಓಂ ನ ತೃತೀಯೇ, ತಥೋಪಲಬ್ಧೇಃ ಓಂ 19

ಮೂರನೆಯ ಮಾರ್ಗದಲ್ಲಿ ಸುಖವಿಲ್ಲ, ಹಾಗೆ ಶ್ರುತಿಯಲ್ಲಿರುವುದರಿಂದ.

[ಮೂರನೆಯ ಗುರಿಯಾದ ಅಂಧಂತಮಸ್ಸನ್ನು ಪ್ರವೇಶಿಸಿದವನಿಗೆ ಸುಖವೇ ಇರುವುದಿಲ್ಲ. ಇತರ ಸ್ಥಾನಗಳಲ್ಲಿ ಸ್ವಲ್ಪವಾದರೂ ಸುಖದಿಂದ ಮಿಶ್ರವಾದ ದುಃಖವಿರಬಹುದು; ಆದರೆ ತಮಸ್ಸಿನಲ್ಲಿ ಸುಖಲೇಶವೂ ಇರುವುದಿಲ್ಲ. "ಅಥಾವಿದ್ವಾನಕರ್ಮಾ, ಅವಾಗ್ಗಚ್ಛತಿ, ತ್ರಿಧಾ ಪ ವಾಽವಾಗ್ಗಚ್ಛತಿ, ತಿರ್ಯಗ್ಯಾತನಾ ತಮ ಇತಿ । ದ್ವೇ ಪಾಪ ಸುಖಾನುವೃತ್ತೇ, ನ ತಮಃ ಸುಖಾನುವೃತ್ತಂ ಕೇವಲಂ ಹ್ಯೇವಾತ್ರ ದುಃಖಂ ಭವತಿ"—ಆಮೇಲೆ ಬ್ರಹ್ಮಜ್ಞಾನವಿಲ್ಲದವನೂ ಸತ್ಕರ್ಮ ಮಾಡಿರದವನೂ ಆದವನು ಕೆಳಕ್ಕೆ ಹೋಗುತ್ತಾನೆ. ಕೆಳಗೆ ಹೋಗುವವನಿಗೆ ಮೂರು ಗತಿಗಳು; ಅಂಥ ಜೀವನು ಪಶು ಅಥವಾ ಪಕ್ಷಿ ಆಗಬಹುದು, ನರಕಕ್ಕೆ ಹೋಗಬಹುದು ಅಥವಾ ತಮಸ್ಸಿಗೆ ಹೋಗಬಹುದು. ಮೊದಲಿನ ಎರಡು ಸ್ವಲ್ಪ ಸುಖದಿಂದ ಕೂಡಿರುವುವು; ತಮಸ್ಸು ಸುಖದಿಂದ ಕೂಡಿರುವುದೇ ಇಲ್ಲ, ಅಲ್ಲಿ ಬರೇ ದುಃಖವೇ ಇರುವುದು—ಎಂದು ಶ್ರುತಿ ಇದೆ.]

ಓಂ ಸ್ಮರ್ಯತೇಽಪಿ ಚ ಲೋಕೇ ಓಂ 20

ಮತ್ತೆ ಅದು ಸ್ಮೃತಿಯಲ್ಲಿಯೂ ಲೋಕದಲ್ಲಿಯೂ ಹೇಳಲ್ಪಟ್ಟಿದೆ.

["ತಿರ್ಯಕ್ಷು ನರಕೇ ಚೈವ ಸುಖಲೇಶೋ ವಿಧೀಯತೇ । ನಾಂಧೇ ತಮಸಿ ಮಗ್ನಾನಾಂ ಸುಖಲೇಶೋಽಪಿ ಕಶ್ಚನ"—ಮನುಷ್ಯೇತರ ಪ್ರಾಣಿವರ್ಗದಲ್ಲಿಯೂ, ನರಕದಲ್ಲಿಯೂ ಅಲ್ಪ ಸುಖ ಹೇಳಲ್ಪಟ್ಟಿದೆ; ಆದರೆ ಅಂಧಂ-

ತಮಸ್ಸಿನಲ್ಲಿ ಯಾವ ಅಲ್ಪಸುಖವೂ ಇರದು—ಎಂದು ಭವಿಷ್ಯತ್ಪರ್ವದಲ್ಲಿದೆ. ಇದು ಲೋಕಪ್ರಸಿದ್ಧವೂ ಕೂಡ. "ತನಗೆ ಅತಿಪ್ರಿಯನಾದವನ ವಿಷಯದಲ್ಲಿ ರಾಜನು ಸ್ವಲ್ಪ ದುಃಖವನ್ನೂ ಸಹಿಸುವುದಿಲ್ಲ. ಹಾಗೆಯೇ ತನ್ನನ್ನು ದ್ವೇಷಿಸುವವನ ವಿಷಯದಲ್ಲಿ ಪರಮಾತ್ಮ ಸ್ವಲ್ಪ ಸುಖವನ್ನೂ ಸಹಿಸುವುದಿಲ್ಲ" ಎಂದು ಬ್ರಾಹ್ಮಪುರಾಣ.]

ಓಂ ದರ್ಶನಾಚ್ಚ ಓಂ 21

ಹಾಗೆ ಕಂಡುಬರುವುದರಿಂದಲೂ.

[ಪದ್ಮಪುರಾಣದಲ್ಲಿ "ಚತುರ್ಮುಖ ಬ್ರಹ್ಮನು ನಾರಾಯಣನ ಅನುಗ್ರಹ ದಿಂದ ದಿವ್ಯದೃಷ್ಟಿ ಪಡೆದನು. (1) ಯಾವ ಸುಖವನ್ನೂ ಕಾಣದೆ ಅತ್ಯಂತ ದುಃಖದಲ್ಲಿ ಮುಳುಗಿರುವವರನ್ನೂ (2) ನಿತ್ಯವೂ ಸುಖದುಃಖಗಳ ಮಿಶ್ರ ಅನುಭವ ಪಡೆಯುವ ಅನೇಕರನ್ನೂ (3) ಸರ್ವದೋಷರಹಿತರಾಗಿ ನಿತ್ಯಾ-ನಂದಮಯ ದೇಹವುಳ್ಳ ಮುಕ್ತರನ್ನೂ ಸಾಕ್ಷಾತ್ತಾಗಿ ನೋಡಿದನು" ಎಂದು ಹೇಳಿದೆ.]

ಓಂ ತೃತೀಯೇ ಶಬ್ದಾವರೋಧಃ ಸಂಶೋಕಜಸ್ಯ ಓಂ 22

ಮೂರನೆಯದಾದ ತಮಸ್ಸಿನ ಹೆಸರನ್ನು ಕೇಳಿಯೇ ವಿಶೇಷ ದುಃಖ ದಿಂದ ಹುಟ್ಟುವ ಮೂರ್ಛೆ ಪ್ರಾಪ್ತವಾಗುವುದು.

ಓಂ ಸ್ಮರಣಾಚ್ಚ ಓಂ 23

ಸ್ಮೃತಿ ಇರುವುದರಿಂದಲೂ ಇದನ್ನು ತಿಳಿಯಬಹುದು.

["ಮಹಾತಮಸ್ತ್ರಿಧಾ ಪ್ರೋಕ್ತಮೂರ್ಧ್ವಂ ಮಧ್ಯಂ ತಥಾಽಧರಮ್ । ಶ್ರವಣೇನೈವ ಮೂರ್ಛಾದಿರಧರಸ್ಯ ಯತೋ ಭವೇತ್ । ತಸ್ಮಾನ್ನ ವಿಸ್ತರೇಣೈತತ್ ಕಥ್ಯತೇ ರಾಜಸತ್ತಮ"—ಅಂಧಕಾರಮಯವಾದ ಮಹಾ ತಮಸ್ಸು ಮೂರು ಬಗೆಯಾಗಿದೆ, ಮೇಲಿನದು, ಮಧ್ಯದ್ದು, ಕೆಳಗಿನದು ಎಂದು; ಕೆಳಗಿನ ತಮಸ್ಸಿನ ಹೆಸರನ್ನು ಕೇಳಿದರೇ ಮೂರ್ಛಾದಿ ಅಪಾಯಗಳು ಬರುವುದರಿಂದ, ಅದನ್ನು ವಿಸ್ತಾರವಾಗಿ ಹೇಳುವುದಿಲ್ಲ—ಎಂದು ಕೂರ್ಮ ಪುರಾಣ.]

ಓಂ ತತ್ಸ್ವಾಭಾವ್ಯಾಪತ್ತಿಃ, ಉಪಪತ್ತೇಃ ಓಂ 24

ಆಯಾ ಸ್ವಭಾವ ಪಡೆಯುವುದು, ಅದು ಯುಕ್ತವಾಗಿರುವುದರಿಂದ.

[“ವಾಯುರ್ಭೂತ್ವಾ ಧೂಮೋ ಭವತಿ” ಎಂಬ ಛಾಂದೋಗ್ಯವಾಕ್ಯದಿಂದ ಧೂಮತ್ವವನ್ನು ಪಡೆಯುತ್ತಾನೆ, ಎಂದು ಅರ್ಥ ಮಾಡಬಾರದು. ಲಕ್ಷಣಾವೃತ್ತಿಯಿಂದ ಧೂಮಸದೃಶ ಸ್ವಭಾವವನ್ನು ಹೊಂದುತ್ತಾನೆ, ಎಂದು ತಿಳಿಯಬೇಕು ; ಧೂಮಾದಿದೇವತೆಗಳೊಡನೆ ಐಕ್ಯವನ್ನಲ್ಲ, ಅವುಗಳ ಸ್ಥಾನವನ್ನು ಪಡೆಯುವುದೂ ಅಲ್ಲ. ಒಂದು ಪದಾರ್ಥ ಇನ್ನೊಂದು ಪದಾರ್ಥವಾಗಲಾರದು. ಧೂಮಾದಿಗಳಲ್ಲಿ ಪ್ರವೇಶಿಸಿ ಅವುಗಳೊಡನೆಯೇ ಗತಿ ಮತ್ತು ಸ್ಥಿತಿಗಳನ್ನು ಪಡೆಯುತ್ತಾನೆ, ಎಂದೇ ತಾತ್ಪರ್ಯ.]

ಓಂ ನಾತಿಚಿರೇಣ, ವಿಶೇಷಾತ್ ಓಂ 25

ಕರ್ಮ ಮಾಡಿದವನು ಅಲ್ಲಿ ಬಹುಕಾಲವಿರುವುದಿಲ್ಲ, ವಿಶೇಷವಿರುವುದರಿಂದ.

[ಆಕಾಶ, ವಾಯು, ಧೂಮ ಮೊದಲಾದವುಗಳ ಸ್ವಭಾವವನ್ನು—ಗತಿಸ್ಥಿತಿಗಳಲ್ಲಿ—ಹೊಂದಿ, ಜೀವ ಅಲ್ಲಿ ಬಹುಕಾಲ ಇರುವನೋ, ಬೇಗ ಮುಂದೆ ಸರಿಯುವನೋ, ಎಂದು ಸಂದೇಹ ಬರುವುದು. ಅದಕ್ಕೆ ಉತ್ತರವಾಗಿ ಈ ಸೂತ್ರ, “ಸ್ವಲ್ಪಕಾಲದಲ್ಲಿಯೇ ಅಲ್ಲಿಂದ ಮುಂದಕ್ಕೆ ಸರಿಯುವನು” ಎಂದು ತಿಳಿಸುತ್ತದೆ. ಛಾಂದೋಗ್ಯದಲ್ಲಿ “ಯಾರು ರಮಣೀಯವಾದ ಆಚಾರವುಳ್ಳವರೋ ಅವರು ಶುಭಯೋನಿಗಳನ್ನು ಶೀಘ್ರದಲ್ಲಿಯೇ ಪಡೆಯುವರು” ಎಂದು ವಿಶೇಷವಾಗಿ ಹೇಳಿರುವುದು ಇದನ್ನು ಸಮರ್ಥಿಸುತ್ತದೆ. ನಾರದ ಪುರಾಣದಲ್ಲಿ “ಸ್ವರ್ಗಾಲ್ಲೋಕಾದವಾಕ್ ಪ್ರಾಪ್ತೋ ವತ್ಸರಾತ್ಪೂರ್ವಮೇವ ತು । ಮಾತುಃ ಶರೀರಮಾಪ್ನೋತಿ ಪರ್ಯಟನ್ಯತ್ರ ತತ್ರ ಚ”—ಸ್ವರ್ಗದಿಂದ ಹಿಂದಿರುಗಿದ ಜೀವ ವರ್ಷ ಮುಗಿಯುವುದರೊಳಗೇ ಅಲ್ಲಲ್ಲಿ ಸುತ್ತಾಡಿ ಮತ್ತೆ ತಾಯಿಯ ಶರೀರವನ್ನೇ ಪ್ರವೇಶಿಸುತ್ತಾನೆ—ಎಂದು ಹೇಳಿದೆ.]

ಓಂ ಅನ್ಯಾಧಿಷ್ಠಿತೇ ಪೂರ್ವವದಭಿಲಾಪಾತ್ ಓಂ 26

ಅನ್ಯರು ಸೇರಿರುವ ವ್ರೀಹ್ಯಾದಿ ಶರೀರಗಳಲ್ಲಿ ಹಿಂದೆ ಹೇಳಿದಂತೆ ಪ್ರವೇಶಿಸುತ್ತಾರೆ ; ಹಾಗೆ ಹೇಳಿರುವುದರಿಂದ.

[ಛಾಂದೋಗ್ಯದಲ್ಲಿ "ತ ಇಹ ವ್ರೀಹಿಯವಾ, ಓಷಧಿವನಸ್ಪತಯಸ್ತಿಲ-ಮಾಷಾ ಇತಿ ಜಾಯಂತೇ"—ಕರ್ಮದ ಫಲವನ್ನು ಅನುಭವಿಸಿ ಸ್ವರ್ಗದಿಂದ ಹಿಂದಿರುಗಿದವರು ಬತ್ತ, ಗೋಧಿ, ಓಷಧಿವನಸ್ಪತಿಗಳು, ಎಳ್ಳು, ಉದ್ದುಗಳ ಪೈರುಗಳಾಗಿ ಹುಟ್ಟುತ್ತಾರೆ—ಎಂದಿದೆ. ಇತರ ಜೀವರೊಂದಿಗೆ ಅವರು ಸ್ಥಾವರಗಳ ಜೊತೆಯಲ್ಲಿ ಸೇರಿಕೊಳ್ಳುತ್ತಾರೆ, ಎಂದು ಇದರ ಅರ್ಥ; ಆದರೆ ಅಲ್ಲಿ ಅವರಿಗೆ ಸ್ಥೂಲಶರೀರವಿರುವುದಿಲ್ಲ, ಆದುದರಿಂದ ಯಾವ ಭೋಗವೂ ಇರುವುದಿಲ್ಲ, ಎಂದು ಔಪಚಾರಿಕಶ್ರುತಿ ಹೇಳುತ್ತದೆ. ಕಾಲಾಂತರದಲ್ಲಿ ತಾಯಿಯ ಗರ್ಭವನ್ನು ಹೊಕ್ಕು ಜೀವ ಶರೀರವನ್ನು ಪಡೆಯುತ್ತಾನೆ.]

ಓಂ ಅಶುದ್ಧಮಿತಿ ಚೇನ್ನ, ಶಬ್ದಾತ್ ಓಂ 27

(ಯಜ್ಞಕಾರ್ಯ) ಅಶುದ್ಧವೆನ್ನುವುದು ಸರಿಯಲ್ಲ, ಶ್ರುತಿ ಇರುವುದರಿಂದ.

["ಹಿಂಸಾರೂಪವಾದ ಯಜ್ಞದಿಂದ ಪಾಪ ಬರುವುದು, ಅದರಿಂದ ದುಃಖ ಪ್ರಾಪ್ತಿಯಾಗುವುದು" ಎಂದು ಹೇಳಬಾರದು. "ಜ್ಯೋತಿ-ಷ್ಟೋಮೇನ ಸ್ವರ್ಗಕಾಮೋ ಯಜೇತ"—ಸ್ವರ್ಗವನ್ನು ಅಪೇಕ್ಷಿಸುವವನು ಜ್ಯೋತಿಷ್ಟೋಮದಿಂದ ಯಜ್ಞ ಮಾಡಬೇಕು—ಎಂದು ಶ್ರುತಿ ವಿಧಿಸಿದೆ. ವರಾಹಪುರಾಣದಲ್ಲಿ "ಹಿಂಸಾ ತ್ವವೈದಿಕಾ ಯಾ ತು ತಯಾsನರ್ಥೋ ಧ್ರುವಂ ಭವೇತ್ । ವೇದೋಕ್ತಯಾ ಹಿಂಸಯಾ ತು ನೈವಾನರ್ಥಃ ಕಥಂಚನ"—ಅವೈದಿಕವಾದ ಹಿಂಸೆಯಿಂದ ನಿಶ್ಚಯವಾಗಿಯೂ ಅನರ್ಥವಾಗುವುದು, ಆದರೆ ವೇದಗಳು ಹೇಳಿರುವ ಹಿಂಸೆಯಿಂದ ಯಾವ ಬಗೆಯ ಅನರ್ಥವೂ ಆಗದು—ಎಂದು ಸ್ಪಷ್ಟವಾಗಿ ತಿಳಿಸಲಾಗಿದೆ.]

ಓಂ ರೇತಃಸಿಗ್ಯೋಗೋsಥ ಓಂ 28

ಅನಂತರ ರೇತಃಸೇಚನೆ ಮಾಡುವವನೊಡನೆ ಸೇರಿಕೊಳ್ಳುತ್ತಾನೆ.

["ಸ್ವರ್ಗಾದವಾಗ್ಗತಶ್ಚಾಪಿ ಮಾತುರೇವೋದರಂ ವ್ರಜೇತ್"—ಸ್ವರ್ಗದಿಂದ ಕೆಳಗಿಳಿದವನು ತಾಯಿಯ ಹೊಟ್ಟೆಯೊಳಗೇ ಹೋಗುವನು—ಎಂಬ ವಾಕ್ಯವಿದೆ. ಹಾಗೆಯೇ "ಯ ಏವ ಗೃಹೀ ಭವತಿ, ಯೋ ವಾ ರೇತಃ ಸಿಂಚತಿ, ತಮೇವಾನುವಿಶತಿ—ಯಾವ ಗೃಹಸ್ಥನು ತನ್ನ ರೇತಸ್ಸನ್ನು ಸಿಂಪಡಿಸುತ್ತಾನೆಯೋ ಅವನ ದೇಹವನ್ನೇ ಪ್ರವೇಶಿಸುವನು—ಎಂದೂ ಹೇಳಿದೆ.

ಇವೆರಡೂ ಪರಸ್ಪರ ವಿರುದ್ಧವೇ ? "ತಂದೆಯೊಡನೆಯೇ ಜೀವ ಸೇರಿಕೊಳ್ಳುತ್ತಾನೆ" ಎಂದು ಸೂತ್ರ ಹೇಳುತ್ತದೆ. ತಂದೆಯ ಶರೀರದಿಂದ ರೇತಸ್ಸಿನ ಮೂಲಕ ಮುಂದೆ ತಾಯಿಯ ಶರೀರವನ್ನು ಪ್ರವೇಶಿಸುತ್ತಾನೆ, ಎಂದು ವಿರೋಧದ ಪರಿಹಾರವನ್ನು ಮಾಡಿಕೊಳ್ಳಬೇಕು.]

ಓಂ ಯೋನೇಃ ಶರೀರಮ್ ಓಂ 29

ಯೋನಿಯೊಳಗೆ ಪ್ರವೇಶ ಮಾಡಿದ ಮೇಲೆಯೇ ಜೀವನಿಗೆ ಶರೀರಪ್ರಾಪ್ತಿ.

[ಪಿತೃಶರೀರದಿಂದ ರೇತಸ್ಸಿನ ಮೂಲಕ ತಾಯಿಯ ಶರೀರವನ್ನು ಪ್ರವೇಶ ಮಾಡಿದ ಮೇಲೆ ಜೀವನಿಗೆ ಹೊಸ ದೇಹ ಬರುತ್ತದೆ. ಶರೀರವನ್ನು ಪಡೆದ ಮೇಲೆಯೇ ಸುಖದುಃಖಗಳ ಅನುಭವವಾಗುತ್ತದೆ. ಇದು ಸಾಮಾನ್ಯ ರೀತಿಯ ಉತ್ಪತ್ತಿ; ವಿಶೇಷ ರೀತಿಯ ಹುಟ್ಟೂ ಇದೆಯೆಂದು ಭಾಷ್ಯಕಾರರು ಪ್ರತಿಪಾದಿಸಿದ್ದಾರೆ: "ದಿವ್ಯಃ ಸ್ಥಾಸ್ನೂನ್ ಗಚ್ಛತಿ ಸ್ಥಾಸ್ನುಭ್ಯಃ ಪಿತರಂ, ಪಿತುರ್ಮಾತರಂ, ಮಾತುಃ ಶರೀರಂ, ಶರೀರೇಣ ಜಾಯತೇ, ಇತಿ ಸಮ್ಮಿತಮ್। ಅಥಾಸಮ್ಮಿತಮ್ ಸ್ಥಾಸ್ನುಭ್ಯೋ ಜಾಯತೇ ಪಿತುರ್ಮಾತುರಂತರೇ ವಾ, ಗರ್ಭೇ ವಾ ಬಹಿರ್ವಾ"—ಸ್ವರ್ಗದಿಂದ ಇಳಿದ ಜೀವ ಸ್ಥಾವರವಾದ ಪೈರುಗಳನ್ನು ಸೇರುತ್ತಾನೆ; ಪೈರುಗಳಿಂದ ಅನ್ನರೂಪದಲ್ಲಿ ತಂದೆಯನ್ನೂ, ತಂದೆಯಿಂದ ರೇತೋರೂಪದಲ್ಲಿ ತಾಯಿಯನ್ನೂ ಸೇರಿಕೊಳ್ಳುತ್ತಾನೆ; ತಾಯಿಯಿಂದ ಶರೀರ ಪಡೆದು ಆ ಶರೀರದೊಡನೆಯೇ ಹುಟ್ಟುತ್ತಾನೆ; ಇದು ಸಾಮಾನ್ಯ ರೀತಿಯ ಜನನ, ವಿಶೇಷ ರೀತಿಯ ಜನನದಲ್ಲಿ ಸ್ಥಾವರದಿಂದ ತಂದೆ ಅಥವಾ ತಾಯಿಯೊಳಗೆ, ಮುಂದೆ ಗರ್ಭದಲ್ಲಿಯೋ ಹೊರಗೋ ಸೇರಿಕೊಳ್ಳುತ್ತಾನೆ—ಎಂದು ಹೇಳುವ ಪೌಷ್ಯಾಯಣಶ್ರುತಿ ಆಚಾರ್ಯರ ಅಭಿಪ್ರಾಯವನ್ನು ಸಮರ್ಥಿಸುತ್ತದೆ. ಶುಕಾದಿಗಳ ಜನನವೂ ವಿಶೇಷ ರೀತಿಯದು.

ಇಲ್ಲಿಗೆ ಬ್ರಹ್ಮಸೂತ್ರಗಳ ಮೂರನೆಯ ಅಧ್ಯಾಯದ ಮೊದಲನೆಯ ಪಾದ ಮುಗಿಯಿತು.

ಎರಡನೆಯ ಪಾದ

ಈ ಪಾದದಲ್ಲಿ ಭಕ್ತಿಯ ವಿಷಯವನ್ನು ಹೇಳಿದೆ; ಅದಕ್ಕಾಗಿ ಭಗವಂತನ ಮಹಿಮೆಯನ್ನು ಮೊದಲು ತಿಳಿಸಲಾಗಿದೆ.

ಓಂ ಸಂಧ್ಯೇ ಸೃಷ್ಟಿರಾಹ ಹಿ ಓಂ 1

ಸಂಧಿಸ್ಥಾನವಾದ ಸ್ವಪ್ನದಲ್ಲಿ ಸೃಷ್ಟಿಯಿದೆ, ಎಂದು ಶ್ರುತಿ ಹೇಳುತ್ತದೆ.

[ಎಚ್ಚರವಾಗಿರುವುದು ಜಾಗ್ರದವಸ್ಥೆ, ನಿದ್ರೆಯೆಂಬುದು ಸುಷುಪ್ತಿ; ಇವೆರಡರ ನಡುವೆ ಮೂರನೆಯದಾದ ಸ್ವಪ್ನವೆಂಬ ಸಂಧಿರೂಪದ ಅವಸ್ಥೆ ಇರುವುದು. "ನ ತತ್ರ ರಥಾ ನ ರಥಯೋಗಾ ನ ಪಂಥಾನೋ ಭವಂತ್ಯಥ ರಥಾನ್ರಥಯೋಗಾನ್ಪಥಃ ಸೃಜತೇ"—ಅಲ್ಲಿ ರಥಗಳಿಲ್ಲ, ಅವಕ್ಕೆ ಹೂಡುವ ಕುದುರೆಗಳೂ ಇಲ್ಲ, ಹೋಗಬೇಕಾಗಿರುವ ದಾರಿಯೂ ಇರುವುದಿಲ್ಲ; ಆಮೇಲೆ ಅವನು ರಥಗಳನ್ನೂ ಕುದುರೆಗಳನ್ನೂ ರಸ್ತೆಗಳನ್ನೂ ಹುಟ್ಟಿಸಿ ಕೊಳ್ಳುತ್ತಾನೆ"—ಎಂದು ಬೃಹದಾರಣ್ಯಕಶ್ರುತಿ ಹೇಳುತ್ತದೆ. ಆ ಸೃಷ್ಟಿ ಮಾಯೆಯೋ, ಪಾರಮಾರ್ಥಿಕಸತ್ಯವೋ? ಆ ಸೃಷ್ಟಿ ಸತ್ಯವಾದುದು, ಪರಮಾತ್ಮನಿಂದ ಕಲ್ಪಿತವಾದುದು, ಎಂದು ಸೂತ್ರದ ಅಭಿಪ್ರಾಯ. ಸ್ವಪ್ನವೂ ಪರಮಾತ್ಮನಿಂದಲೇ ಆಗುವುದು, ಎಂದು ಭಾಷ್ಯಕಾರರು ಹೇಳಿದ್ದಾರೆ.]

ಓಂ ನಿರ್ಮಾತಾರಂ ಚೈಕೇ, ಪುತ್ರಾದಯಶ್ಚ ಓಂ 2

ಕೆಲವರು ಅವನನ್ನೇ ನಿರ್ಮಾತೃವೆನ್ನುತ್ತಾರೆ, ಪುತ್ರಾದಿಗಳೇ ಕಾಮಗಳು.

["ಯ ಏಷ ಸುಪ್ತೇಷು ಜಾಗರ್ತಿ, ಕಾಮಂ ಕಾಮಂ ಪುರುಷೋ ನಿರ್ಮಿಮಾಣಃ"—ಯಾವ ಈ ಪುರುಷನಿದ್ದಾನೆಯೋ ಅವನು ಬೇರೆ ಬೇರೆ ಕಾಮಗಳನ್ನು ಸೃಷ್ಟಿ ಮಾಡುತ್ತಾ ಜೀವ ಮಲಗಿರುವಾಗ ತಾನು ಎಚ್ಚೆತ್ತಿರುತ್ತಾನೆ—ಎಂಬ ಕಠಶ್ರುತಿಯ ವಾಕ್ಯದಿಂದ ಪರಮಾತ್ಮನೇ ಸ್ವಪ್ನಸೃಷ್ಟಿ ಮಾಡುವವನು, ಎಂದು ತಿಳಿದುಬರುವುದು. "ಯಾನಿ ಹ್ಯೇವ ಜಾಗ್ರತ್ ಪಶ್ಯತಿ, ತಾನಿ ಸುಪ್ತಃ"—ಎಚ್ಚೆತ್ತಿರುವವನು ಏನನ್ನು ನೋಡುತ್ತಾನೆಯೋ ಅದನ್ನೇ ಅವನು ಸ್ವಪ್ನದಲ್ಲಿಯೂ ನೋಡುತ್ತಾನೆ—ಎಂದು ಬೃಹದಾರಣ್ಯಕದಲ್ಲಿ ಹೇಳಿರುವುದರಿಂದ ಸ್ವಪ್ನದಲ್ಲಿ ನೋಡುವುದು ಸತ್ಯವೆಂದಾಗುವುದು.]

ಓಂ ಮಾಯಾಮಾತ್ರಂ ತು ಕಾರ್ತ್ಸ್ನ್ಯೇನಾನಭಿವ್ಯಕ್ತಸ್ವರೂಪತ್ವಾತ್ ಓಂ 3

ಸ್ವಪ್ನ ಮಾಯಾಮಾತ್ರವಾಗಿ ತೋರುವುದು ಪೂರ್ಣವಾಗಿ ಅಭಿವ್ಯಕ್ತವಾದ ಸ್ವರೂಪವಿಲ್ಲದಿರುವುದರಿಂದ.

[ಸ್ವಪ್ನ ತೋರಿಬರಲು ಸಾಧನವೇನು ? ಜೀವನ ಮನಸ್ಸಿನಲ್ಲಿರುವ ಸಂಸ್ಕಾರಗಳನ್ನೇ ತನ್ನ ಇಚ್ಛೆಯಿಂದ ಪರಮಾತ್ಮ ತೋರಿಸುತ್ತಾನೆ, ಬೇರೆ ಸಾಧನವೇನೂ ಇಲ್ಲ, ಏಕೆಂದರೆ ಇಂಥ ಸ್ವಪ್ನಸೃಷ್ಟಿಗೆ ಅಭಿವ್ಯಕ್ತಿ ಇರುವುದಿಲ್ಲ. ಪೂರ್ವಾನುಭವಸಂಸ್ಕಾರ ಸ್ವಪ್ನಕ್ಕೆ ಉಪಾದಾನಕಾರಣ ; ಈಶ್ವರೇಚ್ಛೆ ನಿಮಿತ್ತಕಾರಣ. ಗಡಿಗೆ ಮಾಡಲು ಮಣ್ಣು ಉಪಾದಾನಕಾರಣ, ಕುಂಬಾರ ನಿಮಿತ್ತಕಾರಣ, ಆಗಿರುವಂತೆ.]

ಓಂ ಸೂಚಕಶ್ಚ, ಹಿ ಶ್ರುತೇಃ, ಆಚಕ್ಷತೇ ಚ ತದ್ವಿದಃ ಓಂ 4

ಸ್ವಪ್ನ ಭವಿಷ್ಯದ ಸೂಚಕವೂ ಆಗುವುದು. ಶ್ರುತಿಯಿಂದಲೂ, ಅದನ್ನು ತಿಳಿದವರು ಹೇಳುವುದರಿಂದಲೂ.

[ಸಾಧನಗಳಿರದಿದ್ದರೂ ಭಾವಾಭಾವ ಸೂಚಕವಾದ ಸ್ವಪ್ನಗಳನ್ನು ಪರಮಾತ್ಮ ತೋರಿಸುತ್ತಾನೆ. "ಯದಾ ಕರ್ಮಸು ಕಾಮ್ಯೇಷು ಸ್ತ್ರಿಯಂ ಸ್ವಪ್ನೇಽಭಿಪಶ್ಯತಿ । ಸಮೃದ್ಧಿಂ ತತ್ರ ಜಾನೀಯಾತ್ ತಸ್ಮಿನ್ ಸ್ವಪ್ನ-ನಿದರ್ಶನೇ"—ಕಾಮ್ಯಕರ್ಮಗಳನ್ನು ಮಾಡುವಾಗ ಸ್ತ್ರೀಯನ್ನು ಸ್ವಪ್ನದಲ್ಲಿ ನೋಡಿದರೆ ಸಮೃದ್ಧಿಯುಂಟಾಗುವುದೆಂದು ತಿಳಿಯಬೇಕು—ಎಂದು ಛಾಂದೋಗ್ಯಶ್ರುತಿ ಇದೆ. ಸ್ವಪ್ನದ ವಿಷಯವನ್ನು ಬಲ್ಲ ವ್ಯಾಸಾದಿಗಳು "ಸ್ವಪ್ನದಲ್ಲಿ ಬ್ರಾಹ್ಮಣಾದಿಗಳು ಹೇಳುವಂತೆಯೇ ಆಗುವುದು" ಎನ್ನುತ್ತಾರೆ.]

ಓಂ ಪರಾಭಿಧ್ಯಾನಾತ್ತು ತಿರೋಹಿತಂ, ತತೋ ಹ್ಯಸ್ಯ ಬಂಧವಿಪರ್ಯಯೌ ಓಂ 5

ಪರಮಾತ್ಮನ ಧ್ಯಾನದಿಂದಲೇ ಸ್ವಪ್ನ ಮರೆಯಾಗುತ್ತದೆ. ಅವನಿಂದಲೇ ಜೀವನ ಬಂಧಮೋಕ್ಷಗಳಾಗುವುವಷ್ಟೆ.

["ಸ್ವಪ್ನಾದಿಬುದ್ಧಿಕರ್ತಾ ಚ ತಿರಸ್ಕರ್ತಾ ಸ ಏವ ಚ । ತದಿಚ್ಛಯಾ ಯತೋ ಹ್ಯಸ್ಯ ಬಂಧಮೋಕ್ಷೌ ಪ್ರತಿಷ್ಠಿತೌ"—ಯಾವನು ಸ್ವಪ್ನ ಮೊದಲಾದ ತಿಳಿವಳಿಕೆಯುಂಟು ಮಾಡುವನೋ, ಅವನ್ನು ಸರಿಸಿ ಮರೆಮಾಡುವವನೂ ಅವನೇ ; ಅವನ ಇಚ್ಛೆಯಿಂದಲೇ ಜೀವನಿಗೆ ಬಂಧಮೋಕ್ಷಗಳಾಗುವುವು—ಎಂದು ಕೂರ್ಮಪುರಾಣ ಹೇಳುತ್ತದೆ. ಆದುದರಿಂದ ಈಶ್ವರೇಚ್ಛೆಯಿಂದಲೇ ಸ್ವಪ್ನ ತಿರೋಹಿತವಾಗುತ್ತದೆ (ಮರೆಯಾಗುತ್ತದೆ).]

ಓಂ ದೇಹಯೋಗಾದ್ವಾ ಸೋಽಪಿ ಓಂ 6

ದೇಹಸಂಬಂಧದಿಂದ ಸ್ಥಿತಿಯೂ — ಜಾಗ್ರದವಸ್ಥೆಯೂ — ಭಗವಂತನಿಂದಲೇ.

[ಜಾಗ್ರತ್ಸ್ವಪ್ನಾವಸ್ಥೆಗಳೆರಡರಲ್ಲಿಯೂ ಜೀವನನ್ನು ಇಡಲು ಭಗವಂತನೇ ಸಮರ್ಥ;"ಸ ಏವ ಜಾಗರಿತೇ ಸ್ಥಾಪಯತಿ, ಸ ಸ್ವಪ್ನೇ, ಸ ಪ್ರಭುಸ್ತುರಾಷಾಟ್, ಸ ಏಕೋ ಬಹುಧಾ ಭವತಿ" ಎಂದು ಕೌಂತರವ್ಯಶ್ರುತಿ ತಿಳಿಸುತ್ತದೆ.]

ಓಂ ತದಭಾವೋ ನಾಡೀಷು ತಚ್ಛ್ರುತೇರಾತ್ಮನಿ ಹ ಓಂ 7

ಜಾಗ್ರತ್ಸ್ವಪ್ನಾವಸ್ಥೆಗಳ ಅಭಾವ ನಾಡಿಗಳಲ್ಲಿರುವ ಪರಮಾತ್ಮನಲ್ಲಿ ಆಗುವುದು. ಹಾಗೆ ಶ್ರುತಿ ಇದೆ.

[ಜಾಗ್ರದವಸ್ಥೆ ಮತ್ತು ಸ್ವಪ್ನ ಎರಡೂ ಅಲ್ಲದ ಸುಷುಪ್ತಿ—ಸುಖ ನಿದ್ರೆ—ಎಂಬ ಪರಿಸ್ಥಿತಿ ನಾಡಿಗಳಲ್ಲಿರುವ ಪರಮಾತ್ಮನಲ್ಲಿ ಸಂಭವಿಸುತ್ತದೆ. ಛಾಂದೋಗ್ಯಶ್ರುತಿ "ಯತ್ರೈತತ್ಪುರುಷಃ ಸ್ವಪಿತಿ ನಾಮ ಸತಾ ಸೋಮ್ಯ, ತದಾ ಸಂಪನ್ನೋ ಭವತಿ"—ಎಂದು ಸುಷುಪ್ತ್ಯವಸ್ಥೆಯಲ್ಲಿ ಜೀವ ಪರಮಾತ್ಮನೊಡನೆ ಕೂಡಿಕೊಂಡಿರುವುದನ್ನು ತಿಳಿಸುತ್ತದೆ.]

ಓಂ ಅತಃ ಪ್ರಬೋಧೋಽಸ್ಮಾತ್ ಓಂ 8

ಆದುದರಿಂದ ಎಚ್ಚರಗೊಳ್ಳುವುದೂ ಆ ಪರಮಾತ್ಮನಿಂದಲೇ.

[ಪರಮಾತ್ಮನಲ್ಲಿಯೇ ಜೀವ ಪ್ರಸುಪ್ತನಾಗುವುದರಿಂದ ಅವನಿಂದಲೇ ಎಚ್ಚರ ಹೊಂದುತ್ತಾನೆ. ಕೌಂಡಿನ್ಯಶ್ರುತಿ ಈ ಮಾತನ್ನು ಸ್ಪಷ್ಟಪಡಿಸುತ್ತದೆ: "ಏಷ ಏವ ಸುಪ್ತಂ ಪ್ರಬೋಧಯತಿ"—ಇವನೇ ಮಲಗಿದ್ದವನನ್ನು ಎಬ್ಬಿಸುತ್ತಾನೆ.]

ಓಂ ಸ ಏವ ಚ ಕರ್ಮಾನುಸ್ಮೃತಿಶಬ್ದ- ವಿಧಿಭ್ಯಃ ಓಂ 9

ಕರ್ಮ, ಅನುಸ್ಮೃತಿ. ಶಬ್ದ ಮತ್ತು ವಿಧಿಗಳಿಂದ ಅವನೇ.

[ಪರಮಾತ್ಮನೇ ಜೀವನ ಎಲ್ಲ ಅವಸ್ಥೆಗಳಿಗೂ ಕಾರಣ. ಕೆಲವರಿಗೆ ಮಾತ್ರ ಅವನು ಸ್ವಪ್ನ ತೋರಿಸುವನು, ಎಲ್ಲರಿಗೂ ಅಲ್ಲ, ಎಂಬುದು

ಸರಿಯಲ್ಲ. "ಏಷ ಹ್ಯೇವ ಸಾಧುಕರ್ಮ ಕಾರಯತಿ, ಏಷ ಉ ಏವಾಸಾಧು-ಕರ್ಮ ಕಾರಯತಿ"—ಇವನೇ ಸತ್ಕಾರ್ಯಗಳನ್ನು ಮಾಡಿಸುತ್ತಾನೆ, ಇವನೇ ಅಸಾಧುಕಾರ್ಯಗಳನ್ನೂ ಮಾಡಿಸುತ್ತಾನೆ—ಎಂದು ಕೌಷಿತಿಕೀಬ್ರಾಹ್ಮಣದಲ್ಲಿ ಹೇಳಿದೆ. ಅವನೇ ಎಲ್ಲ ಸ್ವಪ್ನಗಳಿಗೂ ಕಾರಣ, ಎಂದು ಸ್ಮೃತಿ ಇದೆ. "ಆತ್ಮಾನಮೇವ ಲೋಕಮುಪಾಸೀತ" ಎಂದು ಪರಮಾತ್ಮನ ಉಪಾಸನೆಗಾಗಿ ವಿಧಿಯೂ ಇದೆ.]

ಓಂ ಮುಗ್ಧೇಽರ್ಧಸಂಪತ್ತಿಃ, ಪರಿಶೇಷಾತ್ ಓಂ 10

ಮೋಹಾವಸ್ಥೆಯಲ್ಲಿ ಜೀವನಿಗೆ ಬ್ರಹ್ಮನೊಡನೆ ಅರ್ಧಪ್ರಾಪ್ತಿ, ಪರಿಶೇಷ ದಿಂದ ಇದು ತಿಳಿದುಬರುವುದು.

["ಹೃದಯಸ್ಥನಾದ ಈಶನಿಂದ ದೂರವಾಗಿರುವಾಗ ಜೀವ ಎಚ್ಚರದಿಂದ ಇರುತ್ತಾನೆ, ಸಮೀಪದಲ್ಲಿ ಇರುವಾಗ ಸ್ವಪ್ನಾವಸ್ಥೆಯಲ್ಲಿರುತ್ತಾನೆ, ಪರಮಾತ್ಮನಲ್ಲಿ ಲಯಹೊಂದಿದಾಗ ಸುಷುಪ್ತಿ ಪಡೆಯುತ್ತಾನೆ. ಈ ಮೂರು ಅವಸ್ಥೆಗಳನ್ನು ಬಿಟ್ಟರೆ ಮೂರ್ಛೆ ಎಂಬುದು ಪರಮಾತ್ಮನಲ್ಲಿ ಅರ್ಧಪ್ರವೇಶ ವೆಂಬ ಪರಿಶಿಷ್ಟ ಪರಿಸ್ಥಿತಿ. ಆ ಅವಸ್ಥೆಯಲ್ಲಿ ದುಃಖಮಾತ್ರವೇ ಇರುವುದ ರಿಂದ ಅದು ಅರ್ಧಪ್ರಾಪ್ತಿ" ಎಂದು ವರಾಹಪುರಾಣ ಹೇಳುತ್ತದೆ. "ಮೂರ್ಛೆ ಮತ್ತು ತಿಳಿವು, ಎರಡೂ ಯಾವಾತನಿಂದ ಆಗುವುವೋ ಅವನು ಪರಮಾನಂದ ಲಕ್ಷಣನಾದ ಪರಮೇಶ್ವರನೆಂದು ತಿಳಿಯಬೇಕು" ಎಂದು ಕೂರ್ಮಪುರಾಣ ಹೇಳುತ್ತದೆ.]

ಓಂ ನ ಸ್ಥಾನತೋಽಪಿ ಪರಸ್ಯೋಭಯಲಿಂಗಂ ಸರ್ವತ್ರ ಹಿ ಓಂ 11

ಸ್ಥಾನಭೇದದಿಂದಾದರೂ ಪರಮಾತ್ಮನಿಗೆ ಅನುಗ್ರಾಹ್ಯ-ಅನುಗ್ರಾಹಕ ಎಂಬ ಭೇದವಿಲ್ಲ. ಎಲ್ಲೆಡೆಯೂ ಅವನು ಪೂರ್ಣಗುಣಗಳುಳ್ಳವ ಮತ್ತು ಸರ್ವದೋಷವಿದೂರ.

[ಬೇರೆ ಬೇರೆ ಸ್ಥಾನಗಳಲ್ಲಿ ಪರಮಾತ್ಮನಿಗೆ ವಿಭಿನ್ನ ಸ್ವರೂಪಗಳಿಲ್ಲ. "ಸರ್ವೇಷು ಭೂತೇಷ್ವೇತಮೇವ ಬ್ರಹ್ಮೇತ್ಯಾಚಕ್ಷತೇ"—ಎಲ್ಲ ಭೂತ ಗಳಲ್ಲಿಯೂ ಈತನನ್ನೇ ಬ್ರಹ್ಮನೆಂದು ಕರೆಯುತ್ತಾರೆ—ಎಂದು ಶ್ರುತಿ ಇದೆ.]

ಓಂ ನ ಭೇದಾದಿತಿ ಚೇನ್ನ, ಪ್ರತ್ಯೇಕಮತದ್ವಚನಾತ್ ಓಂ 12

ಭೇದಶ್ರುತಿ ಇರುವುದರಿಂದ ಪರಮಾತ್ಮನಲ್ಲಿ ಅಭೇದವಿಲ್ಲ, ಎನ್ನಬಾರದು, ಏಕೆಂದರೆ ಹಾಗೆ ಅಭೇದವನ್ನು ತಿಳಿಸುವ ವಾಕ್ಯವಿದೆ.

["ವಿಶ್ವ, ತೈಜಸರು ಅಜ್ಞಾನಕ್ಕೆ ಕಾರಣವಾದ ಭ್ರಮೆಯಿಂದಲೂ ಭ್ರಾಂತಿಗೆ ಕಾರಣವಾದ ಅವಿದ್ಯೆಯಿಂದಲೂ ಬದ್ಧರಾಗಿದ್ದಾರೆ. ಪ್ರಾಜ್ಞ ನಾಮಕನು ಕಾರಣವಾಗಿರುವ ಸುಪ್ತಿಯಿಂದ ಬದ್ಧನಾಗಿದ್ದಾನೆ. ತುರಿಯಾವಸ್ಥೆಯಲ್ಲಿ ಇವೊಂದೂ ಇರುವುದಿಲ್ಲ" ಎಂಬ ಮಾಂಡೂಕ್ಯಕಾರಿಕೆಯಿಂದ ಪರಮಾತ್ಮನ ಈ ವಿವಿಧ ರೂಪಗಳಲ್ಲಿ ಭೇದವಿರುವುದು ಕಂಡುಬರುತ್ತದೆ; ಆದರೆ ಹೀಗೆಂದು ಹೇಳುವುದು ಸರಿಯಲ್ಲ. "ಏಷ ತ ಆತ್ಮಾ ಅಂತರ್ಯಾಮ್ಯ-ಮೃತಃ"—ಈ ಆತ್ಮ ನಿನ್ನಲ್ಲಿ ಅಂತರ್ಯಾಮಿಯಾಗಿರುವ ಅಮೃತ—ಎಂದು ಬೃಹದಾರಣ್ಯಕಶ್ರುತಿ ಹೇಳುತ್ತದೆ. ಅಲ್ಲಿಯೇ "ಇದಮಮೃತಂ, ಇದಂ ಬ್ರಹ್ಮ, ಇದಂ ಸರ್ವಂ"—ಇದು ಅಮೃತ, ಇದು ಬ್ರಹ್ಮ, ಇದು ಎಲ್ಲವೂ—ಎಂದೂ ಹೇಳಿರುವುದರಿಂದ ಈಶ್ವರನ ರೂಪಗಳಿಗೆಲ್ಲ ಅಭೇದವನ್ನು ಹೇಳಲಾಗಿದೆ.]

ಓಂ ಅಪಿ ಚೈವಮೇಕೇ ಓಂ 13

ಮತ್ತೆ ಕೆಲವರು ಹೀಗೆ ಪಠಿಸುತ್ತಾರೆ.

[ಹೀಗೆ ನಾನಾ ರೂಪಗಳಲ್ಲಿನ ಅಭೇದದಿಂದಲೂ ಅನಂತರೂಪತ್ವದಿಂದಲೂ ಕೆಲವು ಶಾಖೆಯುವರು ಪಠಿಸುತ್ತಾರೆ. ಪರಮಾತ್ಮನ ವಿವಿಧ ರೂಪಗಳಲ್ಲಿ ಭೇದವಿರದಿರದಿದ್ದರೂ ಸ್ಥಾನವಿಶೇಷ ಮತ್ತು ಐಶ್ವರ್ಯಯೋಗಗಳಿಂದ ಭೇದವನ್ನು ಹೇಳುತ್ತಾರೆ.]

ಓಂ ಅರೂಪವದೇವ ಹಿ, ತತ್ಪ್ರಧಾನತ್ವಾತ್ ಓಂ 14

ಬ್ರಹ್ಮ ರೂಪವಿಲ್ಲದವನೇ; ಅದಕ್ಕೇ ಪ್ರಾಧಾನ್ಯವಿದೆಯಷ್ಟೆ.

[ಬ್ರಹ್ಮನಿಗೆ ಆಕಾರವಿದೆಯೆಂದು ಕೆಲವು ಶ್ರುತಿಗಳೂ ಇಲ್ಲವೆಂದು ಇತರ ಶ್ರುತಿಗಳೂ ಹೇಳುತ್ತವೆ. ಆದರೆ ಬ್ರಹ್ಮನಿಗೆ ಪ್ರಾಕೃತರೂಪವಿಲ್ಲ, ಅವನು

ಪ್ರಕೃತಿ ಮೊದಲಾದವುಗಳಿಗೆ ಪ್ರವರ್ತಕನಾಗಿದ್ದು ಅವುಗಳಿಗಿಂತ ಉತ್ತಮನಾಗಿದ್ದಾನೆ. 'ಹಿ' ಶಬ್ದದಿಂದ 'ಅಸ್ಥೂಲಮನಣು' ಮುಂತಾದ ಶ್ರುತಿಗಳು ಇರುವುದನ್ನು ತಿಳಿಯಬಹುದು.]

ಓಂ ಪ್ರಕಾಶವಚ್ಚಾವೈಯರ್ಥ್ಯಾತ್ ಓಂ 15

ಪ್ರಕಾಶದಂತೆ ಬ್ರಹ್ಮನಿಗೆ ರೂಪಾದಿಗಳನ್ನು ತಿಳಿಸುವ ಶ್ರುತಿಗಳು ವ್ಯರ್ಥವಲ್ಲ.

["ಯದಾ ಪಶ್ಯಃ ಪಶ್ಯತೇ ರುಕ್ಮವರ್ಣಂ"—ಯಾವಾಗ ಜ್ಞಾನಿ ಬೆಳ್ಳಿ ಬಣ್ಣದ ಈಶನನ್ನು ಕಾಣುವನೋ – ಮುಂತಾದ ಶ್ರುತಿಗಳಲ್ಲಿ ಪರಮಾತ್ಮನಿಗೆ ರೂಪವನ್ನು ಹೇಳಿದೆ. ಅದು ಅಲೌಕಿಕವೂ ವಿಲಕ್ಷಣವೂ ಆದುದರಿಂದ ಅಂಥ ಶ್ರುತಿಗಳಿಗೆ ವೈಯರ್ಥ್ಯವಿಲ್ಲ. ಲೋಕವಿಲಕ್ಷಣರೂಪವಿರುವುದರಿಂದ ಶ್ರುತಿ 'ಅರೂಪ' ಎಂದು ಹೇಳಿದರೆ ವಿರೋಧವಿಲ್ಲ.]

ಓಂ ಆಹ ಚ ತನ್ಮಾತ್ರಮ್ ಓಂ 16

ಬ್ರಹ್ಮ ತನ್ಮಾತ್ರನೆಂದೂ ಶ್ರುತಿ ಹೇಳುತ್ತದೆ.

[ಬ್ರಹ್ಮನ ರೂಪ ವಿಜ್ಞಾನಾನಂದಮಯವಾದುದು, ಎಂದು ವಿಲಕ್ಷಣತ್ವವನ್ನು ಹೇಳಲಾಗಿದೆ. "ಆನಂದಮಾತ್ರಮಜರಂ ಪುರಾಣಮೇಕಂ ಸಂತಂ ಬಹುಧಾ ದೃಶ್ಯಮಾನಮ್। ತಮಾತ್ಮಸ್ಥಂ ಯೇಽನುಪಶ್ಯಂತಿ ಧೀರಾಸ್ತೇಷಾಂ ಸುಖಂ ಶಾಶ್ವತಂ ನೇತರೇಷಾಮ್"—ಆನಂದಮಾತ್ರನೂ ಜರಾರಹಿತನೂ ಅನಾದಿಯೂ ಮುಖ್ಯವಾಗಿ ಒಬ್ಬನೇ ಇದ್ದರೂ ಅನೇಕವಾಗಿ ಕಾಣಿಸಿಕೊಳ್ಳುವವನೂ ಆದ ಪರಮಾತ್ಮನನ್ನು ತನ್ನಲ್ಲಿಯೇ ಇರುವವನನ್ನಾಗಿ ಯಾವ ಪಂಡಿತರು ನೋಡುತ್ತಾರೆಯೋ ಅವರಿಗೇ ಶಾಶ್ವತ ಸುಖ ದೊರೆಯುವುದು, ಇತರರಿಗಲ್ಲ—ಎಂದು ಚತುರ್ವೇದಶಿಖೆಯಲ್ಲಿ ಹೇಳಲಾಗಿದೆ.]

ಓಂ ದರ್ಶಯತಿ ಚ,
ಅಥೋ ಅಪಿ ಸ್ಮರ್ಯತೇ ಓಂ 17

ಶ್ರುತಿ ಇದನ್ನು ತೋರಿಸುತ್ತದೆ. ಸ್ಮೃತಿಗಳೂ ಹಾಗೆಯೇ ಹೇಳುತ್ತವೆ.

["ತದ್ವಿಜ್ಞಾನೇನ ಪರಿಪಶ್ಯಂತಿ ಧೀರಾ ಆನಂದರೂಪಮಮೃತಂ ಯದ್ವಿಭಾತಿ"—ಆನಂದರೂಪವನ್ನು ತಾಳಿ ಯಾವ ಅಮೃತ (ಬ್ರಹ್ಮ) ಪ್ರಕಾಶಿಸುತ್ತಾನೆಯೋ ಅವನನ್ನು ವಿದ್ವಾಂಸರು ವಿಜ್ಞಾನದಿಂದ ನೋಡುತ್ತಾರೆ—ಎನ್ನುವ

ಮುಂಡಕೋಪನಿಷತ್ತು ಭಗವಂತನ ಆನಂದಾತ್ಮಕರೂಪವನ್ನು ತಿಳಿಸುತ್ತದೆ. "ಶುದ್ಧಸ್ಫಟಿಕಸಂಕಾಶಂ ವಾಸುದೇವಂ ನಿರಂಜನಂ । ಚಿಂತಯೀತ ಯತಿರ್ನಾನ್ಯಂ ಜ್ಞಾನರೂಪಾದೃತೇ ಹರೇಃ"—ಶುದ್ಧಸ್ಫಟಿಕದಂತೆ ಪ್ರಕಾಶಮಯವಾದ, ನಾಶ ರಹಿತವಾದ ವಾಸುದೇವನೆಂಬ ಶ್ರೀಹರಿಯನ್ನು ಯತಿ ಯಾವಾಗಲೂ ಧ್ಯಾನ ಮಾಡಬೇಕು. ಅವನ ಜ್ಞಾನಾತ್ಮಕರೂಪವನ್ನಲ್ಲದೆ ಮತ್ತಾವುದನ್ನೂ ಚಿಂತಿಸ ಬಾರದು—ಎನ್ನುವ ಮತ್ಸ್ಯಪುರಾಣ ಭಗವಂತ ಜ್ಞಾನಾತ್ಮಕವೆನ್ನುತ್ತದೆ.]

ಓಂ ಅತ ಏವ ಚೋಪಮಾ, ಸೂರ್ಯಕಾದಿವತ್ ಓಂ 18

ಆದುದರಿಂದಲೇ 'ಸೂರ್ಯಕಾದಿಗಳಂತೆ' ಎಂಬ ಉಪಮಾನವನ್ನು ಹೇಳಿದೆ.

[ಪರಮಾತ್ಮನ ನಾನಾರೂಪಗಳಲ್ಲಿ ಭೇದವಿಲ್ಲ, ಎನ್ನುವುದರಿಂದ ಅವನ ಪ್ರತಿಬಿಂಬವೆನಿಸಿದ ಜೀವನೊಡನೆಯೂ ಅಭೇದವನ್ನು ಹೇಳಿದಂತಾಗಲಿಲ್ಲವೇ, ಎಂದು ಸಂದೇಹ; ಇಲ್ಲವೆಂದೇ ಸಿದ್ಧಾಂತ. ನೀರಿನಲ್ಲಿ ಸೂರ್ಯನಿಗೆ ಅನೇಕ ಪ್ರತಿಬಿಂಬಗಳು ಆಗುವುವಷ್ಟೆ. ಅವುಗಳಂತೆ ಸಾದೃಶ್ಯಮಾತ್ರದಲ್ಲಿ ಈಶ, ಜೀವರ ಬಿಂಬಪ್ರತಿಬಿಂಬತ್ವವನ್ನು ಹೇಳಲಾಗಿದೆ. ಭಿನ್ನತ್ವ, ಅಧೀನತ್ವಗಳಿಂದ ಅವರಿಗೆ ಪರಸ್ಪರ ಭೇದವಿದೆ.]

ಓಂ ಅಂಬುವದಗ್ರಹಣಾತ್ತು ನ ತಥಾತ್ವಮ್ ಓಂ 19

ಸ್ನೇಹವಿಲ್ಲದ ಜ್ಞಾನವಿದ್ದರೆ ಹಾಗಾಗುವುದಿಲ್ಲ.

[ಇಲ್ಲಿ ಅಂಬು—ನೀರು—ಎಂಬ ಶಬ್ದ ಸ್ನೇಹ ಎಂಬರ್ಥ ಕೊಡುವುದು. ಸ್ನೇಹಶಬ್ದಕ್ಕೆ ಜಿಡ್ಡು ಮತ್ತು ವಿಶ್ವಾಸ ಎಂಬರ್ಥಗಳುಂಟು. ಗ್ರಹಣವೆಂದರೆ ಜ್ಞಾನ, ಸ್ನೇಹದಿಂದ ಕೂಡಿದ ಜ್ಞಾನಕ್ಕೆ ಭಕ್ತಿಯೆಂದು ಹೆಸರು. 'ಮಾಹಾತ್ಮ್ಯಜ್ಞಾನಪೂರ್ವಕ ದೃಢಸ್ನೇಹ' ಎಂದು ಭಕ್ತಿಯನ್ನು ವಿವರಿಸಿ ಹೇಳುತ್ತಾರೆ. 'ಭಕ್ತಿ ಇರದಿದ್ದರೆ ಪರಮಾತ್ಮನೊಡನೆ ಇರುವ ಸಾದೃಶ್ಯ ವ್ಯಕ್ತವಾಗುವುದಿಲ್ಲ' ಎಂದು ಸೂತ್ರದ ತಾತ್ಪರ್ಯ. ಕಠೋಪನಿಷತ್ತಿನಲ್ಲಿ "ಯಮೇವೈಷ ವೃಣುತೇ ತೇನ ಲಭ್ಯಃ, ತಸ್ಯೈಷ ಆತ್ಮಾ ವಿವೃಣುತೇ ತನೂಂ ಸ್ವಾಮ್"—ಯಾವನನ್ನು ಈಶ ಆರಿಸಿಕೊಳ್ಳುತ್ತಾನೆಯೋ ಅವನಿಂದಲೇ

ಪ್ರಾಪ್ಯನಾಗುವನು, ಅವನಿಗೇ ತನ್ನ ದೇಹವನ್ನು ತೋರಿಸಿಕೊಳ್ಳುವನು—ಎಂದು ಹೇಳಿದೆ. ಭಕ್ತಿ ವೈರಾಗ್ಯಗಳಿಂದ ಪ್ರಯೋಜನವೇನು? ಎಂಬುದನ್ನು ಈ ಸೂತ್ರ ತಿಳಿಸುತ್ತದೆ.]

ಓಂ ವೃದ್ಧಿಹ್ರಾಸಭಾಕ್ತ್ವಮಂತರ್ಭಾವಾತ್, ಉಭಯಸಾಮಂಜಸ್ಯಾದೇವಮ್ ಓಂ 20

ಭಕ್ತಿಜ್ಞಾನಾದಿಗಳಿಗೆ ವೃದ್ಧಿಹ್ರಾಸಗಳಲ್ಲಿ ತಾರತಮ್ಯವಿದೆ, ಅಂತರ್ಭಾವವಿರುವುದರಿಂದ; ಪರಮಾತ್ಮನಿಗೂ ಬ್ರಹ್ಮಾದಿಗಳಿಗೂ ಸಾಮಂಜಸ್ಯವಿರುವುದರಿಂದ ಹೀಗೆ.

[ಎಲ್ಲರಿಗೂ ಭಕ್ತಿಜ್ಞಾನಗಳಿವೆ, ಎಂದು ಒಪ್ಪಿದರೂ ಅವರಲ್ಲಿ ಅಭೇದವಿಲ್ಲ, ತಾರತಮ್ಯವಿದೆ. ಬ್ರಹ್ಮಾದಿದೇವತೆಗಳಿಗೂ ನಾನಾ ಮನುಷ್ಯರಿಗೂ ಪರಮೇಶ್ವರನ ವಿಷಯದಲ್ಲಿ ಮಾಹಾತ್ಮ್ಯಜ್ಞಾನ ಒಂದೇ ಮಟ್ಟದಲ್ಲಿರುವುದಿಲ್ಲ, ಸ್ನೇಹವೂ ಅಷ್ಟೇ ದೃಢವಾಗಿರುವುದಿಲ್ಲ. ಆದುದರಿಂದ ಭಕ್ತಿಯಲ್ಲಿ ತಾರತಮ್ಯವಿದೆ. ಭಕ್ತ್ಯಾದಿವಿಶೇಷಗಳನ್ನು ಒಪ್ಪಿದರೇ ಈಶನಿಗೆ ಚತುರ್ಮುಖಾದಿದೇವತೆಗಳೊಡನೆಯೂ ಮನುಷ್ಯರೊಡನೆಯೂ ಸಾಮಂಜಸ್ಯ ಸಿದ್ಧವಾಗುವುದು.]

ಓಂ ದರ್ಶನಾಚ್ಚ ಓಂ 21

ಶ್ರುತಿ ತಿಳಿಸುವುದರಿಂದಲೂ.

[ಶ್ರುತಿಗಳಲ್ಲಿ ಭಕ್ತಿಯ ತಾರತಮ್ಯವನ್ನು ಕಾಣಬಹುದು. ಆನಂದದ ಚರ್ಚೆ ಮಾಡುತ್ತಾ ತೈತ್ತಿರೀಯ ಉಪನಿಷತ್ತಿನಲ್ಲಿ ಮನುಷ್ಯರಿಂದ ಚತುರ್ಮುಖನ ವರೆಗಿನ ಜೀವರ ಆನಂದದಲ್ಲಿ ತಾರತಮ್ಯವನ್ನು ವಿವರಿಸಲಾಗಿದೆ. 'ಚ' ಶಬ್ದದಿಂದ ಸ್ಮೃತಿಗಳಲ್ಲಿಯೂ ಎಂಬರ್ಥ ಬರುವುದು. "ಇಲ್ಲಿ ಭಕ್ತಿಯಲ್ಲಿ ತಾರತಮ್ಯವಿರುವಂತೆ ಮುಕ್ತಿಯಲ್ಲಿಯೂ ಆನಂದಾದಿಗಳ ತಾರತಮ್ಯವಿದೆ" ಎಂದು ಸ್ಮೃತಿ ಹೇಳುತ್ತದೆ.]

ಓಂ ಪ್ರಕೃತೈತಾವತ್ತ್ವಂ ಹಿ ಪ್ರತಿಷೇಧತಿ, ತತೋ ಬ್ರವೀತಿ ಚ ಭೂಯಃ ಓಂ 22

ಪ್ರಕೃತವಾದ 'ಇಷ್ಟು' ಎಂಬುದನ್ನು ಶ್ರುತಿ ನಿಷೇಧಿಸುತ್ತದೆ. ಅದಕ್ಕಿಂತ ಹೆಚ್ಚಿನದನ್ನೂ ಹೇಳುತ್ತದೆ.

[ಬ್ರಹ್ಮನಿಗೆ ಸೃಷ್ಟಿಸಂಹಾರಗಳನ್ನು ಮಾಡುವ ಸಾಮರ್ಥ್ಯವನ್ನು ಹೇಳಲಾಗಿದೆ, ಪಾಲಕತ್ವವನ್ನು ಹೇಳಿಲ್ಲವಲ್ಲ, ಎಂಬ ಆಕ್ಷೇಪಕ್ಕೆ ಸಮಾಧಾನ, ಈ ಸೂತ್ರ. ಸೃಷ್ಟಿ-ಸಂಹಾರಗಳ ನಡುವೆ 'ಸ್ಥಿತಿ' ಇದ್ದೇ ಇರುವುದಷ್ಟೆ—ಮರಣಪರ್ಯಂತ ಮನುಷ್ಯನನ್ನು ಈಶ್ವರ ಕಾಪಾಡಲೇಬೇಕಷ್ಟೆ. ಮುಂದೆ ಮುಕ್ತಿಯಲ್ಲಿ ಸಂಹಾರವೇ ಇಲ್ಲದಿರುವುದರಿಂದ ಪಾಲನೆ ವ್ಯಕ್ತವಾಗಿಯೇ ಇದೆ. "ಅಸ್ಯೇದೇಷಾ ಸುಮತಿಃ ಪಪ್ರಥಾನಾ" ಎಂಬ ಋಗ್ವೇದವಾಕ್ಯ ಸೃಷ್ಟಿಸಂಹಾರಕರ್ತೃತ್ವವನ್ನು ಹೇಳುತ್ತದೆ. ಮುಂದೆ ಅಲ್ಲಿಯೇ "ನೈತಾವತ್, ಏನಾ ಪರೋ ಅನ್ಯದಸ್ತಿ, ಉಕ್ಷಾ ಸ ದ್ಯಾವಾಪೃಥಿವೀ ಬಿಭರ್ತಿ"—ಇಷ್ಟೇ ಅಲ್ಲ, ಇನ್ನೂ ಬೇರೆ ಉತ್ತಮ ಕಾರ್ಯವಿದೆ. ಪರಮಾತ್ಮ ಭೂಮ್ಯಾಕಾಶಗಳನ್ನೂ ಧರಿಸುತ್ತಾನೆ—ಎಂದು 'ಸ್ಥಿತಿ'ಯನ್ನು ವರ್ಣಿಸಲಾಗಿದೆ.]

ಓಂ ತದವ್ಯಕ್ತಮ್, ಆಹ ಹಿ ಓಂ 23

ಆ ಬ್ರಹ್ಮ ಸ್ವತಃ ಅವ್ಯಕ್ತ, ಹಾಗೆ ಶ್ರುತಿ ಹೇಳುತ್ತದೆಯಷ್ಟೆ.

["ಅರೂಪಮಕ್ಷರಂ ಬ್ರಹ್ಮ ಸದಾಽವ್ಯಕ್ತಂ ಚ ನಿಷ್ಕಲಂ । ಯತ್ ಜ್ಞಾತ್ವಾ ಮುಚ್ಯತೇ ಜಂತುರಾನಂದಶ್ಚಾವ್ಯಯೋ ಭವೇತ್"—ಬ್ರಹ್ಮ ರೂಪವಿಲ್ಲದವ, ನಾಶವಿಲ್ಲದವ, ಯಾವಾಗಲೂ ಅವ್ಯಕ್ತ ಮತ್ತು ನಿಷ್ಕಲ. ಅವನನ್ನು ತಿಳಿದರೆ ಜೀವಮುಕ್ತನಾಗುವನು, ಶಾಶ್ವತ ಆನಂದವೂ ಅವನಿಗೆ ಪ್ರಾಪ್ತವಾಗುವುದು, ಎಂದು ಕೌಂಠರವ್ಯಶ್ರುತಿ ಹೇಳುತ್ತದೆ.]

ಓಂ ಅಪಿ ಸಂರಾಧನೇ,
ಪ್ರತ್ಯಕ್ಷಾನುಮಾನಾಭ್ಯಾಮ್ ಓಂ 24

ಆರಾಧನೆಯ ಸಮಯದಲ್ಲಿಯೂ, ಪ್ರತ್ಯಕ್ಷ ಮತ್ತು ಅನುಮಾನಗಳಿಂದ.

[ಬ್ರಹ್ಮನ ಆರಾಧನೆ ಮಾಡಿದಾಗಲೂ ಅವನು ಅವ್ಯಕ್ತನಾಗಿಯೇ ಇರುವನು. ಜ್ಞಾನಿಗಳಿಗೆ ಪ್ರತ್ಯಕ್ಷವಾಗಿ ಅವನ ಅವ್ಯಕ್ತತ್ವ ಅನುಭವಕ್ಕೆ ಬರುವುದು. ಇತರರಿಗೆ, ಅವನು ಅತಿಸೂಕ್ಷ್ಮ ಎಂಬ ಅನುಮಾನದಿಂದ, ಅವ್ಯಕ್ತತ್ವದ ಅರಿವಾಗುವುದು.]

ಓಂ ಪ್ರಕಾಶವಚ್ಚಾವೈಶೇಷ್ಯಮ್ ಓಂ 25

ಅಗ್ನ್ಯಾದಿಪ್ರಕಾಶದಂತೆ ವಿಶೇಷವಿಲ್ಲ.

[ಬೆಂಕಿ ಮೊದಲಾದ ಪ್ರಕಾಶ ಸ್ಥೂಲರೂಪದಿಂದ ವ್ಯಕ್ತವಾಗುವುದು, ಸೂಕ್ಷ್ಮರೂಪದಿಂದ ಅವ್ಯಕ್ತವಾಗುವುದು. ಆದರೆ ಈ ವಿಶೇಷ ಪರಿಸ್ಥಿತಿ ಬ್ರಹ್ಮನಲ್ಲಿಲ್ಲ. "ನಾಸೌ ಸೂಕ್ಷ್ಮೋ ನ ಸ್ಥೂಲಃ ಪರ ಏವ ಸ ಭವತಿ, ತಸ್ಮಾದಾಹುಃ ಪರಮ ಇತಿ"—ಅವನು ಸೂಕ್ಷ್ಮನೂ ಅಲ್ಲ, ಸ್ಥೂಲನೂ ಅಲ್ಲ, ಬೇರೆಯಾಗಿಯೇ ಇರುತ್ತಾನೆ; ಆದುದರಿಂದಲೇ ಅವನನ್ನು 'ಪರಮ' ಎನ್ನುತ್ತಾರೆ, ಎಂದು ಮಾಂಡವ್ಯಶ್ರುತಿ ಇದೆ.]

ಓಂ ಪ್ರಕಾಶಶ್ಚ, ಕರ್ಮಣ್ಯಭ್ಯಾಸಾತ್ ಓಂ 26

ಕರ್ಮದಲ್ಲಿ ಮತ್ತೆ ಮತ್ತೆ ಅಭ್ಯಾಸ ಮಾಡುವುದರಿಂದ ಪ್ರಕಾಶವೂ ಆಗುತ್ತದೆ.

[ಬ್ರಹ್ಮ ಜಿಜ್ಞಾಸ್ಯ, ಎಂದಮೇಲೆ ಅವನ ವಿಷಯದಲ್ಲಿ ಶ್ರವಣಮನನ-ನಿದಿಧ್ಯಾಸನಾದಿಕರ್ಮಗಳನ್ನು ಪುನಃ ಪುನಃ ಮಾಡುತ್ತಲೇ ಇರುವುದರಿಂದ ಪ್ರಕಾಶ ಹುಟ್ಟುವುದು — ಅಪರೋಕ್ಷ ಜ್ಞಾನವಾಗುವುದು. "ಆತ್ಮಾ ವಾ ಅರೇ ದ್ರಷ್ಟವ್ಯಃ ಶ್ರೋತವ್ಯೋ ಮಂತವ್ಯೋ ನಿದಿಧ್ಯಾಸಿತವ್ಯಃ"—ಪರಮಾತ್ಮನನ್ನು ನೋಡಬೇಕು, ಅವನ ವಿಷಯವನ್ನು ಕೇಳಬೇಕು, ಅದನ್ನು ಚೆನ್ನಾಗಿ ತಿಳಿದುಕೊಳ್ಳಬೇಕು, ಅವನನ್ನು ಕುರಿತು ಸದಾ ಧ್ಯಾನಮಾಡಬೇಕು—ಎಂದು ಬೃಹದಾರಣ್ಯಕ ಉಪನಿಷತ್ತು ಹೇಳಿದೆ.]

ಓಂ ಅತೋಽನಂತೇನ,
ತಥಾ ಹಿ ಲಿಂಗಮ್ ಓಂ 27

ಆದುದರಿಂದ ಅನಂತನಿಂದ, ಹಾಗೆ ಲಿಂಗವಿದೆ.

[ಬ್ರಹ್ಮ ವ್ಯಕ್ತ, ಬ್ರಹ್ಮ ಅವ್ಯಕ್ತ ಎಂಬ ಎರಡು ವಿಷಯಗಳಲ್ಲಿಯೂ ಪ್ರಮಾಣವಿರುವುದರಿಂದ ಅವನ ಅನುಗ್ರಹದಿಂದಲೇ ಜ್ಞಾನಪ್ರಕಾಶ ಉಂಟಾಗುವುದು. "ತಸ್ಯಾಭಿಧ್ಯಾನಾತ್, ಯೋಜನಾತ್, ತತ್ತ್ವಭಾವಾತ್, ಭೂಯಶ್ಚಾಂತೇ ವಿಶ್ವಮಾಯಾನಿವೃತ್ತಿಃ"—ಅವನ ಧ್ಯಾನ ಮಾಡುವುದರಿಂದಲೂ, ಸಂಬಂಧ ಕಲ್ಪಿಸಿಕೊಳ್ಳುವುದರಿಂದಲೂ ಅವನ ಅಧೀನವೆಂದು ಭಾವಿಸಿಕೊಳ್ಳುವುದರಿಂದಲೂ ಕೊನೆಯಲ್ಲಿ ಅವನ ಅನುಗ್ರಹದಿಂದ ವಿಶ್ವಮಾಯೆ ನಿವೃತ್ತವಾಗುವುದು—ಎಂದು ಶ್ವೇತಾಶ್ವತರೋಪನಿಷತ್ತು ತಿಳಿಸುತ್ತದೆ.]

ಓಂ ಉಭಯವ್ಯಪದೇಶಾತ್ತು, ಅಹಿಕುಂಡಲವತ್ ಓಂ 28

ಎರಡೂ ಉಪದೇಶಗಳಿರುವುದರಿಂದ. ಸರ್ಪದ ಕುಂಡಲದಂತೆ.

["ಆನಂದಂ ಬ್ರಹ್ಮಣೋ ವಿದ್ವಾನ್" — ಬ್ರಹ್ಮನ ಆನಂದವನ್ನು ತಿಳಿದವನು — ಎಂದೂ "ಅಥೈಷ ಏವ ಪರಮ ಆನಂದಃ" — ಆಮೇಲೆ, ಇವನೇ ಪರಮ, ಆನಂದ — ಎಂದೂ ಶ್ರುತಿಯಲ್ಲಿ ಹೇಳಿದೆ. ಆನಂದನೂ ಆಗಿದ್ದು ಆನಂದವುಳ್ಳವನೂ ಆಗಿರುವ ಬ್ರಹ್ಮ ಸರ್ಪದ ಕುಂಡಲಾಕೃತಿಯಂತೆ; ಸುರುಳಿ ಸುತ್ತಿಕೊಂಡಿರುವ ಹಾವನ್ನು 'ಹಾವಿನ ಸುರುಳಿ' ಎಂದೂ 'ಸುರುಳಿರೂಪ ಹೊಂದಿದ ಹಾವು' ಎಂದೂ ಹೇಳುತ್ತಾರಷ್ಟೆ.]

ಓಂ ಪ್ರಕಾಶಾಶ್ರಯವದ್ವಾ, ತೇಜಸ್ತ್ವಾತ್ ಓಂ 29

ಪ್ರಕಾಶಾಶ್ರಯ ಹೊಂದಿರುವುದರಂತೆ, ಎರಡೂ ತೇಜಸ್ಸನ್ನು ಪಡೆದಿರುವುದರಿಂದ.

[ಸೂರ್ಯನ ಉದಾಹರಣೆಯನ್ನೂ ಹೇಳಬಹುದು. ಸೂರ್ಯ ಪ್ರಕಾಶಮಯ — ಪ್ರಕಾಶವನ್ನು ಬೀರುವವನು — ಹಾಗೂ ಪ್ರಕಾಶಕ್ಕೆ ಆಶ್ರಯನಾದವನು. ಬ್ರಹ್ಮ ತೇಜೋರೂಪ ಉಳ್ಳವನಾದುದರಿಂದ ಈ ಸೂರ್ಯನ ದೃಷ್ಟಾಂತವೂ ಯುಕ್ತ. ಬ್ರಹ್ಮ ಆನಂದ ಮತ್ತು ಆನಂದೀ—ಗುಣ ಮತ್ತು ಗುಣೀ.]

ಓಂ ಪೂರ್ವವದ್ವಾ ಓಂ 30

ಪೂರ್ವ ಎಂಬ ಗುಣವುಳ್ಳದುದರಂತೆಯಾಗಲಿ.

[ಒಂದೇ ಸಮಯವನ್ನು 'ಹಿಂದಿನ ಕಾಲ' ಎಂದಾಗ ಅದು ಅವಚ್ಛೇದಕವೂ ಅವಚ್ಛೇದ್ಯವೂ ಆಗುತ್ತದೆ—ಹಿಂದಿನ ಮತ್ತು ಇಂದಿನ ಕಾಲಗಳಿಗೆ ಇರುವ ವ್ಯತ್ಯಾಸದ ಗುಣವನ್ನು ತೋರಿಸುವುದು, ಹಾಗೂ ಆ ಗುಣವುಳ್ಳ ಕಾಲವನ್ನೂ ಸೂಚಿಸುವುದು. ಹೀಗೆಯೇ ಪರಬ್ರಹ್ಮ ಆನಂದ (ಗುಣ) ಮತ್ತು ಆನಂದೀ (ಗುಣೀ). ಸ್ಥೂಲಮತಿಗೆ ತಿಳಿಸಲು ಸರ್ಪಕುಂಡಲದ ದೃಷ್ಟಾಂತವನ್ನು

ಕೊಟ್ಟಿದೆ. ಸೂಕ್ಷ್ಮವಾಗಿ ವಿಚಾರ ಮಾಡಬಲ್ಲವರಿಗೆ ತಿಳಿವಳಿಕೆ ಕೊಡಲು ಈ ಸೂತ್ರ ಪ್ರವೃತ್ತವಾಗಿದೆ. ಕಾಲ ಅವಚ್ಛೇದಕ (ಅಳತೆ ಮಾಡಬಲ್ಲದುದು) ಮತ್ತು ಅವಚ್ಛೇದ್ಯ (ಅಳತೆಗೆ ಒಳಪಟ್ಟುದುದು) ಎಂಬುದನ್ನು ಸೂಕ್ಷ್ಮವಾಗಿ ವಿಚಾರಮಾಡಿ ತಿಳಿಯಬೇಕು.]

ಓಂ ಪ್ರತಿಷೇಧಾಚ್ಚ ಓಂ 31

ನಿಷೇಧಿಸಿರುವುದರಿಂದಲೂ.

["ಏಕಮೇವಾದ್ವಿತೀಯಂ"—ಬ್ರಹ್ಮ ಒಂದೇ, ಅಂತಹ ವಸ್ತು ಇನ್ನೊಂದಿಲ್ಲ—"ನೇಹ ನಾನಾಸ್ತಿ ಕಿಂಚನ"—ಈ ಬ್ರಹ್ಮನ ಅವತಾರಾದಿ ವಿವಿಧ ಪ್ರಕಾರಗಳಲ್ಲಿ, ರೂಪಾವಯವ ಧರ್ಮಗಳಲ್ಲಿ ಯಾವ ನಾನಾತ್ವವೂ ಇಲ್ಲ, ಅವೆಲ್ಲ ಒಂದೇ—ಎಂದು ಛಾಂದೋಗ್ಯ ಮತ್ತು ಕಠಶ್ರುತಿಗಳ ವಾಕ್ಯಗಳ ಪ್ರಕಾರದಿಂದ ಬ್ರಹ್ಮನಿಗೂ ಅವನ ಗುಣಗಳಿಗೂ ಭೇದವಿಲ್ಲ.]

ಓಂ ಪರಮತಃ ಸೇತೂನ್ಮಾನಸಂಬಂಧಭೇದ-ವ್ಯಪದೇಶೇಭ್ಯಃ ಓಂ 32

ಸೇತು, ಉನ್ಮಾನ, ಸಂಬಂಧ, ಭೇದಗಳನ್ನು ಹೇಳಿರುವುದರಿಂದ ಬ್ರಹ್ಮ ಶ್ರೇಷ್ಠ.

[ಬ್ರಹ್ಮನ ಆನಂದಾದಿಗುಣಗಳು ಅಲೌಕಿಕವಾದವು, ವಿಲಕ್ಷಣವಾದವು. "ಏಷ ಸೇತುರ್ವಿಧೃತಿಃ, ಯ ಏಷ ಆನಂದಃ ಪರಸ್ಯ" ಎಂಬ ಛಾಂದೋಗ್ಯ ವಾಕ್ಯ, ಬ್ರಹ್ಮನ ಆನಂದಕ್ಕೆ ಸೇತುತ್ವವನ್ನು ಹೇಳುತ್ತದೆ. "ಯತೋ ವಾಚೋ ನಿವರ್ತಂತೇ" ಎಂಬ ತೈತ್ತಿರೀಯವಾಕ್ಯ ಬ್ರಹ್ಮನನ್ನು ತಿಳಿಯಲು ವಾಕ್ಕಿಗೆ ಸಾಧ್ಯವಿಲ್ಲ, ಎಂದು ಹೇಳಿ ಬ್ರಹ್ಮ ಅಳತೆಗೆ ಸಿಗದಿರುವುದನ್ನು ತಿಳಿಸುವುದು. "ಏತಸ್ಯೈವಾನಂದಸ್ಯಾನ್ಯಾನಿ ಭೂತಾನಿ ಮಾತ್ರಾಮುಪಜೀವಂತಿ"—ಈ ಬ್ರಹ್ಮಾನಂದದ ಸ್ವಲ್ಪಭಾಗವನ್ನು ಇತರ ಪ್ರಾಣಿಗಳು ಉಪಜೀವಿಸುತ್ತವೆ—ಎಂದು ಹೇಳಿ ಬೃಹದಾರಣ್ಯಕೋಪನಿಷತ್ತು ಸಂಬಂಧವನ್ನು ಕಲ್ಪಿಸುತ್ತದೆ. "ಅನ್ಯತ್ ಜ್ಞಾನಂ ತು ಜೀವಾನಾಂ ಅನ್ಯತ್ ಜ್ಞಾನಂ ಪರಸ್ಯ ಚ । ನಿತ್ಯಾನಂದಾವ್ಯಯಂ ಪೂರ್ಣಂ ಪರಜ್ಞಾನಂ ವಿಧೀಯತೇ"—ಜೀವನ ಜ್ಞಾನವೇ ಬೇರೆ, ಈಶನ ಜ್ಞಾನವೇ ಬೇರೆ—ಎಂಬ ವಾಕ್ಯ ಜ್ಞಾನದಲ್ಲಿನ ಭೇದವನ್ನು ಸ್ಪಷ್ಟಪಡಿಸುತ್ತದೆ.]

ಓಂ ದರ್ಶನಾತ್ತು ಓಂ 33

ಶ್ರುತಿಯಿಂದಾದರೋ.

[ಇತರರ ಆನಂದಾದಿಗುಣಗಳನ್ನು ನಾವು ನೋಡಬಹುದು. "ಅದೃಷ್ಟ-ಮವ್ಯವಹಾರ್ಯಮವ್ಯಪದೇಶ್ಯಂ ಸುಖಂ ಜ್ಞಾನಮೋಜೋಬಲಂ, ಇತಿ ಬ್ರಹ್ಮಣಃ, ತಸ್ಮಾದ್ಬ್ರಹ್ಮೇತ್ಯಾಚಕ್ಷತೇ, ತಸ್ಮಾದ್ಬ್ರಹ್ಮೇತ್ಯಾಚಕ್ಷತೇ" ಬ್ರಹ್ಮನ ಆನಂದ, ಜ್ಞಾನ, ಓಜಸ್ಸು, ಬಲಗಳನ್ನು ನೋಡಲು ಸಾಧ್ಯವಿಲ್ಲ; ವ್ಯವಹಾರಕ್ಕೆ ತರಲಾಗದು, ವ್ಯಪದೇಶ ಮಾಡಲೂ (ಬಿಡಿಸಿ ಹೇಳಲೂ) ಸಾಧ್ಯವಿಲ್ಲ; ಆದುದರಿಂದಲೇ ಅವನನ್ನು 'ಬ್ರಹ್ಮ' ಎನ್ನುತ್ತಾರೆ—ಎಂದು ಕೌಂಡಿನ್ಯಶ್ರುತಿಯಿದೆ.]

ಓಂ ಬುದ್ಧ್ಯರ್ಥಃ, ಪಾದವತ್ ಓಂ 34

ಬುದ್ಧಿಗೋಚರವಾಗುವುದು, ಪಾದದಂತೆ.

[ಅಪ್ರಸಿದ್ಧವಾದವನನ್ನು 'ಆನಂದ' ಎಂದು ಕರೆಯುವುದು ಹೇಗೆ? ಭಗವಂತನ ಪಾದ ನಮಗೆ ಗೋಚರವಲ್ಲ; ಅದು ಅಪ್ರಸಿದ್ಧ. ಆದರೂ ಜೀವೇಶ್ವರ ಸಂಬಂಧವನ್ನು ತಿಳಿಸುವುದಕ್ಕಾಗಿ ಪಾದವೆಂಬ ಶಬ್ದವನ್ನು ಬಳಸಿಯೇ "ಪಾದೋಸ್ಯ ವಿಶ್ವಾ ಭೂತಾನಿ"—ಎಲ್ಲ ಪ್ರಾಣಿಗಳೂ ಅವನ ಪಾದವೇ—ಎಂದು ಋಗ್ವೇದದಲ್ಲಿ ಹೇಳಲಾಗಿದೆ. ಜೀವೇಶ್ವರಭೇದವಿದ್ದರೂ ಬ್ರಹ್ಮನ ಮಹಿಮೆಯನ್ನು ತಿಳಿಸಲು 'ಇಡೀ ಜಗತ್ತೇ ಈಶನ ಪಾದಕ್ಕೆ ಸಮಾನ' ಎಂದು ಹೇಳಲಾಗಿದೆ. ಹಾಗೆಯೇ ಈಶ್ವರನ ಅಲೌಕಿಕವಾದ ಜ್ಞಾನಾ-ನಂದಾದಿಗಳು ಲೋಕಪ್ರಸಿದ್ಧವಾದ ಕೆಲವು ಶಬ್ದಗಳಿಂದ ವರ್ಣಿತವಾಗಿವೆ.]

ಓಂ ಸ್ಥಾನವಿಶೇಷಾತ್, ಪ್ರಕಾಶಾದಿವತ್ ಓಂ 35

ಸ್ಥಾನವಿಶೇಷದಿಂದ ಭೇದಗಳು, ಪ್ರಕಾಶಾದಿಗಳಂತೆ.

[ಜೀವನ ಆನಂದ ಪರಮಾತ್ಮನ ಆನಂದದ ಪ್ರತಿಬಿಂಬವಾಗಿದ್ದರೆ ಬ್ರಹ್ಮಾದಿಗಳ ಆನಂದದಲ್ಲಿ ಭೇದ ಏಕಿರಬೇಕು? ಸ್ಥಾನ ವಿಶೇಷದಿಂದ, ಎಂದೇ ಉತ್ತರ. ಸೂರ್ಯನ ಪ್ರಕಾಶಕ್ಕೆ ಕನ್ನಡಿ, ನೀರು ಮೊದಲಾದ ಸ್ಥಾನಗಳಲ್ಲಿರುವ ಬೇರೆ ಬೇರೆ ಪ್ರತಿಬಿಂಬಗಳು ಭಿನ್ನವಾಗಿರುವುದಿಲ್ಲವೇ? ಹಾಗೆಯೇ ಬ್ರಹ್ಮಾದಿಗಳಲ್ಲಿನ ಗುಣವಿಶೇಷದಿಂದ ಅವರಲ್ಲಿ ಪ್ರತಿಬಿಂಬಿತವಾದ ಆನಂದಾದಿಗಳು ವಿಶೇಷವನ್ನು ಪಡೆಯುತ್ತವೆ.]

ಓಂ ಉಪಪತ್ತೇಶ್ಚ ಓಂ 36

ಉಪಪತ್ತಿ ಇರುವುದರಿಂದಲೂ.

[ಪದ್ಮಪುರಾಣದಲ್ಲಿ "ಐಶ್ವರ್ಯಾತ್ಪರಮಾದ್ವಿಷ್ಣೋರ್ಭಕ್ತ್ಯಾದೀನಾಮನಾದಿತಃ । ಬ್ರಹ್ಮಾದೀನಾಂ ಸೂಪಪನ್ನಾ ಹ್ಯಾನಂದಾದೇರ್ವಿಚಿತ್ರತಾ"— ಶ್ರೇಷ್ಠನಾದ ವಿಷ್ಣುವಿನ ಪ್ರಭುತ್ವದಿಂದಲೂ ಭಕ್ತಿ ಮೊದಲಾದವುಗಳಲ್ಲಿರುವ ಅನಾದಿ ಭೇದದಿಂದಲೂ ಬ್ರಹ್ಮನೇ ಮೊದಲಾದವರ ಆನಂದಾದಿಗುಣಗಳಲ್ಲಿ ವೈಚಿತ್ರ್ಯವಿರುವುದು ಉಪಪನ್ನವೇ ಆಗಿದೆ—ಎಂದು ಹೇಳಿದೆ.]

ಓಂ ತಥಾಽನ್ಯತ್ಪ್ರತಿಷೇಧಾತ್ ಓಂ 37

ಬೇರೊಂದನ್ನು ನಿಷೇಧಿಸಿರುವುದರಿಂದ ಹಾಗೆಯೇ.

[ಧ್ಯಾನ ಮಾಡುವಾಗ ತೋರಿಬರುವುದಕ್ಕಿಂತ ಬ್ರಹ್ಮ ಬೇರೆಯಾಗಿಯೇ ಇರುವನು. "ಯನ್ಮನಸಾ ನ ಮನುತೇ ಯೇನಾಹುರ್ಮನೋ ಮತಂ । ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದ ಮುಪಾಸತೇ"—ಯಾವನನ್ನು ಮನಸ್ಸಿನಿಂದ ತಿಳಿಯಲು ಸಾಧ್ಯವಿಲ್ಲವೋ, ಯಾವನಿಂದ ಮನಸ್ಸು ತಿಳಿಯಲ್ಪಟ್ಟಿದೆಯೆಂದು ಹೇಳುವರೋ, ಅವನೇ ಬ್ರಹ್ಮ, ಅವನನ್ನು ತಿಳಿ ; ಯಾವನನ್ನು ಉಪಾಸನೆ ಮಾಡುತ್ತಾರೋ ಅವನನ್ನಲ್ಲ, ಎಂದು ಕೇನೋಪನಿಷತ್ತು ತಿಳಿಸುತ್ತದೆ.]

ಓಂ ಅನೇನ ಸರ್ವಗತತ್ವಮಾಯಾಮಯಾದಿ-ಶಬ್ದಾದಿಭ್ಯಃ ಓಂ 38

ಅವನಿಂದಲೇ ಸೃಷ್ಟ್ಯಾದಿಗಳು ಸರ್ವದೇಶಕಾಲವಸ್ತುಗಳಲ್ಲಿ ಪ್ರವರ್ತಿಸುವುವು, ಏಕೆಂದರೆ 'ಸರ್ವಗತತ್ವ, ಮಾಯಾಮಯ' ಮೊದಲಾದ ಶಬ್ದಗಳಿವೆ.

"ಏಷ ಸರ್ವ ಏಷ ಸರ್ವಗತಃ, ಏಷ ಈಶ್ವರಃ"—ಇವನು ಎಲ್ಲವೂ, ಎಲ್ಲೆಲ್ಲಿಯೂ ಇರುವವನು, ಇವನು ಪ್ರಭು—ಎಂದು ಭಾಲ್ಲವೇಯಶ್ರುತಿ ಹೇಳುವುದು. "ಸರ್ವತ್ರ ಸರ್ವಮೇತಸ್ಮಾತ್ಸರ್ವದಾ ಸರ್ವವಸ್ತುಷು । ಸ್ವರೂಪಭೂತಯಾ ನಿತ್ಯಶಕ್ತ್ಯಾ ಮಾಯಾಖ್ಯಯಾ ಯತಃ । ಅತೋ ಮಾಯಾಮಯಂ ವಿಷ್ಣುಂ ಪ್ರವದಂತಿ ಸನಾತನಮ್"—ತನ್ನ ಸ್ವರೂಪಭೂತವಾದ ನಿತ್ಯಶಕ್ತಿಯುಳ್ಳ ಮಾಯೆಯಿಂದ ಈಶನು ಎಲ್ಲೆಲ್ಲಿಯೂ ಇರುವನು, ಸದಾ ಇವನಿಂದಲೇ ಎಲ್ಲವೂ ಇರುವುವು, ಎಲ್ಲ ವಸ್ತುಗಳಲ್ಲಿಯೂ ಇವನು

ಇರುವನು. ಆದುದರಿಂದಲೇ ಸನಾತನನಾದ ಈ ವಿಷ್ಣುವನ್ನು 'ಮಾಯಾ ಮಯ' ಎನ್ನುವರು, ಎಂದು ಚತುರ್ವೇದಶಿಖೆ ಹೇಳುತ್ತದೆ.]

ಓಂ ಫಲಮತಃ, ಉಪಪತ್ತೇಃ ಓಂ 39

ಈತನ ದೆಸೆಯಿಂದ ಫಲ ಬರುವುದು, ಉಪಪತ್ತಿ ಇರುವುದರಿಂದ.

[ಅಚೇತನ ತಾನಾಗಿಯೇ ಪ್ರವೃತ್ತವಾಗುವುದಿಲ್ಲ ; ಆದುದರಿಂದ ಕರ್ಮ ತಾನೇ ಫಲ ಕೊಡಲಾರದು. ಈ ಬ್ರಹ್ಮನಿಂದಲೇ ಫಲಪ್ರಾಪ್ತಿಯಾಗುವುದು.]

ಓಂ ಶ್ರುತತ್ವಾಚ್ಚ ಓಂ 40

ಶ್ರುತಿವಾಕ್ಯವಿರುವುದರಿಂದಲೂ.

["ವಿಜ್ಞಾನಮಾನಂದಂ ಬ್ರಹ್ಮ ರಾತಿರ್ದಾತುಃ ಪರಾಯಣಮ್"— ಪರಬ್ರಹ್ಮ ವಿಜ್ಞಾನವೂ ಆನಂದವೂ ಆಗಿರುತ್ತಾನೆ. ಉಪಾಸಕನಿಗೆ ಫಲ ಕೊಡುತ್ತಾನೆ—ಎಂದು ಬೃಹದಾರಣ್ಯಕ ವಾಕ್ಯ.]

ಓಂ ಧರ್ಮಂ ಜೈಮಿನಿರತ ಏವ ಓಂ 41

ಈಶ್ವರನಿಂದಲೇ ಧರ್ಮವೆಂದು ಜೈಮಿನಿ ಹೇಳುತ್ತಾನೆ.

[ಫಲಕೊಡುವ ಕರ್ಮವನ್ನೂ ಈಶ್ವರನೇ ಮಾಡಿಸುವನು. "ಏಷ ಹ್ಯೇವ ಸಾಧುಕರ್ಮ ಕಾರಯತಿ"—ಜೀವನಿಂದ ಸತ್ಕರ್ಮವನ್ನು ಈತನೇ ಮಾಡಿಸುತ್ತಾನೆ – ಎಂದು ಕೌಷೀತಕೀ ಬ್ರಾಹ್ಮಣ ಹೇಳುತ್ತದೆ.]

ಓಂ ಪೂರ್ವಂ ತು ಬಾದರಾಯಣಃ, ಹೇತುವ್ಯಪದೇಶಾತ್ ಓಂ 42

ಮೊದಲು ಹೇಳಿದ ಈಶನನ್ನೇ ಬಾದರಾಯಣ ಹೇಳುತ್ತಾನೆ, ಫಲ-ಹೇತು ಎಂದು ಹೇಳುವುದರಿಂದ.

[ಪರಮಾತ್ಮನೂ ಕಾರಣ, ಕರ್ಮವೂ ಮುಂದೆ ಆಗುವ ಫಲಕ್ಕೆ ಕಾರಣ, ಎಂದು ಹೇಳಿದರೂ ಕರ್ಮ ಪರಮಾತ್ಮನನ್ನು ಪ್ರಚೋದಿಸಲಾರದು. ಮೊದಲು ಹೇಳಿದ ಈಶ್ವರನೇ ಫಲಪ್ರಾಪ್ತಿಗೆ ಮುಖ್ಯಕಾರಣ. ಇದು ಬಾದರಾಯಣ ಮುನಿಯ ಖಚಿತ ಅಭಿಪ್ರಾಯ. "ಪುಣ್ಯಮಾಡಿದವನನ್ನು ಪುಣ್ಯಲೋಕಕ್ಕೆ ಒಯ್ಯುತ್ತಾನೆ" ಎಂಬ ಪ್ರಶ್ನಶ್ರುತಿಯಿಂದ ಫಲಕ್ಕೆ ಪರಮಾತ್ಮನೇ ಮುಖ್ಯ

ಕಾರಣನೆಂದು ಸಿದ್ಧವಾಗುವುದು. "ದ್ರವ್ಯಂ ಕರ್ಮ ಚ ಕಾಲಶ್ಚ" ಎಂಬ ವಾಕ್ಯ ದ್ರವ್ಯ, ಕರ್ಮ, ಕಾಲ ಎಲ್ಲವೂ ಈಶ್ವರಾಧೀನವೇ ಎಂದು ಸಾಧಿಸುವುದು.]

ಇಲ್ಲಿಗೆ ಬ್ರಹ್ಮಸೂತ್ರಗಳ ಮೂರನೆಯ ಅಧ್ಯಾಯದ ಎರಡನೆಯ ಪಾದ ಮುಗಿಯಿತು.

ಮೂರನೆಯ ಪಾದ

ಉಪಾಸನೆಯ ವಿಷಯವನ್ನು ಈ ಪಾದ ತಿಳಿಸುವುದು.

ಓಂ ಸರ್ವವೇದಾಂತಪ್ರತ್ಯಯಂ, ಚೋದನಾದ್ಯವಿಶೇಷಾತ್ ಓಂ 1

ಸರ್ವವೇದಗಳ ನಿರ್ಣಯದಿಂದ ಉತ್ಪನ್ನವಾದ ಜ್ಞಾನದ ವಿಷಯ ಬ್ರಹ್ಮನೇ ; ಚೋದನೆಗಳ ವಿಷಯದಲ್ಲಿ ವಿಶೇಷವಿಲ್ಲ.

[ಎಲ್ಲ ವೇದಗಳನ್ನೂ ಓದಿ ತಿಳಿದಮೇಲೆ ಹುಟ್ಟುವ ಜ್ಞಾನಕ್ಕೆ ವಿಷಯ ಬ್ರಹ್ಮನೇ. "ಆತ್ಮೇತ್ಯೇವೋಪಾಸೀತ"—ಆತ್ಮನೆಂದೇ ಧ್ಯಾನಮಾಡಬೇಕು— ಎಂದು ಮುಂತಾಗಿ ವಿಧಿಸುವ ಎಲ್ಲ ಯುಕ್ತಿಗಳೂ ಸಮಾನವಾಗಿವೆ.]

ಓಂ ಭೇದಾನ್ನೇತಿ ಚೇತ್, ಏಕಸ್ಯಾಮಪಿ ಓಂ 2

ಭೇದವಿರುವುದರಿಂದ ಅಲ್ಲ, ಎನ್ನುವುದಾದರೆ, ಒಂದರಲ್ಲಿಯೂ ಇದೆ.

[ಬೇರೆ ಬೇರೆ ಶಾಖೆಗಳು ಬ್ರಹ್ಮನನ್ನು ಕುರಿತು ಬೇರೆ ಬೇರೆ ವಿಷಯಗಳನ್ನು ಹೇಳಿರುವುದು "ಅಧಿಕಾರಿಭೇದದಿಂದ ಹಾಗೆ ಹೇಳಿದ್ದಾರೆ, ಎಲ್ಲ ಶಾಖೆಗಳ ವಿಷಯಗಳೂ ಒಬ್ಬನೇ ಅಧಿಕಾರಿಗೆ ಅನ್ವಯಿಸುವುದಿಲ್ಲ" ಎಂದು ತೋರಿಸುವುದು, ಎನ್ನುವುದು ಸರಿಯಲ್ಲ. ಒಂದೇ ಶಾಖೆಯಲ್ಲಿಯೂ ವಿಭಿನ್ನ ವಿಷಯಗಳಿವೆ. "ವಿಜ್ಞಾನಮಾನಂದಂ ಬ್ರಹ್ಮ"—ವಿಜ್ಞಾನವೂ ಆನಂದವೂ ಬ್ರಹ್ಮ— ಎಂದು ಬೃಹದಾರಣ್ಯಕೋಪನಿಷತ್ತಿನಲ್ಲಿ ಹೇಳಿದರೆ, "ಸತ್ಯಂ ಜ್ಞಾನಮನಂತಂ ಬ್ರಹ್ಮ"—ಬ್ರಹ್ಮ ಸತ್ಯ, ಜ್ಞಾನ, ಅನಂತ—ಎಂದು ತೈತ್ತಿರೀಯೋಪನಿಷತ್ತು ಹೇಳುತ್ತದೆ. ಇದು ಶಾಖಾಭೇದಗಳಲ್ಲಿನ ವೈವಿಧ್ಯ. ಇದರಿಂದ 'ಒಬ್ಬನೇ

ಅಧಿಕಾರಿ ಎಲ್ಲವನ್ನೂ ಅಧ್ಯಯನ ಮಾಡಬೇಕಿಲ್ಲ' ಎನ್ನಬಹುದು. ಇದು ತಪ್ಪು. ಒಂದೇ ಶಾಖೆಯಲ್ಲಿ "ಆತ್ಮೇತ್ಯೇವೋಪಾಸೀತ" — ಆತ್ಮನೆಂದೇ ಉಪಾಸನೆ ಮಾಡಬೇಕು – ಎಂದು ಬೃಹದಾರಣ್ಯಕದಲ್ಲಿಯೂ "ಕಂ ಬ್ರಹ್ಮ, ಖಂ ಬ್ರಹ್ಮ" ಎಂದು ಛಾಂದೋಗ್ಯದಲ್ಲಿಯೂ ಭಿನ್ನರೀತಿಯಲ್ಲಿ ಹೇಳಲಾಗಿದೆ.]

ಓಂ ಸ್ವಾಧ್ಯಾಯಸ್ಯ ತಥಾತ್ವೇನ ಹಿ, ಸಮಾಚಾರೇಽಧಿಕಾರಾಚ್ಚ ಓಂ 3

ಸ್ವಾಧ್ಯಾಯ ಅಧಿಕಾರಿಗಳಿಗೆಲ್ಲ ಸಮಾನ, ಸರ್ವವೇದೋಕ್ತಕರ್ಮಾಚರಣೆಯಲ್ಲಿ ಅಧಿಕಾರವಿರುವುದರಿಂದಲೂ.

[ತಮ್ಮ ತಮ್ಮ ಶಾಖೆಯ ವೇದಾಧ್ಯಯನ ಮಾಡಬೇಕಾದುದು ಅಧಿಕಾರಿಗಳಿಗೆಲ್ಲ ಸಾಮಾನ್ಯವಿಧಿ. 'ಹಿ'ಶಬ್ದ, ದ್ವಿಜನು ಸರಹಸ್ಯವಾದ ವೇದಗಳನ್ನೆಲ್ಲ ಓದಬೇಕೆಂದೇ ತಿಳಿಸುವುದು; ಅದರ ಭಾಗವಾದ ಸ್ವಶಾಖಾಧ್ಯಯನವನ್ನಾದರೂ ಅಗತ್ಯವಾಗಿ ಮಾಡಬೇಕು. ಸರ್ವವೇದಾರ್ಥನಿರ್ಣಯದಿಂದ ಉತ್ಪನ್ನವಾಗುವ ಜ್ಞಾನದ ವಿಷಯವೇ, ಬ್ರಹ್ಮ. ಎಲ್ಲರೂ ಎಲ್ಲ ಕೆಲಸಗಳನ್ನೂ ಮಾಡಲು ಶಕ್ತರಲ್ಲವೆಂದೇ ಶಾಖಾಭೇದ, ಕರ್ಮಭೇದಗಳನ್ನು ವ್ಯಾಸರು ನಿರೂಪಿಸಿದರು.]

ಓಂ ಸಲಿಲವಚ್ಚ ತನ್ನಿಯಮಃ ಓಂ 4

ನೀರಿನಂತೆಯೂ ಆ ನಿಯಮವಿದೆ.

[ಎಲ್ಲ ನದಿಗಳ ನೀರೂ ಸಮುದ್ರವನ್ನೇ ಸೇರುವಂತೆ ಎಲ್ಲ ಶಬ್ದಗಳೂ ಬ್ರಹ್ಮಜ್ಞಾನಕ್ಕೆ ಸಾಧನವಾಗಿವೆ. ಇದು ನಿಯಮ.]

ಓಂ ದರ್ಶಯತಿ ಚ ಓಂ 5

ಶ್ರುತಿಯೂ ಇದನ್ನು ತೋರಿಸುತ್ತದೆ.

["ಸರ್ವೈಶ್ಚ ವೇದೈಃ ಪರಮೋ ಹಿ ದೇವೋ, ಜಿಜ್ಞಾಸ್ಯೋಽಸೌ ನಾಲ್ಪವೇದೈಃ ಪ್ರಸಿದ್ಧ್ಯೇತ್ । ತಸ್ಮಾದೇನಂ ಸರ್ವವೇದಾನಧೀತ್ಯ, ವಿಚಾರ್ಯ ಚ ಜ್ಞಾತುಮಿಚ್ಛೇನ್ಮುಮುಕ್ಷುಃ"—ಸರ್ವವೇದಗಳಿಂದಲೂ ಈ ಪರಮಾತ್ಮನೇ ಜಿಜ್ಞಾಸ್ಯನಾಗಿರುವನು, ವೇದಗಳ ಸ್ವಲ್ಪಭಾಗದಿಂದ ಮಾತ್ರವೇ ಅಲ್ಲ; ಆದುದರಿಂದ ಮೋಕ್ಷಸುಖವನ್ನು ಬಯಸುವವನು ಎಲ್ಲ ವೇದಗಳನ್ನೂ ಓದಿ ಈತನ ವಿಷಯದಲ್ಲಿ ವಿಚಾರಮಾಡಿ ತಿಳಿದುಕೊಳ್ಳಲು ಅಪೇಕ್ಷಿಸಬೇಕು—ಎಂದು ಚತುರ್ವೇದಶಿಖೆ ಹೇಳುತ್ತದೆ.]

ಓಂ ಉಪಸಂಹಾರೋಽರ್ಥಾಭೇದಾದ್ವಿಧಿಶೇಷ-ವತ್ಸಮಾನೇ ಚ ಓಂ 6

ವಿಧಿಶೇಷಗಳಾದ ಕರ್ಮಗಳಂತೆ ಗುಣಗಳನ್ನೂ ಉಪಸಂಹಾರ ಮಾಡಿಕೊಳ್ಳಬೇಕು, ಅರ್ಥ ಒಂದೇ ಆಗಿರುವುದರಿಂದ.

[ಸರ್ವವೇದಾಂತಗಳಿಂದ ತಿಳಿಯಲ್ಪಟ್ಟ ಗುಣಗಳನ್ನೂ ಎಲ್ಲ ದೋಷಾಭಾವವನ್ನೂ ಉಪಸಂಹಾರ ಮಾಡಿಕೊಂಡು, ವಿಧಿವಿಹಿತ ಸಂಧ್ಯಾವಂದನಾದಿ ಕರ್ಮಗಳನ್ನು ಮಾಡುವಂತೆ ಪರಮಾತ್ಮನನ್ನು ಉಪಾಸಿಸಬೇಕು. ಸಮಾನ ವಿಷಯದಲ್ಲಿಯೇ ಉಪಸಂಹಾರ ಮಾಡಬೇಕು. "ಸೋಽರೋದೀತ್"—ಅವನು ಅತ್ತನು—ಮುಂತಾದ ವಿಷಯಗಳಲ್ಲಿ ಉಪಾಸನೆ ಕೊನೆಗಾಣಬಾರದು. ನಿರ್ದೋಷವಾದ ಗುಣಗಳಿಂದಲೇ ಉಪಾಸನೆ ಮಾಡಬೇಕು; ಹಾಗೂ ಅಪೂರ್ಣಗುಣಗಳಿಂದಲೂ ಉಪಾಸನೆ ಮಾಡಬಾರದು.]

ಓಂ ಅನ್ಯಥಾತ್ವಂ ಶಬ್ದಾದಿತಿ ಚೇನ್ನ, ಅವಿಶೇಷಾತ್ ಓಂ 7

ಶ್ರುತಿಯಿರುವುದರಿಂದ ಬೇರೆ ವಿಧವಾಗಿಯೂ ಉಪಾಸನೆ ಮಾಡಬಹುದು, ಎನ್ನುವುದು ಸರಿಯಲ್ಲ; "ಇಂಥ ಗುಣಗಳನ್ನು ಉಪಾಸನೆ ಮಾಡಬಾರದು" ಎಂಬ ವಿಶೇಷ ವಾಕ್ಯವಿಲ್ಲದಿರುವುದರಿಂದ.

"ಆತ್ಮೇತ್ಯೇವೋಪಾಸೀತ"—ಆತ್ಮನೆಂದೇ ಉಪಾಸನೆ ಮಾಡಬೇಕು—ಎಂದು ಹೇಳಿರುವುದರಿಂದ, ಬೇರೆ ವಿಧವಾಗಿಯೂ ಉಪಸಂಹಾರ ಮಾಡಬಹುದು, ಎನ್ನುವುದು ಸರಿಯಲ್ಲ. ಈ ಶ್ರುತಿ ಅನಾತ್ಮನನ್ನು ಉಪಾಸನೆ ಮಾಡಬಾರದೆಂದಷ್ಟೇ ಹೇಳುತ್ತದೆ! ಸರ್ವಗುಣಗಳೂ ಒಬ್ಬ ಈಶ್ವರನಿಗೇ ಸಲ್ಲುವುವು, ಅವನೇ ಸರ್ವದೋಷದೂರ. ಅವನ ಉಪಾಸನೆಯನ್ನೇ ಮಾಡಬೇಕು.]

ಓಂ ನ ವಾ ಪ್ರಕರಣಭೇದಾತ್, ಪರೋವರೀಯಸ್ತ್ವಾದಿವತ್ ಓಂ 8

ಎಲ್ಲ ಗುಣಗಳಿಗೆ ಪ್ರಕರಣ ಭೇದವಿರುವುದರಿಂದ, ಸರ್ವಗುಣಗಳ ಉಪಸಂಹಾರವನ್ನು ಮಾಡದೆ ಇರಬಹುದು. ಪರೋವರೀಯಸ್ತ್ವಾದಿಗಳಲ್ಲಿ ಅಷ್ಟನ್ನೇ ಹೇಳಿದೆ.

[ಆಕಾಶಪ್ರಕರಣದಲ್ಲಿನ ಪರೋವರೀಯಸ್ತ್ವಾದಿ ಉಪಾಸನೆಗಳಲ್ಲಿ ಸರ್ವ ಗುಣೋಪಸಂಹಾರ ಇಲ್ಲ. ಹಾಗೆ ಆಯಾ ಪ್ರಕರಣದಲ್ಲಿ ಅಷ್ಟಷ್ಟೇ ಗುಣ ಗಳನ್ನು ಹೇಳಿದೆ. ಪರೋವರೀಯ ಎಂದರೆ ಉತ್ತರೋತ್ತರ ಶ್ರೇಷ್ಠ.]

ಓಂ ಸಂಜ್ಞಾತಶ್ಚೇತ್ತದುಕ್ತಂ, ಅಸ್ತಿ ತು ತದಪಿ ಓಂ 9

ಸಂಜ್ಞೆಯಿಂದ ಎಂದರೆ ಅದನ್ನು ಹಿಂದೆ ಹೇಳಿದೆ, ಅದೂ ಇದೆ.

[ಸರ್ವಶ್ರುತಿಗಳೂ ಬ್ರಹ್ಮನ ನಾಮಗಳಾಗಿವೆ, ಅವನ್ನೆಲ್ಲ ಉಪಸಂಹರಿಸಿ ಕೊಳ್ಳಬೇಕು, ಎನ್ನುವುದು ಸರಿಯೇ. "ನಾಮತ್ವಾತ್ಸರ್ವವಿದ್ಯಾನಾಂ ಗುಣಾ-ನಾಮುಪಸಂಹೃತಿಃ । ಕಾರ್ಯೈವ ಬ್ರಹ್ಮಣಿ ಪರೇ ನಾತ್ರ ಕಾರ್ಯಾ ವಿಚಾರಣಾ" ಎಂದು ಬ್ರಹ್ಮತರ್ಕದಲ್ಲಿ ಹೇಳಿರುವುದು ಸತ್ಯವೇ. "ನಾಮ ವಾ ಏತಾ ಬ್ರಹ್ಮಣಃ ಸರ್ವವಿದ್ಯಾಃ, ತಸ್ಮಾದೇಕಃ ಸರ್ವಗುಣೈರ್ವಿಚಿಂತ್ಯಃ"— ಈ ವಿದ್ಯೆಗಳೆಲ್ಲ ಬ್ರಹ್ಮನ ಹೆಸರುಗಳೇ, ಆದುದರಿಂದ ಮುಖ್ಯವಾಗಿ ಒಬ್ಬನನ್ನೇ (ವಿಷ್ಣುವನ್ನೇ) ಸರ್ವಗುಣಗಳಿಂದ ಧ್ಯಾನ ಮಾಡಬೇಕು"—ಎಂದು ಕೌಂಡಿನ್ಯ ಶ್ರುತಿ ಇದೆ.]

ಓಂ ಪ್ರಾಪ್ತೇಶ್ಚ ಸಮಂಜಸಮ್ ಓಂ 10

ಪ್ರಾಪ್ತಿಯಿಂದಲೂ ಸಮಂಜಸವೇ.

["ವ್ಯಾಪ್ತೇಶ್ಚ ಸಮಂಜಸಂ" ಎಂಬ ಪಾಠವನ್ನು ಶಾಂಕರ, ರಾಮಾನುಜ ಭಾಷ್ಯಗಳಲ್ಲಿ ಅಂಗೀಕರಿಸಿದ್ದಾರೆ. ಜೀವನ ಯೋಗ್ಯತಾವಿಶೇಷದಿಂದ ಉಪ ಸಂಹಾರ ಹಾಗೂ ಅನುಪಸಂಹಾರಗಳು ಕೂಡುತ್ತವೆ. "ಗುಣೈಃ ಸರ್ವೈ-ರುಪಾಸ್ಯೋಽಸೌ ಬ್ರಹ್ಮಣಾ ಪರಮೇಶ್ವರಃ । ಅನ್ಯೈರ್ಯಥಾಕ್ರಮಂ ಚೈವ ಮಾನುಷ್ಯೈಃ ಕೈಶ್ಚಿದೇವ ತು"—ಚತುರ್ಮುಖ ಬ್ರಹ್ಮನು ಈ ಪರಮೇಶ್ವರನನ್ನು ಸರ್ವಗುಣಗಳಿಂದ ಕೂಡಿದವನನ್ನಾಗಿ ಉಪಾಸನೆ ಮಾಡುತ್ತಾನೆ, ಇತರ ದೇವತೆಗಳು ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಕ್ರಮದಿಂದ ಉಪಾಸಿಸು ತ್ತಾರೆ, ಮನುಷ್ಯರು ಅಶಕ್ತರಾದುದರಿಂದ ಕೆಲವೇ ಗುಣಗಳನ್ನು ಹಿಡಿದು ಉಪಾಸನೆ ಮಾಡುತ್ತಾರೆ—ಎಂದು ಭವಿಷ್ಯತ್ಪರ್ವದಲ್ಲಿದೆ.]

ಓಂ ಸರ್ವಾಭೇದಾದನ್ಯತ್ರೇಮೇ ಓಂ 11

ಸರ್ವಗುಣಗಳಿಂದ ಅಭಿನ್ನನನ್ನಾಗಿ ಈಶನನ್ನು ಉಪಾಸನೆ ಮಾಡಿ ಇವರು ಬೇರೆ ಬೇರೆ ಫಲ ಹೊಂದುತ್ತಾರೆ.

[ಸಂಪೂರ್ಣಗುಣೋಪಾಸನೆಯಿಂದ ಚತುರ್ಮುಖನು ಮೋಕ್ಷದಲ್ಲಿ ಸಂಪೂರ್ಣಾನಂದವನ್ನು ಪಡೆಯುವನು. ಸಾಮಾನ್ಯರಾದ ಇತರರು ತಮ್ಮ ಯೋಗ್ಯತೆಗೆ ಅನುಸಾರವಾಗಿ ಉಪಾಸನೆ ಮಾಡಿ ಅದಕ್ಕೆ ತಕ್ಕ ಫಲವನ್ನೇ ಪಡೆಯುವರು. ಹೀಗೆಂದು ಪದ್ಮಪುರಾಣದಲ್ಲಿಯೂ ಹೇಳಿದೆ.]

ಓಂ ಆನಂದಾದಯಃ ಪ್ರಧಾನಸ್ಯ ಓಂ 12

ಪ್ರಧಾನಫಲಕ್ಕಾಗಿ ಆನಂದಾದಿಗುಣಗಳನ್ನೇ ಉಪಾಸನೆ ಮಾಡಬೇಕು.

[ಉಪಾಸನೆಗೆ ಪ್ರಧಾನಫಲ ಮೋಕ್ಷವೇ. ಅದನ್ನು ದೊರಕಿಸಿಕೊಳ್ಳುವುದಕ್ಕಾಗಿ ಈಶನ ಆನಂದ, ಜ್ಞಾನ, ನಿರ್ದೋಷತ್ವ, ಆತ್ಮತ್ವ ಎಂಬ ಗುಣಗಳನ್ನು ಮುಖ್ಯವಾಗಿ ಉಪಾಸನೆ ಮಾಡಬೇಕು. "ಸಚ್ಚಿದಾನಂದ ಆತ್ಮೇತಿ ಬ್ರಹ್ಮೋಪಾಸಾ ವಿನಿಶ್ಚಿತಾ"—ಸತ್, ಚಿತ್, ಆನಂದ, ಆತ್ಮಾ ಎಂದು ಬ್ರಹ್ಮೋಪಾಸನೆ ನಿಶ್ಚಿತವಾಗಿದೆ—ಎಂದು ಬ್ರಹ್ಮತರ್ಕ ತಿಳಿಸುತ್ತದೆ.]

ಓಂ ಪ್ರಿಯಶಿರಸ್ತ್ವಾದ್ಯಪ್ರಾಪ್ತಿರುಪಚಯಾಪಚಯೌ ಹಿ ಭೇದೇ ಓಂ 13

ಪ್ರಿಯಶಿರಸ್ತ್ವಾದಿಗುಣಗಳ ಅಪ್ರಾಪ್ತಿ ಮತ್ತು ಹೆಚ್ಚುಕಡಿಮೆಗಳು ಭೇದದಲ್ಲಿರುವುವು,

[ಮುಕ್ತಿಯ ಫಲದಲ್ಲಿ ಜೀವನ ಯೋಗ್ಯತೆಯಂತೆ ಭೇದವಿರುವುದರಿಂದ ಪರಮಾತ್ಮನ ಪ್ರಿಯಶಿರಸ್ತ್ವಾದಿ ನಾನಾಗುಣೋಪಾಸನೆಯ ಪ್ರಾಪ್ತಿ ಎಲ್ಲರಿಗೂ ಆಗುವುದಿಲ್ಲ. ಫಲಭೇದ ಬರುವುದಕ್ಕಾಗಿ ಗುಣೋಪಾಸನೆಯಲ್ಲಿ ವೃದ್ಧಿಹ್ರಾಸಗಳೂ ಆಗುವುವು. ಪ್ರಿಯಶಿರಸ್ತ್ವ ಎಂದರೆ ಪ್ರಿಯವೇ ಶಿರವಾಗಿ ಪಡೆದಿರುವಿಕೆ.]

ಓಂ ಇತರೇ ತ್ವರ್ಥಸಾಮಾನ್ಯಾತ್ ಓಂ 14

ಇತರ ಗುಣಗಳಾದರೋ ಫಲ ಸಾಮಾನ್ಯವಾಗಿರುವುದರಿಂದ ಉಪಾಸ್ಯವಾಗಿವೆ.

[ಆನಂದ, ಜ್ಞಾನ, ನಿರ್ದೋಷತ್ವ, ಆತ್ಮತ್ವ ಎಂಬ ಗುಣಗಳನ್ನಾಗಲಿ, ಸರ್ವಗುಣಗಳನ್ನಾಗಲಿ ಬಿಟ್ಟರೆ ಇತರ ಗುಣಗಳು ಫಲಸಾಮಾನ್ಯಪ್ರಾಪ್ತಿ ದೃಷ್ಟಿಯಿಂದ ಉಪಸಂಹಾರಪೂರ್ವಕವಾಗಿ ಉಪಾಸನೆಗೆ ಅರ್ಹವೇ ಆಗಿವೆ.]

ಓಂ ಆಧ್ಯಾನಾಯ,
ಪ್ರಯೋಜನಾಭಾವಾತ್ ಓಂ 15

ಚೆನ್ನಾಗಿ ಧ್ಯಾನ ಮಾಡುವುದಕ್ಕಾಗಿಯೇ ಎಲ್ಲ ಗುಣಗಳನ್ನೂ ಹೇಳಿದೆ, ಬೇರೆ ಪ್ರಯೋಜನವಿಲ್ಲದಿರುವುದರಿಂದ.

[ಸರ್ವಗುಣಗಳೆಂದು ಹೇಳಿರುವುದು ಚೆನ್ನಾಗಿ ಧ್ಯಾನ ಮಾಡುವುದಕ್ಕಾಗಿಯೇ, ಮತ್ತಾವ ಪ್ರಯೋಜನವೂ ಅದರಿಂದ ಇಲ್ಲ. ಜ್ಞಾನ, ಧ್ಯಾನ, ಕರ್ಮಪ್ರವೃತ್ತಿಗಳಿಗಾಗಿಯೇ ಭಗವಂತನ ನಾನಾ ಗುಣಗಳನ್ನು ತಿಳಿಸಲಾಗಿದೆ, ಎಂದು ಪರಮಸಂಹಿತೆ ತಿಳಿಸುತ್ತದೆ.]

ಓಂ ಆತ್ಮಶಬ್ದಾಚ್ಚ ಓಂ 16

ಆತ್ಮಶಬ್ದವಿರುವುದರಿಂದಲೂ.

["ಆತ್ಮೇತ್ಯೇವೋಪಾಸೀತ"—ಆತ್ಮನೆಂದೇ ಉಪಾಸನೆ ಮಾಡಬೇಕು—ಎಂದು ಹೇಳಿರುವುದರಿಂದ ಅನುಪಸಂಹಾರ ಸಿದ್ಧಿಸುವುದು. ಇತರ ಗುಣಗಳನ್ನು ಬಿಟ್ಟು 'ಪರಮಾತ್ಮಾ' ಎಂದೇ ಉಪಾಸನೆ ಮಾಡಬಹುದು, ಎಂದು ಆ ಬೃಹದಾರಣ್ಯಕ ವಾಕ್ಯದ ತಾತ್ಪರ್ಯ.]

ಓಂ ಆತ್ಮಗೃಹೀತಿರಿತರವತ್, ಉತ್ತರಾತ್ ಓಂ 17

ಇತರ ವಾಕ್ಯಗಳಂತೆ ಆತ್ಮಶಬ್ದವನ್ನು ಗ್ರಹಿಸಬೇಕು, ಮುಂದಿನ ವಾಕ್ಯದಿಂದ.

[ಆನಂದಾದಿಗುಣಗಳು ಪರಮಾತ್ಮನಿಗೆ ಇವೆ, ಎಂಬ ವಾಕ್ಯಕ್ಕೆ ಆತ್ಮನನ್ನೇ ಉಪಾಸನೆಗಾಗಿ ತೆಗೆದುಕೊಳ್ಳುವುದು ವಿರೋಧವಲ್ಲ. "ಸತ್ಯಂ ಜ್ಞಾನಮನಂತಂ ಬ್ರಹ್ಮ" ಮುಂತಾದ ವಾಕ್ಯಗಳಲ್ಲಿ ಬ್ರಹ್ಮನ ಇತರ ಗುಣಗಳನ್ನೂ ಸಂಗ್ರಹಿಸಿರುವಂತೆ ಆತ್ಮಶಬ್ದದಿಂದಲೂ ಆನಂದಾದಿಗುಣಗಳನ್ನು ಗ್ರಹಿಸಬಹುದು. "ಅತ್ರ ಹ್ಯೇತೇ ಸರ್ವ ಏಕೀಭವಂತಿ"—ಈ ಪರಮಾತ್ಮನಲ್ಲಿಯೇ ಇವೆಲ್ಲವೂ ಒಂದಾಗಿ ಸೇರುವುವು—ಎಂದು ಬೃಹದಾರಣ್ಯಕ ವಾಕ್ಯವಿದೆ.]

ಓಂ ಅನ್ವಯಾದಿತಿ ಚೇತ್,
ಸ್ಯಾದವಧಾರಣಾತ್ ಓಂ 18

ಅನ್ವಯದಿಂದ ಎಂದರೆ, ಅವಧಾರಣದಿಂದ ಸರಿಯಾಗುವುದು.

[ಆತ್ಮಶಬ್ದಕ್ಕೆ ಸರ್ವಗುಣಗಳ ಅನ್ವಯವಿದೆ. ಆದುದರಿಂದ ಅನುಪಸಂಹಾರಪ್ರಮಾಣತ್ವ ಅಯುಕ್ತ, ಎನ್ನಬಾರದು. ಸರ್ವಗುಣವಾಚಿತ್ವವನ್ನೇ ಆತ್ಮಶಬ್ದಕ್ಕೆ ಒಪ್ಪುತ್ತೇವೆ. ಏಕೆಂದರೆ 'ಆತ್ಮೇತ್ಯೇವ' ಎಂಬಲ್ಲಿ ಅವಧಾರಣ ಸೂಚಕವಾದ 'ಏವ' ಶಬ್ದವಿದೆ. ಹಾಗಲ್ಲದಿದ್ದರೆ ಪರಮಾತ್ಮ ಸರ್ವಗುಣಗಳ ಉಪಸಂಹಾರ ಮಾಡುವನು, ಎಂಬ ಮಾತಿಗೆ ವಿರೋಧ ಹುಟ್ಟುತ್ತದೆ.]

ಓಂ ಕಾರ್ಯಾಖ್ಯಾನಾದಪೂರ್ವಮ್ ಓಂ 19

ಕಾರ್ಯವನ್ನು ಹೇಳಿರುವುದರಿಂದ ಅಪೂರ್ವ ಉಪಾಸನೆ.

["ಅಲೌಕಿಕಾಸ್ತ್ವಸ್ಯಗುಣಾ ಹ್ಯುಪಾಸ್ಯಾ ಅಲೌಕಿಕಂ ಮುಕ್ತಿಕಾರ್ಯಂ ಯತೋಽಸ್ಯ"—ಈ ಪರಮಾತ್ಮ ಮಾಡುವ ಮುಕ್ತಿಕಾರ್ಯ ಅಲೌಕಿಕವಾಗಿರುವುದರಿಂದ ಬ್ರಹ್ಮನ ಗುಣಗಳು ಅಲೌಕಿಕವೆಂದೇ ತಿಳಿದು ಉಪಾಸನೆ ಮಾಡಬೇಕು—ಎಂದು ಹೇಳಿದೆ.]

ಓಂ ಸಮಾನ ಏವಂ ಚ, ಅಭೇದಾತ್ ಓಂ 20

ಅಪೂರ್ವತ್ವವಿದ್ದರೂ ಸಮಾನ ಗುಣಗಳನ್ನೇ ಉಪಸಂಹಾರ ಮಾಡಬೇಕು, ಭೇದವಿಲ್ಲದಿರುವುದರಿಂದ.

[ಪರಬ್ರಹ್ಮ ತ್ರಿವಿಕ್ರಮ ರೂಪವನ್ನು ಧರಿಸಿದರೂ, ಯಾವಾಗಲೋ ಒಮ್ಮೆ ತ್ರಿವಿಕ್ರಮತ್ವ, ಎಂಬ ವಿಶೇಷಗುಣದಲ್ಲಿ ಉಪಸಂಹಾರ ಮಾಡಬಾರದು. ನಿತ್ಯವಿಕ್ರಮತ್ವ ಪರಮಾತ್ಮನಿಗೆ ಸಿದ್ಧವಾಗಿರುವಾಗ ತ್ರಿವಿಕ್ರಮತ್ವ ಅದರಲ್ಲಿ ಸೇರಿಹೋಗಿರುವುದು.]

ಓಂ ಸಂಬಂಧಾದೇವಮನ್ಯತ್ರಾಪಿ ಓಂ 21

ಸಂಬಂಧವಿರುವುದರಿಂದ ಇತರ ಸ್ಥಳಗಳಲ್ಲಿಯೂ ಹೀಗೆಯೇ.

]ಪರಮಾತ್ಮನ ಸಂಬಂಧದಿಂದ ತ್ರಿವಿಕ್ರಮತ್ವಾದಿಗಳು ಅವನ ನಿತ್ಯಗುಣಗಳಾಗಿವೆ. ಆದುದರಿಂದ ಆ ಗುಣಗಳನ್ನೂ ಕೆಲವರು ಉಪಸಂಹರಿಸಿಕೊಳ್ಳಬಹುದು. ಬೃಹತ್ತಂತ್ರದಲ್ಲಿ "ಚತುರ್ಮುಖ ಬ್ರಹ್ಮ ಸರ್ವಗುಣಗಳಲ್ಲಿ ಶ್ರೇಷ್ಠನಾಗಿರುವುದರಿಂದ ಅವನು ಮಾತ್ರ ತ್ರಿವಿಕ್ರಮತ್ವಾದಿಗುಣಗಳನ್ನು ಉಪಸಂಹರಿಸಿಕೊಳ್ಳಬಹುದು" ಎಂದು ಹೇಳಿದೆ.]

ಓಂ ನ ವಾ, ವಿಶೇಷಾತ್ ಓಂ 22

ಅಧಿಕಾರವಿಶೇಷದಿಂದ ಹಾಗಲ್ಲದಿರಲೂಬಹುದು.

[ಆತ್ಮನೆಂದು ಉಪಾಸಿಸುವಾಗ, ಎಲ್ಲರೂ ಪರಮಾತ್ಮನ ಸರ್ವಗುಣಗಳನ್ನೂ ಗ್ರಹಿಸಬೇಕೆಂದು ಸಿದ್ಧವಾಗದು. ಅಧಿಕಾರಿವಿಶೇಷದಿಂದ ಅವರವರ ಯೋಗ್ಯತೆ, ಸಾಮರ್ಥ್ಯಗಳು ಬೇರೆಬೇರೆಯಾಗಿರುತ್ತವೆ.]

ಓಂ ದರ್ಶಯತಿ ಚ ಓಂ 23

ಶ್ರುತಿಯೂ ಇದನ್ನು ಹೇಳುತ್ತದೆ.

["ಸರ್ವಾನ್ ಗುಣಾನಾತ್ಮಶಬ್ದೋ ಬ್ರವೀತಿ ಬ್ರಹ್ಮಾದೀನಾಂ, ಇತರೇಷಾಂ ನ ಚೈವ"—'ಆತ್ಮ' ಶಬ್ದ ಚತುರ್ಮುಖ ಬ್ರಹ್ಮಾದಿಗಳಿಗೆ ಸರ್ವಗುಣಗಳನ್ನೂ ಬೋಧಿಸುತ್ತದೆ, ಇತರರಿಗೆ ಹಾಗಲ್ಲ—ಎಂದು ಭಾಲ್ಲವೇಯ ಶ್ರುತಿ ಹೇಳುತ್ತದೆ.]

ಓಂ ಸಂಭೃತಿದ್ಯುವ್ಯಾಪ್ತ್ಯಪಿ ಚಾತಃ ಓಂ 24

ಆದುದರಿಂದಲೇ ಸಂಭೃತಿ, ದ್ಯುವ್ಯಾಪ್ತಿಗಳೂ ಕೂಡ.

[ಸಂಭೃತಿ ಎಂದರೆ ವಿಶ್ವಪಾಲನೆ—ಎಲ್ಲರನ್ನೂ ಕಾಪಾಡುವುದು; ದ್ಯುವ್ಯಾಪ್ತಿ ಎಂದರೆ ಸ್ವರ್ಗಾದಿಲೋಕಗಳವರೆಗೆ ವ್ಯಾಪ್ತಿ. ಲೋಕದ ಸಮಸ್ತ ಪ್ರಾಣಿಗಳನ್ನೂ ಕಾಪಾಡುವುದು ಮತ್ತು ಸರ್ವತ್ರ ವ್ಯಾಪ್ತಿ ಇವೆರಡೂ ಪರಮಾತ್ಮನ ಗುಣಗಳೇ. ಇವನ್ನು ಚೆನ್ನಾಗಿ ತಿಳಿಯಬಲ್ಲವರು ದೇವತೆಗಳೇ; ಸಾಮಾನ್ಯ ಮನುಷ್ಯನಿಗೆ ಇವುಗಳ ಮಹತ್ತ್ವದ ಸಂಪೂರ್ಣ ಜ್ಞಾನ ಹುಟ್ಟುವುದಿಲ್ಲ. ಆದುದರಿಂದ ಸಂಭೃತಿ, ದ್ಯುವ್ಯಾಪ್ತಿ ಮೊದಲಾದ ಗುಣಗಳನ್ನು ದೇವತೆಗಳೇ ಉಪಸಂಹಾರ ಮಾಡಿಕೊಂಡು ಉಪಾಸನೆ ಮಾಡಬೇಕು. ಸಾಮಾನ್ಯರಾದ ಇತರರಿಗೆಲ್ಲ ಆನಂದಾದಿಗುಣಗಳ ಉಪಾಸನೆ ಹೇಳಲ್ಪಟ್ಟಿದೆ. ಯೋಗ್ಯತೆಯನ್ನು ಅರಿಯದೆ ವಿಪರೀತ ಉಪಾಸನೆ ಮಾಡುವವರಿಗೆ ಅನರ್ಥವೇ ಆದೀತು! ಇದನ್ನು ಬ್ರಹ್ಮತರ್ಕದಲ್ಲಿ ಹೀಗೆ ತಿಳಿಸಲಾಗಿದೆ: ದೇವಾದೀನಾಮುಪಾಸ್ಯಾಸ್ತು ಭೂತಿವ್ಯಾಪ್ತ್ಯಾದಯೋ ಗುಣಾಃ। ಆನಂದಾದ್ಯಾಸ್ತು ಸರ್ವೇಷಾಮನ್ಯಥಾಽನರ್ಥಕೃದ್ಭವೇತ್ ॥"

ಓಂ ಪುರುಷವಿದ್ಯಾಯಾಮಪಿ ಚ, ಇತರೇಷಾಮನಾಮ್ನಾನಾತ್ ಓಂ 25

ಪುರುಷವಿದ್ಯೆಯಲ್ಲಿಯೂ ಕೂಡ, ಇತರ ಗುಣಗಳನ್ನು ಹೇಳದಿರುವುದರಿಂದ.

[ಪುರುಷಸೂಕ್ತದಲ್ಲಿ ವಿಷ್ಣುವಿನ ಗುಣಗಳನ್ನು ಹೇಳಿದೆ. ಆದರೂ ಅಲ್ಲಿ ಎಲ್ಲ ಗುಣಗಳನ್ನೂ ಪೂರ್ಣವಾಗಿ ಹೇಳಿಲ್ಲವಾದುದರಿಂದ, ಅಲ್ಲಿ ಹೇಳಿರುವ ಗುಣಗಳನ್ನೆಲ್ಲ ಉಪಸಂಹರಿಸಿಕೊಳ್ಳಬಹುದು. ಈ ವಿಷಯವನ್ನು ಬ್ರಹ್ಮ-ತರ್ಕದಲ್ಲಿ ಹೇಳಿದೆ. ಕೆಲವು ಗುಣಗಳನ್ನು ಅಲ್ಲಿ ವಿವರಿಸಿಲ್ಲ. ಆದುದರಿಂದ ಅಲ್ಲಿ ಹೇಳಿರುವ ಗುಣಗಳ ಉಪಾಸನೆ ಸಾಮಾನ್ಯರಿಗೂ ಸಾಧ್ಯ, ಎಂದು ತಾತ್ಪರ್ಯ.]

ಓಂ ವೇಧಾದ್ಯರ್ಥಭೇದಾತ್ ಓಂ 26

ವೇಧಾದಿ ಶಬ್ದಗಳಿಗೆ ಬೇರೆ ಫಲವಿರುವುದರಿಂದ ಅವು ಉಪಾಸ್ಯಗಳಲ್ಲ.

[ಆಥರ್ವಣಿಕರ ಉಪನಿಷತ್ತಿನಲ್ಲಿ ಶತ್ರುಗಳ ವಿಷಯವನ್ನು ಹಿಡಿದು, 'ಹೃದಯಂ ಪ್ರವಿಧ್ಯ' ಮೊದಲಾಗಿ ಹಿಂಸಾತ್ಮಕ ಕಾರ್ಯಗಳನ್ನು ವರ್ಣಿಸಿದೆ. ಆ ಮಂತ್ರಗಳು ಉಪಾಸನೆಗೆ ಯೋಗ್ಯವಾದ ವಿದ್ಯೆಗಳಾಗುವುದಿಲ್ಲ. "ಹೊಡಿ, ಮುರಿ, ನಾಶಮಾಡು" ಮುಂತಾದವುಗಳಿಗೆ ಬೇರೆ ಅಧಿಕಾರಿಗಳಿರುವುದರಿಂದ ಯತಿ, ಮೊದಲಾದವರಿಗೆ ಅವು ವ್ಯರ್ಥವಾಗಿವೆ. "ಅಯೋಗ್ಯೋಪಾಸನಾ-ದೀಯುರನರ್ಥಂ ಚಾರ್ಥನಾಶನಂ"—ಯೋಗ್ಯವಲ್ಲದ ರೀತಿಯಲ್ಲಿ ಉಪಾಸನೆ ಮಾಡುವುದರಿಂದ ಅನರ್ಥಪ್ರಾಪ್ತಿ ಹಾಗೂ ಅರ್ಥನಾಶಗಳು ಉಂಟಾಗುವುವು—ಎಂದು ಬೃಹತ್ತಂತ್ರ ತಿಳಿಸುತ್ತದೆ.]

ಓಂ ಹಾನೌ ತೂಪಾಯನಶಬ್ದಶೇಷತ್ವಾತ್, ಕುಶಾಚ್ಛಂದಸ್ತುತ್ಯುಪಗಾನವತ್, ತದುಕ್ತಮ್ ಓಂ 27

ಬಿಡಬೇಕಾದಾಗ ಸ್ವೀಕಾರವನ್ನೂ ಸೇರಿಸಿಕೊಳ್ಳಬೇಕು, ಹಾಗೆ ಶಬ್ದಶೇಷವಿರುವುದರಿಂದ ; ಕುಶಾಹರಣ ಸ್ತುತಿ, ಉಪಾಸನೆಗಳಂತೆ ಅದು ಹೇಳಲ್ಪಟ್ಟಿದೆ.

[ಮುಕ್ತನಾದ ಮೇಲೆ ಉಪಾಸನೆ ಮಾಡಬೇಕೋ ಇಲ್ಲವೋ, ಎಂಬ ಸಂಶಯಕ್ಕೆ ಈ ಸೂತ್ರ ಪರಿಹಾರವನ್ನು ತಿಳಿಸುತ್ತದೆ. ತಮಗೆ ನಿಯತವಾದ ಸ್ವಾಧ್ಯಾಯವನ್ನು ಮಾಡಿ ಮುಗಿಸಿದ ಬ್ರಾಹ್ಮಣರು ತಮ್ಮ ಇಚ್ಛೆಯಿಂದಲೇ ದರ್ಭೆಯನ್ನು ಸಂಗ್ರಹಿಸುವುದು, ದೇವತಾಸ್ತೋತ್ರ ಮೊದಲಾದುವನ್ನು ಅಭ್ಯಾಸಬಲದಿಂದ ಮಾಡಿಕೊಳ್ಳುತ್ತಿರುವಂತೆಯೇ ಮೋಕ್ಷಪ್ರಾಪ್ತಿಯಾದ ಮೇಲೆಯೂ ಉಪಾಸನಾದಿಗಳನ್ನು ಮಾಡಬಹುದು. ಉಪಾಸನೆ ಮೋಕ್ಷಕ್ಕೆ

ಸಾಧನವಷ್ಟೆ. ಆದುದರಿಂದ ಮೋಕ್ಷ ಪ್ರಾಪ್ತವಾದಾಗ ಉಪಾಸನೆಯನ್ನು ನಿಲ್ಲಿಸಲೂಬಹುದು. ಕೌಷೀತಕೀ ಬ್ರಾಹ್ಮಣದಲ್ಲಿ 'ಬಿಡುವುದು' ಎಂದಾಗ ಮುಂದೆ 'ಗ್ರಹಿಸುವುದು' ಎಂಬುದನ್ನೂ ಸೇರಿಸಿದೆ. ಆದುದರಿಂದ ಪುನಃ ಉಪಾಸನಾದಿಗಳನ್ನು ಮುಂದುವರಿಸುವುದರಲ್ಲಿ ಆಕ್ಷೇಪಣೆಯಿಲ್ಲ. "ಏತತ್ಸಾಮ ಗಾಯನ್ನಾಸ್ತೇ"—ಎಂದು ಮುಕ್ತರೂ ಸಾಮಗಾನ ಮಾಡುವುದನ್ನು ಹೇಳಿದೆ. "ಮುಕ್ತಾ ಅಪಿ ಹಿ ಕುರ್ವಂತಿ ಸ್ವೇಚ್ಛಯೋಪಾಸನಂ ಹರೇಃ"—ಮುಕ್ತರೂ ಸ್ವೇಚ್ಛೆಯಿಂದಲೇ ಶ್ರೀಹರಿಯ ಉಪಾಸನೆ ಮಾಡುವರು—ಎಂದು ಭಾರತದಲ್ಲಿ, ಹೇಳಿದೆ.]

ಓಂ ಸಾಂಪರಾಯೇ ತರ್ತವ್ಯಾಭಾವಾತ್, ತಥಾ ಹ್ಯನ್ಯೇ ಓಂ 28

ಮುಕ್ತಿಯಲ್ಲಿ ಮಾಡಬೇಕಾದುದು ಏನೂ ಇಲ್ಲದಿರುವುದರಿಂದ, ಹಾಗೆ ಕೆಲವರು ಪಠಿಸುತ್ತಾರೆ.

[ಮೋಕ್ಷಪ್ರಾಪ್ತಿಗಾಗಿ ಸಂಸಾರದ ಸುಖದುಃಖಗಳನ್ನೆಲ್ಲ ದಾಟಿ ಹೋಗಬೇಕು, ಮುಕ್ತನಾದವನಿಗೆ ಹಾಗೆ ಮಾಡಬೇಕಾದುದು ಯಾವುದೂ ಇಲ್ಲ. ಆದುದರಿಂದ ಮುಕ್ತನು ಮಾಡುವ ಸ್ತುತಿ, ಯಜ್ಞಾದಿಕರ್ಮಗಳು, ಉಪಾಸನೆ, ಎಲ್ಲ ಅವನ ಸ್ವೇಚ್ಛೆಯಿಂದಲೇ ಮಾಡಲ್ಪಡುವುವು. "ತೀರ್ಣೋ ಹಿ ತದಾ ಸರ್ವಾನ್ ಶೋಕಾನ್ ಹೃದಯಸ್ಯ ಭವತಿ"—ಮುಕ್ತನಾದಾಗ ಹೃದಯದ ಎಲ್ಲ ದುಃಖಗಳನ್ನೂ ದಾಟಿದವನಾಗಿರುತ್ತಾನೆ—ಎಂದು ಕೆಲವರು ಪಠಿಸುತ್ತಾರೆ.]

ಓಂ ಛಂದತಃ, ಉಭಯಾವಿರೋಧಾತ್ ಓಂ 29

ಸ್ವೇಚ್ಛೆಯಿಂದ. ಎರಡಕ್ಕೂ ವಿರೋಧವಿಲ್ಲದಿರುವುದರಿಂದ.

[ಮುಕ್ತ ಹಿಂದಿನಂತೆಯೇ ಕರ್ಮ ಮಾಡುತ್ತಾನೆಯೋ, ಎಂದು ಸಂದೇಹ. ಯಜ್ಞ, ತಪಸ್ಸು ಮೊದಲಾದವನ್ನು ಮುಕ್ತನಾದಮೇಲೆ ತನ್ನ ಇಷ್ಟ ಬಂದಂತೆ ಜೀವನು ಮಾಡಬಹುದು ಅಥವಾ ಬಿಡಬಹುದು. ಮಾಡಲೇಬೇಕೆಂದು ನಿರ್ಬಂಧವಾಗಲಿ, ಬಿಟ್ಟರೆ ದೋಷವಾಗಲಿ ಇರುವುದಿಲ್ಲ.]

ಓಂ ಗತೇರರ್ಥವತ್ತ್ವಮುಭಯಥಾ, ಅನ್ಯಥಾ ಹಿ ವಿರೋಧಃ ಓಂ 30

ಎರಡು ರೀತಿಯಿಂದಲೂ ಗತಿಗೆ ಅರ್ಥವತ್ತ್ವವಿದೆ, ಹಾಗಿರದಿದ್ದರೆ ವಿರೋಧ ಹುಟ್ಟುವುದು.

[ಕರ್ಮದ ವಿಷಯದಲ್ಲಿ ನಿರ್ಬಂಧ ಹಾಗೂ ದೋಷ, ಎರಡೂ ಇಲ್ಲದಿರುವುದೇ ಮೋಕ್ಷಕ್ಕೆ ಪ್ರಯೋಜನ. ಹಾಗಿರದಿದ್ದರೆ ಮೋಕ್ಷವೆಲ್ಲಿ ಬಂದೀತು? ಬ್ರಹ್ಮಾಂಡದಲ್ಲಿ "ಪ್ರತ್ಯವಾಯಸ್ಯ ಬಂಧಸ್ಯಾಪ್ಯಭಾವಾತ್ ಸ್ವೇಚ್ಛಯಾ ಭವೇತ್"—ಪ್ರತ್ಯವಾಯ (ದೋಷ)ವೂ ಬಂಧವೂ ಇಲ್ಲದಿರುವುದರಿಂದ ಎಲ್ಲ ಕರ್ಮವೂ ಮೋಕ್ಷದಲ್ಲಿ ಸ್ವೇಚ್ಛೆಯಿಂದಲೇ ಆಗುವುದು—ಎಂದು ಹೇಳಿದೆ.]

ಓಂ ಉಪಪನ್ನಃ, ತಲ್ಲಕ್ಷಣಾರ್ಥೋಪಲಬ್ಧೇಃ, ಲೋಕವತ್ ಓಂ 31

ಅದಕ್ಕೆ ಲಕ್ಷಣಭೂತವಾದ ಫಲಪ್ರಾಪ್ತಿಯಾಗಿರುವುದರಿಂದ ಅದು ಯುಕ್ತವೇ, ಲೋಕದಂತೆ.

[ಯಾಗವಿಧಿ ಪೂರ್ಣವಾಗಲೆಂದು ಕೆಲವರು 'ವಿಷ್ಣುಕ್ರಮಣ'ವೆಂಬ ಕರ್ಮವನ್ನು ಮಾಡುತ್ತಾರೆ. ಅದರಿಂದ ಯಾಗದ ಪೂರ್ಣಫಲ ಅವರಿಗೆ ದೊರೆಯುತ್ತದೆ. ಆದರೂ ಮುಂದೆ ಅವರು ಸ್ವೇಚ್ಛೆಯಿಂದಲೇ ವಿಷ್ಣುಕ್ರಮಣ ಮಾಡುತ್ತಾರೆ; ಆದರೆ ಅವರಲ್ಲಿ ಕೆಲವರು ಹಾಗೆ ಮಾಡುವುದಿಲ್ಲ. ಲೋಕದಲ್ಲಿ ಹೀಗೆ ನಡೆಯುವಂತೆ ಮುಕ್ತಿಯಾದ ಮೇಲೆಯೂ ಕೆಲವರು ಪೂರ್ವದ ಕರ್ಮಾನುಷ್ಠಾನ ಮಾಡುತ್ತಾರೆ, ಮತ್ತೆ ಕೆಲವರು ಹಾಗೆ ಮಾಡುವುದಿಲ್ಲ. ಹೇಗೆ ನಡೆದುಕೊಂಡರೂ ಅದು ಯುಕ್ತವೇ ಆಗುವುದು.]

ಓಂ ಅನಿಯಮಃ ಸರ್ವೇಷಾಮವಿರೋಧಾತ್, ಶಬ್ದಾನುಮಾನಾಭ್ಯಾಮ್ ಓಂ 32

ಎಲ್ಲರಿಗೂ ಮೋಕ್ಷ, ವಿರೋಧವಿಲ್ಲದಿರುವುದರಿಂದ ನಿಯಮವಿಲ್ಲ; ಹೀಗೆ ಶಬ್ದ, ಅನುಮಾನಗಳಿವೆ.

[ಉಪಾಸನೆಗಾಗಿ ನಿಯಮವಿದೆ; ಚತುರ್ಮುಖ ಎಲ್ಲ ಗುಣಗಳಿಂದಲೂ ಉಪಾಸನೆ ಮಾಡಬೇಕು, ಇತರರು ಅವರವರ ಯೋಗ್ಯತೆಗೆ ತಕ್ಕಂತೆ, ಎಂದು; ಆದರೆ 'ಕೆಲವರು ಬ್ರಹ್ಮಜ್ಞಾನ ಪಡೆದಮೇಲೆಯೂ ಮೋಕ್ಷವನ್ನು

ಹೊಂದಲಾರರು, ಇತರರಿಗೆ ಮಾತ್ರ ಮೋಕ್ಷವುಂಟು', ಎಂಬ ನಿಯಮವಿಲ್ಲ. ಕೌಂಡಿನ್ಯಶ್ರುತಿಯಲ್ಲಿ "ನ ಕಶ್ಚಿತ್ ಬ್ರಹ್ಮವಿತ್ ಸ್ಮೃತಿಮನುಭವತಿ, ಮುಕ್ತೋ ಹ್ಯೇವ ಭವತಿ, ತಸ್ಮಾದಾಹುಃ ಸ್ಮೃತಿಹೇತಿ"—ಬ್ರಹ್ಮಜ್ಞಾನ ಪಡೆದ ಯಾವನೂ ಮುಂದೆ ಸಂಸಾರದ ಸುಖದುಃಖಗಳನ್ನು ಅನುಭವಿಸುವುದಿಲ್ಲ, ಅವನು ಮುಕ್ತನೇ ಆಗುತ್ತಾನೆ; ಆದುದರಿಂದ ಅವನನ್ನು ಜನನಮರಣರೂಪ ಸಂಸಾರವನ್ನು ನಾಶ ಮಾಡಿದವನು, ಎನ್ನುತ್ತಾರೆ—ಎಂದು ಹೇಳಿದೆ.]

ಓಂ ಯಾವದಧಿಕಾರಮವಸ್ಥಿತಿರಾಧಿಕಾರಿಕಾಣಾಮ್ ಓಂ 33

ಮೋಕ್ಷಪ್ರಾಪ್ತಿಗೆ ಅಧಿಕಾರಕ್ಕೆ ತಕ್ಕಂತೆಯೇ ಸ್ಥಿತಿ ಇರುವುದು.

[ಉಪಾಸನೆ ಮಾಡುವುದರಲ್ಲಿ ವಿವಿಧ ಜೀವರಿಗೆ ಅಧಿಕಾರ ಭೇದವಿರುವಂತೆಯೇ ಮುಕ್ತಾವಸ್ಥೆಯ ಆನಂದದಲ್ಲಿಯೂ ತಾರತಮ್ಯವಿರುವುದು. ಮನುಷ್ಯರಿಗಿಂತ ಗಂಧರ್ವರ ಆನಂದ ಹೆಚ್ಚು, ಅವರಿಗಿಂತ ದೇವತೆಗಳ ಆನಂದ ಹೆಚ್ಚು; ಹೀಗೆಯೇ ಇಂದ್ರ, ರುದ್ರ, ಚತುರ್ಮುಖ ಇವರಿಗೆಲ್ಲ ಆನಂದ-ತಾರತಮ್ಯವಿದೆ, ಎಂದು ಚತುರ್ವೇದಶಿಖೆ ಹೇಳುತ್ತದೆ. ತೈತ್ತಿರೀಯದ ಆನಂದವಲ್ಲಿಯೂ ಇದನ್ನೇ ಹೇಳುವುದು. ಹೀಗೆಯೇ ಮುಕ್ತಿಯಲ್ಲಿಯೂ ಜ್ಞಾನ, ಉಪಾಸನೆ, ಆನಂದಗಳ ತಾರತಮ್ಯ ಉಳಿದೇ ಇರುವುವು.]

ಓಂ ಅಕ್ಷರಧಿಯಾಂ ತ್ವವಿರೋಧಃ, ಸಾಮಾನ್ಯ-ತದ್ಭಾವಾಭ್ಯಾಂ, ಔಪಸದವತ್, ತದುಕ್ತಮ್ ಓಂ 34

ಬ್ರಹ್ಮಜ್ಞಾನ ಪಡೆದವರಲ್ಲಿ ವಿರೋಧವಿಲ್ಲ, ಸಾಮ್ಯತದ್ಭಾವಗಳಿಂದ, ಶಿಷ್ಯನಂತೆ; ಅದು ಹೇಳಲ್ಪಟ್ಟಿದೆ.

[ಮುಕ್ತರಲ್ಲಿ ತಾರತಮ್ಯವಿರುವುದು ವಿರೋಧವಲ್ಲ. ಅವರೆಲ್ಲ ಬ್ರಹ್ಮನಿಗೆ ಅಧೀನರಾಗಿದ್ದು ದೋಷಗಳನ್ನೆಲ್ಲ ಕಳೆದುಕೊಂಡಿರುವುದರಿಂದ ಅವರಲ್ಲಿ ಸಾಮ್ಯವಿರುವುದು, ಗುರುಶಿಷ್ಯಭಾವನೆಯೂ ಇರುವುದು. "ನಾನಾವಿಧಾ ದೇವಸಂಘಾ ವಿಮುಕ್ತಾ, ನ ಚೈವ ತೇಷಾಂ ಬ್ರಹ್ಮಧಿಯಾಂ ವಿರೋಧಃ । ದೋಷಾಭಾವಾದ್ಗುರುಶಿಷ್ಯಾದಿಭಾವಾತ್, ಲೋಕೇಽಪಿ ನಾಸೌ ಕಿಮು ತೇಷಾಂ

ವಿಮುಕ್ತೇಃ”—ಮುಕ್ತಿಸ್ಥಾನದಲ್ಲಿ ನಾನಾವಿಧ ದೇವತೆಗಳ ಸಮೂಹವಿರುವುದು. ಅವರೆಲ್ಲರಲ್ಲಿ ಬ್ರಹ್ಮಜ್ಞಾನವಿರುವುದರಿಂದ ಪರಸ್ಪರ ವಿರೋಧವಿಲ್ಲ. ದೋಷವಿಲ್ಲದಿರುವುದು, ಗುರುಶಿಷ್ಯ ಭಾವನೆ ಇರುವುದು, ಇವುಗಳಿಂದ ಲೋಕದಲ್ಲಿಯೂ ವಿರೋಧವಿರುವುದಿಲ್ಲ, ಹಾಗೆಯೇ ಮುಕ್ತಿಯಲ್ಲಿಯೂ ಇರುವುದಿಲ್ಲ—ಎಂದು ತುರಶ್ರುತಿ ಹೇಳುತ್ತದೆ.]

ಓಂ ಇಯತ್, ಆಮನನಾತ್ ಓಂ 35

ಇಷ್ಟೇ, ಶ್ರುತಿಯಲ್ಲಿ ಹೇಳಿರುವುದರಿಂದ.

[ನಾಮದಿಂದ ಆರಂಭಿಸಿ ಪ್ರಾಣದವರೆಗೆ ಉತ್ತರೋತ್ತರ ಉತ್ತಮತ್ವವನ್ನು ಹೇಳಲಾಗಿದೆ. ಪ್ರಾಣಕ್ಕಿಂತ ಹೆಚ್ಚಿನದು ಯಾವುದೂ ಇಲ್ಲ. “ಪ್ರಾಣೋ ವಾವ ಸರ್ವೇಭ್ಯೋ ಭೂಯಾನ್, ನ ಹಿ ಪ್ರಾಣಾದ್ಭೂಯಾನ್, ಪ್ರಾಣೋ ಹ್ಯೇವ ಭೂಯಾನ್, ತಸ್ಮಾದ್ಭೂಯಾನ್ನಾಮ”—ಎಲ್ಲಕ್ಕಿಂತ ಪ್ರಾಣವೇ ಹೆಚ್ಚಿನದು, ಪ್ರಾಣಕ್ಕಿಂತ ಹೆಚ್ಚಿನದು ಇಲ್ಲವೇ ಇಲ್ಲ; ಪ್ರಾಣವೇ ಹೆಚ್ಚು. ಆದುದರಿಂದಲೇ ಪ್ರಾಣವನ್ನು ‘ಭೂಯಾನ್’ ಎಂದೇ ಕರೆಯುತ್ತಾರೆ—ಎಂದು ಕೌಂಠರವ್ಯಶ್ರುತಿ ಇದೆ.]

ಓಂ ಅಂತರಾ ಭೂತಗ್ರಾಮವದಿತಿ ಚೇತ್, ತದುಕ್ತಮ್ ಓಂ 36

ಭೂತ ಪ್ರಪಂಚದಲ್ಲಿ ಒಂದರಮೇಲೊಂದು ಇರುವಂತೆ ಪ್ರಾಣನ ಮೇಲೆಯೂ ಇರುವುದೆಂದರೆ ಅದನ್ನು ಹೇಳಿಯಾಯಿತು.

[ಪರಮಾತ್ಮನನ್ನು ಬಿಟ್ಟರೆ ಪ್ರಾಣಕ್ಕಿಂತ ಹೆಚ್ಚಿನದು ಯಾವುದೂ ಇಲ್ಲ, ಉತ್ತಮವಾದುದೂ ಇಲ್ಲ, ಎಂಬ ವಿಷಯದಲ್ಲಿ ಪ್ರಮಾಣವನ್ನು ಹೇಳಿಯಾಯಿತು. ಇತರ ಕಡೆಗಳಲ್ಲಿ ಉತ್ತಮತ್ವವನ್ನು ಕಾಣಬಹುದು.]

ಓಂ ಅನ್ಯಥಾ ಭೇದಾನುಪಪತ್ತಿರಿತಿ ಚೇನ್ನ, ಉಪದೇಶವತ್ ಓಂ 37

ಹಾಗಿರದಿದ್ದರೆ ಭೇದಕ್ಕೆ ಉಪಪತ್ತಿ ಇಲ್ಲ, ಎನ್ನುವುದು ಸರಿಯಲ್ಲ, ಉಪದೇಶದಂತೆ.

[ಇತರರಿಗಿಂತ ಪ್ರಾಣನ ಉತ್ತಮತ್ವವನ್ನೂ ಅವನಿಗಿಂತ ಪರಮಾತ್ಮನ ಉತ್ತಮತ್ವವನ್ನೂ ಶ್ರುತಿ ಹೇಳುವುದರಿಂದ ಭೇದಕ್ಕೆ ಉಪಪತ್ತಿ ಇದೆ.]

ಓಂ ವ್ಯತಿಹಾರಃ, ವಿಶಿಂಷಂತಿ ಹೀತರವತ್ ಓಂ 38

ಅಧ್ಯಾಹಾರ ಮಾಡಬೇಕು ; ಇತರ ಸ್ಥಾನಗಳಲ್ಲಿರುವಂತೆ ಇಲ್ಲಿಯೂ ವಿಶೇಷಣವನ್ನು ಸೇರಿಸಿದೆ.

[ಹಿಂದಿನಂತೆ ಪ್ರಶ್ನ-ಪರಿಹಾರಗಳನ್ನು ಅಧ್ಯಾಹಾರ ಮಾಡಿಕೊಂಡರೆ ಪರಮಾತ್ಮನ ಉತ್ತಮತ್ವ ಸ್ಪಷ್ಟವಾಗುತ್ತದೆ. ಛಂದೋಗಋಷಿಗಳು ಸತ್ಯ ನಾಮಕ ಪರಮಾತ್ಮನನ್ನು ಪ್ರಾಣನಿಂದ ವಿಶೇಷಿಸಿದ್ದಾರೆ. "ಏಷ ತು ವಾ ಅತಿವದತಿ, ಯಃ ಸತ್ಯೇನಾತಿವದತಿ"—ಈ ಸತ್ಯನನ್ನೇ ಹೆಚ್ಚೆಂದು ಹೇಳು ತ್ತಾನೆ – ಎಂದು ಹೇಳಿ ಅವರು ವಿಶೇಷ ತೋರಿಸಿದ್ದಾರೆ. "ವಾಗ್ವಾವ ನಾಮ್ನೋ ಭೂಯಸೀ"—ವಾಕ್ಕು ಹೆಸರಿಗಿಂತ ಹೆಚ್ಚು—ಎಂದು ಹೇಗೆ ನಾಮವನ್ನು ವಾಕ್ಕಿನಿಂದ ಬೇರ್ಪಡಿಸಿ ವಿಶೇಷವನ್ನು ಹೇಳಿದ್ದಾರೆಯೋ ಹಾಗೆಯೇ ಇಲ್ಲಿ ಪ್ರಾಣಕ್ಕಿಂತ ಸತ್ಯವನ್ನೇ ಹೆಚ್ಚೆಂದು ವಿಶೇಷಿಸಿದ್ದಾರೆ. ಆದುದರಿಂದ ಪ್ರಾಣಕ್ಕಿಂತ ಪರಮಾತ್ಮ ಉತ್ತಮನೇ.]

ಓಂ ಸೈವ ಹಿ ಸತ್ಯಾದಯಃ ಓಂ 39

ಆ ಪರದೇವತೆಯೇ ಸತ್ಯ, ಕೃತಿ, ನಿಷ್ಠಾ ಮೊದಲಾದ ರೂಪಗಳಿಂದ ಉತ್ತಮ.

[ಸತ್ಯಾಖ್ಯ ವಿಷ್ಣು ಪ್ರಾಣನಿಗಿಂತ ಉತ್ತಮನೆಂದು ಹೇಳಿದುದಾಯಿತು. ಕೃತಿ, ನಿಷ್ಠಾ, ವಿಜ್ಞಾನ ಮೊದಲಾದ ದೇವತೆಗಳೂ ಅದೇ ಪರದೇವತೆಯ ಸ್ವರೂಪಗಳಾಗಿರುವುದರಿಂದ ಎಲ್ಲರೂ ಪ್ರಾಣನಿಗಿಂತ ಉತ್ತಮರು. "ಸತ್ಯಾದ್ಯಾ ಅಹಮಾತ್ಮಾಂತಾ ಯದ್ಗುಣಾಃ ಸಮುದೀರಿತಾಃ । ತಸ್ಮೈ ನಮೋ ಭಗವತೇ ಯಸ್ಮಾದೇವ ವಿಮುಚ್ಯತೇ"—ಸತ್ಯದಿಂದ ಮೊದಲಾಗಿ ಅಹಮಾತ್ಮಾ ಎಂಬುದ ರಿಂದ ಕೊನೆಯಾಗುವ ಯಾರ ಗುಣಗಳು ಹೇಳಲ್ಪಟ್ಟಿವೆಯೋ ಆ ಭಗವಂತನಿಗೆ ನಮಸ್ಕಾರ ; ಅವನ ದೆಸೆಯಿಂದಲೇ ಮುಕ್ತನಾಗುವನು—ಎಂದು ಅಧ್ಯಾತ್ಮದಲ್ಲಿ ಹೇಳಿದೆ.]

ಓಂ ಕಾಮಾದಿತರತ್ರ, ತತ್ರ ಚಾಯತನಾದಿಭ್ಯಃ ಓಂ 40

ಮೂಲಸ್ಥಾನದಲ್ಲಿರುವ ಚಿತ್ರಕೃತಿ (ಲಕ್ಷ್ಮಿ) ಇತರ ಸ್ಥಾನಗಳಲ್ಲಿಯೂ ಅವತರಿಸುತ್ತಾಳೆ, ಆಯತನಾದಿ (ವಾಸಸ್ಥಾನ) ಗಳಿಂದ.

["ಸ್ವೇಚ್ಛಯೈವ ಮೂಲಸ್ಥಾನೇ ಸ್ಥಿತಾಽನ್ಯತ್ರ ಅವತಾರಾನ್ಕರೋತಿ, ಈಶ್ವರೇಚ್ಛಾನುಸಾರೇಣ । ಸರ್ವಾಯತನಾ ಸರ್ವಕಾಲಾ ಸರ್ವೇಚ್ಛಾ ನ ಬದ್ಧಾ ಬಂಧಕಾ, ಸೈಷಾ ಪ್ರಕೃತಿರವಿಕೃತಿಃ" — ಮೂಲಸ್ಥಾನದಲ್ಲಿರುವ ಪ್ರಕೃತಿ ಈಶ್ವರೇಚ್ಛೆಯನ್ನು ಅನುಸರಿಸಿ ತನ್ನ ಇಚ್ಛೆಯಿಂದಲೇ ಬೇರೆ ಸ್ಥಳಗಳಲ್ಲಿ ಅವತಾರ ಮಾಡುತ್ತಾಳೆ. ಆ ಪ್ರಕೃತಿ ಸರ್ವಸ್ಥಳಗಳಲ್ಲಿಯೂ ಸರ್ವಕಾಲಗಳಲ್ಲಿಯೂ ಇರುವವಳು, ಎಲ್ಲ ಇಚ್ಛೆಯನ್ನೂ ಪಡೆದಿರುವವಳು, ಅವಳು ಬದ್ಧಳಲ್ಲ ಆದರೆ ಬಂಧಕಳು, ವಿಕಾರರಹಿತಳು — ಎಂದು ವತ್ಸಶ್ರುತಿ ಇದೆ.]

ಓಂ ಆದರಾದಲೋಪಃ ಓಂ 41

ಆದರವಿರುವುದರಿಂದ ಲೋಪವಿಲ್ಲ.

[ಲಕ್ಷ್ಮಿ ಬದ್ಧಳಲ್ಲ, ಆದರೂ ವಿಷ್ಣುವಿನಲ್ಲಿ ಭಕ್ತಿ ಇರುವುದರಿಂದ ಅವಳಿಗೆ ಉಪಾಸನೆಯು ಲೋಪವಿರುವುದಿಲ್ಲ. ಬೃಹತ್ತಂತ್ರದಲ್ಲಿ "ಯಥಾ ಶ್ರೀರ್ನಿತ್ಯ-ಮುಕ್ತಾಪಿ ಪ್ರಾಪ್ತಕಾಮಾಪಿ ಸರ್ವದಾ । ಉಪಾಸ್ತೇ ನಿತ್ಯಶೋ ವಿಷ್ಣುಮೇವಂ ಭಕ್ತೋ ಹರೇರ್ಭವೇತ್"—ಹೇಗೆ ನಿತ್ಯಮುಕ್ತಳೂ ಆಪ್ತಕಾಮಳೂ ಆದ ಲಕ್ಷ್ಮೀದೇವಿ ಯಾವಾಗಲೂ ವಿಷ್ಣುವಿನ ಉಪಾಸನೆ ಮಾಡುವಳೋ ಹಾಗೆಯೇ ಶ್ರೀಹರಿಯ ಭಕ್ತನೂ ಮಾಡಬೇಕು — ಎಂದು, ಆದರವಿರುವುದರಿಂದ, ಉಪಾಸನಾಲೋಪ ಮಾಡದೆ ಸ್ವೇಚ್ಛೆಯಿಂದಲೇ ಉಪಾಸನೆ ಮಾಡುತ್ತಲೇ ಇರುವಳೆಂದು ಹೇಳಿದೆ.]

ಓಂ ಉಪಸ್ಥಿತೇಸ್ತದ್ವಚನಾತ್ ಓಂ 42

ಹತ್ತಿರದಲ್ಲಿರುವುದರಿಂದ, ಹಾಗೆ ವಚನವಿದೆ.

[ಅನಾದಿಕಾಲದಿಂದಲೂ ಲಕ್ಷ್ಮಿ ಭಗವಂತನ ಬಳಿಯಲ್ಲಿಯೇ ಇರುವುದರಿಂದ ಆಕೆ ನಿತ್ಯಮುಕ್ತಳು, ಬದ್ಧಳಲ್ಲ. "ದ್ವಾವೇತೌ ಅನಾದಿನಿತ್ಯೌ ಅನಾದಿ-ಯುಕ್ತೌ..." — ಈ ಪ್ರಕೃತಿಪುರುಷರಿಬ್ಬರೂ ಅನಾದಿ ಹಾಗೂ ನಿತ್ಯರು, ಅನಾದಿಕಾಲದಿಂದ ಕೂಡಿಕೊಂಡೇ ಇರುವವರು—ಎಂದು ಗೌಪವನಶ್ರುತಿ ಇದೆ.]

ಓಂ ತನ್ನಿರ್ಧಾರಣಾರ್ಥನಿಯಮಸ್ತದ್ದೃಷ್ಟೇಃ ಪೃಥಕ್ ಹಿ ಅಪ್ರತಿಬಂಧಃ ಫಲಮ್ ಓಂ 43

ಬ್ರಹ್ಮದೃಷ್ಟಿ ಪಡೆಯುವುದಕ್ಕಾಗಿ, ಅದರ ನಿಶ್ಚಯಕ್ಕಾಗಿ ನಿಯಮವಿದೆ; ಬೇರೆಯಾಗಿಯೂ ಅಡ್ಡಿಮಾಡುವ ಪ್ರತಿಬಂಧಗಳ ನಿವೃತ್ತಿಯೂ ಫಲವೇ.

[ಬ್ರಹ್ಮಸಾಕ್ಷಾತ್ಕಾರಕ್ಕಾಗಿಯೇ ಉಪಾಸನೆ ಮಾಡಬೇಕು. ಶ್ರವಣಾದಿಗಳಿಂದಲೇ ಆ ಸಾಕ್ಷಾತ್ಕಾರ ಸಾಧ್ಯವಾಗುವುದಲ್ಲ! ತತ್ತ್ವನಿಶ್ಚಯ ಮತ್ತು ವೇದಾರ್ಥನಿಯಮಗಳು ಅಪರೋಕ್ಷಜ್ಞಾನದಿಂದ ಭಿನ್ನವೇ. 'ಆತ್ಮಾ ವಾ ಅರೇ ದ್ರಷ್ಟವ್ಯಃ' ಎಂಬ ಬೃಹದಾರಣ್ಯಕವಾಕ್ಯ 'ಆತ್ಮನನ್ನು ನೋಡಬೇಕು, ಕೇಳಬೇಕು, ತಿಳಿದುಕೊಳ್ಳಬೇಕು' ಎಂದು ಹೇಳುತ್ತದೆ. ಇದು 'ಹಿ' ಶಬ್ದದಿಂದ ಸೂಚಿತವಾಗಿದೆ. ಅಜ್ಞಾನಾದಿಪ್ರತಿಬಂಧಕಗಳನ್ನು ನಿವಾರಿಸಿಕೊಳ್ಳುವುದಕ್ಕಾಗಿಯೇ ಶ್ರವಣಾದಿಗಳನ್ನು ಮಾಡಬೇಕು. ಆ ಅಡ್ಡಿಗಳು ನಿವಾರಿತವಾದ ಮೇಲೆಯೇ ಬ್ರಹ್ಮಸಾಕ್ಷಾತ್ಕಾರ ಸಾಧ್ಯವಾಗುವುದು.]

ಓಂ ಪ್ರದಾನವದೇವ, ತದುಕ್ತಮ್ ಓಂ 44

ಗುರುಗಳಿಂದ ಕೊಡಲ್ಪಟ್ಟುದಾಗಿಯೇ, ಹಾಗೆ ಹೇಳಿದೆ.

[ಕೇವಲ ಶ್ರವಣಮನನಾದಿಗಳಿಂದಲೇ ಅಪರೋಕ್ಷದೃಷ್ಟಿ ಹುಟ್ಟುವುದಿಲ್ಲ. ಗುರುಗಳು ನೀಡಿದ ಉಪದೇಶದಿಂದಲೇ ಅದು ಬರುವುದು. "ಆಚಾರ್ಯವಾನ್ ಪುರುಷೋ ವೇದ"— ಆಚಾರ್ಯರನ್ನು ಪಡೆದ ಪುರುಷನೇ ತಿಳಿಯುತ್ತಾನೆ -- ಎಂದು ಛಾಂದೋಗ್ಯದಲ್ಲಿ ಹೇಳಿದೆ.]

ಓಂ ಲಿಂಗಭೂಯಸ್ತ್ವಾತ್ತದ್ಧಿ ಬಲೀಯಃ, ತದಪಿ ಓಂ 45

ಲಿಂಗಗಳು ಹೆಚ್ಚಾಗಿರುವುದರಿಂದ ಗುರುಪ್ರಸಾದವೇ ಹೆಚ್ಚು ಬಲವುಳ್ಳದುದು ; ಅದೂ ಕೂಡ.

[ಗುರುವಿನ ಅನುಗ್ರಹ ಬಲವತ್ತರವೋ ಸ್ವಪ್ರಯತ್ನವೋ, ಎಂದು ಸಂದೇಹ. ಗು ರು ಪ್ರ ಸಾ ದ ವೇ ಬಲವತ್ತರ, ಎಂಬುದಕ್ಕೆ ಲಿಂಗಗಳಿವೆ. ಸತ್ಯಕಾಮನಿಗೆ ಋಷಭಾದಿಗಳು ಉಪದೇಶ ಮಾಡಿದ್ದರೂ ತನ್ನ ಗುರು ಗೌತಮನೇ ಉಪದೇಶ ಮಾಡಬೇಕೆಂದು ಅವನು ಕೇಳಿಕೊಂಡನು. ಹಾಗೆಯೇ ಉಪಕೋಸಲ ಅಗ್ನಿಗಳಿಂದ ಉಪದೇಶ ಪಡೆದಮೇಲೆಯೂ ಆಚಾರ್ಯ ಸತ್ಯಕಾಮನನ್ನೇ ಉಪದೇಶಕ್ಕಾಗಿ ಬೇಡಿದನು. ಈ ಕಥೆಗಳು ಛಾಂದೋಗ್ಯದಲ್ಲಿವೆ.]

ಓಂ ಪೂರ್ವವಿಕಲ್ಪಃ ಪ್ರಕರಣಾತ್ ಸ್ಯಾತ್, ಕ್ರಿಯಾಮಾನಸವತ್ ಓಂ 46

ಪ್ರಕರಣದಿಂದ ಪೂರ್ವಗುರು ವಿಕಲ್ಪನಾಗುವನು, ಮಾನಸಕ್ರಿಯೆಯಂತೆ.

[ಒಬ್ಬ ಗುರುವನ್ನು ಸಂಪಾದಿಸಿಕೊಂಡಮೇಲೆ ಆತನನ್ನೇ ಶಾಶ್ವತವಾಗಿ ಹಿಡಿದಿರಬೇಕೆಂಬ ನಿಯಮವಿಲ್ಲ. ಮುಂದೆ ಕಾಣಬರುವ ಗುರು ಒಳ್ಳೆಯ ಅನುಗ್ರಹ ಮಾಡಬಲ್ಲನೆಂದು ತೋರಿದರೆ ವಿಕಲ್ಪದಿಂದ ಹಿಂದಿನ ಅಥವಾ ಮುಂದಿನ ಗುರುವಿನ ಆಶ್ರಯ ಪಡೆಯಬಹುದು. ಸಮವಾದ ಎರಡು ಬಗೆಯ ಧ್ಯಾನಗಳಿದ್ದರೆ ಯಾವ ಒಂದನ್ನಾದರೂ ಆರಿಸಿಕೊಂಡು ಫಲಪಡೆಯ ಬಹುದಷ್ಟೆ. ಹಾಗೆಯೇ ವಿಕಲ್ಪದಿಂದ ಕಾರ್ಯಸಿದ್ಧಿಗಾಗಿ ತಕ್ಕ ಗುರುವನ್ನು ಆರಿಸಿಕೊಳ್ಳಬಹುದು.]

ಓಂ ಅತಿದೇಶಾಚ್ಚ ಓಂ 47

ಅಪ್ಪಣೆ ಮಾಡಿರುವುದರಿಂದಲೂ.

["ಯಥಾ ಬ್ರಹ್ಮೋಪಚರೇಃ, ಯಥಾ ಮಾಮುಪಚರೇಃ, ಯೇ ಚಾನ್ಯೇ ಅಸ್ಮದ್ವಿಧಾಃ ಶ್ರೇಯಸಶ್ಚ, ತಾನುಪಾಸ್ವ, ತಾನುಪಚರಸ್ವ, ತೇಭ್ಯಃ ಶೃಣುಹಿ, ತೇ ತ್ವಾಮವಂತು"—ಹೇಗೆ ಬ್ರಹ್ಮನನ್ನು ಉಪಚರಿಸುವೆಯೋ, ಹೇಗೆ ನನ್ನನ್ನು ಉಪಚರಿಸುವೆಯೋ, ಹಾಗೆಯೇ ನಮ್ಮಂತಹ ಅಥವಾ ನಮಗಿಂತ ಉತ್ತಮ ಶ್ರೇಷ್ಠ ಗುರುಗಳಿರುವರಲ್ಲ, ಅವರ ಉಪಾಸನೆ ಮಾಡಿ ಅವರನ್ನು ಸೇವಿಸು. ಅವರು ಹೇಳುವುದನ್ನು ಕೇಳು. ಅವರು ನಿನ್ನನ್ನು ಕಾಪಾಡಲಿ—ಎಂದು ಪೌತ್ರಾಯಣಶ್ರುತಿಯಲ್ಲಿ ಅಪ್ಪಣೆ ಮಾಡಿದೆ.]

ಓಂ ವಿದ್ಯೈವ ತು, ನಿರ್ಧಾರಣಾತ್ ಓಂ 48

ಬ್ರಹ್ಮಜ್ಞಾನವೇ ಮುಕ್ತಿಗೆ ಸಾಧನ, ಹಾಗೆ ಶ್ರುತಿ ನಿರ್ಧರಿಸುವುದರಿಂದ.

["ತಮೇವ ವಿದಿತ್ವಾ, ಅತಿಮೃತ್ಯುಮೇತಿ, ನಾನ್ಯಃ ಪಂಥಾ ಅಯನಾಯ ವಿದ್ಯತೇ"—ಆ ಪರಮಾತ್ಮನನ್ನೇ ತಿಳಿದು ಮೃತ್ಯುವನ್ನು ದಾಟಬಹುದು; ಭಗವಂತನ ಬಳಿಗೆ ಹೋಗಲು ಬೇರೆ ದಾರಿಯೇ ಇಲ್ಲ—ಎಂದು ಶ್ವೇತಾಶ್ವತರೋಪನಿಷತ್ತು ನಿರ್ಧಾರ ಮಾಡಿ ಹೇಳಿರುವುದರಿಂದ ಬ್ರಹ್ಮವಿದ್ಯೆಯಿಂದಲೇ ಮೋಕ್ಷವೆಂದು ಸಿದ್ಧ.]

ಓಂ ದರ್ಶನಾಚ್ಚ ಓಂ 49

ಹಾಗೆ ಶ್ರುತಿಯಿರುವುದರಿಂದಲೂ.

[ಕೇವಲ ಬ್ರಹ್ಮವಿದ್ಯೆಯಿಂದಲೇ ಅಲ್ಲ, ಅಪರೋಕ್ಷಜ್ಞಾನ ಪಡೆಯುವುದರಿಂದಲೂ ಮುಕ್ತಪ್ರಾಪ್ತಿಯಾಗುವುದು. ಕೌಶಿಕಶ್ರುತಿಯಲ್ಲಿ, "ಸರ್ವಾನ್ಪರೋ ಮಾಯಯಾಯಯಂ ಸಿನೀತೇ, ದೃಷ್ಟ್ವೈವ ತಂ ಮುಚ್ಯತೇ, ನಾಪರೇಣ"—ಈಶ್ವರ ಎಲ್ಲರನ್ನೂ ಮಾಯೆಯಿಂದ ಬಂಧಿಸುತ್ತಾನೆ, ಅವನನ್ನು ಸಾಕ್ಷಾತ್ಕರಿಸಿಕೊಂಡಮೇಲೆ ಜೀವನು ಮುಕ್ತಿಪಡೆಯುತ್ತಾನೆ—ಎಂದು ಹೇಳಿದೆ.]

ಓಂ ಶ್ರುತ್ಯಾದಿಬಲೀಯಸ್ತ್ವಾಚ್ಚ ನ ಬಾಧಃ ಓಂ 50

ಶ್ರುತಿ ಮೊದಲಾದವು ಪ್ರಬಲವಾಗಿರುವುದರಿಂದಲೂ ಅಡ್ಡಿಯಿಲ್ಲ.

[ಶ್ರುತಿವಾಕ್ಯಗಳು ಪ್ರಬಲವಾಗಿರುವುದರಿಂದಲೂ 'ಜ್ಞಾನದಿಂದಲೇ ಮುಕ್ತಿ' ಎಂಬುದು ಬಾಧಿತವಾಗುವುದಿಲ್ಲ. "ಕರ್ಮಣಾ ಬಧ್ಯತೇ ಜಂತುರ್ವಿದ್ಯಯಾ ಚ ವಿಮುಚ್ಯತೇ"—ಕರ್ಮದಿಂದ ಜೀವನಿಗೆ ಬಂಧಪ್ರಾಪ್ತಿ. ವಿದ್ಯೆಯಿಂದಲೇ ಅವನು ಮುಕ್ತಿ ಪಡೆಯುವನು—ಎಂದು ಯುಕ್ತಿಪೂರ್ವಕವಾದ ವಾಕ್ಯವಿರುವುದರಿಂದ ಜ್ಞಾನವನ್ನೇ ಸಂಪಾದಿಸಬೇಕು. ನೂರು ಅಶ್ವಮೇಧ ಯಜ್ಞಗಳನ್ನು ಮಾಡಿ ಮುಗಿಸಿದ ಇಂದ್ರ ಬ್ರಹ್ಮನನ್ನು, "ಕರ್ಮದಿಂದಲೂ ಧನದಿಂದಲೂ ನಾನು ಸುಖವನ್ನು ಕಾಣಲಿಲ್ಲ. ನನಗೆ ತತ್ವವನ್ನು ಉಪದೇಶ ಮಾಡಿ" ಎಂದು ಕೇಳಿಕೊಂಡನು. ಇದು ಪ್ರಬಲಲಿಂಗ.]

ಓಂ ಅನುಬಂಧಾದಿಭ್ಯಃ ಓಂ 51

ಅನುಬಂಧ ಮೊದಲಾದವುಗಳಿಂದ.

[ಬ್ರಹ್ಮ ಸಾಕ್ಷಾತ್ಕಾರ ಶ್ರವಣಾದಿಗಳಿಂದಲೇ ಅಥವಾ ಗುರುವಿನ ಅನುಗ್ರಹದಿಂದಲೇ ಆಗಬೇಕೆಂದಿಲ್ಲ. ಭಕ್ತಿ ಮೊದಲಾದ ಸಾಧನಗಳಿಂದಲೂ ಆಗುವುದು.]

ಓಂ ಪ್ರಜ್ಞಾಂತರಪೃಥಕ್ತ್ವವದ್ದೃಷ್ಟಿಶ್ಚ, ತದುಕ್ತಮ್ ಓಂ 52

ಉಪಾಸನೆಯಲ್ಲಿ ಭೇದವಿರುವಂತೆಯೇ ದರ್ಶನದಲ್ಲಿಯೂ ಇದೆ, ಇದನ್ನು ಹೇಳಿದೆ.

[ಕಮಠಶ್ರುತಿ " ಅಂತರ್ದೃಷ್ಟಯೋ ಬಹಿರ್ದೃಷ್ಟಯೋಽವತಾರ-ದೃಷ್ಟಯಃ ಸರ್ವದೃಷ್ಟಯ ಇತಿ"—ಕೆಲವರಿಗೆ ಒಳನೋಟ ಇರುತ್ತದೆ, ಕೆಲವರದು ಹೊರದೃಷ್ಟಿ ಮತ್ತೆ ಕೆಲವರಿಗೆ ಅವತಾರಗಳ ದರ್ಶನವಾಗುವುದು ; ಮತ್ತೆ ಕೆಲವರಿಗೆ ಪರಮಾತ್ಮನನ್ನು ಸರ್ವವ್ಯಾಪಿಯಾಗಿ ಕಾಣುವ ದೃಷ್ಟಿಯುಂಟು—ಎಂದು ಹೇಳುತ್ತದೆ.]

ಓಂ ನ ಸಾಮಾನ್ಯಾದಪ್ಯುಪಲಬ್ಧೇರ್ಮೃತ್ಯುವನ್ನ ಹಿ ಲೋಕಾಪತ್ತಿಃ ಓಂ 53

ಸಾಮಾನ್ಯದರ್ಶನ ಪಡೆಯುವುದರಿಂದಲೇ ಮುಕ್ತಿಯಾಗುವುದಿಲ್ಲ, ಮರಣ ಮಾತ್ರದಿಂದಲೇ ಮುಕ್ತಿಯಾಗದು, ಲೋಕಾಂತರ ಪ್ರಾಪ್ತಿಯಿಂದಲೂ ಮುಕ್ತಿಯಾಗದು.

["ದರ್ಶನೇನಾತ್ಮಯೋಗ್ಯೇನ ಮುಕ್ತಿರ್ನಾನ್ಯೇನ ಕೇನಚಿತ್"—ತನಗೆ ಯೋಗ್ಯವಾಗಿರುವ (ತನ್ನ ಯೋಗ್ಯತೆ ಮೀರದ) ಆತ್ಮಸಾಕ್ಷಾತ್ಕಾರದಿಂದಲೇ ಮುಕ್ತಿಯಲ್ಲದೆ ಬೇರೆ ಯಾವುದರಿಂದಲೂ ಆಗದು, ಎಂದು ಅಧ್ಯಾತ್ಮದಲ್ಲಿದೆ.]

ಓಂ ಪರೇಣ ಚ, ಶಬ್ದಸ್ಯ ತಾದ್ವಿಧ್ಯಂ ಭೂಯಸ್ತ್ವಾತ್ತ್ವನುಬಂಧಃ ಓಂ 54

ಪರಮಾತ್ಮನಿಂದಲೂ, ಶ್ರುತಿ ಹಾಗೆ ಹೇಳಿರುವುದು ಪ್ರಾಧಾನ್ಯದಿಂದ ಕೂಡುತ್ತದೆ.

["ಭಕ್ತಿರೇವೈನಂ ನಯತಿ, ಭಕ್ತಿರೇವೈನಂ ದರ್ಶಯತಿ, ಭಕ್ತಿವಶಃ ಪುರುಷಃ, ಭಕ್ತಿರೇವ ಭೂಯಸೀ"—ಭಕ್ತಿಯೇ ಇವನನ್ನು ಒಯ್ಯುತ್ತದೆ, ಭಕ್ತಿಯೇ ಇವನ ದರ್ಶನ ಮಾಡಿಸುತ್ತದೆ, ಪುರುಷನು ಭಕ್ತಿಗೆ ವಶನು, ಭಕ್ತಿಯೇ ಎಲ್ಲಕ್ಕಿಂತ ಹೆಚ್ಚು—ಎಂದು ಮಾಠರಶ್ರುತಿ ಹೇಳಿರುವುದರಿಂದ ಭಕ್ತಿಗೇ ಪ್ರಾಧಾನ್ಯ ಹೇಳಿದೆ. ಇದರಿಂದ ಪರಮಾತ್ಮನ ಅನುಗ್ರಹಮಾತ್ರದಿಂದಲೇ ದರ್ಶನ ಉಂಟಾಗುವುದಿಲ್ಲ ಎಂಬ ಪೂರ್ವಪಕ್ಷ ಹುಟ್ಟುವುದು. ಸೂತ್ರ ಪರಿಹಾರವನ್ನು ಹೀಗೆ ಹೇಳುವುದು : " ಭಕ್ತಿಯಿಂದ ಪ್ರಸನ್ನನಾದ ಪರಮಾತ್ಮನೇ ಜೀವನಿಗೆ ತನ್ನ ಸ್ವರೂಪ ದರ್ಶನ ಕೊಟ್ಟು ಮುಕ್ತಿಯನ್ನೂ ದಯೆಪಾಲಿಸುತ್ತಾನೆ, ಏಕೆಂದರೆ ಭಕ್ತಿ ಪ್ರಧಾನಸಾಧನ.]

ಓಂ ಏಕಃ, ಆತ್ಮನಃ ಶರೀರೇ ಭಾವಾತ್ ಓಂ 55

ಅಂಶ, ಅಂಶಿಗಳು ಒಂದೇ ; ತನ್ನ ಶರೀರದಲ್ಲಿ ಇರುವುದರಿಂದ.

[ಜೀವಾಂಶಗಳು ಆಮೇಲೆ ಹುಟ್ಟುವುದರಿಂದ ಅವೇ ಬೇರೆ, ಎನ್ನ ಬಾರದು. ಅಂಶಿಯಾದ ಜೀವ ಒಂದು ಶರೀರದಿಂದ ಮತ್ತೊಂದಕ್ಕೆ ಕರ್ಮಾನು ಸಾರವಾಗಿ ಹೋಗುವನಷ್ಟೆ. ಅಂಶದಿಂದ ಶರೀರಾಂತರವನ್ನು ಪ್ರವೇಶ ಮಾಡುವಾಗಲೂ ತನ್ನ ಕರ್ಮದಿಂದ ನಿರ್ಮಿತವಾದ ಶರೀರಕ್ಕೇ ಹೋಗು ತ್ತಾನೆ. ಆದುದರಿಂದ ಶರೀರದೊಳಗಿರುವ ಅಂಶವೂ ಅಂಶಿಯೊಡನೆ ಐಕ್ಯತೆ ಪಡೆದಿರುವುದು.]

ಓಂ ವ್ಯತಿರೇಕಃ, ತದ್ಭಾವಭಾವಿತ್ವಾತ್, ನ ತೂಪಲಬ್ಧಿವತ್ ಓಂ 56

ಅಂಶಾಂಶಿಗಳಿಗೆ ಭೇಧವಿರುವುದಿಲ್ಲ, ಫಲಪ್ರಾಪ್ತಿ ಇರುವುದರಿಂದ.

[ಜ್ಞಾನಾದಿಗಳಲ್ಲಿ ಭೇದವಿದ್ದರೂ, ಅಂಶ ಮತ್ತು ಅಂಶಿಗಳಿಗೆ ಬೇರೆ ಅಸ್ತಿತ್ವವಿಲ್ಲ. ಅಂಶಿಯ ಉಪಾಸನೆಯ ಫಲವನ್ನು ಅಂಶವೂ ಪಡೆಯುತ್ತದೆ. ಪರಮಸಂಹಿತೆಯಲ್ಲಿ "ಅಂಶಿನಸ್ತು ಪೃಥಕ್ ಜಾತಾ ಅಂಶಾಸ್ತಸ್ಯೈವ ಕರ್ಮಣಾ । ಪುನರೈಕ್ಯಂ ಪ್ರಪದ್ಯಂತೇ ನಾತ್ರ ಕಾರ್ಯಾ ವಿಚಾರಣಾ"— ಅಂಶಿಯಿಂದ ಬೇರೆಯಾಗಿ ಉತ್ಪನ್ನವಾದ ಅಂಶಗಳು ಅಂಶಿಯ ಕರ್ಮದಿಂದಲೇ ಮತ್ತೆ ಐಕ್ಯ ಪಡೆಯುತ್ತವೆ. ಸಂದೇಹವಿಲ್ಲ" ಎಂದು ಹೇಳಿದೆ.]

ಓಂ ಅಂಗಾವಬದ್ಧಾಸ್ತು ನ ಶಾಖಾಸು ಹಿ ಪ್ರತಿವೇದವ್ ಓಂ 57

ಪರಮಾತ್ಮನ ಅಂಗಗಳನ್ನು ಆಶ್ರಯಿಸಿರುವ ದೇವತೆಗಳ ಉಪಾಸನಾದಿ ಗಳು ಎಲ್ಲ ಶಾಖೆಗಳಲ್ಲಿಯೂ ಎಲ್ಲ ವೇದಗಳಲ್ಲಿಯೂ ಉಪಸಂಹರಿಸಲ್ಪಡು ವುದಿಲ್ಲ.

[ಚತುರ್ಮುಖಬ್ರಹ್ಮಾದಿ ಅಂಗದೇವತೆಗಳಿಗೆ ಸಂಬಂಧಿಸಿದಂತೆ ಉಪ- ಸಂಹಾರ ಮಾಡುವುದಕ್ಕಾಗಿ ಎಲ್ಲ ಶಾಖೆಗಳಲ್ಲಿ, ಎಲ್ಲ ವೇದಗಳಲ್ಲಿ ಹೇಳಿಲ್ಲ. "ಸಮತ್ವಾದ್ಬ್ರೋತ್ತಮತ್ವಾದ್ವಾ ನಾಂಗದೇವಾದ್ಯುಪಾಸನವ್ । ಉಪಸಂಹಾರಮಿತ್ಯಾಹುರ್ವೇದಸಿದ್ಧಾಂತವೇದಿನಃ" — ಸಮತ್ವ ಅಥವಾ

ಉತ್ತಮತ್ವದ ದೃಷ್ಟಿಯಿಂದ ಅಂಗದೇವತೆಗಳ ಉಪಾಸನೆಗಾಗಿ ಉಪಸಂಹಾರವನ್ನು ವೇದಗಳ ಸಿದ್ಧಾಂತಗಳನ್ನು ತಿಳಿದವರು ಹೇಳಿಲ್ಲ.]

ಓಂ ಮಂತ್ರಾದಿವದ್ವಾಽವಿರೋಧಃ ಓಂ 58

ಮಂತ್ರವೇ ಮೊದಲಾದವುಗಳಂತೆ ವಿರೋಧವಿಲ್ಲ.

[ಎಲ್ಲ ದೇವತೆಗಳಿಗಾಗಿ ಹೇಳಿರುವ ಮಂತ್ರಗಳನ್ನೂ ಅಧ್ಯಯನ ಮಾಡುತ್ತಾರೆ. ಹಾಗೆ ಅಧಮದೇವತೆಗಳ ಗುಣಗಳನ್ನು ಉತ್ತಮದೇವತೆಯಲ್ಲಿ ಉಪಸಂಹಾರ ಮಾಡಿಕೊಂಡರೆ ಯಾವ ವಿರೋಧವೂ ಇರುವುದಿಲ್ಲ.]

ಓಂ ಭೂಮ್ನಃ ಕ್ರತುವಜ್ಜ್ಯಾಯಸ್ತ್ವಂ, ತಥಾ ಚ ದರ್ಶಯತಿ ಓಂ 59

ಭೂಮಗುಣಕ್ಕೆ ಕ್ರತುವಿನಂತೆ ಪ್ರಾಧಾನ್ಯವಿದೆ, ಹಾಗೆಯೇ ಶ್ರುತಿ ಹೇಳುತ್ತದೆ.

[ಎಲ್ಲ ಕರ್ಮಗಳ ನಡುವೆ ಕ್ರತುವಿಗೆ—ಯಜ್ಞಕ್ಕೆ—ವಿಶಿಷ್ಟಸ್ಥಾನವಿರುವಂತೆ ಭೂಮಗುಣಕ್ಕೆ ಶ್ರೇಷ್ಠತೆ ಇದೆ. ಗೌಪವನಶ್ರುತಿಯಲ್ಲಿ "ಭೂಮ್ನೈವ ದೇವಃ ಪರಮೋ ಹ್ಯುಪಾಸ್ಯೋ, ನೈವಾಭೂಮಾ ಫಲಮೇಷಾಂ ವಿಧತ್ತೇ। ತಸ್ಮಾದ್ಭೂಮಾ ಗುಣತೋ ವೈ ವಿಶಿಷ್ಟೋ, ಯಥಾ ಕ್ರತುಃ ಕರ್ಮಮಧ್ಯೇ ವಿಶಿಷ್ಟಃ"—ಪರಮಾತ್ಮನು "ಭೂಮಾ" ಎಂದು ಉಪಾಸನೆಗೆ ಅರ್ಹ ; ಭೂಮನಲ್ಲದವ ಫಲ ಕೊಡಲಾರ; ಆದುದರಿಂದ ಕರ್ಮಗಳಲ್ಲಿ ಯಜ್ಞವಿರುವಂತೆ ಗುಣದಿಂದ 'ಭೂಮಾ' ವಿಶಿಷ್ಟನಾಗಿದ್ದಾನೆ. ಭೂಮಾ ಎಂದರೆ ಹೆಚ್ಚಾಗಿ ಉಳ್ಳವ.]

ಓಂ ನಾನಾ, ಶಬ್ದಾದಿಭೇದಾತ್ ಓಂ 60

ಭೂಮತ್ವದಲ್ಲಿ ನಾನಾಪ್ರಕಾರಗಳುಂಟು ; ಶಬ್ದಾದಿಪ್ರಮಾಣಗಳಲ್ಲಿ ತಾರತಮ್ಯವಿರುವುದರಿಂದ.

[ಆಗಮ (ಶಬ್ದ), ಅನುಮಾನ, ಪ್ರತ್ಯಕ್ಷಗಳೆಂಬ ಪ್ರಮಾಣಗಳು ಯೋಗ್ಯತಾಭೇದದಿಂದ ಬ್ರಹ್ಮಾದಿಗಳಿಗೆ ತೋರಿಬರುವ ಒಂದು ಅರ್ಥವನ್ನು ನಾನಾರೀತಿಯಲ್ಲಿ ಬೋಧಿಸುವುವು. ಈಶನ ಪೂರ್ಣತ್ವ ನಾನಾ ಬಗೆಯಾಗಿಯೇ ಪ್ರದರ್ಶಿತವಾಗುವುದು. ಉಪಾಸನೆಯಲ್ಲಿನ ನಾನಾಪ್ರಕಾರದಿಂದ ಫಲದಲ್ಲಿಯೂ ನಾನಾತ್ವವಿರುವುದು. ಹೀಗೆಂದು ಬ್ರಹ್ಮತರ್ಕ ತಿಳಿಸುತ್ತದೆ. ಆದುದರಿಂದ ಭೂಮತ್ವವೂ ನಾನಾರೀತಿಯಲ್ಲಿ ಉಪಾಸಿಸಲ್ಪಡುತ್ತದೆ.]

ಓಂ ವಿಕಲ್ಪೋ, ವಿಶಿಷ್ಟಫಲತ್ವಾತ್ ಓಂ 61

ವಿಶಿಷ್ಟ ಫಲಪ್ರಾಪ್ತಿ ಇರುವುದರಿಂದ ಉಪಾಸನೆಯಲ್ಲಿ ವಿಕಲ್ಪವುಂಟು.

[ಮುಕ್ತಿಪ್ರಾಪ್ತಿಗಾಗಿ ಸ್ವಯೋಗ್ಯವಾದ ಉಪಾಸನೆ ಮಾಡಿದಮೇಲೆ ಯಾವುದಾದರೊಂದು ವಿಶಿಷ್ಟ ಫಲಪ್ರಾಪ್ತಿಗಾಗಿ ಸಾಮಾನ್ಯ ಉಪಾಸನೆಯನ್ನು—ಉದಾಹರಣೆಗೆ, ಪಾಪನಿವೃತ್ತಿಗಾಗಿ ನರಸಿಂಹೋಪಾಸನೆಯನ್ನು—ಯಥಾಯೋಗ್ಯವಾಗಿ ಮಾಡಬಹುದು ಅಥವಾ ಮಾಡದಿರಬಹುದು.]

ಓಂ ಕಾಮ್ಯಾಸ್ತು ಯಥಾಕಾಮಂ ಸಮುಚ್ಚೀಯೇರನ್ನ ವಾ, ಪೂರ್ವಹೇತ್ವಭಾವಾತ್ ಓಂ 62

ಇಷ್ಟಾನುಸಾರವಾಗಿ ಕಾಮ್ಯೋಪಾಸನೆಗಳನ್ನು ಮಾಡಿಕೊಳ್ಳಬಹುದು, ಹಿಂದಿನ ಉದ್ದೇಶವಿರುವುದಿಲ್ಲ.

[ಮುಮುಕ್ಷುಗಳಿಗೆ ಮುಕ್ತಿಯನ್ನು ಬಿಟ್ಟರೆ ಬೇರೆ ಯಾವುದರಲ್ಲಿಯೂ ಆಸೆ ಇಲ್ಲದಿರುವುದರಿಂದ ಅವರು ಇತರ ಉಪಾಸನೆಗಳನ್ನು ಮಾಡಬಹುದು ಅಥವಾ ಬಿಡಬಹುದು. ಈಶ್ವರಪ್ರೀತಿಗಾಗಿ ಮಾಡಿದ ಉಪಾಸನೆ ದುಷ್ಟವಾಗುವುದಿಲ್ಲ. ಬೇರೆ ಕಾಮಗಳಿದ್ದವರು ಅದಕ್ಕೆ ತಕ್ಕಂತೆ ಗುಣಗಳನ್ನು ಆರಿಸಿಕೊಂಡು ಉಪಾಸನೆ ಮಾಡಬಹುದು. ಹೀಗೆ ಬೃಹತ್ತಂತ್ರ ತಿಳಿಸುವುದು.]

ಓಂ ಅಂಗೇಷು ಯಥಾಽಶ್ರಯಭಾವಃ ಓಂ 63

ಅಂಗಗಳಲ್ಲಿ ಆಶ್ರಯಭಾವವಿರುವಂತೆ.

["ಚಕ್ಷೋಃ ಸೂರ್ಯೋ ಅಜಾಯತ"—ಈಶನ ಕಣ್ಣಿನಿಂದ ಸೂರ್ಯ ಹುಟ್ಟಿದನು—ಮೊದಲಾಗಿ ಅಂಗದೇವತೆಗಳಿಗೆ ಪರಬ್ರಹ್ಮನ ಅಂಗಗಳ ಆಶ್ರಯವನ್ನು ಹೇಳಿದೆ. ಹಾಗೆಯೇ ಆ ಅಂಗದೇವತೆಗಳ ಉಪಾಸನೆ ಮಾಡಬೇಕು.]

ಓಂ ಶಿಷ್ಟೇಶ್ಚ ಓಂ 64

ಶಾಸನ ಮಾಡಿರುವುದರಿಂದಲೂ.

["ಯಸ್ಮಿನ್ ಯಸ್ಮಿನ್ ಯೋ ಹಿ ಚಾಂಗೇ ನಿವಿಷ್ಟಃ, ಪರಸ್ಯ ಚಿಂತ್ಯಃ ಸ ತಥಾ ತಥೈವ"—ಯಾವ ದೇವತೆ ಪರಮಾತ್ಮನ ಯಾವ ಅಂಗದಲ್ಲಿ

ಇಡಲ್ಪಟ್ಟಿದ್ದಾನೆಯೋ, ಆ ದೇವತೆ ಹಾಗೆ ಹಾಗೆಯೇ ಉಪಾಸ್ಯನಾಗುವನು,— ಎಂದು ಪೌತ್ರಾಯಣಶ್ರುತಿ ಹೇಳುತ್ತದೆ.]

ಓಂ ಸಮಾಹಾರಾತ್ ಓಂ 65

ಸಮಾಹಾರದಿಂದಲೂ.

["ಅಂಗೈಃ ಪರಾದ್ಯೇ ಹಿ ದೇವಾ ವಿಸೃಷ್ಟಾಸ್ತತ್ತದ್ಗುಣಾನ್ ಪರಮೇ ಸಂಹರೇತ । ತಾಂಶ್ಚಾಪಿ ತತ್ರೈವ ವಿಚಿಂತ್ಯ ದೇವಾನ್, ಸ್ಥಾನಂ ಮುಮುಕ್ಷುಃ ಪರಮಂ ವ್ರಜೇತ" — ಮುಮುಕ್ಷುವಾದವನು ಪರಮಾತ್ಮನ ಅಂಗಗಳಲ್ಲಿ ಹುಟ್ಟಿದ ದೇವತೆಗಳ ಗುಣಗಳನ್ನು ಪರಮಾತ್ಮನಲ್ಲಿಯೇ ಉಪಸಂಹಾರ ಮಾಡಬೇಕು. ಹಾಗೆ ಅಂಗದೇವತೆಗಳ ಉಪಾಸನೆ ಮಾಡುವವನು ಮುಕ್ತಿ ಪಡೆಯುವನು—ಎಂದು ಕಾಷಾಯಣಶ್ರುತಿಯಲ್ಲಿ ಉಪಸಂಹಾರದ ವಚನವಿದೆ.]

ಓಂ ಗುಣಸಾಧಾರಣ್ಯಶ್ರುತೇಶ್ಚ ಓಂ 66

ಗುಣಸಾಧಾರಣವನ್ನು ತಿಳಿಸುವ ಶ್ರುತಿ ಇರುವುದರಿಂದಲೂ.

["ಸಾಧಾರಣ್ಯದಿಂದ—ಸಮಾನತೆಯಿಂದ—ಪರಮಾತ್ಮನ ಸರ್ವಗುಣಗಳನ್ನೂ ತತ್ತ್ವದೃಷ್ಟಿಯುಳ್ಳ ಮುಮುಕ್ಷು ಉಪಸಂಹರಿಸಿಕೊಳ್ಳಬೇಕು" ಎಂದು ಮಾಂಡವ್ಯಶ್ರುತಿ ಹೇಳುತ್ತದೆ.]

ಓಂ ನ ವಾ, ಅತತ್ಸಹಭಾವಶ್ರುತೇಃ ಓಂ 67

ಸಹಭಾವವನ್ನು ಹೇಳಿರದಿರುವುದರಿಂದ ಉಪಾಸನೆ ಮಾಡದಿರಲೂಬಹುದು.

[ಅಂಗದೇವತೆಗಳಾದ ಸೂರ್ಯಾದಿದೇವತೆಗಳ ಉಪಾಸನೆಯನ್ನು ಮಾಡದಿರಲೂಬಹುದು. ಏಕೆಂದರೆ ಉಪಸಂಹಾರಕ್ಕಾಗಿ ಅಂಗದೇವತೆಗಳನ್ನು ಸೇರಿಸಿಕೊಳ್ಳಬೇಕೆಂದು ಹೇಳಿಲ್ಲ.]

ಓಂ ದರ್ಶನಾಚ್ಚ ಓಂ 68

ಶ್ರುತಿ ಇರುವುದರಿಂದಲೂ.

["ಸತ್ಯೋ ಜ್ಞಾನಃ ಪರಮಾನಂದರೂಪ, ಆತ್ಮೇತ್ಯೇವಂ ನಿತ್ಯದೋಪಾಸನಂ ಸ್ಯಾತ್ । ನಾನ್ಯತ್ ಕಿಂಚಿತ್ ಸಮುಪಾಸೀತ ಧೀರಃ, ಸರ್ವೈರ್ಗುಣೈರ್ದೇವಗಣಾ ಉಪಾಸತೇ"—ಆತ್ಮ ಸತ್ಯಸ್ವರೂಪ, ಜ್ಞಾನರೂಪ, ಪರಮಾನಂದರೂಪ ಎಂದೇ ವಿವೇಕಿಯಾದ ಮಾನವ ಯಾವಾಗಲೂ ಪರಮಾತ್ಮನ

ಉಪಾಸನೆ ಮಾಡಬೇಕು, ಬೇರೆ ವಿಧವಾಗಿ ಅಲ್ಲ. ದೇವತೆಗಳಾದರೋ ಈಶನನ್ನು ಎಲ್ಲ ಗುಣಗಳಿಂದಲೂ ಉಪಾಸನೆ ಮಾಡುವರು—ಎಂದು ಕಮಠಶ್ರುತಿಯಲ್ಲಿ ಹೇಳಿದೆ.]

ಇಲ್ಲಿಗೆ ಬ್ರಹ್ಮಸೂತ್ರಗಳ ಮೂರನೆಯ ಅಧ್ಯಾಯದ ಮೂರನೆಯ ಪಾದ ಮುಗಿಯಿತು.

ನಾಲ್ಕನೆಯ ಪಾದ

ಈ ಪಾದದಲ್ಲಿ ಜ್ಞಾನದ ಸಾಮರ್ಥ್ಯವನ್ನು ಹೇಳಲಾಗುವುದು.

ಓಂ ಪುರುಷಾರ್ಥೋಽತಃ, ಶಬ್ದಾತ್, ಇತಿ ಬಾದರಾಯಣಃ ಓಂ 1

ಅವನ ಸಾಕ್ಷಾತ್ಕಾರದಿಂದ ಪುರುಷಾರ್ಥಪ್ರಾಪ್ತಿ, ಎಂದು ಬಾದರಾಯಣರ ಮತ ; ಹಾಗೆ ಶಬ್ದವಿರುವುದರಿಂದ.

[ಯಾರ ಸಾಕ್ಷಾತ್ಕಾರಕ್ಕಾಗಿ ಉಪಾಸನೆ ಹೇಳಲ್ಪಟ್ಟಿದೆಯೋ ಆತನ ದರ್ಶನದಿಂದಲೇ ಸರ್ವಪುರುಷಾರ್ಥಸಿದ್ಧಿಯಾಗುವುದು, ಎಂದು ಬಾದರಾಯಣರು ತಿಳಿದಿದ್ದಾರೆ. "ಯಂ ಯಂ ಲೋಕಂ ಮನಸಾ ಸಂವಿಭಾತಿ, ವಿಶುದ್ಧಸತ್ತ್ವಃ ಕಾಮಯತೇ ಯಾಂಶ್ಚ ಕಾಮಾನ್ । ತಂ ತಂ ಲೋಕಂ ಜಯತೇ ತಾಂಶ್ಚ ಕಾಮಾನ್, ತಸ್ಮಾದಾತ್ಮಜ್ಞಂ ಹ್ಯರ್ಚಯೇದ್ಭೂತಿಕಾಮಃ"—ಶುದ್ಧನಾದ ಜ್ಞಾನಿ ಯಾವ ಯಾವ ಲೋಕಗಳನ್ನು ಮನಸ್ಸಿನಲ್ಲಿ ನೆನೆಯುತ್ತಾನೆಯೋ ಯಾವ ಅಪೇಕ್ಷೆಗಳನ್ನು ಬಯಸುತ್ತಾನೆಯೋ, ಆಯಾ ಲೋಕಗಳನ್ನೂ ಬಯಕೆಗಳನ್ನೂ ಗಳಿಸುತ್ತಾನೆ; ಆದುದರಿಂದ ಭಾಗ್ಯವನ್ನು ಬಯಸುವವನು ಆತ್ಮಜ್ಞಾನಿಯನ್ನು ಪೂಜಿಸಬೇಕು—ಎಂದು ಮುಂಡಕೋಪನಿಷತ್ತಿನಲ್ಲಿ ಹೇಳಿದೆ.]

ಓಂ ಶೇಷತ್ವಾತ್ಪುರುಷಾರ್ಥವಾದಃ, ಯಥಾಽನ್ಯೇಷು, ಇತಿ ಜೈಮಿನಿಃ ಓಂ 2

ಪುರುಷಾರ್ಥಕ್ಕೆ ಜ್ಞಾನ ಕಾರಣವೆಂಬ ವಾದ, ಕರ್ಮದಲ್ಲಿ ಶೇಷತ್ವವಿರುವುದರಿಂದ, ಇತರ ವಿಷಯಗಳಲ್ಲಿರುವಂತೆ; ಹೀಗೆ ಜೈಮಿನಿ ಅಭಿಪ್ರಾಯಪಡುತ್ತಾನೆ.

[ಜ್ಞಾನ ಮೋಕ್ಷಕ್ಕೆ ಮುಖ್ಯಸಾಧನ. ಆದರೂ ಸ್ವರ್ಗಪ್ರಾಪ್ತಿಗಾಗಿ ಸಾಧನವಾಗಿರುವ ಕರ್ಮಕ್ಕೆ ಅದು ಶೇಷವಾಗಿರುತ್ತದೆ. "ಧನ, ದೇಹಶ್ರಮ, ಗೃಹಕಾರ್ಯಗಳು, ಇವುಗಳಿಂದ ಧೀರರು ಸ್ವರ್ಗವನ್ನು ಪಡೆಯುತ್ತಾರೆ, ಅಧೀರರಲ್ಲ" ಎಂದು ಜೈಮಿನಿ ಹೇಳುತ್ತಾನೆ. ಧೀರರು ಎಂದರೆ ಪಂಡಿತರು, ಜ್ಞಾನಿಗಳು. ಮೇಲಿನ ವಾಕ್ಯದಲ್ಲಿ ಸ್ವರ್ಗಪ್ರಾಪ್ತಿಗಾಗಿ ಧನಾದಿಸಾಧನಗಳನ್ನು ಹೇಳಲಾಗಿದೆ. ಅದರಂತೆಯೇ ಜ್ಞಾನವೂ ಒಂದು ಕರ್ಮಶೇಷ.]

ಈ ಎರಡನೆಯ ಸೂತ್ರದಿಂದ ಏಳನೆಯದರವರೆಗೆ ಪೂರ್ವಪಕ್ಷ.

ಓಂ ಆಚಾರದರ್ಶನಾತ್ ಓಂ 3

ಆಚಾರ ಕಂಡುಬಂದಿರುವುದರಿಂದ.

[ಜ್ಞಾನಿಗಳಾದ ದೇವತೆಗಳೂ ಕರ್ಮಾಚರಣೆ ಮಾಡುವುದರಿಂದ ಜ್ಞಾನ ಕರ್ಮಕ್ಕೆ ಶೇಷವೆಂದು ತಿಳಿಯಬಹುದು.]

ಓಂ ತಚ್ಛ್ರುತೇಃ ಓಂ 4

ಆ ಶೇಷತ್ವದ ವಿಷಯದಲ್ಲಿ ಶ್ರುತಿ ಇರುವುದರಿಂದ.

["ಯದೇವ ವಿದ್ಯಯಾ ಕರೋತಿ ಶ್ರದ್ಧಯೋಪನಿಷದಾ ತದೇವ ವೀರ್ಯವತ್ತರಂ ಭವತಿ"—ಯಾವ ಕರ್ಮವನ್ನು ವಿದ್ಯೆಯಿಂದಲೂ ಶ್ರದ್ಧೆಯಿಂದಲೂ ಉಪನಿಷತ್ತಿನ ಜ್ಞಾನದಿಂದಲೂ ಮಾಡುತ್ತಾನೆಯೋ, ಅದೇ ಹೆಚ್ಚಿನ ಫಲ ಉಳ್ಳದುದು ಆಗುತ್ತದೆ—ಎಂದು ಛಾಂದೋಗ್ಯದಲ್ಲಿ ಜ್ಞಾನಕ್ಕೆ ಕರ್ಮಶೇಷತ್ವವನ್ನು ಹೇಳಲಾಗಿದೆ.]

ಓಂ ಸಮನ್ವಾರಂಭಣಾತ್ ಓಂ 5

ಒಟ್ಟಿಗೇ ಆರಂಭವಾಗುವುದರಿಂದ.

["ಕರ್ಮೈವ ದೇಹಂ ದೈವಿಕಂ ಮಾನುಷಂ ವಾಪ್ಯನ್ವಾರಭೇತ್, ನಾಪರಸ್ತತ್ರ ಹೇತುಃ । ಭೋಗಾಂಸ್ತದೀಯಾಂಶ್ಚ ಯದಾ ವಿಭಾಗಂ, ದದಾತಿ ಕರ್ಮೈವ ಶುಭಾಶುಭಂ ಯತ್"—ಕರ್ಮದಿಂದಲೇ ದೇವಮಾನುಷ ಶರೀರಗಳು ಆರಂಭವಾಗುತ್ತವೆ; ಅದಕ್ಕಾಗಿ ಬೇರೆ ಯಾವ ಕಾರಣವೂ ಇಲ್ಲ. ಆಯಾ ವಿಭಾಗವನ್ನು ಅನುಸರಿಸಿ ಕರ್ಮವೇ ಶುಭಾಶುಭಭೋಗಗಳನ್ನು ಆಯಾ ದೇಹಗಳಿಗೆ ಒದಗಿಸುತ್ತದೆ—ಎಂದು ಮಾಠರಶ್ರುತಿ ಇದೆ, 'ಸಂ' ಎಂದರೆ ಚೆನ್ನಾಗಿ, ಎಂದರ್ಥ.]

ಓಂ ತದ್ವತೋ ವಿಧಾನಾತ್ ಓಂ 6

ಆ ಜ್ಞಾನವುಳ್ಳವನಿಗೂ ಕರ್ಮವನ್ನು ವಿಧಿಸಿರುವುದರಿಂದ.

["ಜ್ಞಾನೀ ಚ ಕರ್ಮಾಣಿ ಸದೋದಿತಾನಿ, ಕುರ್ಯಾದಕಾಮಃ ಸತತಂ ಭವೇತ"—ಜ್ಞಾನಿಯೂ ಸಚ್ಛಾಸ್ತ್ರೋದಿತ ಕರ್ಮಗಳನ್ನು ಸರ್ವದಾ ಮಾಡಬೇಕು, ಹಾಗೂ ಫಲಾಪೇಕ್ಷೆ ಇಲ್ಲದವನಾಗಿಯೇ ಇರಬೇಕು—ಎಂದು ಕಮಠ ಶ್ರುತಿ ಜ್ಞಾನ ಪಡೆದವನಿಗೂ ಕರ್ಮಗಳನ್ನು ವಿಧಿಸುತ್ತದೆ.]

ಓಂ ನಿಯಮಾಚ್ಚ ಓಂ 7

ನಿಯಮವಿರುವುದರಿಂದಲೂ.

["ಕುರ್ವನ್ನೇಹ ಕರ್ಮಾಣಿ ಜಿಜೀವಿಷೇಚ್ಛತಂ ಸಮಾಃ" —ಕರ್ಮವನ್ನು ಮಾಡುತ್ತಲೇ ಇದ್ದು ನೂರು ವರ್ಷ ಕಾಲ ಬದುಕಬಯಸಬೇಕು—ಎಂದು ಈಶಾವಾಸ್ಯಶ್ರುತಿ ಕರ್ಮ ನಿಯತವಾಗಿರುವುದನ್ನು ತಿಳಿಸುತ್ತದೆ.]

ಓಂ ಅಧಿಕೋಪದೇಶಾತ್ತು ಬಾದರಾಯಣಸ್ಯ, ಏವಂ ತದ್ದರ್ಶನಾತ್ ಓಂ 8

ಹೆಚ್ಚಾಗಿ ಉಪದೇಶವಿರುವುದರಿಂದ, ಎಂದು ಬಾದರಾಯಣರ ಮತ, ಹೀಗೆ ಅದನ್ನು ಶ್ರುತಿ ಹೇಳುತ್ತದೆ.

["ಜ್ಞಾನಾದೇವ ಸ್ವರ್ಗೋ, ಜ್ಞಾನಾದೇವಾಪವರ್ಗೋ, ಜ್ಞಾನಾದೇವ ಕಾಮಾಃ ಸಂಪದ್ಯಂತೇ । ಅಥಾಪಿ ಯಥಾ ಯಥಾ ಕರ್ಮ ಕುರುತೇ ತಥಾ ತಥಾಽಧಿಕೋ ಭವತಿ"—ಜ್ಞಾನದಿಂದಲೇ ಸ್ವರ್ಗ, ಜ್ಞಾನದಿಂದಲೇ ಮುಕ್ತಿ, ಜ್ಞಾನದಿಂದಲೇ ಇಷ್ಟಾರ್ಥಪ್ರಾಪ್ತಿಗಳು ಆಗುವುವು. ಆದರೂ ಹೇಗೆ ಹೇಗೆ ಕರ್ಮ ಮಾಡುತ್ತಾ ಹೋಗುವನೋ ಹಾಗೆ ಹಾಗೆ ಅಧಿಕಫಲವನ್ನು ಹೊಂದುವನು—ಎಂದು ಕೌಂತರವ್ಯಶ್ರುತಿ ಇದೆ. ಯುಧಿಷ್ಠಿರಾದಿಗಳು ರಾಜಸೂಯಾದಿಗಳನ್ನು ಮಾಡಿ ಹೆಚ್ಚಿನ ಫಲಪಡೆದರು; ಫಲಾಧಿಕ್ಯಕ್ಕಾಗಿಯೇ ಕರ್ಮ. ಅದುದರಿಂದ ಜ್ಞಾನದಿಂದ ಎಲ್ಲವೂ ಪ್ರಾಪ್ತವಾಗುವುದೆಂಬ ಬಾದರಾಯಣ ಮತ ಯುಕ್ತವಾದುದು.]

ಓಂ ತುಲ್ಯಂ ತು ದರ್ಶನಮ್ ಓಂ 9

ದರ್ಶನವಾದರೋ ಸಮಾನವಾದುದು.

[ರಾಜಸೂಯಾದಿಕರ್ಮಗಳನ್ನು ಮಾಡಿದವನಿಗೂ ಮಾಡದವನಿಗೂ ಜ್ಞಾನ ಸಮಾನವೇ. "ಜ್ಞಾನೇನೈವಾಪ್ಯತೇ ಸರ್ವಂ ಕರ್ಮಣಾತ್ವಧಿಕಂ ಭವೇತ್ । ಇತಿ ಪ್ರಾಹ ಮಹಾಯೋಗೀ ಪುಮರ್ಥಾನಾಂ ವಿನಿರ್ಣಯಮ್"— ಜ್ಞಾನದಿಂದಲೇ ಎಲ್ಲವನ್ನೂ ಪಡೆಯಬಹುದು, ಸತ್ಕರ್ಮಾನುಷ್ಠಾನದಿಂದ ಹೆಚ್ಚಿನ ಫಲ ಬರುವುದು. ಹೀಗೆಂದು ಪುರುಷಾರ್ಥಗಳ ನಿರ್ಣಯವನ್ನು ಮಹಾಯೋಗಿಯಾದ ಬಾದರಾಯಣರು ಹೇಳಿದರು—ಎಂದು ಭವಿಷತ್ಪರ್ವ ತಿಳಿಸುವುದು. "ಚೀರ್ಣೇಽಕೃತೇ ವಾ ಜ್ಞಾನಸ್ಯ ನ ವಿಶೇಷೋಸ್ತಿ ಕರ್ಮಣಿ"— ಕರ್ಮ ಮಾಡಲ್ಪಡಲಿ, ಬಿಡಲ್ಪಡಲಿ, ಅದರಿಂದ ಜ್ಞಾನಕ್ಕೆ ಯಾವ ವಿಶೇಷವೂ ಇರುವುದಿಲ್ಲ—ಎಂದು ಬ್ರಹ್ಮತರ್ಕ ತಿಳಿಸುವುದು.]

ಓಂ ಅಸಾರ್ವತ್ರಿಕೀ ಓಂ 10

ಸಾರ್ವತ್ರಿಕವಲ್ಲ.

[ಎಲ್ಲರಿಗೂ ಪುರುಷಾರ್ಥಗಳು ಅಪೇಕ್ಷಿತವಾಗಿರುವುದರಿಂದ ಸಾಧನ ಭೂತವಾದ ಜ್ಞಾನಕ್ಕೆ ಎಲ್ಲರೂ ಅಧಿಕಾರಿಗಳಾಗುವರೇ ? ಇಲ್ಲ, ಎಲ್ಲರಿಗೂ ಅಧಿಕಾರವಿಲ್ಲ, ಎನ್ನುತ್ತಾರೆ, ಸೂತ್ರಕಾರರು.]

ಓಂ ವಿಭಾಗಃ ಶತವತ್ ಓಂ 11

ವಿಭಾಗ, ನೂರರಂತೆ.

["ನವ ಕೋಟ್ಯೋ ಹಿ ದೇವಾನಾಂ ತೇಷಾಂ ಮಧ್ಯೇ ಶತಸ್ಯ ತು । ಸೋಮಾಧಿಕಾರೋ ವೇದೋಕ್ತಃ"—ಒಂಬತ್ತು ಕೋಟಿ ದೇವತೆಗಳಿರುವರು, ಅವರ ಪೈಕಿ ನೂರು ದೇವತೆಗಳಿಗೆ ಮಾತ್ರ ಸೋಮಾಧಿಕಾರ ವೇದದಲ್ಲಿ ಹೇಳಲ್ಪಟ್ಟಿದೆ—ಎಂಬ ವಾಕ್ಯದಂತೆ, ಅಸಂಖ್ಯ ಪ್ರಜೆಗಳಿದ್ದರೂ ವಿಷ್ಣುಪಾದ ವನ್ನೇ ಆಶ್ರಯಿಸಿ ಜ್ಞಾನಾಧಿಕಾರಿಯಾದವರು ಕೆಲವರೇ. ಎಲ್ಲರಿಗೂ ಸುಖಾಪೇಕ್ಷೆ ಸಮಾನವೇ; ಆದರೆ ಅಧಿಕಾರದ ದೃಷ್ಟಿಯಿಂದ ಜೀವರನ್ನು ಅಧಿಕಾರಿಗಳು, ಅನಧಿಕಾರಿಗಳು ಎಂದು ವಿಭಾಗ ಮಾಡಲಾಗಿದೆ.]

ಓಂ ಅಧ್ಯಯನಮಾತ್ರವತಃ ಓಂ 12

ಅಧ್ಯಯನ ಮಾಡುವವರಿಗೆ ಮಾತ್ರವೇ.

['ಯಾರಿಗೆ ಅಧಿಕಾರವಿರುವುದು ?' ಎಂಬ ಪ್ರಶ್ನೆಗೆ ಈ ಸೂತ್ರ ಉತ್ತರ. "ಪಠೇದ್ವೇದಾನ್, ಅರ್ಥಾನಧೀಯೀತ, ಅಥ ವಿಚಾರ್ಯ ಬ್ರಹ್ಮ

ವಿಂದೇತ್"—ವೇದಗಳನ್ನು ಪಠಿಸಬೇಕು, ಅನಂತರ ಅರ್ಥಗಳನ್ನು ಕಲಿಯಬೇಕು, ತರುವಾಯ ವಿಚಾರಮಾಡಿ ಬ್ರಹ್ಮನನ್ನು ಪಡೆಯಬೇಕು—ಎಂದು ಕೌಷಾರವಶ್ರುತಿಯಿದೆ.]

ಓಂ ನ, ಅವಿಶೇಷಾತ್ ಓಂ 13

ವಿಶೇಷವಿಲ್ಲದಿರುವುದರಿಂದ, ಇಲ್ಲ.

[ದೇವಾದಿಗಳಿಗೂ ಜ್ಞಾನದಲ್ಲಿ ತಾರತಮ್ಯವಿರುವುದು. ಅಧಿಕಾರ ಸಮನಾಗಿರುವುದಿಲ್ಲ. ಜ್ಞಾನ ಅಧಿಕಾರಾನುಸಾರವಾಗಿಯೇ ಇರುವುದು. "ಅಥ ಪುಮರ್ಥಸಾಧನಾನಿ, ಅರ್ಥೋ ಧರ್ಮೋ ಜ್ಞಾನಮಿತಿ, ಉತ್ತರೋತ್ತರಮ್ । ತತ್ತದಧಿಕಾರಿಣೋ ಮನುಷ್ಯಾ ಋಷಿಯೋ ದೇವಾ ಇತ್ಯುತ್ತರೋತ್ತರಮ್ ।"—ಆಮೇಲೆ ಪುರುಷಾರ್ಥಸಾಧನವಾಗಿರುವುವು ಉತ್ತರೋತ್ತರ ಕ್ರಮದಿಂದ ಅರ್ಥ, ಧರ್ಮ, ಜ್ಞಾನ. ಆ ವಿಷಯದಲ್ಲಿ ಉತ್ತರೋತ್ತರ ಅಧಿಕಾರಿಗಳಾಗಿರುವವರು ಮನುಷ್ಯರು, ಋಷಿಗಳು ಮತ್ತು ದೇವತೆಗಳು—ಎಂದು ಕೌಂಡಿನ್ಯಶ್ರುತಿ ಹೇಳುತ್ತದೆ.]

ಓಂ ಸ್ತುತಯೇಽನುಮತಿರ್ವಾ ಓಂ 14

ಸ್ತುತಿಗಾಗಿ, ಅನುಮತಿಯಾದರೂ (ವಿಧಿಯಲ್ಲ).

[ಜ್ಞಾನಿಗೆ ಯಥೇಷ್ಟಾಚರಣೆಯನ್ನು ಹೇಳಿದೆ; ಅವನು ಮೌನಿಯಾಗಿರಬಹುದು, ಇಲ್ಲದಿರಬಹುದು, ಇತ್ಯಾದಿ. ಇಂಥ ಆಚರಣೆಯೇನೂ ವಿಧಿಯಲ್ಲ, ಜ್ಞಾನಿಯ ಸ್ತುತಿಗಾಗಿ ಹೀಗೆ ಹೇಳಿದೆ. ಅವನು ಅನುಷ್ಠಾನಯೋಗ್ಯವಾದ ಯಾವುದೇ ಒಂದು ಕರ್ಮವನ್ನು ಮಾಡಿದರೂ ಆದೀತು, ಬಿಟ್ಟರೂ ಆದೀತು, ಎಂಬ ಅನುಮತಿಯನ್ನು ಇದು ಸೂಚಿಸುವುದು.]

ಓಂ ಕಾಮಕಾರೇಣ ಚೈಕೇ ಓಂ 15

ಕೆಲವರು ತಮ್ಮ ಇಚ್ಛಾನುಸಾರವಾಗಿಯೂ.

["ಕಾಮಚಾರಾಃ ಕಾಮಭಕ್ಷಾಃ ಕಾಮವಾದಾಃ ಕಾಮೇನೈವೇಮಂ ದೇಹಮುತ್ಸೃಜ್ಯ, ಅಥ ಪರಾತ್ಪರಮೀಯುರನಾರಂಭಣಂ"—ಕಾಮಾಚಾರ ಉಳ್ಳವರಾಗಿ ಇಷ್ಟಬಂದಂತೆ ತಿನ್ನುವವರಾಗಿ ಅಥವಾ ಮನಸ್ಸಿಗೆ ಬಂದುದನ್ನು ಮಾತನಾಡುವವರಾಗಿ ಕೆಲವರು ತಮ್ಮ ಅಪೇಕ್ಷೆಯಿಂದಲೇ ಈ ದೇಹವನ್ನು

ಬಿಟ್ಟು ಅನಾದಿಯೂ ಪರಾತ್ಪರನೂ ಆದ ಈಶನ ಬಳಿಗೆ ಹೋಗುವರು— ಎಂದು ಕೆಲವರು ಪಠಿಸುತ್ತಾರೆ.]

ಓಂ ಉಪಮರ್ದಂ ಚ ಓಂ 16

ಕರ್ಮನಾಶವನ್ನೂ (ಸ್ಮೃತಿ ಉಪದೇಶಿಸುತ್ತದೆ).

[ಜ್ಞಾನದಿಂದ ಪುಣ್ಯಪಾಪಗಳ ಫಲ ಕಡಿಮೆಯಾಗುವುದನ್ನು ಶ್ರುತಿ ತಿಳಿಸುತ್ತದೆ. "ಓಮಿತ್ಯುಚ್ಚಾರ್ಯ, ಅಂತರಿಮಮಾತ್ಮಾನಮಭಿಪಶ್ಯ, ಉಪ-ಮೃದ್ಯ ಪುಣ್ಯಂ ಚ ಪಾಪಂ ಚ, ಕಾಮಮಾಚರಂತೋ ಬ್ರಹ್ಮಾನುವ್ರಜಂತಿ"— ಓಂ ಎಂದು ಉಚ್ಚರಿಸಿ, ಒಳಗಿರುವ ಪರಮಾತ್ಮನ ಸಾಕ್ಷಾತ್ಕಾರ ಪಡೆದು, ಪುಣ್ಯಪಾಪಗಳ ಪ್ರಭಾವವನ್ನು ನಾಶಪಡಿಸಿ, ಯಥೇಷ್ಟವಾಗಿ ಪುಣ್ಯ ಹಾಗೂ ಪಾಪಕರ್ಮಗಳನ್ನು ಆಚರಿಸಿ, ಜ್ಞಾನಿಗಳು ಪರಬ್ರಹ್ಮನನ್ನು ಸೇರುವರು — ಎಂದು ತುರಶ್ರುತಿಯಲ್ಲಿ ಹೇಳಿದೆ.]

ಓಂ ಊರ್ಧ್ವರೇತಃಸ್ಸು ಚ, ಶಬ್ದೇ ಹಿ ಓಂ 17

ಊರ್ಧ್ವರೇತಸ್ಕರಾದ ಜ್ಞಾನಿಗಳಿಗೇ ಉಪದೇಶ, ಶ್ರುತಿಯಲ್ಲಿ ಹಾಗೆ ಹೇಳಿದೆ.

[ಜ್ಞಾನಿಗಳು ಇಷ್ಟಬಂದಂತೆ ಆಚಾರ ನಡೆಸಿದರೂ ಮೋಕ್ಷ ಪಡೆಯು ವರು; ಬರೇ ಕಾಮಾಚಾರವುಳ್ಳವರಿಗೆ ಹಾಗಾಗುವುದಿಲ್ಲ, "ಗುಹ್ಯವಾದ ಪರಮಾತ್ಮನ ವಿಷಯವನ್ನು ಊರ್ಧ್ವರೇತಸ್ಕರಾದ ಮುನಿಗಳಿಗೆ ಯಾವನು ತಿಳಿಸುವನೋ ಅಂಥ ಮಹಾವ್ಯಕ್ತಿ ದುರ್ಲಭ" ಎಂದು ಮಾಠರಶ್ರುತಿ ಹೇಳುತ್ತದೆ.]

ಓಂ ಪರಾಮರ್ಶಂ ಜೈಮಿನಿಃ, ಅಚೋದನಾ ಚಾಪವದತಿ ಹಿ ಓಂ 18

ಪರಾಮರ್ಶವನ್ನು ಜೈಮಿನಿ ಹೇಳುತ್ತಾನೆ; ಚೋದನವಿಲ್ಲ, ಅಪವಾದ ವನ್ನು ಹೇಳಿದೆ.

[ಅನೇಕ ಆಚಾರಗಳನ್ನು ವೇದ ವಿಧಿಸಿದೆ: "ಪ್ರಾತರುತ್ಥಾಯ ಸಂಧ್ಯಾ-ಮುಪಾಸೀತ, ಯತ್ಸಂಧ್ಯಾಮುಪಾಸತೇ ಬ್ರಹ್ಮೈವ ತದುಪಾಸತೇ; ಅಥ ದೇವಾನ್ನಮೇತ್, ಜುಹುಯಾತ್, ವೇದಾನಾವರ್ತಯೀತ; ನಾನ್ಯತ್ಕಿಂಚಿದಾ-ಚರೇತ್, ನ ಸುರಾಂ ಪಿಬೇತ್, ನ ಪಲಾಂಡುಂ ಭಕ್ಷಯೀತ, ನ ಭೃಶಂ

ವದೇತ್. ನ ವಿಸ್ಮರೇತಾತ್ಮಾನಮ್ ; ಸೋಮಂ ಪಿಬೇತ್, ಹುತಶೇಷೇಣ ವರ್ತಯೇತ್"—ಬೆಳಗ್ಗೆ ಎದ್ದು ಸಂಧ್ಯೋಪಾಸನೆ ಮಾಡಬೇಕು, ಸಂಧ್ಯೋಪಾಸನೆಯೇ ಬ್ರಹ್ಮೋಪಾಸನೆಯಾಗುವುದು ; ಮುಂದೆ ದೇವರ ನಮಸ್ಕಾರ ಮಾಡಬೇಕು, ಹೋಮ ಮಾಡಬೇಕು, ವೇದಗಳನ್ನು ಪುನಃ ಪುನಃ ಪಠಿಸಬೇಕು ; ಬೇರೆ ಏನನ್ನೂ ಮಾಡಬಾರದು, ಹೆಂಡ ಕುಡಿಯಬಾರದು, ಈರುಳ್ಳಿ ತಿನ್ನಬಾರದು, ಅತಿಯಾಗಿ ಮಾತನಾಡಬಾರದು, ಪರಮಾತ್ಮನನ್ನು ಮರೆಯಬಾರದು ; ಸೋಮರಸ ಕುಡಿಯಬೇಕು, ಹೋಮ ಮಾಡಿದಮೇಲೆ ಶೇಷ (ಪ್ರಸಾದ) ವನ್ನು ತಿನ್ನಬೇಕು—ಹೀಗೆ ವಿಧಿ ನಿಷೇಧಗಳಿವೆ. ಇಂಥ ವಿಧಿ ನಿಬಂಧನಗಳನ್ನು ಕಳೆಚಿಕೊಂಡಿರುವವನ ಆಚಾರವೇ ಕಾಮಾಚಾರ. ನಿಷಿದ್ಧ ಕರ್ಮಾಚಾರ ಮಾಡಬಾರದೆಂದೇ ಚೋದನೆಯಿದೆ ; ಬ್ರಾಹ್ಮಣನನ್ನು ಕೊಲ್ಲಬಾರದು, ಎಂಬುದು ಅಪವಾದ.]

ಓಂ ಅನುಷ್ಠೇಯಂ ಬಾದರಾಯಣಃ, ಸಾಮ್ಯಶ್ರುತೇಃ ಓಂ 19

ಬಾದರಾಯಣರು ಅನುಷ್ಠೇಯ, ಎನ್ನುತ್ತಾರೆ ; ಸಾಮ್ಯಶ್ರುತಿಯಿರುವುದರಿಂದ.

[ಮಾಡಬಹುದಾಗಿರುವ ಕಾರ್ಯಗಳಲ್ಲಿ ಮಾತ್ರವೇ, ಅಪೇಕ್ಷೆಯಿದ್ದಂತೆ ಕೆಲವನ್ನು ಮಾಡಬಹುದು ಅಥವಾ ಬಿಡಬಹುದು, ಎಂದು ಬಾದರಾಯಣರ ಮತ. "ಕೇನ ಸ್ಯಾದ್ಯೇನ ಸ್ಯಾತ್, ತೇನೇದೃಶ ಏವ"—ಕರ್ಮಗಳನ್ನು ಮಾಡಲಿ, ಬಿಡಲಿ, ಜ್ಞಾನಿ ಹಾಗೆಯೇ ಇರುವನು—ಎಂಬ ಬೃಹದಾರಣ್ಯಕ ಶ್ರುತಿಯಿಂದ ಹೇಗೆ ಮಾಡಿದರೂ ಸಾಮ್ಯವನ್ನು ಕಾಣಬಹುದು. "ಆತ್ಮನ್ಯೇವ ಚ ಸಂತುಷ್ಟಸ್ತಸ್ಯ ಕಾರ್ಯಂ ನ ವಿದ್ಯತೇ"—ಆತ್ಮನಲ್ಲಿಯೇ ಸಂತೋಷವನ್ನು ಕಾಣುವವನಿಗೆ ಬೇರೆ ಕಾರ್ಯವೇ ಇರುವುದಿಲ್ಲ—ಎಂದು ಗೀತೆ ತಿಳಿಸುತ್ತದೆ.]

ಓಂ ವಿಧಿರ್ವಾ, ಧಾರಣವತ್ ಓಂ 20

ವಿಧಿಯಾಗಿಯಾದರೂ ಇರಬಹುದು, ಧಾರಣದಂತೆ.

[ವೇದಧಾರಣೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರಿಗೆ ಮಾತ್ರ ವಿಧಿಯಾಗಿದೆ, ಇತರರಿಗಲ್ಲ. ಹಾಗೆಯೇ ತನ್ನ ಇಷ್ಟದಂತೆ ನಡೆದುಕೊಳ್ಳುತ್ತಿರುವುದೂ ಜ್ಞಾನಿಗೆ

ವಿಹಿತವಾಗಿಯೇ ಇರುತ್ತದೆ. ಅಲ್ಲಿ ಅಧರ್ಮಶಂಕೆ ಮಾಡಬಾರದು; ಬೇರೆಯವರು—ಬ್ರಹ್ಮಜ್ಞಾನ ಪಡೆದಿರದವರು—ಹಾಗೆ ಆಚರಿಸಲೂ ಬಾರದು.]

ಓಂ ಸ್ತುತಿಮಾತ್ರಮುಪಾದಾನಾದಿತಿ ಚೇನ್ನ, ಅಪೂರ್ವತ್ವಾತ್ ಓಂ 21

ಸ್ವೀಕಾರಮಾಡಿರುವುದರಿಂದ ಸ್ತುತಿಮಾತ್ರವೇ. ಎಂದರೆ ಹಾಗಲ್ಲ, ಪರವಶತ್ವದಿಂದ.

["ಸ್ವೇಚ್ಛಾಚರಣೆಯನ್ನು ಹೇಳುವ ಶ್ರುತಿ ಸ್ತುತಿಮಾತ್ರವೇ, ವಿಧಾಯಕವಲ್ಲ; ಏಕೆಂದರೆ ಜ್ಞಾನಿಗಳೂ ಸಾಮಾನ್ಯ ವಿಧಿಗಳನ್ನು ಸ್ವೀಕರಿಸುತ್ತಾರೆ" ಎಂದು ಹೇಳುವುದು ಸರಿಯಲ್ಲ. ಜ್ಞಾನಿಗಳೂ ಎಲ್ಲರಿಗಿಂತ ಪೂರ್ವರಲ್ಲ—ಅನಾದಿಗಳಲ್ಲ; ಅವರು ಪರಬ್ರಹ್ಮನಿಗೆ ಅಧೀನರೇ, ಸರ್ವವಿಧಿಗಳನ್ನೂ ಅತಿಕ್ರಮಿಸಬಲ್ಲವ ಪರಮಾತ್ಮನೊಬ್ಬನೇ. ಇತರರೆಲ್ಲ ವಿಧಿಗೆ ವಶರಾಗಿಯೇ ಇರುತ್ತಾರೆ. ಇದು ಬ್ರಹ್ಮತರ್ಕದಲ್ಲಿ ಹೇಳಲ್ಪಟ್ಟಿದೆ.]

ಓಂ ಭಾವಶಬ್ದಾಚ್ಚ ಓಂ 22

ಭಾವಶಬ್ದ ಇರುವುದರಿಂದಲೂ.

[ಎಲ್ಲರೂ ವಿಧಿಯನ್ನು ಅನುಸರಿಸಬೇಕು. ಪ್ರಜಾಪತಿಯ ವಿಷಯದಲ್ಲಿ ನಿಯಮ ಅವನ ಭಾವವನ್ನು—ಇಚ್ಛೆಯನ್ನು—ಅನುಸರಿಸುತ್ತದೆ. ಆದರೆ ಪರಬ್ರಹ್ಮನೊಬ್ಬನೇ ಸರ್ವವಿಧಿಗಳಿಂದಲೂ ದೂರವಾಗಿರುವುದು ಕಂಡುಬರುವುದು; ಹೀಗೆಂದು ತುರಶ್ರುತಿ ಹೇಳುವುದು. ಇದರಿಂದ ಜ್ಞಾನಿಗಳಿಗೆ ಸ್ವೇಚ್ಛಾಚಾರ ವಿಧಿ ಇದೆ, ಎಂದು ತಿಳಿದುಬರುವುದು.]

ಓಂ ಪಾರಿಪ್ಲವಾರ್ಥಾ ಇತಿ ಚೇನ್ನ, ವಿಶೇಷಿತತ್ವಾತ್ ಓಂ 23

ಶ್ರುತಿಗಳ ಅರ್ಥಗಳು ಅಸ್ಥಿರವಾಗುತ್ತವೆ, ಎನ್ನುವುದು ಸರಿಯಲ್ಲ, ಜ್ಞಾನಿಗಳು ವಿಶೇಷಿತರಾಗಿದ್ದಾರೆ.

[ಜ್ಞಾನಿಗಳನ್ನು ಮೂರು ಬಗೆಯಾಗಿ ವಿಂಗಡಿಸಬಹುದು. ವಿಧಿನಿಯತರಾದ ಮನುಷ್ಯರು ವಿಧಿಗೆ ಬದ್ಧರಾಗಿಯೇ ಕರ್ಮ ಮಾಡುವರು. ಅನಿಯತರಾದ ದೇವತೆಗಳು ಯಾವ ನಿಯಂತ್ರಣವೂ ಇಲ್ಲದೆ ಕರ್ಮ ಮಾಡುವರು.

ಪರಬ್ರಹ್ಮನೊಬ್ಬನೇ ಸ್ವೇಚ್ಛಾನಿಯತ—ತನ್ನ ಇಷ್ಟದಂತೆ ತಾನೇ ನಿಯಮ ಬದ್ಧನಾಗಿರುವವ. ಇದನ್ನು ಗೌಪವನ ಶ್ರುತಿ ತಿಳಿಸುತ್ತದೆ.]

ಓಂ ತಥಾ ಚೈಕವಾಕ್ಯೋಪಬಂಧಾತ್ ಓಂ 24

ಏಕವಾಕ್ಯತೆಗೆ ಸಂಬಂಧಪಟ್ಟಿರುವುದರಿಂದ.

[ಜ್ಞಾನಿಗಳಲ್ಲಿ ಮೂರು ಬಗೆಯವರು ಇರುವುದರಿಂದ ವಿಧಿವಾಕ್ಯಗಳಿಗೂ ಸ್ವೇಚ್ಛಾಚಾರದ ವಾಕ್ಯಗಳಿಗೂ ಸಂಬಂಧ ಕೂಡುತ್ತದೆ. ಅವು ಪರಸ್ಪರ ವಿರೋಧಿಗಳಲ್ಲ.]

ಓಂ ಅತ ಏವ ಚಾಗ್ನೀಂಧನಾದ್ಯನಪೇಕ್ಷಾ ಓಂ 25

ಆದುದರಿಂದಲೇ ಅಗ್ನೀಂಧನಾದಿಕರ್ಮಗಳನ್ನು ಅಪೇಕ್ಷಿಸುವುದಿಲ್ಲ.

[ಮನಸ್ಸಿಗೆ ಬಂದಂತೆ ಆಚಾರವಿದ್ದರೂ ಜ್ಞಾನದಿಂದಲೇ ಮೋಕ್ಷಪ್ರಾಪ್ತಿಯಾಗುವುದರಿಂದ, ಅದಕ್ಕಾಗಿ ಅಗ್ನಿಹೋತ್ರಾದಿ ಆಶ್ರಮೋಚಿತಕರ್ಮಗಳನ್ನು ಅಪೇಕ್ಷಿಸುವುದಿಲ್ಲ. "ಯೇಷಾಂ ಜ್ಞಾನಂ ಸಮುತ್ಪನ್ನಂ ತೇಷಾಂ ಮೋಕ್ಷೋ ವಿನಿಶ್ಚಿತಃ"—ಯಾರಿಗೆ ಜ್ಞಾನ ಹುಟ್ಟಿದೆಯೋ ಅವರಿಗೆ ಮೋಕ್ಷವಾಗುವುದು ಖಂಡಿತ—ಎಂದು ಬ್ರಹ್ಮತರ್ಕದಲ್ಲಿ ಹೇಳಿದೆ.]

ಓಂ ಸರ್ವಾಪೇಕ್ಷಾ ಚ ಯಜ್ಞಾದಿಶ್ರುತೇಃ, ಅಶ್ವವತ್ ಓಂ 26

ಯಜ್ಞಾದಿಗಳ ವಿಷಯದಲ್ಲಿ ಶ್ರುತಿ ಇರುವುದರಿಂದ ಎಲ್ಲ ಅಪೇಕ್ಷೆಗಳೂ, ಕುದುರೆಯಂತೆಯೇ.

[ಜ್ಞಾನೋತ್ಪತ್ತಿಗಾಗಿ ಸರ್ವಧರ್ಮಗಳ ಅಪೇಕ್ಷೆ ಇರುವುದು, ಮೋಕ್ಷಕ್ಕಾಗಿ ಅಲ್ಲ. "ತಮೇಕಂ ವೇದಾನುವಚನೇನ ಬ್ರಾಹ್ಮಣಾ ವಿವಿದಿಷಂತಿ ಯಜ್ಞೇನ ದಾನೇನ ತಪಸಾऽನಾಶಕೇನ"—ಈ ಆತ್ಮನನ್ನು ಸ್ವಾಧ್ಯಾಯದಿಂದಲೂ ಯಜ್ಞರಿಂದಲೂ ಹಾನಿಕರವಲ್ಲದ ತಪಸ್ಸಿನಿಂದಲೂ ಬ್ರಾಹ್ಮಣರು ತಿಳಿಯಬಯಸುತ್ತಾರೆ—ಎಂದು ಬೃಹದಾರಣ್ಯಕ ವಾಕ್ಯವಿದೆ. ಗ್ರಾಮವನ್ನು ತಲುಪಲು ದಾರಿಯಲ್ಲಿ ಕುದುರೆ ಬೇಕು, ಊರನ್ನು ತಲುಪಿದಮೇಲೆ ಆ ಅಶ್ವದ ಆವಶ್ಯಕತೆ ಏನು ? ಮೋಕ್ಷ ಪ್ರಾಪ್ತವಾದ ಮೇಲೆ ಸಾಧನಗಳ ಅಪೇಕ್ಷೆ ಇರುವುದಿಲ್ಲ.]

ಓಂ ಶಮದಮಾದ್ಯುಪೇತಃ ಸ್ಯಾತ್, ತಥಾಪಿ ತು ತದ್ವಿಧೇಸ್ತದಂಗತಯಾ ತೇಷಾಮವಶ್ಯಾನುಷ್ಠೇಯತ್ವಾತ್ ಓಂ 27

ಜ್ಞಾನಿ ಶಮದಮಾದಿಗಳಿಂದ ಕೂಡಿರಬೇಕು, ಹಾಗೆ ಜ್ಞಾನಕ್ಕೆ ಅಂಗವಾಗಿ ಅವಶ್ಯವಾಗಿ ಅನುಷ್ಠೇಯವಾಗಿರುವುದರಿಂದ ಅವು ವಿಹಿತವಾಗಿವೆ.

[ಜ್ಞಾನವೊಂದರಿಂದಲೇ ಮೋಕ್ಷವೆಂಬುದು ನಿಜವೇ ; ಆದರೆ ಮುಮುಕ್ಷು ಶಮದಮಾದಿಗಳಿಂದ ಕೂಡಿದವನೂ ಆಗಿರಬೇಕು. "ಶಾಂತೋ ಭವೇತ್, ದಾಂತೋ ಭವೇತ್, ಅನುಕೂಲೋ ಭವೇತ್, ಆಚಾರ್ಯಂ ಪರಿಚರೇತ್"— ಆಚಾರ್ಯನಿಂದ ವಿದ್ಯೆ ಕಲಿತು ಶಾಂತನಾಗಿರಬೇಕು, ದಾಂತನಾಗಿರಬೇಕು, ಅನುಕೂಲನಾಗಿರಬೇಕು, ಆಚಾರ್ಯನ ಸೇವೆ ಮಾಡಬೇಕು—ಎಂದು ಮಾಠರ ಶ್ರುತಿ ಇದೆ.]

ಓಂ ಸರ್ವಾನ್ನಾನುಮತಿಶ್ಚ, ಪ್ರಾಣಾತ್ಯಯೇ ತದ್ದರ್ಶನಾತ್ ಓಂ 28

ಎಲ್ಲ ಅನ್ನವನ್ನೂ ತಿನ್ನಲು ಅನುಮತಿಯಿದೆ, ಪ್ರಾಣ ಹೋಗಿಬರುವಾಗ ಹಾಗೆ ಶ್ರುತಿ ಇರುವುದರಿಂದ.

["ಹೀಗೆ ತಿಳಿದವನು ಎಲ್ಲ ಅನ್ನವನ್ನು ತಿಂದರೂ ಹಾಗೆಯೇ ಆಗುತ್ತಾನೆ" ಎಂದು ಹೇಳಿರುವುದು ಸರ್ವಾನ್ನಭಕ್ಷಣಕ್ಕೆ ಅನುಮತಿ, ಪ್ರಾಣ ಹೋಗುವ ಸಮಯಕ್ಕೆ ಸಂಬಂಧಿಸಿದುದು.]

ಓಂ ಅಬಾಧಾಚ್ಚ ಓಂ 29

ಬಾಧೆಯಿಲ್ಲದಿರುವುದರಿಂದಲೂ ಹೀಗೆಯೇ.

["ಅನ್ಯಾಯ್ಯಾಚರಣಾಭಾವೇ ನ ಹಿ ಜ್ಞಾನಸ್ಯ ಬಾಧನಮ್ । ಅತೋ ವಿದ್ವಾನಪಿ ನ್ಯಾಯ್ಯಂ ವರ್ತೇತೋತ್ಕರ್ಷಸಿದ್ಧಯೇ" — ಅನ್ಯಾಯ್ಯವಾದ ಆಚಾರವಿರದಿದ್ದರೆ ಜ್ಞಾನಕ್ಕೆ ಬಾಧೆ ಇರುವುದಿಲ್ಲ. ಆದುದರಿಂದ ವಿದ್ವಾಂಸನಾದರೂ ನ್ಯಾಯಸಮ್ಮತವಾದುದನ್ನೇ ತನ್ನ ಉತ್ಕರ್ಷಕ್ಕಾಗಿ ಮಾಡಬೇಕು— ಎಂದು ಬ್ರಹ್ಮತರ್ಕದಲ್ಲಿ ಹೇಳಿದೆ. ಆದುದರಿಂದ ನ್ಯಾಯಕ್ಕೆ ವಿರುದ್ಧವಲ್ಲದ ಸ್ವೇಚ್ಛಾಚಾರ ದುಷ್ಟವಲ್ಲ.]

ಓಂ ಅಪಿ ಸ್ಮರ್ಯತೇ ಓಂ 30

ಸ್ಮೃತಿಯಲ್ಲಿಯೂ ಹೀಗೆ ಹೇಳಿದೆ.

["ಅತೀತಾನಾಗತಜ್ಞಾನೀ ತ್ರೈಲೋಕ್ಯೋದ್ಧರಣಕ್ಷಮಃ । ಏತಾದೃಶೋಽಪಿ ನಾಚಾರಂ ಶ್ರೌತಂ ಸ್ಮಾರ್ತಂ ವಿಸರ್ಜಯೇತ್"—ಹಿಂದೆ ನಡೆದುದು, ಮುಂದೆ ಆಗುವುದು ಇವನ್ನೆಲ್ಲ ತಿಳಿಯಬಲ್ಲ ಹಾಗೂ ಮೂರು ಲೋಕದ ಜನರನ್ನೂ ಉದ್ಧಾರ ಮಾಡಬಲ್ಲ ವಿದ್ವಾಂಸನೂ ಶ್ರುತಿಸ್ಮೃತಿಗಳಲ್ಲಿ ನಿರೂಪಿಸಲ್ಪಟ್ಟ ಸದಾಚಾರವನ್ನು ಬಿಡಬಾರದು—ಎಂದು 'ಹರಿವಂಶ'ದಲ್ಲಿ ಹೇಳಿದೆ.]

ಓಂ ಶಬ್ದಶ್ಚಾತೋಽಕಾಮಕಾರೇ ಓಂ 31

ಆದುದರಿಂದ ಮನಸ್ಸಿಗೆ ಬಂದಂತೆ ನಡೆದುಕೊಳ್ಳಬಾರದು, ಎಂದು ಶ್ರುತಿಯಿದೆ.

[ಇಚ್ಛಾನುಸಾರವಾಗಿ ಶ್ರೀಹರಿಯು ಸ್ತುತಿ, ಪೂಜೆ, ಯಜ್ಞ, ತಪಸ್ಸು ಮುಂತಾದ ಸತ್ಕಾರ್ಯಗಳನ್ನು ಮಾಡಿಕೊಳ್ಳಬಹುದಲ್ಲದೆ, ಶಾಸ್ತ್ರನಿಷಿದ್ಧವಾದ ಅಸತ್ಕಾರ್ಯಗಳಲ್ಲಿ ಯಾವಾಗಲೂ ಆಸಕ್ತನಾಗಬಾರದು. "ಸ ಯ ಏತದೇವಂವಿದೇವಂ ಮನ್ವಾನಃ, ಏವಂ ಪಶ್ಯನ್, ನ ಕಾಮಚರಿತಂ ಚರೇತ್, ನ ಕಾಮಂ ಭಕ್ಷಯೀತ, ನ ಕಾಮಮನುವರ್ತೇತ"—ಯಾವನು ಈ ರೀತಿಯಾಗಿ ಪರಮಾತ್ಮನನ್ನು ತಿಳಿದು ನೋಡಿ ಸಾಕ್ಷಾತ್ಕಾರ ಮಾಡಿಕೊಂಡಿರುವನೋ ಅಂಥವನು ಮನಸ್ಸಿಗೆ ಬಂದಂತೆ ನಡೆದುಕೊಳ್ಳಬಾರದು, ಇಷ್ಟಬಂದುದನ್ನೆಲ್ಲ ತಿನ್ನಬಾರದು, ಸ್ವೇಚ್ಛೆಯಿಂದ ವರ್ತಿಸಬಾರದು—ಎಂದು ಕೌಂಡಿನ್ಯಶ್ರುತಿ ಹೇಳುತ್ತದೆ. "ನ ನಿಷಿದ್ಧಾನಿ ವರ್ತೇತ ಪೂರ್ಣಜ್ಞಾನಫಲೇಚ್ಛಯಾ"—ಪೂರ್ಣಜ್ಞಾನ ಮತ್ತು ಫಲಗಳನ್ನು ಬಯಸುವವನು ನಿಷಿದ್ಧಾಚಾರನಿರತನಾಗಿರಬಾರದು—ಎಂದು ತಿಳಿಸಿ, ಪದ್ಮಪುರಾಣ 'ನಿಷಿದ್ಧಾಚಾರದಿಂದ ಫಲ ಕಡಿಮೆಯಾಗಿ ಬಿಡುವುದು' ಎಂದು ಬೋಧಿಸುತ್ತದೆ.]

ಓಂ ವಿಹಿತತ್ವಾಚ್ಚ, ಆಶ್ರಮಕರ್ಮಾಪಿ ಓಂ 32

ಆಶ್ರಮೋಚಿತ ಕರ್ಮವನ್ನೂ ಮಾಡಬೇಕು, ವಿಧಿಸಲ್ಪಟ್ಟಿರುವುದರಿಂದ.

[ನಿಷಿದ್ಧಕರ್ಮಗಳನ್ನು ಬಿಡಬೇಕೆಂದಷ್ಟೇ ಅಲ್ಲ, ವರ್ಣಾಶ್ರಮಗಳಿಗೆ ವಿಧಿಸಲ್ಪಟ್ಟಿರುವ ಕರ್ಮಗಳನ್ನು ಮಾಡುತ್ತಲೂ ಇರಬೇಕು. "ಪಶ್ಯನ್ನಪೀಮಮಾತ್ಮಾನಂ ಕುರ್ಯಾತ್ಕರ್ಮ ವಿಚಾರಯನ್ । ಯದಾತ್ಮನಃ

ಸುನಿಯತಂ, ಆನಂದೋತ್ಕರ್ಷಮಾಪ್ನುಯಾತ್" — ಈಶ್ವರಸಾಕ್ಷಾತ್ಕಾರ ಪಡೆದವನೂ ಯಾವ ವಿಚಾರವನ್ನೂ ಮಾಡದೆ ತನಗೆ ವಿಹಿತವಾದ ಕರ್ಮವನ್ನು ಮಾಡುತ್ತಿರಬೇಕು, ಅದರಿಂದ ಹೆಚ್ಚಿನ ಆನಂದವನ್ನು ಪಡೆಯುವನು — ಎಂದು ಕೌಷಾರವಶ್ರುತಿ ತಿಳಿಸುತ್ತದೆ. 'ಅಪಿ' ಶಬ್ದದಿಂದ ಎಲ್ಲ ವರ್ಣಧರ್ಮಗಳೂ ಸೇರಿಸಲ್ಪಡುತ್ತವೆ.]

ಓಂ ಸಹಕಾರಿತ್ವೇನ ಓಂ 33

ಸಹಕಾರಿ ಭಾವದಿಂದಲೂ.

[ರಾಜನಿಗೆ ಮಂತ್ರಿ ಸಹಕಾರಿಯಾಗುವಂತೆ ಜ್ಞಾನಕ್ಕೆ ಕರ್ಮ ಸಹಕಾರಿಯಾಗುವುದು, ಎಂದು ಕಮಠಶ್ರುತಿ ತಿಳಿಸುವುದು. ಆದುದರಿಂದಲೂ ವಿಹಿತ ಕರ್ಮಾಚರಣೆ ಮಾಡಬೇಕು.]

ಓಂ ಸರ್ವಥಾऽಪಿ ತ ಏವ, ಉಭಯಲಿಂಗಾತ್ ಓಂ 34

ಸರ್ವಪ್ರಕಾರದಿಂದಲೂ ಅವರೇ, ಎರಡಕ್ಕೂ ಲಿಂಗವಿರುವುದರಿಂದ.

[ಎಲ್ಲ ಬಗೆಯಲ್ಲಿಯೂ ಉತ್ಸಾಹ ಹೊಂದಿದ್ದರೂ ಯಾರು ಅಧಿಕಾರಿಗಳಾಗಿ ಜ್ಞಾನಯೋಗ್ಯರೋ ಅವರೇ ಜ್ಞಾನ ಪಡೆಯುತ್ತಾರೆ, ಇತರರಲ್ಲ. ಕೆಲವರಿಗೆ ಸುಜ್ಞಾನ, ಮತ್ತೆ ಇತರರಿಗೆ ದುಷ್ಟಜ್ಞಾನ ಬಂದಿರುವ ಎರಡೂ ಲಿಂಗಗಳಿವೆ. ಇಂದ್ರ ಮತ್ತು ವಿರೋಚನ ಇಬ್ಬರೂ ಗುರುಶುಶ್ರೂಷೆ ಮಾಡುತ್ತಾ ವಿದ್ಯಾಭ್ಯಾಸ ಮಾಡಿದರು. ಆಚಾರ್ಯೋಪದೇಶ ಒಂದೇ ಬಗೆಯದಾಗಿದ್ದರೂ ವಿರೋಚನ ವಿಪರೀತಜ್ಞಾನವನ್ನೂ, ಇಂದ್ರ ಸಮ್ಯಕ್‌ಜ್ಞಾನವನ್ನೂ ಪಡೆದರು, ಎಂದು ಛಾಂದೋಗ್ಯದಲ್ಲಿನ "ಯ ಆತ್ಮಾऽಪಹತಪಾಪ್ಮಾ" ಮುಂತಾದ ವಾಕ್ಯಗಳಿಂದ ತಿಳಿದುಬರುತ್ತದೆ.]

ಓಂ ಅನಭಿಭವಂ ಚ ದರ್ಶಯತಿ ಓಂ 35

ಸ್ವಭಾವ ಸೋತುಹೋಗುವುದೂ ಇಲ್ಲ, ಇದನ್ನು ಶ್ರುತಿ ತಿಳಿಸುತ್ತದೆ.

["ದೈವೀಮೇವ ಸಂಪತ್ತಿಂ ದೇವಾ ಅಭಿಗಚ್ಛಂತಿ, ಆಸುರೀಮೇವ ಚಾಸುರಾಃ । ನೈತಯೋರಭಿಭವಃ ಕದಾಚಿತ್, ಸ್ವಭಾವ ಏವ ಹ್ಯವತಿಷ್ಠಂತೇ" —ದೇವತೆಗಳು ದೈವೀಸಂಪತ್ತನ್ನೂ ಅಸುರರು ಆಸುರೀ ಸಂಪತ್ತನ್ನೂ

ಪಡೆಯುತ್ತಾರೆ, ಇವೆರಡರಲ್ಲಿ ಯಾವಾಗಲೂ ಸೋಲಿಲ್ಲ. ಏಕೆಂದರೆ ಅವರವರ ಸ್ವಭಾವದಲ್ಲಿಯೇ ಅವರು ಇರುತ್ತಾರೆ—ಎಂಬ ವಾಕ್ಯದಿಂದ ಸ್ವಭಾವಕ್ಕೆ ಸೋಲಿಲ್ಲವೆಂದು ತಿಳಿಯುವುದು.]

ಓಂ ಅಂತರಾ ಚಾಪಿ ತು ತದ್ದೃಷ್ಟೇಃ ಓಂ 36

ನಡುವೆ ಇರುವವರಿಗೂ, ಅದು ಕಾಣಬರುವುದರಿಂದ.

[ಕೆಲವರಿಗೆ ಸಮ್ಯಕ್‌ಜ್ಞಾನ, ಮತ್ತೆ ಕೆಲವರಿಗೆ ವಿಪರೀತಜ್ಞಾನಗಳು ಆಗುವುವಷ್ಟೆ. ಈ ಎರಡು ಗುಂಪುಗಳ ನಡುವೆಯೂ ಕೆಲವರು ಇರುವರು. ಅವರು ಮಿಶ್ರಜ್ಞಾನ ಪಡೆಯುವರು, ದೇವಾಸುರರ ಭಾವಗಳನ್ನು ಪಡೆದಿರುವರು. ಇದರಿಂದ ಸ್ವಭಾವ ಅಚಲವೆಂದು ಕಾಣಬರುವುದು.]

ಓಂ ಅಪಿ ಸ್ಮರ್ಯತೇ ಓಂ 37

ಮತ್ತೆ ಸ್ಮೃತಿಯೂ ಹೇಳುತ್ತದೆ.

["ಅಸುರಾ ಆಸುರೇಣೈವ ಸ್ವಭಾವೇನ ಚ ಕರ್ಮಣಾ। ಜ್ಞಾನೇನ ವಿಪರೀತೇನ ತಮೋ ಯಾಂತಿ ವಿನಿಶ್ಚಯಾತ್। ದೇವಾ ದೇವಸ್ವಭಾವೇನ ಕರ್ಮಣಾ ಚಾಪ್ಯಸಂಶಯಂ। ಸಮ್ಯಕ್ ಜ್ಞಾನೇನ ಪರಮಾಂ ಗತಿಂ ಗಚ್ಛಂತಿ ವೈಷ್ಣವೀಂ। ನಾಸಯೋರನ್ಯಥಾಭಾವಃ ಕದಾಚಿತ್ಕ್ವಾಪಿ ವಿದ್ಯತೇ ; ಮಾನುಷಾ ಮಿಶ್ರಮತಯೋ ವಿಮಿಶ್ರಗತಯೋಽಪಿ ಚ"—ಆಸುರ ಸ್ವಭಾವ ಹಾಗೂ ಕರ್ಮಗಳಿಂದಲೂ ವಿಪರೀತಜ್ಞಾನದಿಂದಲೂ ಅಸುರರು ನಿಶ್ಚಯವಾಗಿ ತಮಸ್ಸಿಗೆ ಹೋಗುತ್ತಾರೆ; ದೇವತಾಸ್ವಭಾವ ಹಾಗೂ ಸತ್ಕರ್ಮ ಮತ್ತು ಸಮ್ಯಕ್‌ಜ್ಞಾನಗಳಿಂದ ದೇವತೆಗಳು ಖಂಡಿತವಾಗಿ ವಿಷ್ಣುಪದವಿಯನ್ನು ಹೊಂದುತ್ತಾರೆ. ಇವರಿಬ್ಬರ ಸ್ವಭಾವಗಳಲ್ಲಿ ಯಾವಾಗಲೂ ಎಲ್ಲಿಯೂ ಬದಲಾವಣೆಯಾಗುವುದಿಲ್ಲ. ಮನುಷ್ಯರು ಮಿಶ್ರಜ್ಞಾನ ಪಡೆದು ಮಿಶ್ರಗತಿಯನ್ನೇ ಹೊಂದುವರು—ಎಂದು ಸ್ಕಂದಪುರಾಣವಚನವಿದೆ.]

ಓಂ ವಿಶೇಷಾನುಗ್ರಹಂ ಚ ಓಂ 38

ವಿಶೇಷಾನುಗ್ರಹವನ್ನೂ.

["ಶೃಣ್ವೇ ವೀರ ಉಗ್ರಮುಗ್ರಂ ದಮಾಯನ್" ಎಂಬ ಶ್ರುತಿ ದೇವತೆಗಳಲ್ಲಿ ಕಾಣಬರುವ ವಿಶೇಷವಾದ ಈಶಾನುಗ್ರಹವನ್ನು ತಿಳಿಸುತ್ತದೆ. ಇದನ್ನೇ

ಭವಿಷ್ಯತ್ಪರ್ವದಲ್ಲಿ "ಅಸುರಾನ್ದಮಯನ್ವಿಷ್ಣುಃ ಸ್ವಪದಂ ಚ ಸುರಾನ್ನಯನ್ । ಪುನಃ ಪುನರ್ಮನುಷಾಂಸ್ತು ಸೃತಾವಾವರ್ತಯತ್ಯಸೌ"—ವಿಷ್ಣು ಅಸುರರನ್ನು ನಿಗ್ರಹಿಸುತ್ತಾನೆ. ಸುರರನ್ನು ತನ್ನ ಲೋಕಕ್ಕೆ ಒಯ್ಯುತ್ತಾನೆ, ಮನುಷ್ಯರನ್ನು ಮತ್ತೆ ಮತ್ತೆ ಈ ಸಂಸಾರದಲ್ಲಿಯೇ ತಿರುಗಿಸುತ್ತಿರುತ್ತಾನೆ—ಎಂದು ಹೇಳಿದೆ.]

ಓಂ ಅತಸ್ತ್ವಿತರತ್ ಜ್ಯಾಯಃ, ಲಿಂಗಾಚ್ಚ ಓಂ 39

ದೇವಭಾಗಕ್ಕಿಂತ ಇತರವಾದ ಅಸುರಭಾಗವೇ ಹೆಚ್ಚು, ಲಿಂಗವಿರುವುದರಿಂದಲೂ.

["ದ್ವಯಾ ಬ್ರಹ್ಮಸುತಾಸ್ತತ್ರ ದೈತೇಯಾ ಬಹವಃ ಸ್ಮೃತಾಃ । ತಮೋ-ಭೂತಾಃ ಸತ್ವರೂಪಾ ಅಲ್ಪಸಂಖ್ಯಾಃ ಸುರಾ ಮತಾಃ"—ಬ್ರಹ್ಮನ ಪುತ್ರರಲ್ಲಿ (ಸೃಷ್ಟಿಯಲ್ಲಿ) ಎರಡು ಬಗೆಯುವರಿದ್ದಾರೆ. ತಮೋಭೂತರಾದ ದೈತ್ಯರು ಬಹುಸಂಖ್ಯೆಯಲ್ಲಿರುವರು, ಸತ್ವಸ್ವರೂಪರಾದ ಸುರರು ಅಲ್ಪಸಂಖ್ಯೆಯಲ್ಲಿರುವರು—ಎಂದು ಮಹಾಸಂಹಿತೆ ಹೇಳುತ್ತದೆ. "ಕನೀಯಸಾ ಏವ ದೇವಾಃ, ಜ್ಯಾಯಸಾ ಅಸುರಾಃ"—ದೇವತೆಗಳು ಅಲ್ಪಸಂಖ್ಯೆಯುವರು, ಅಸುರರು ಹೆಚ್ಚಿನ ಸಂಖ್ಯೆಯುವರು—ಎಂದು ಬೃಹದಾರಣ್ಯಕದಲ್ಲಿ ಹೇಳಿದೆ.]

ಓಂ ತದ್ರೂಪಸ್ಯ ತು ತದ್ಭಾವಃ, ಜೈಮಿನೇರಪಿ ನಿಯಮಾತದ್ರೂಪಾಭಾವೇಭ್ಯಃ ಓಂ 40

ಅದಾಗಿರುವವನಿಗೆ ಅದೇ ಭಾವವಿರುವುದು ; ನಿಯಮ, ಅತದ್ರೂಪ, ಅಭಾವಗಳಿಂದ ಜೈಮಿನಿಗೂ.

[ಅಸುರಜಾತಿಯುವನಿಗೇ ಅಸುರತ್ವ, ದೇವಜಾತಿಯುವನಿಗೇ ದೇವತ್ವ; ಇದು ಜೈಮಿನಿಗೂ ಸಮ್ಮತವೇ. "ನಾಸುರಾ ದೈವೀಂ, ನ ದೇವಾ ಆಸುರೀಂ, ನ ಮನುಷ್ಯಾ ದೈವೀಮಾಸುರೀಂ ಚ ಗತಿಮೀಯುಃ, ಆತ್ಮೀಯಾಮೇವ ಜಾತಿಮನುಭವಂತಿ"—ಅಸುರರು ದೇವಗತಿಯನ್ನಾಗಲಿ, ದೇವತೆಗಳು ಆಸುರೀ ಗತಿಯನ್ನಾಗಲಿ, ಮನುಷ್ಯರು ದೈವ ಅಥವಾ ಆಸುರ ಗತಿಯನ್ನಾಗಲಿ ಹೊಂದುವುದಿಲ್ಲ; ತಮ್ಮ ಜಾತಿಯನ್ನೇ ಅನುಭವಿಸುವರು—ಎಂದು ನಿಯಮ ಶ್ರುತಿ ಇದೆ. ಹೀಗೆಯೇ "ನಾಸುರಾಣಾಂ ದೈವಂ ರೂಪಂ, ನ ದೇವಾನಾ-

ಮಾಸುರಂ, ನ ಚೋಭಯಂ ಮನುಷ್ಯಾಣಾಂ, ಯೋ ಯದ್ರೂಪಃ ಸ ತದ್ರೂಪೋ, ನಿಸರ್ಗೋ ಹ್ಯೇವೈಷ ಭವತಿ" ಎಂದು ದೇವಾಸುರ ಮನುಷ್ಯರಿಗೆ ಸ್ವಭಾವಸಿದ್ಧವಾದ, ಬದಲಾಯಿಸಲಾಗದ ರೂಪವಿದೆಯೆಂದು ಹೇಳುವ ಅತ-ದ್ರೂಪಶ್ರುತಿಯಿದೆ ಮತ್ತು "ತಂ ಭೂತಿರಿತಿ ದೇವಾ ಉಪಾಸಾಂಚಕ್ರಿರೇ ತೇ ಬಭೂವುಃ, ತಸ್ಮಾದ್ಧಾಪ್ಯೇತರ್ಹಿ ಸುಪ್ತೋ ಭೂರ್ಭೂರಿತ್ಯೇವ ಪ್ರಶ್ವಸಿತ್ಯ-ಭೂತಿರಿತ್ಯಸುರಾಸ್ತೇ ಹ ಪರಾಬಭೂವುಃ" ಎಂದು ದೇವಾಸುರ ಭಾವಾಭಾವ ಗಳನ್ನು ಹೇಳುವ ಶ್ರುತಿಯೂ ಇದೆ. ಈ 'ತಂ ಭೂತಿರಿತಿ' ಎಂದು ಹೇಳುವ ಶ್ರುತಿಯ ಅರ್ಥ ಋಕ್ಸಂಹಿತೆಯಲ್ಲಿ ಸ್ಪಷ್ಟಪಡಿಸಲ್ಪಟ್ಟಿದೆ.]

ಓಂ ನ ಚಾಧಿಕಾರಿಕಮಪಿ, ಪತನಾನುಮಾನಾತ್, ತದಯೋಗಾತ್ ಓಂ 41

ಅಧಿಕಾರಕ್ಕೆ ಸಂಬಂಧಿಸಿದುದನ್ನೂ ಅಲ್ಲ, ಪತನದ ಅನುಮಾನವಿರುವುದ ರಿಂದ ; ಅದು ಯೋಗ್ಯವಲ್ಲದುದರಿಂದ.

[ತನ್ನ ಸ್ವರೂಪಕ್ಕೆ ಯೋಗ್ಯವಾದುದನ್ನೇ ಬಯಸಬೇಕು ; ಅದಕ್ಕೆ ಮೀರಿದ ಚತುರ್ಮುಖಬ್ರಹ್ಮಾದಿಗಳ ಪದವಿಗಳನ್ನಲ್ಲ. 'ಅಪಿ' ಶಬ್ದದಿಂದ ಚತುರ್ಮುಖಾದಿ ಪದವಿಗಳೇ ಎಲ್ಲರಿಗೂ ಅಲಭ್ಯವಾಗಿರುವುದರಿಂದ ಪರಬ್ರಹ್ಮ ಪದವಿ ಲಭ್ಯವಾದೀತೇ, ಎಂದು ಸೂಚಿತವಾಗುವುದು. ಅಯೋಗ್ಯಪದವಿಗೆ ಏರಬಯಸುವವನಿಗೆ ಅದು ಸಿಗದೆ, ಪತನವಾಗುವುದು ಕಂಡುಬಂದಿದೆ.]

ಓಂ ಉಪಪೂರ್ವಮಪೀತ್ಯೇಕೇ, ಭಾವಶಮನ-ವತ್ತದುಕ್ತಮ್ ಓಂ 42

ಉಪದೇವ ಪದವಿಯನ್ನೂ ಬಯಸಬಾರದೆಂದು ಕೆಲವರ ಪದ ; ಋಷಿ ಪದದಂತೆ, ಅದು ಹೇಳಲ್ಪಟ್ಟಿದೆ.

[ಇಂದ್ರದ್ಯುಮ್ನಶ್ರುತಿಯಲ್ಲಿ "ಋಷರ್ಷೀನ್ ಪ್ರಜಾಪತೀನ್ನ ಕಾಂಕ್ಷೇತ್, ಏವಂ ನ ಗಂಧರ್ವಾನ್ ನ ವಿದ್ಯಾಧರಾನ್ ನ ಸಿದ್ಧಾನ್"—ಸಪ್ತರ್ಷಿಗಳು, ಪ್ರಜಾಪತಿಗಳು ಇವರ ಸ್ಥಾನಗಳನ್ನು ಹೊಂದಲು ಆಸೆ ಪಡಬಾರದು ; ಹಾಗೆಯೇ ಗಂಧರ್ವ, ವಿದ್ಯಾಧರ, ಸಿದ್ಧರ ಪದವಿಗಳನ್ನೂ ಬಯಸಬಾರದು— ಎಂದು ಹೇಳಿದೆ. 'ಭಾವಶಮನ' ಎಂದರೆ ಚಿತ್ತದಲ್ಲಿ ಶಾಂತಿ ಪಡೆದ ಋಷಿಗಳು.]

ಓಂ ಬಹಿಸ್ತೂಭಯಥಾಽಪಿ, ಸ್ಮೃತೇರಾಚಾರಾಚ್ಚ ಓಂ 43

ದೇವರ್ಷಿ ಗಂಧರ್ವ ಮೊದಲಾದ ಉತ್ತಮ ಪದವಿಗಳನ್ನು ಬಿಟ್ಟು ಇತರ ಶುಭ ವಿಷಯಗಳನ್ನು ಬಯಸಿದರಾಗಲಿ, ಬಿಟ್ಟರಾಗಲಿ ಪತನವಾಗುವುದಿಲ್ಲ. ಸ್ಮೃತಿ, ಆಚಾರಗಳಿಂದ ಇದು ಸಿದ್ಧವಾಗುತ್ತದೆ.

["ದೇವರ್ಷಿಗಂಧರ್ವಾಣಾಂ ಪದಾಕಾಂಕ್ಷಃ ಪತೇದ್ಧ್ರುವಂ। ಅನ್ಯತ್ರ ಶುಭಮಾಕಾಂಕ್ಷನ್ನ ಪತೇದವಿರೋಧತಃ"— ದೇವ, ಋಷಿ, ಗಂಧರ್ವರ ಉಚ್ಚ ಪದವಿಗಳನ್ನು ಬಯಸುವವನು ಖಂಡಿತವಾಗಿ ಪತನ ಹೊಂದುತ್ತಾನೆ; ಬೇರೆ ವಿಷಯಗಳಲ್ಲಿ ಶುಭವನ್ನು ಅಪೇಕ್ಷಿಸಿದವನಿಗೆ ಪತನವಿಲ್ಲ, ಆ ಬಯಕೆಗೆ ವಿರೋಧವಿಲ್ಲದಿರುವುದರಿಂದ—ಎಂದು ಸ್ಮೃತಿ. (ನಹುಷ ಇಂದ್ರಪದವಿ ಬಯಸಿ ಅಜಗರನಾದ) "ನಾನಾತ್ವಮೇವ ಕಾಮಾನಾಂ ನಾಕಾಮಃ ಕ್ವ ಚ ದೃಶ್ಯತೇ। ಅತೋಽವಿರುದ್ಧಕಾಮಃ ಸ್ಯಾದಕಾಮಸ್ತೇನ ಭಣ್ಯತೇ"—ಬಯಕೆಗಳು ಬಹುವಿಧವಾಗಿರುವುವು, ಕಾಮವಿಲ್ಲದಿರುವವನು ಎಲ್ಲಿಯೂ ಕಾಣಬರುವುದಿಲ್ಲ. ಆದುದರಿಂದ ವಿರೋಧವಿಲ್ಲದ (ನಿಷಿದ್ಧವಲ್ಲದ) ಆಸೆಗಳುಳ್ಳವನಾಗಬಹುದು, ಆಗ ಅವನನ್ನು ಅಕಾಮ, ಎಂದೇ ಕರೆಯುತ್ತಾರೆ ಎಂದು ಆಚಾರವಿದೆ.]

ಓಂ ಸ್ವಾಮಿನಃ, ಫಲಶ್ರುತೇರಿತ್ಯಾತ್ರೇಯಃ ಓಂ 44

ಒಡೆಯನಿಗೇ, ಫಲಶ್ರುತಿ ಇರುವುದರಿಂದ, ಎಂದು ಆತ್ರೇಯನ ಮತ.

["ಬ್ರಹ್ಮವಿದಾಪ್ನೋತಿ ಪರಮ್"—ಬ್ರಹ್ಮಜ್ಞಾನ ಪಡೆದವನು ಪರಮಾತ್ಮನ ಬಳಿಗೆ ಹೋಗುವನು—ಎಂಬ ಫಲ ದೇವತೆಗಳಿಗೆ ಮಾತ್ರವೇ ಆಗುವುದು. ಯಾವ ಕರ್ಮದ ಫಲವೂ ಸ್ವಾಮಿಗೆ ತಾನೆ ದೊರೆಯುವುದು ? "ಯದು ಕಿಂಚೇಮಾಃ ಪ್ರಜಾಃ ಶುಭಮಾಚರಂತಿ, ದೇವಾ ಏವ ತದಾಚರಂತಿ। ಯದು ಕಿಂ ಚೇಮಾಃ ಪ್ರಜಾ ವಿಜಾನತೇ, ದೇವಾ ಏವ ತದ್ವಿಜಾನತೇ। ದೇವಾನಾಂ ಹ್ಯೇತದ್ಭವತಿ, ಸ್ವಾಮೀ ಹಿ ಫಲಮಶ್ನೋತಿ, ನಾಸ್ವಾಮೀ, ಕರ್ಮ ಕುರ್ವಾಣಃ"—ಪ್ರಜೆಗಳು ಮಾಡಿದ ಶುಭಕಾರ್ಯವೆಲ್ಲ ದೇವತೆಗಳೂ ಮಾಡಿದಂತೆಯೇ ಸರಿ, ಪ್ರಜೆಗಳು ತಿಳಿದುದೆಲ್ಲ ದೇವತೆಗಳೇ ತಿಳಿದಂತೆಯೇ ಸರಿ.

ದೇವತೆಗಳಿಗೇ ಇವೆಲ್ಲದರ ಫಲ. ಸ್ವಾಮಿಯೇ ಫಲ ಪಡೆಯುವವ, ಒಡೆಯನಲ್ಲದ ದುಡಿಮೆಗಾರ ಕೆಲಸ ಮಾಡಿದರೂ ಅದರ ಫಲ ಪಡೆಯಲಾರ— ಎಂದು ಮಾಧ್ಯಂದಿನಾಯನಶ್ರುತಿ ಹೇಳುತ್ತದೆ. ಈ ಅಭಿಪ್ರಾಯವನ್ನು ಆತ್ರೇಯ ಅನುಮೋದಿಸುತ್ತಾನೆ.]

ಓಂ ಆರ್ತ್ವಿಜ್ಯಮಿತ್ಯೌಡುಲೋಮಿಃ, ತಸ್ಮೈ ಹಿ ಪರಿಕ್ರೀಯತೇ ಓಂ 45

ಇದು ಋತ್ವಿಕ್ಕಿಗೆ ಸಂಬಂಧಪಟ್ಟುದುದು, ಎನ್ನುತ್ತಾನೆ, ಔಡುಲೋಮಿ; ಅವನಿಗೇ ದಕ್ಷಿಣೆ ಕೊಡಲ್ಪಡುತ್ತದೆ.

[ಯಾಗ ಮಾಡುವ ಋತ್ವಿಕ್ಕುಗಳಿಗೂ ದಕ್ಷಿಣಾರೂಪವಾದ ಫಲವಿರುವಂತೆ ಜೀವರಿಗೂ ಜ್ಞಾನಫಲವಿದೆ. ಅದಕ್ಕೋಸ್ಕರವಾಗಿಯೇ ದೇವತೆಗಳು ಜ್ಞಾನಾರ್ಜನೆ ಮಾಡುತ್ತಾರೆ, ಇದು ಔಡುಲೋಮಿಯ ಮತ.]

ಓಂ ಸಹಕಾರ್ಯಂತರವಿಧಿಃ ಪಕ್ಷೇಣ ತೃತೀಯಂ, ತದ್ವತೋ ವಿಧ್ಯಾದಿವತ್ ಓಂ 46

ಸಹಕಾರ್ಯಂತರ ವಿಧಿ ಮೂರನೆಯ ಪಕ್ಷ; ಅದನ್ನು ಹೊಂದಿದವರ ವಿಧಿ ಮೊದಲಾದವುಗಳಂತೆ.

[ಜ್ಞಾನದಾನ ಮಾಡುವುದರಲ್ಲಿ ದೇವಾದಿಗಳಿಗೆ ಜೀವಾತ್ಮರನ್ನು ಸಹಕಾರಿತ್ವದಿಂದ ವಿಧಿಸಿದೆ, ಎಂಬುದು ಮೂರನೆಯ ಪಕ್ಷ. ಪ್ರಜೆಗಳು ರಾಜನಲ್ಲಿ ಸಹಕಾರಿತ್ವದಿಂದ ನಡೆದುಕೊಳ್ಳುವಂತೆ, ಶಿಷ್ಯರು ಗುರುವಿನಲ್ಲಿ ಇರುವಂತೆ ಮನುಷ್ಯರು ದೇವತೆಗಳೊಡನೆ ಸಹಕಾರಿತ್ವದಿಂದ ಇರುವರು.]

ಓಂ ಕೃತ್ಸ್ನಭಾವಾತ್ತು ಗೃಹಿಣೋಪಸಂಹಾರಃ ಓಂ 47

ಕೃತ್ಸ್ನಭಾವವಿರುವುದರಿಂದ ಗೃಹಸ್ಥನಿಂದ ಉಪಸಂಹಾರ.

[ಗೃಹಸ್ಥನೊಂದಿಗೆ ಉಪಸಂಹಾರ ಮಾಡಿರುವುದು ದೇವತಾಪರವಾಗಿದೆ, ಅವರಿಗೇ ಎಲ್ಲ ಗೃಹಸ್ಥಧರ್ಮಗಳೂ ಇರುವುದರಿಂದ. "ಕೃತ್ಸ್ನಾ ಹ್ಯೇತೇ ಗೃಹಿಣೋ ದೇವಾಃ, ಕೃತ್ಸ್ನಾ ಹ್ಯೇತೇ ಯತಯಃ" ಎಂದು ಪೌತ್ರಾಯಣ ಶ್ರುತಿ ಇದೆ. ಶುಚಿಯಾದ ದೇಶದಲ್ಲಿ ಸ್ವಾಧ್ಯಾಯವನ್ನು ಅಧ್ಯಯನ ಮಾಡುತ್ತಾ

ಧಾರ್ಮಿಕ ಕಾರ್ಯಗಳನ್ನು ಮಾಡಬೇಕು. ಅವರು ಸಂಸಾರದಲ್ಲಿ ಪುನರಾವೃತ್ತಿ ಹೊಂದುವುದಿಲ್ಲ, ಎಂದು ಹೇಳಿರುವುದು ದೇವತೆಗಳ ಪರವೇ.]

ಓಂ ಮೌನವತ್, ಇತರೇಷಾಮುಪದೇಶಾತ್ ಓಂ 48

[ಹಿಂದೆ ಹೇಳಿದಂತೆ ಗೃಹಸ್ಥ, ಯತಿಗಳು ಮಾತ್ರವೇ ಅಲ್ಲ. ಕೌಂಠರವ್ಯ ಶ್ರುತಿಯಲ್ಲಿ "ದೇವಾ ಏವ ಬ್ರಹ್ಮಚಾರಿಣಃ, ದೇವಾ ಏವ ಗೃಹಸ್ಥಾಃ, ದೇವಾ ಏವ ವನಸ್ಥಾಃ, ಯಥಾ ಹ್ಯೇತೇ ಮುನಯಃ, ಏವಂ ಸರ್ವವರ್ಣಾಃ ಸರ್ವಾಶ್ರಮಾಃ, ಸರ್ವಂ ಹ್ಯೇತೇ ಕರ್ಮ ಕುರ್ವಂತಿ"—ದೇವತೆಗಳೇ ಬ್ರಹ್ಮಚಾರಿಗಳು, ಗೃಹಸ್ಥರು, ವಾನಪ್ರಸ್ಥರೂ ಆಗಿರುತ್ತಾರೆ. ಈ ಎಲ್ಲ ವರ್ಣಾಶ್ರಮದವರೂ ಎಲ್ಲ ಕರ್ಮಗಳನ್ನೂ ಮಾಡುವರು— ಎಂದು ಹೇಳಿದೆ.]

ಓಂ ಅನಾವಿಷ್ಕುರ್ವನ್, ಅನ್ವಯಾತ್ ಓಂ 49

ತೋರಿಸಿಕೊಳ್ಳದೆ ಉಪದೇಶ ಮಾಡಬೇಕು, ಅದಕ್ಕೆ ಕಾರಣವಿರುವುದರಿಂದ.

[ವಿದ್ಯೆ ಕಲಿತ ಬ್ರಹ್ಮಜ್ಞಾನಿ ತಾನು ಕಲಿತುದುದನ್ನು ಹೇಳಿಕೊಡಬೇಕು, ಅದರಿಂದ ಅವನ ಮಹಿಮೆ ಹೆಚ್ಚುತ್ತದೆ, ಎಂದು ಮಾಠರಶ್ರುತಿ ಹೇಳುವುದು. ಆದರೆ ಬಹುಜನರಿಗೆ ಉಪದೇಶ ಮಾಡಬೇಕೆಂದೇನೂ ಅಲ್ಲ. ಗುಪ್ತವಾಗಿ ಉಪದೇಶ ಮಾಡಬೇಕು, ಹಾಗಲ್ಲದೆ ವಿದ್ಯೆ ಪ್ರಕಟವಾದರೆ ಅದು ಅಯೋಗ್ಯರಿಗೂ ಸೇರಿ ಅನರ್ಥವೇ ಆದೀತು, ಎಂದು ಅಭಿಪ್ರಾಯ. ಅನಾರ್ಯ, ಅನೃಜು, ಶಠ ಮೊದಲಾದವರಿಗೆ ವಿದ್ಯೆಯು ಉಪದೇಶ ಮಾಡಬಾರದು.]

ಓಂ ಐಹಿಕಮಪ್ರಸ್ತುತಪ್ರತಿಬಂಧೇ, ತದ್ದರ್ಶನಾತ್ ಓಂ 50

ಪ್ರಾರಬ್ಧಪ್ರತಿಬಂಧಕವಿರದಿದ್ದರೆ ಈ ಜನ್ಮದಲ್ಲಿಯೇ ಬ್ರಹ್ಮದರ್ಶನ, ಹಾಗೆ ಶ್ರುತಿ ಇರುವುದರಿಂದ.

["ಆತ್ಮಾ ವಾ ಅರೇ ದ್ರಷ್ಟವ್ಯಃ" ಇತ್ಯಾದಿ ಬೃಹದಾರಣ್ಯಕವಾಕ್ಯ ಸಾಕ್ಷಾತ್ ಜ್ಞಾನಕ್ಕಾಗಿ ಶ್ರವಣ, ಮನನಾದಿಗಳನ್ನು ವಿಧಿಸುತ್ತದೆ. ಯಾವ ಅಡ್ಡಿಯೂ ಇರದಿದ್ದರೆ ಈ ಜನ್ಮದಲ್ಲಿಯೇ ಬ್ರಹ್ಮಜ್ಞಾನ ಹುಟ್ಟುವುದು.

ಹಾಗಲ್ಲದೆ ಏನಾದರೂ ಪ್ರತಿಬಂಧಕವಿದ್ದರೆ ಜನ್ಮಾಂತರದಲ್ಲಿ ಆ ಜ್ಞಾನ ಉತ್ಪನ್ನವಾಗುವುದು.]

ಓಂ ಏವಂ ಮುಕ್ತಿಫಲಾನಿಯಮಃ, ತದವಸ್ಥಾವಧೃತೇಃ, ತದವಸ್ಥಾವಧೃತೇಃ ಓಂ 51

ಹೀಗೆ ಮುಕ್ತಿಫಲದಲ್ಲಿ ನಿಯಮವಿಲ್ಲ, ಬ್ರಹ್ಮಜ್ಞಾನಿಗೆ ಮುಕ್ತಿಫಲ ನಿಶ್ಚಿತವಾಗಿದೆ.

[ಪ್ರಾರಬ್ಧಕರ್ಮವಿರದಿದ್ದರೆ ಆ ಬ್ರಹ್ಮಜ್ಞಾನಿಗೆ ಶರೀರ ಬಿದ್ದುಹೋದ ನಂತರವೇ ಮುಕ್ತಿಪ್ರಾಪ್ತಿ. ಅಂತಹ ಪ್ರಾರಬ್ಧಕರ್ಮವಿದ್ದರೆ ಅದರ ನಾಶಕ್ಕಾಗಿ ಜನ್ಮಾಂತರಗಳನ್ನು ಪಡೆಯಲೇಬೇಕಾಗುತ್ತದೆ. ಆದುದರಿಂದ ಇದಕ್ಕಾಗಿ ಸ್ಥಿರಪಟ್ಟ ನಿಯಮವಿಲ್ಲ. "ಅವಸನ್ನಂ ಯದಾರಬ್ಧಂ ಕರ್ಮ ತತ್ರೈವ ಗಚ್ಛತಿ। ನ ಚೇದ್ಬಹೂನಿ ಜನ್ಮಾನಿ ಪ್ರಾಪ್ಯೈವಾಂತೇ ನ ಸಂಶಯಃ"— ಪ್ರಾರಬ್ಧಕರ್ಮ ಮುಗಿದಿದ್ದರೆ ಆಗಲೇ ಮುಕ್ತಿ ಪಡೆಯುತ್ತಾನೆ, ಇಲ್ಲದಿದ್ದರೆ ಅನೇಕ ಜನ್ಮಗಳನ್ನು ಪಡೆದು ಭೋಗದಿಂದ ಕರ್ಮಕ್ಷಯ ಮಾಡಿಕೊಂಡು ಕೊನೆಯಲ್ಲಿ ನಿಃಸಂದೇಹವಾಗಿ, ಮೋಕ್ಷಹೊಂದುವನು—ಎಂದು ನಾರಾಯಣಾಧ್ಯಾತ್ಮ ತಿಳಿಸುತ್ತದೆ.]

ಇಲ್ಲಿಗೆ ಬ್ರಹ್ಮಸೂತ್ರಗಳ ಮೂರನೆಯ ಅಧ್ಯಾಯದ ನಾಲ್ಕನೆಯ ಪಾದ ಮುಗಿಯಿತು.

ನಾಲ್ಕನೆಯ ಅಧ್ಯಾಯ

ಮೊದಲನೆಯ ಪಾದ

ಈ ಅಧ್ಯಾಯದಲ್ಲಿ ಕರ್ಮನಾಶದ ಮೂಲಕ ಪಡೆಯುವ ಮೋಕ್ಷವೆಂಬ ಫಲವನ್ನು ಕುರಿತು ಹೇಳಿದೆ. ಆದುದರಿಂದ ಇದಕ್ಕೆ ಫಲಾಧ್ಯಾಯವೆಂದು ಹೆಸರು ಬಂದಿದೆ. ಮೊದಲು ನಿತ್ಯವೂ ಮಾಡಬೇಕಾದ ಮುಖ್ಯಸಾಧನಗಳನ್ನು ವಿವರಿಸಿದೆ.

ಓಂ ಆವೃತ್ತಿರಸಕೃದುಪದೇಶಾತ್ ಓಂ 1

ಶ್ರವಣ, ಮನನ, ಉಪಾಸನಾದಿಗಳನ್ನು ಪುನಃ ಪುನಃ ಮಾಡಬೇಕು, ಹಾಗೆ ಉಪದೇಶವಿರುವುದರಿಂದ.

[ಅಗ್ನಿಷ್ಟೋಮಾದಿಯಜ್ಞಗಳನ್ನು ಒಂದೇ ಬಾರಿಗೆ ಮಾಡಿದರೆ ಫಲ ಬರುತ್ತದೆ. ಆದರೆ ಶಾಶ್ವತ ಫಲಪ್ರಾಪ್ತಿಗೆ ಕಾರಣವಾಗಿರುವಂತೆ ಹೇಳಿರುವ "ಆತ್ಮಾ ವಾ ಅರೇ ದ್ರುಷ್ಟವ್ಯಃ, ಶ್ರೋತವ್ಯೋ, ಮಂತವ್ಯೋ, ನಿದಿಧ್ಯಾಸಿತವ್ಯಃ" — ಆತ್ಮನನ್ನು ನೋಡಬೇಕು, ಕೇಳಬೇಕು, ತಿಳಿಯಬೇಕು, ಧ್ಯಾನ ಮಾಡಬೇಕು — ಎಂಬ ಬೃಹದಾರಣ್ಯಕದ ಉಪದೇಶವನ್ನು ಮತ್ತೆ ಮತ್ತೆ ಅನುಸರಿಸುತ್ತಲೇ ಇರಬೇಕು. ಛಾಂದೋಗ್ಯದಲ್ಲಿ "ಸ ಯ ಏಷೋಽಣಿಮಾ, ಏತದಾತ್ಮ್ಯಮಿದಂ ಸರ್ವಮ್" ಎಂದು ಈಶನ ಸರ್ವವ್ಯಾಪಿತ್ವವನ್ನು ಒಂಬತ್ತು ಸಲ ಉಪದೇಶ ಮಾಡಲಾಗಿದೆ.]

ಓಂ ಲಿಂಗಾಚ್ಚ ಓಂ 2

ಲಿಂಗವಿರುವುದರಿಂದಲೂ.

["ಸ ತಪೋಽತಪ್ಯತ, ಪುನರೇವ ವರುಣಂ ಪಿತರಮುಪಸಸಾರ" — ಅವನು ತಪಸ್ಸು ಮಾಡಿದನು, ಮತ್ತೆ ತಂದೆ ವರುಣನ ಬಳಿಗೆ ಹೋದನು — ಎಂದು ತೈತ್ತಿರೀಯದಲ್ಲಿದೆ. "ಬ್ರಹ್ಮನನ್ನು ತಿಳಿಯುವುದಕ್ಕಾಗಿ ತಪಸ್ಸು ಮಾಡು" ಎಂದು ತಂದೆ ಹೇಳಿದ ಮಾತಿನಂತೆ ಭೃಗು ತಪಸ್ಸು ಮಾಡಿದನು. ಆದರೆ ಮಗನಿಗೆ ಸರಿಯಾದ ಜ್ಞಾನ ಹುಟ್ಟುವವರೆಗೆ ಪುನಃ ಪುನಃ ತಪಸ್ಸು ಮಾಡುತ್ತಿರುವಂತೆ ತಂದೆ ಪ್ರೇರಿಸುತ್ತಲೇ ಇದ್ದನು. ಬ್ರಹ್ಮದರ್ಶನ ಪಡೆಯಲು

ನಿತ್ಯವೂ ಶ್ರವಣ, ಮನನ, ಧ್ಯಾನಗಳನ್ನು ಮಾಡುತ್ತಲೇ ಇರಬೇಕೆಂದು ಬೃಹತ್ತಂತ್ರದಲ್ಲಿ ಹೇಳಿದೆ.]

ಓಂ ಆತ್ಮೇತಿ ತೂಪಗಚ್ಛಂತಿ, ಗ್ರಾಹಯಂತಿ ಚ ಓಂ 3

ಆತ್ಮನೆಂದೇ ಉಪಾಸನೆ ಮಾಡುತ್ತಾರೆ ಮತ್ತು ತಿಳಿಸುತ್ತಾರೆ.

[ಮೋಕ್ಷ ಬಯಸುವವರು ಆತ್ಮನೆಂದೇ ಉಪಾಸನೆ ಮಾಡಬೇಕು, ಹಾಗೂ ಇತರರಿಗೆ ಉಪದೇಶ ಮಾಡಬೇಕು. ಪರಮಾತ್ಮನೊಬ್ಬನನ್ನೇ ಕುರಿತು ಚಿಂತಿಸಿ, ತಿಳಿದು ಉಪಾಸನೆ ಮಾಡಬೇಕು. ಆತ್ಮನೆಂದರೆ ಪರಮಾತ್ಮ, ನಾರಾಯಣನೇ.]

ಓಂ ನ ಪ್ರತೀಕೇ ನ ಹಿ ಸಃ ಓಂ 4

ಪ್ರತೀಕದಲ್ಲಿ ಅವನು ಇಲ್ಲವೆಂದಲ್ಲ.

[ಬ್ರಹ್ಮನ ಉಪಾಸನೆ ಮಾಡುವವನು ಪ್ರತೀಕಗಳನ್ನೇ—ಶಾಲಿಗ್ರಾಮ, ಪ್ರತಿಮೆ ಮುಂತಾದವು—ಆತ್ಮನೆಂದು ತಿಳಿಯಬಾರದು. ಪೂಜೆಗಾಗಿ ಪ್ರತೀಕ ಗಳನ್ನು ಬಳಸಿದರೆ, "ಪರಮಾತ್ಮ ಪ್ರತೀಕರೂಪನಲ್ಲ, ಆದರೆ ಅವನು ಪ್ರತೀಕ ಗಳಲ್ಲಿ ಇದ್ದಾನೆ", ಎಂದು ಭಾವಿಸಬೇಕು.]

ಓಂ ಬ್ರಹ್ಮದೃಷ್ಟಿಃ, ಉತ್ಕರ್ಷಾತ್ ಓಂ 5

ಈಶ್ವರನಲ್ಲಿ ಬ್ರಹ್ಮದೃಷ್ಟಿಯನ್ನಿಡಬೇಕು, ಅದು ಉತ್ಕೃಷ್ಟವಾದುದರಿಂದ.

[ಬ್ರಹ್ಮ ಸರ್ವಗುಣಪರಿಪೂರ್ಣ, ಸರ್ವಗುಣಪೂರ್ಣರೂಪವನ್ನು ಉಪಾಸನೆ ಮಾಡುವುದು ಶ್ರೇಷ್ಠ.]

ಓಂ ಆದಿತ್ಯಾದಿಮತಯಶ್ಚಾಂಗ ಉಪಪತ್ತೇಃ ಓಂ 6

ಅಂಗಗಳಲ್ಲಿ ಆದಿತ್ಯಾದಿದೇವತೆಗಳ ವಿಷಯವಾದ ಬುದ್ಧಿಯನ್ನಿಡ ಬೇಕು, ಹಾಗೆ ಉಪಪತ್ತಿ ಇರುವುದರಿಂದ.

[ವಿಷ್ಣುವಿನ ಕಣ್ಣಿನಿಂದ ಸೂರ್ಯ ಹುಟ್ಟಿದನು, ಎಂದು ಪುರುಷಸೂಕ್ತ ತಿಳಿಸುವ ವಿಷಯವನ್ನು ಅರಿತು, ಹಾಗೆಯೇ ಅವನ ಅಂಗಾಗಗಳನ್ನು ಕುರಿತು ದೇವತೆಗಳು ಉಪಾಸನೆ ಮಾಡಬೇಕು. ದೇವತೆಗಳಿಗೆ ಬ್ರಹ್ಮನ ಆಯಾ ಅಂಗಾದಿಗಳು ಉತ್ಪತ್ತಿಸ್ಥಾನಗಳಾಗಿ ಆಶ್ರಯಭೂತವಾಗಿವೆ, ಅಲ್ಲಿಯೇ ಅವರ

ಲಯವಾಗುವುದು. ಆದುದರಿಂದ ಅವರು ಹಾಗೆಯೇ ಉಪಾಸನೆ ಮಾಡುವುದು ಯುಕ್ತ.]

ಓಂ ಆಸೀನಃ, ಸಂಭವಾತ್ ಓಂ 7

ಕುಳಿತೇ ಧ್ಯಾನ ಮಾಡಬೇಕು, ಉಪಾಸನೆಯು ಸಂಭವವಿರುವುದರಿಂದ.

[ಯಾವಾಗಲೂ ಉಪಾಸನೆ ಮಾಡುತ್ತಿದ್ದರೂ ವಿಶೇಷವಾಗಿ ಸುಖಾಸನದಲ್ಲಿ ಕುಳಿತೇ ಧ್ಯಾನ ಮಾಡಿದರೆ ಮನಸ್ಸಿನ ವಿಕ್ಷೇಪಾದಿದೋಷಗಳು ಹುಟ್ಟುವುದು ಕಡಿಮೆಯಾಗಿ ಉಪಾಸನೆ ಯಶಸ್ವಿಯಾಗುವ ಸಂಭವವಿರುವುದು.]

ಓಂ ಧ್ಯಾನಾಚ್ಚ ಓಂ 8

ಧ್ಯಾನವಾಗಿರುವುದರಿಂದ.

[ಉಪಾಸನೆಯಲ್ಲಿ ಎರಡು ಬಗೆಗಳುಂಟು. ಸ್ಮರಣಾತ್ಮಕವಾದುದು ಮತ್ತು ಧ್ಯಾನಾತ್ಮಕವಾದುದು. ಭಗವಂತನ ಸ್ಮರಣೆಯನ್ನು ಯಾವಾಗಲೂ ಮಾಡಬಹುದು. ಆದರೆ ಧ್ಯಾನವೆಂದರೆ ಅದೊಂದು ನಿರಂತರ ಚಿಂತನರೂಪವಾದ ಮನೋವ್ಯಾಪಾರ. ಅದನ್ನು ಕುಳಿತೇ ಮಾಡಬೇಕು, ಕುಳಿತಾಗಲೇ ಧ್ಯಾನ ಅವಿಚ್ಛಿನ್ನವಾಗಿರುವುದು. ಮಲಗಿರುವಾಗ, ನಿಂತಿರುವಾಗ ಅಥವಾ ನಡೆಯುತ್ತಿರುವಾಗ ಧ್ಯಾನಕ್ಕೆ ಏನಾದರೂ ಅಡ್ಡಿ ಬರುವ ಸಂಭವವಿದೆ. "ಸ್ಮರಣಾತ್ಪರಮಂ ಜ್ಞೇಯಂ ಧ್ಯಾನಂ ನಾಸ್ತ್ಯತ್ರ ಸಂಶಯಃ"—ಸ್ಮರಣಕ್ಕಿಂತ ಧ್ಯಾನ ಶ್ರೇಷ್ಠ, ಇದರಲ್ಲಿ ಸಂಶಯವಿಲ್ಲ—ಎಂದು ನಾರಾಯಣತಂತ್ರ ತಿಳಿಸುತ್ತದೆ.]

ಓಂ ಅಚಲತ್ವಂ ಚಾಪೇಕ್ಷ್ಯ ಓಂ 9

ನಿಶ್ಚಲತ್ವವನ್ನು ಬಯಸಿಯೂ.

[ಶರೀರ ನಿಶ್ಚಲವಾಗಿದ್ದರೆ ಮನಸ್ಸಿನಲ್ಲಿಯೂ ಚಲನ ಹುಟ್ಟುವುದಿಲ್ಲ; ದೇಹ ಚಲಿಸುತ್ತಿದ್ದರೆ ಮನಸ್ಸು ಸ್ಥಿರವಾಗಿರುವುದಿಲ್ಲ, ಎಂದು ಬ್ರಹ್ಮಾಂಡ ಪುರಾಣದಲ್ಲಿ ಹೇಳಿದೆ. ಆದುದರಿಂದ ಕುಳಿತೇ ಧ್ಯಾನ ಮಾಡಬೇಕು.]

ಓಂ ಸ್ಮರಂತಿ ಚ ಓಂ 10

ಸ್ಮೃತಿಗಳೂ ಹಾಗೆಯೇ ಹೇಳುವುವು.

[ಭಗವದ್ಗೀತೆಯಲ್ಲಿ "ಸಮಂ ಕಾಯಶಿರೋಗ್ರೀವಂ ಧಾರಯನ್ನಚಲಂ ಸ್ಥಿರಃ। ಸಂಪ್ರೇಕ್ಷ್ಯ ನಾಸಿಕಾಗ್ರಂ ಸ್ವಂ ದಿಶಶ್ಚಾನವಲೋಕಯನ್"—ಶುಚಿಯಾದ ಪ್ರದೇಶದಲ್ಲಿ ತನ್ನ ಆಸನವನ್ನು ಸ್ಥಿರವಾಗಿರುವಂತೆ ಹಾಕಿಕೊಂಡು ತನ್ನ

ತಲೆ, ಕುತ್ತಿಗೆಗಳನ್ನು ಅಲುಗಾಡದಂತೆ ಸಮಸ್ಥಿತಿಯಲ್ಲಿಟ್ಟುಕೊಂಡು, ತನ್ನ ಮೂಗಿನ ತುದಿಯನ್ನೇ ನೋಡುತ್ತಾ ಬೇರೆ ದಿಕ್ಕುಗಳನ್ನು ನೋಡದೆ ಕುಳಿತಿರಬೇಕು—ಎಂದು ಯೋಗಿಗಳಿಗೆ ಆಸನಗಳನ್ನು ಹೇಳಿದೆ.]

ಓಂ ಯತ್ರೈಕಾಗ್ರತಾ ತತ್ರ, ಅವಿಶೇಷಾತ್ ಓಂ 11

ಎಲ್ಲಿ ಏಕಾಗ್ರತೆ ಸಾಧ್ಯವೋ ಅಂಥ ಪ್ರದೇಶದಲ್ಲಿ ಇರಬೇಕು. ವಿಶೇಷವಿಲ್ಲದಿರುವುದರಿಂದ.

[ದೇಶಕಾಲಾದಿಗಳಲ್ಲಿ ಯಾವ ವಿಶೇಷವೂ ಇಲ್ಲ. ಮನಸ್ಸು ಪ್ರಸನ್ನವಾಗಿರುವುದಕ್ಕಾಗಿಯೇ ಸರಿಯಾದ ದೇಶಕಾಲ ಪರಿಸ್ಥಿತಿಗಳನ್ನು ಆರಿಸಿಕೊಳ್ಳಬೇಕು, ಎಂದು ವರಾಹಪುರಾಣದಲ್ಲಿದೆ.]

ಓಂ ಆ ಪ್ರಾಯಣಾತ್, ತತ್ರಾಪಿ ಹಿ ದೃಷ್ಟಮ್ ಓಂ 12

ಕೊನೆಯ ಪ್ರಯಾಣದವರೆಗೆ ಉಪಾಸನೆ, ಆ ವಿಷಯದಲ್ಲಿಯೂ ಶ್ರುತಿ ಇದೆ.

[ಮೋಕ್ಷ ಪ್ರಾಪ್ತಿಯಾಗುವವರೆಗೆ ಉಪಾಸನೆಯನ್ನು ಅವಶ್ಯವಾಗಿ ಮಾಡಬೇಕು. "ಸರ್ವದೈವಮುಪಾಸೀತ ಯಾವದ್ವಿಮುಕ್ತಿಃ, ಮುಕ್ತಾ ಅಪಿ ಹ್ಯೇನಮುಪಾಸತೇ" — ಮುಕ್ತಿ ದೊರೆಯುವವರೆಗೆ ಯಾವಾಗಲೂ ಹೀಗೆ ಉಪಾಸನೆ ಮಾಡುತ್ತಿರಬೇಕು, ಮುಕ್ತರೂ ಈ ಪರಬ್ರಹ್ಮನನ್ನು ಉಪಾಸಿಸುತ್ತಾರಷ್ಟೆ—ಎಂದು ಸೌಪರ್ಣಶ್ರುತಿ ಇದೆ.]

ಓಂ ತದಧಿಗಮ ಉತ್ತರಪೂರ್ವಾಘಯೋರಶ್ಲೇಷ-ವಿನಾಶೌ, ತದ್ವ್ಯಪದೇಶಾತ್ ಓಂ 13

ಬ್ರಹ್ಮದರ್ಶನವಾದರೆ ಮುಂದೆ ಪಾಪ ಘಟಿಸುವುದಿಲ್ಲ, ಹಿಂದೆ ಮಾಡಿದುದು ನಾಶವಾಗುತ್ತದೆ, ಹಾಗೆ ಉಪದೇಶವಿದೆ.

[ಛಾಂದೋಗ್ಯದಲ್ಲಿ ಹೀಗೆ ಹೇಳಿದೆ: "ತದ್ಯಥಾ ಪುಷ್ಕರಪಲಾಶ ಆಪೋ ನ ಶ್ಲಿಷ್ಯಂತೇ, ಏವ ಮೇವಂವಿದಿ ಪಾಪಂ ಕರ್ಮ ನ ಶ್ಲಿಷ್ಯತೇ"—ತಾವರೆ ಎಲೆಯಲ್ಲಿ ಹೇಗೆ ನೀರು ಅಂಟಿಕೊಳ್ಳುವುದಿಲ್ಲವೋ ಹಾಗೆಯೇ ಬ್ರಹ್ಮಜ್ಞಾನ ಪಡೆದವನಿಗೆ ಪಾಪಕರ್ಮ ಅಂಟಿಕೊಳ್ಳುವುದಿಲ್ಲ; ಮತ್ತು "ತದ್ಯಥೈಷೀಕಾ-ತೂಲಮಗ್ನೌ ಪ್ರೋತಂ ಪ್ರದೂಯತೇ, ಏವಂ ಹೈವಾಸ್ಯ ಸರ್ವೇ ಪಾಪ್ಮಾನಃ

ಪ್ರದೂಯಂತೇ"—ಇಷೀಕಾ ಎಂಬ ಗಿಡದ ಹತ್ತಿಯನ್ನು ಬೆಂಕಿಯಲ್ಲಿ ಹಾಕಿದರೆ ಅದು ಹೇಗೇ ಸುಟ್ಟುಹೋಗುವುದೋ ಹಾಗೆಯೇ ಇವನ ಎಲ್ಲ ಪಾಪಗಳೂ ನಾಶವಾಗಿ ಹೋಗಿಬಿಡುವುವು—ಎಂದು ಅಲ್ಲಿ ಹೇಳಿದೆ.]

ಓಂ ಇತರಸ್ಯಾಪ್ಯೇವಮಸಂಶ್ಲೇಷಃ ಪಾತೇ ತು ಓಂ 14

ತಮಸ್ಸಿಗೆ ಹೋಗುವವನಿಗೂ ಹೀಗೆಯೇ; ಬೀಳುತ್ತಿರುವಾಗ ಅವನಿಗೆ ಪುಣ್ಯಲೇಪ ಇರುವುದಿಲ್ಲ.

["ಯಥಾಽಶ್ಲೇಷೋ ವಿನಾಶಶ್ಚ ಮುಕ್ತಸ್ಯ ತು ವಿಕರ್ಮಣಃ । ಏವಂ ಸುಕರ್ಮಣಶ್ಚಾಪಿ ಪತತಸ್ತಮಸಿ ಧ್ರುವಂ"—ಮುಕ್ತನಿಗೆ ಹೇಗೆ ಪಾಪಲೇಪ ವಾಗುವುದಿಲ್ಲವೋ ಮತ್ತು ಹಿಂದಿನ ಪಾಪಗಳ ನಾಶವಾಗುವುದೋ ಹಾಗೆಯೇ ನಿತ್ಯನರಕವಾದ ತಮಸ್ಸಿನಲ್ಲಿ ಬೀಳುವವನಿಗೂ ಮುಂದೆ ಪುಣ್ಯ ಅಂಟಿಕೊಳ್ಳು ವುದಿಲ್ಲ, ಹಿಂದೆ ಮಾಡಿದ್ದ ಪುಣ್ಯ ನಷ್ಟವಾಗುತ್ತದೆ—ಎಂದು ಆಗ್ನೇಯ ಪುರಾಣದಲ್ಲಿ ಹೇಳಿದೆ.]

ಓಂ ಅನಾರಬ್ಧಕಾರ್ಯೇ ಏವ ತು ಪೂರ್ವೇ, ತದವಧೇಃ ಓಂ 15

ಹಿಂದಿನ ಪಾಪಪುಣ್ಯಗಳಲ್ಲಿ ಅನಾರಬ್ಧಕಾರ್ಯಗಳೇ, ಅವುಗಳಿಗೆ ಅವಧಿ ಇರುವುದರಿಂದ.

[ಪ್ರಾರಂಭವಾದ ಕರ್ಮಗಳು (ಪ್ರಾರಬ್ಧ) ಮತ್ತು ಆರಂಭವಾಗದ ಕರ್ಮಗಳು ಎಂದು ಎರಡು ಬಗೆಗಳುಂಟು. ಈ ಸೂತ್ರ ಪೂರ್ವದ "ಅನಾರಬ್ಧ ಕಾರ್ಯಗಳ ಪಾಪಪುಣ್ಯಗಳು ಜ್ಞಾನದಿಂದ ನಾಶವಾಗುವುವು," ಎಂದು ಹೇಳುತ್ತದೆ. "ಪ್ರಾರಬ್ಧಕರ್ಮಣೋಽನ್ಯತ್ರ ಜ್ಞಾನಾದೇವ ಪರಿಕ್ಷಯಃ"—ಪ್ರಾರಬ್ಧಕರ್ಮವನ್ನುಳಿದು ಇತರವು ಜ್ಞಾನದಿಂದಲೇ ನಾಶ ಹೊಂದುವುವು—ಎಂದು 'ಅಣುಭಾಷ್ಯ'ದಲ್ಲಿ ಆಚಾರ್ಯರು ಹೇಳಿದ್ದಾರೆ. "ತಸ್ಯ ತಾವದೇವ ಚಿರಂ, ಯಾವನ್ನ ವಿಮೋಕ್ಷ್ಯೇಽಥ ಸಂಪತ್ಸ್ಯತೇ"— ಎಲ್ಲಿಯವರೆಗೆ ಮೋಕ್ಷವಾಗುವುದಿಲ್ಲವೋ ಅಲ್ಲಿಯವರೆಗೆ ಆ ಪ್ರಾರಬ್ಧಕರ್ಮ ಇರುವುದು—ಎಂದು ಛಾಂದೋಗ್ಯ ಹೇಳುವುದು. ಪ್ರಾರಬ್ಧಕರ್ಮನಾಶವೇ ಮೋಕ್ಷ, ಎಂದು ತಿಳಿಯಬೇಕು.]

ಓಂ ಅಗ್ನಿಹೋತ್ರಾದಿ ತು ತತ್ಕಾರ್ಯಾಯೈವ, ತದ್ದರ್ಶನಾತ್ ಓಂ 16

ಅಗ್ನಿಹೋತ್ರಾದಿಗಳು ಮೋಕ್ಷದಲ್ಲಿ ಅನುಭವಿಸುವುದಕ್ಕಾಗಿಯೇ, ಹಾಗೆ ಹೇಳಿದೆ.

['ತು'ಶಬ್ದ ಬ್ರಹ್ಮದರ್ಶನ ಪಡೆದವನಿಗೆ ಎಂದು ಸೂಚಿಸುವುದು. ಅಂಥವನು ಅಗ್ನಿಹೋತ್ರ ಮಾಡುತ್ತಿದ್ದರೆ ಮೋಕ್ಷದಲ್ಲಿ ತನ್ನ ಬಯಕೆಗಳನ್ನು ಪಡೆಯಲು ಸಾಧ್ಯವಾಗುತ್ತದೆ. "ಮುಕ್ತನು ಯಾವ ಯಾವುದನ್ನು ಬಯಸುವನೋ, ಅದನ್ನು ಪರಮಾತ್ಮನಿಂದಲೇ ಸೃಷ್ಟಿ ಮಾಡಿಸಿಕೊಳ್ಳುತ್ತಾನೆ" ಎಂದು ಬೃಹದಾರಣ್ಯಕ ತಿಳಿಸುತ್ತದೆ.]

ಓಂ ಅತೋಽನ್ಯದಪೀತ್ಯೇಕೇಷಾಮು-ಭಯೋಃ ಓಂ 17

ಮುಕ್ತಾನುಭವಕ್ಕೆ ಕಾರಣವಾದ ಅಕಾಮ್ಯಕ್ಕಿಂತ ಬೇರೆಯಾದ ಪುಣ್ಯವೂ, ಹಾಗೆಯೇ ಅಪ್ರಾರಬ್ಧವೂ ಅನಿಷ್ಟವೂ ನಾಶವಾಗುತ್ತವೆ. ಹೀಗೆ ಕೆಲವರ ಪಾಠವಿದೆ.

["ತಸ್ಯ ಪುತ್ರಾ ದಾಯಮುಪಯಂತಿ, ಸುಹೃದಃ ಸಾಧುಕೃತ್ಯಾಂ, ದ್ವಿಷಂತಃ ಪಾಪಕೃತ್ಯಾಂ"—ಸತ್ತವನ ಮಕ್ಕಳು ಅವನ ಆಸ್ತಿಯನ್ನೂ, ಮಿತ್ರರು ಪುಣ್ಯವನ್ನೂ, ಶತ್ರುಗಳು ಪಾಪವನ್ನೂ ಪಡೆಯುವರು—ಎಂದು ಶಾಟ್ಯಾಯನ ಶಾಖೆಯ ಪಾಠವಿದೆ. ಅಗ್ನಿಹೋತ್ರಾದಿನಿತ್ಯಕರ್ಮಗಳಿಗಿಂತ ಬೇರೆಯಾದ ಕಾಮ್ಯಕರ್ಮಗಳ ವಿಷಯವನ್ನು ಇಲ್ಲಿ ಹೇಳಿದೆ. ಈ ಬಗೆಯ ಕಾಮ್ಯಕರ್ಮಗಳು ಜ್ಞಾನಕ್ಕೆ ಉಪಕಾರಕವಾಗಲಾರವು, ಎಂದು ಜೈಮಿನಿ ಮತ್ತು ಬಾದರಾಯಣರ ಮತ.]

ಓಂ ಯದೇವ ವಿದ್ಯಯೇತಿ ಹಿ ಓಂ 18

ಯಾವುದನ್ನು ತಿಳಿದು ಮಾಡುತ್ತಾನೆಯೋ, ಎಂಬ ಶ್ರುತಿ ಇದೆಯಷ್ಟೆ.

["ಯದೇವ ವಿದ್ಯಯಾ ಕರೋತಿ, ಶ್ರದ್ಧಯೋಪನಿಷದಾ, ತದೇವ ವೀರ್ಯವತ್ತರಂ ಭವತಿ"—ಯಾವ ಕರ್ಮವನ್ನು ಚೆನ್ನಾಗಿ ತಿಳಿದು ಶ್ರದ್ಧೆಯಿಂದ ಮಾಡುತ್ತಾನೆಯೋ, ಅದೇ ಹೆಚ್ಚು ಫಲಪ್ರದವಾಗುವುದು—ಎಂದು

ಛಾಂದೋಗ್ಯಶ್ರುತಿ ತಿಳಿಸುತ್ತದೆ. ಆದುದರಿಂದ ಬ್ರಹ್ಮಜ್ಞಾನ ಪಡೆದ ಅಪರೋಕ್ಷಜ್ಞಾನಿ ಸ್ವಲ್ಪ ಪುಣ್ಯ ಮಾಡಿದರೂ ಅದು ಮಹತ್ತಾದುದೂ ಅನಂತವೂ ಆಗುತ್ತದೆ.]

ಓಂ ಭೋಗೇನ ತ್ವಿತರೇ ಕ್ಷಪಯಿತ್ವಾಽಥ ಸಂಪತ್ಸ್ಯತೇ ಓಂ 19

[ಪ್ರಾರಬ್ಧಕರ್ಮಗಳ ಪಾಪಪುಣ್ಯಗಳನ್ನು ಭೋಗದಿಂದ ನಾಶಪಡಿಸಿಕೊಂಡು ಪರಬ್ರಹ್ಮನನ್ನು ಆಮೇಲೆ ಹೊಂದುತ್ತಾನೆ ಅಥವಾ ಅಂಧಂತಮಸ್ಸಿಗೆ ಹೋಗುತ್ತಾನೆ.]

ಇಲ್ಲಿಗೆ ಬ್ರಹ್ಮಸೂತ್ರಗಳ ನಾಲ್ಕನೆಯ ಅಧ್ಯಾಯದ ಮೊದಲನೆಯ ಪಾದ ಮುಗಿಯಿತು.

ಎರಡನೆಯ ಪಾದ

ದೇವತೆಗಳ ಮೋಕ್ಷ ಮತ್ತು ಉತ್ಕ್ರಾಂತಿಗಳನ್ನು ಈ ಪಾದದಲ್ಲಿ ಹೇಳಿದೆ.

ಓಂ ವಾಙ್ಮನಸಿ, ದರ್ಶನಾತ್, ಶಬ್ದಾಚ್ಚ ಓಂ 1

ವಾಕ್ಕು ಮನಸ್ಸಿನಲ್ಲಿ, ಕಂಡುಬಂದಿರುವುದರಿಂದ, ಶ್ರುತಿಯೂ ಇರುವುದರಿಂದ.

[ವಾಕ್ಕು ಮನಸ್ಸಿನಲ್ಲಿ ಲಯಹೊಂದುವುದು. ವಾಗಭಿಮಾನಿ ಪಾರ್ವತಿ, ಮನೋಭಿಮಾನಿ ರುದ್ರ. ಆದುದರಿಂದ ವಾಕ್ಕು ಮನಸ್ಸಿನಲ್ಲಿ ಸೇರಿಕೊಳ್ಳುತ್ತದೆ. ವಾಕ್ಕು ಮನೋವಶವಾಗಿರುವುದು ಕಂಡುಬರುತ್ತಿದೆ. "ತಸ್ಯ ಯಾವನ್ನ ವಾಕ್ ಮನಸಿ ಸಂಪದ್ಯತೇ"—ಅವನಿಗೆ ಎಲ್ಲಿಯುವರೆಗೆ ವಾಕ್ಕು ಮನಸ್ಸಿನಲ್ಲಿ ಸೇರಿಕೊಳ್ಳುವುದಿಲ್ಲವೋ—ಎಂದು ಛಾಂದೋಗ್ಯಶ್ರುತಿ ಲಯವನ್ನು ಸೂಚಿಸುತ್ತದೆ.]

ಓಂ ಅತ ಏವ ಚ ಸರ್ವಾಣ್ಯನು ಓಂ 2

ಆದುದರಿಂದಲೇ ಎಲ್ಲ ದೇವತೆಗಳೂ ಕ್ರಮವಾಗಿ.

["ಅಗ್ನೌ ಸರ್ವೇ ದೇವಾ ವಿಲೀಯಂತೇ, ಅಗ್ನಿರಿಂದ್ರೇ, ಇಂದ್ರ ಉಮಾಯಾಂ, ಉಮಾ ರುದ್ರೇ ವಿಲೀಯತೇ । ಏವಮನ್ಯಾನಿ ದೈವಾನಿ

ಯಥಾನುಕೂಲಮ್" — ದೇವತೆಗಳೆಲ್ಲ ಅಗ್ನಿಯಲ್ಲಿಯೂ, ಅಗ್ನಿ ಇಂದ್ರನಲ್ಲಿಯೂ ಇಂದ್ರ ಉಮೆಯಲ್ಲಿಯೂ, ಉಮೆ ರುದ್ರನಲ್ಲಿಯೂ ಲಯಹೊಂದುವರು, ಹೀಗೆಯೇ ಇತರ ದೇವತೆಗಳೂ ಅನುಕೂಲಾನುಸಾರವಾಗಿ ಲಯಹೊಂದುವರು—ಎಂದು ಗೌಪವನಶ್ರುತಿ ತಿಳಿಸುತ್ತದೆ.]

ಓಂ ತನ್ಮನಃ ಪ್ರಾಣ ಉತ್ತರಾತ್ ಓಂ 3

ಆ ಮನಸ್ಸು ಪ್ರಾಣನಲ್ಲಿ ಲಯಹೊಂದುವುದು, ಉತ್ತರವಾಕ್ಯದಿಂದ.

[ಮುಂದಿನ ವಾಕ್ಯದಿಂದ ಮನೋಭಿಮಾನಿ ರುದ್ರ ಪ್ರಾಣಕ್ಕೆ ಅಭಿಮಾನಿಯಾದ ಮುಖ್ಯವಾಯುವಿನಲ್ಲಿ ಲಯಹೊಂದುವನು. "ವಾಯೋರ್ವಾವ ರುದ್ರ ಉದೇತಿ, ವಾಯೌ ವಿಲೀಯತೇ, ತಸ್ಮಾದಾಹುರ್ವಾಯುರ್ದೇವಾನಾಂ ಶ್ರೇಷ್ಠ ಇತಿ"—ವಾಯುವಿನ ದೆಸೆಯಿಂದಲೇ ರುದ್ರ ಹುಟ್ಟುತ್ತಾನೆ, ಅವನು ವಾಯುವಿನಲ್ಲಿಯೇ ಕೊನೆಗೆ ಲಯಹೊಂದುತ್ತಾನೆ. ಆದುದರಿಂದಲೇ ದೇವತೆಗಳಲ್ಲಿ ವಾಯು ಶ್ರೇಷ್ಠನೆನ್ನುತ್ತಾರೆ— ಎಂದು ಕೌಂಡಿನ್ಯಶ್ರುತಿ.]

ಓಂ ಸೋಽಧ್ಯಕ್ಷೇ, ತದುಪಗಮಾದಿಭ್ಯಃ ಓಂ 4

ಆ ಪ್ರಾಣ ಪರಮಾತ್ಮನಲ್ಲಿ ಲಯಹೊಂದುವನು; ಅವನನ್ನು 'ಸಮೀಪಿಸವನು', ಮುಂತಾದವುಗಳಿಂದ.

[ಪ್ರಾಣಾಭಿಮಾನಿ ವಾಯುದೇವ ಪರಮಾತ್ಮನಲ್ಲಿ ಲಯಹೊಂದುವನು. ಹೀಗೆ ಪ್ರತಿಯೊಬ್ಬನೂ ಸ್ವೋತ್ತಮ ಜೀವನಲ್ಲಿ ಲಯಹೊಂದುತ್ತಾ ಕೊನೆಗೆ ಮುಕ್ತಿ ಪಡೆಯುವನು. "ಆವಿಶ್ಯ ಪರಮಾತ್ಮಾನಂ ಭುಂಕ್ತೇ ಭೋಗಾಂಸ್ತು ಬಾಹ್ಯಕಾನ್"—ವಾಯು ಪರಮಾತ್ಮನಲ್ಲಿ ಲಯಹೊಂದಿ ಸ್ವಯೋಗ್ಯವಾದ ಹೊರಗಿನ ಭೋಗಗಳನ್ನು ಅನುಭವಿಸುತ್ತಾನೆ—ಎಂಬ ವಾಕ್ಯದಿಂದ ಯಾವ ದೇವತೆಯಾದರೂ ಕೊನೆಗೆ ಲಯಹೊಂದಿದಾಗ ಸಂಪೂರ್ಣಜ್ಞಾನಾನಂದಾದಿಗಳನ್ನು ಪಡೆದಿರುವುದಿಲ್ಲ, ತನ್ನ ಸ್ವರೂಪಕ್ಕೆ ಅನುಗುಣವಾದುದನ್ನೇ ಪಡೆಯುವನು, ಎಂದು ಸಿದ್ಧವಾಯಿತು.]

ಓಂ ಭೂತೇಷು, ತಚ್ಛ್ರುತೇಃ ಓಂ 5

ಭೂತಗಳಲ್ಲಿ, ಹಾಗೆ ಶ್ರುತಿ ಇರುವುದರಿಂದ.

[ಮೇಲೆ ಹೇಳಿದ ಇಂದ್ರಾದಿಗಳಲ್ಲದ ಇತರ ದೇವತೆಗಳು ಭೂತಗಳಲ್ಲಿಯೇ ಲಯ ಪಡೆಯುವರು. "ಭೂತೇಷು ದೇವಾ ವಿಲೀಯಂತೇ, ಭೂತಾನಿ ಪರೇ,

ನ ಪರ ಉದೇತಿ, ನಾಸ್ತಮೇತಿ, ಏಕಲ ಏವ ಮಧ್ಯೇ ಸ್ಥಾತಾ"—ದೇವತೆಗಳು ಭೂತಗಳಲ್ಲಿಯೇ ಲಯಹೊಂದುವರು, ಆ ಭೂತಗಳು ಪರಮಾತ್ಮನಲ್ಲಿ ಲಯ ಪಡೆಯುವರು. ಪರಮಾತ್ಮನಾದರೋ ಹುಟ್ಟುವುದೂ ಇಲ್ಲ, ಲಯ ಹೊಂದುವುದೂ ಇಲ್ಲ; ಒಬ್ಬನೇ ಎಲ್ಲದರ ಮಧ್ಯದಲ್ಲಿ ಇರುವನು—ಎಂದು ಬೃಹಚ್ಛ್ರುತಿ.]

ಓಂ ನೈಕಸ್ಮಿನ್, ದರ್ಶಯತೋ ಹಿ ಓಂ 6

ಒಂದೇ ಭೂತದಲ್ಲಿ ಸೇರಿಕೊಳ್ಳುವುದಿಲ್ಲ. ಹೀಗೆ ಎರಡು ಶ್ರುತಿಗಳು ತಿಳಿಸುತ್ತವೆ.

[ಎಲ್ಲ ದೇವತೆಗಳೂ ಒಂದೇ ಭೂತದಲ್ಲಿ, ಉದಾಹರಣೆಗೆ ಅಗ್ನಿಯಲ್ಲಿ, ಲಯಹೊಂದುವುದಿಲ್ಲ. "ಪೃಥಿವ್ಯಾಂ ಋಭವೋ ವಿಲೀಯಂತೇ—ಋಭುಗಳು ಪೃಥ್ವೀಭೂತದಲ್ಲಿ ವಿಲೀನರಾಗುವರು—ಎಂದು ಮಹೋಪನಿಷತ್ತೂ "ಮೃತ್ಯವಃ ಪೃಥಿವ್ಯಾಂ"—ಮೃತ್ಯುದೇವತೆಗಳು ಪೃಥಿವಿಯಲ್ಲಿ ಲಯಹೊಂದುವರು—ಎಂದು ಮೊದಲಾಗಿ ಚತುರ್ವೇದಶಿಖೆಯೂ ತಿಳಿಸುವುವು. ಹೀಗೆ ತೇಜಸ್ಸು, ಆಕಾಶಗಳಲ್ಲಿ ಲಯಹೊಂದುವ ದೇವತೆಗಳೂ ಇದ್ದಾರೆ.]

ಓಂ ಸಮನಾ ಚಾಸೃತ್ಯುಪಕ್ರಮಾದಮೃತತ್ವಂ ಚಾನುಪೋಷ್ಯ ಓಂ 7

ಸಂಸಾರೋಪಕ್ರಮವಿಲ್ಲದಿರುವುದರಿಂದ ಪ್ರಕೃತಿ ಪರಮಾತ್ಮನಲ್ಲಿ ಲಯವಿಲ್ಲದೆಯೇ ಮುಕ್ತಳಾಗಿರುವಳು.

["ದೇಶತಃ ಕಾಲತಶ್ಚ ವ್ಯಾಪ್ತ್ಯಾ ಸಮೋ ನಾ, ಪರಮಪುರುಷಃ, ಯಸ್ಯಾಃ ಸಾ, ಸಮನಾ"—ದೇಶಕಾಲಗಳಿಂದ ಹಾಗೂ ವ್ಯಾಪ್ತಿಯಿಂದ ಈಶ್ವರನಿಗೆ ಸಮನಾಗಿರುವವಳು 'ಸಮನಾ'—ಪ್ರಕೃತಿ. ಈ ಪ್ರಕೃತಿಗೆ ಸಂಸಾರಬಂಧವೇ ಇಲ್ಲದಿರುವುದರಿಂದ ಅವಳು ನಿತ್ಯಮುಕ್ತಳು. ಉಪಾಸನೆಯ ಅಗತ್ಯವೇ ಅವಳಿಗಿಲ್ಲ.]

ಓಂ ತದಪೀತೇಃ, ಸಂಸಾರವ್ಯಪದೇಶಾತ್ ಓಂ 8

ಪ್ರಕೃತಿಯನ್ನು ಸೇರುವುದೇ ಸಂಸಾರದ ಆರಂಭ.

[ಪ್ರಕೃತಿ, ಪುರುಷರಿಗೆ ಸಮಾನ ವ್ಯಾಪ್ತಿ ಹೇಳಿದ್ದರೂ ಅವರು ಸಮರೇ ಅಲ್ಲ. "ವಿಲೀನೋ ಹಿ ಪ್ರಕೃತೌ ಸಂಸಾರಮೇತಿ, ವಿಲೀನಃ ಪರಮೇ

ಹ್ಯಮೃತತ್ವಮೇತಿ"—ಪ್ರಕೃತಿಯೊಡನೆ ಸೇರಿದಾಗ ಜೀವ ಸಂಸಾರಕ್ಕೆ ಹೋಗುತ್ತಾನೆ, ಪರಮಾತ್ಮನಲ್ಲಿ ಸೇರಿದಾಗ ಅಮೃತತ್ವವನ್ನು (ಮೋಕ್ಷ) ಹೊಂದುತ್ತಾನೆ—ಎಂದು ಸೌಪರ್ಣಶ್ರುತಿ ಇದೆ.]

ಓಂ ಸೂಕ್ಷ್ಮಂ ಪ್ರಮಾಣತಶ್ಚ, ತಥೋಪಲಬ್ಧೇಃ ಓಂ 9

ಪರಬ್ರಹ್ಮ ಪ್ರಕೃತಿಗಿಂತ ಪ್ರಮಾಣದಲ್ಲಿ ಸೂಕ್ಷ್ಮ, ಹಾಗೆ ತಿಳಿದು ಬಂದಿರುವುದರಿಂದ.

["ಸರ್ವತಃ ಪ್ರಕೃತಿಃ ಸೂಕ್ಷ್ಮಾ, ಪ್ರಕೃತೇಃ ಪರಮೇಶ್ವರಃ । ಜ್ಞಾನಾನಂದೌ ತಥೈಶ್ವರ್ಯಂ ಗುಣಾಶ್ಚಾನ್ಯೇಽಧಿಕಾಃ ಪ್ರಭೌ" — ಎಲ್ಲಕ್ಕಿಂತ ಪ್ರಕೃತಿಯೇ ಸೂಕ್ಷ್ಮ, ಪ್ರಕೃತಿಗಿಂತ ಪರಮಾತ್ಮ ಸೂಕ್ಷ್ಮತರ. ಜ್ಞಾನ, ಆನಂದ ಹಾಗೂ ಐಶ್ವರ್ಯ ಮತ್ತು ಇತರ ಗುಣಗಳು ಪ್ರಭುವಿಗೇ ಹೆಚ್ಚು— ಎಂದು ತುರಶ್ರುತಿ.]

ಓಂ ನೋಪಮರ್ದೇನಾತಃ ಓಂ 10

ಆದುದರಿಂದ ವಿಶೇಷಗುಣಗಳನ್ನು ಬಿಟ್ಟು ಸಾಮ್ಯವಿದೆ.

[ದೇಶಕಾಲಾದಿಗಳಲ್ಲಿ ವ್ಯಾಪ್ತತೆ, ಪ್ರಕೃತಿ—ಪರಮಾತ್ಮರಿಗೆ ಸಮಾನವೇ. ಆದರೆ ವಿಶೇಷಗುಣಗಳಲ್ಲಿ ಭೇದವಿದೆ. ಅದನ್ನು ಬಿಟ್ಟೇ ಸಾಮ್ಯವನ್ನು ಹೇಳಬೇಕು. ಭವಿಷ್ಯತ್ಪರ್ವದಲ್ಲಿ "ಪ್ರಕೃತೇಃ ಪ್ರಾಕೃತಸ್ಯಾಪಿ ಯೇ ಗುಣಾಸ್ತೇ ತು ವಿಷ್ಣುನಾ । ನಿಯತಾ ನೈವ ಕೇನಾಪಿ ನಿಯತಾ ಹಿ ಹರೇರ್ಗುಣಾಃ"— ಪ್ರಕೃತಿಯ ಮತ್ತು ಪ್ರಾಕೃತ ಜೀವನ ಗುಣಗಳೆಲ್ಲ ವಿಷ್ಣುವಿನಿಂದ ನಿಯಂತ್ರಿತವಾಗಿವೆ. ಶ್ರೀಹರಿಯ ಗುಣಗಳು ಯಾರಿಂದಲೂ ನಿಯತವಾಗಿರುವುದಿಲ್ಲ— ಎಂದು ಹೇಳಿದೆ.]

ಓಂ ಅಸ್ಯೈವ ಚೋಪಪತ್ತೇರೂಷ್ಮಾ ಓಂ 11

ಇಂಥ ಸಾಮ್ಯಕ್ಕೆ ಉಪಪತ್ತಿಗೋಸ್ಕರವೇ ಊಷ್ಮಾಶ್ರುತಿ ಇದೆ.

["ದ್ವಿಧಾ ಹೀದಮುವದೃಶ್ಯತೇ ಊಷ್ಮಾವದನೂಷ್ಮಾವಚ್ಚ"—ಊಷ್ಮ (ಉಷ್ಣತೆ) ಉಳ್ಳುದುದು, ಅದಿಲ್ಲದುದು, ಎಂದು ಎರಡು ಬಗೆಯಾಗಿ ಇದು ಕಾಣಬರುತ್ತದೆ—ಎಂದು ಸೌಪರ್ಣಶ್ರುತಿಯಲ್ಲಿ ಊಷ್ಮಾದಿಕವನ್ನು ಹೇಳಿದೆ.

ಪರಬ್ರಹ್ಮನಿಗೆ ಅದೃಶ್ಯತ್ವಾದಿಗುಣಗಳಿವೆ, ಅವನನ್ನು ನೋಡಲು ಸಾಧ್ಯವಲ್ಲ; ಕೇಳಲು ಅಥವಾ ತಿಳಿಯಲು ಸಾಧ್ಯವಲ್ಲ. ಆದರೆ ಪ್ರಕೃತಿ ಮತ್ತು ಪ್ರಕೃತಿಜನ್ಯವಸ್ತು (ಪ್ರಾಕೃತ)ಗಳಲ್ಲಿ ಎರಡೂ ಉಂಟು. ಅವನ್ನು ನೋಡಬಹುದು ಹಾಗೂ ನೋಡಲಾಗದು; ತಿಳಿಯಬಹುದು ಮತ್ತು ತಿಳಿಯಲಾಗದು, ಇತ್ಯಾದಿ. ಹೀಗೆ ಪರಬ್ರಹ್ಮ ಮತ್ತು ಪ್ರಕೃತಿಗಳಿಗೆ ಕೆಲವು ವಿಷಯಗಳಲ್ಲಿ ಮಾತ್ರ ಸಾಮ್ಯವನ್ನು ಶ್ರುತಿ ಹೇಳುತ್ತದೆ.]

ಓಂ ಪ್ರತಿಷೇಧಾದಿತಿ ಚೇನ್ನ, ಶಾರೀರಾತ್ ಓಂ 12

ನಿಷೇಧಿಸಿರುವುದರಿಂದ, ಎನ್ನುವುದು ಸರಿಯಲ್ಲ, ಜೀವನದೆಸೆಯಿಂದ ಮಾತ್ರ.

[ಪರಮೇಶ್ವರನೊಡನೆ ಸಾಮ್ಯವನ್ನು ನಿಷೇಧಿಸಿದೆ. "ಅಸಮೋ ವಾ ಏಷ ಪರಃ, ನ ಹಿ ಕಶ್ಚಿದೇಷಂ ದೃಶ್ಯತೇ, ಸರ್ವೇ ಹ್ಯೇತೇ ಅಣವೋ ಜಾಯಂತೇ, ಮ್ರಿಯಂತೇ ಚ, ಭಿದ್ರಾ ಹ್ಯೇತೇ ಭವಂತಿ । ಅಥ ಪರೋ ನ ಜಾಯತೇ ನ ಮ್ರಿಯತೇ ಪೂರ್ಣಶ್ಚೈವ ಭವತಿ"—ಈ ಪರಮಾತ್ಮ ಸಮರಿಲ್ಲದವ, ಯಾರೂ ಹೀಗೆ ಕಾಣಬರುವುದಿಲ್ಲ. ಇವರೆಲ್ಲ ಅಣುಗಳು; ಹುಟ್ಟುತ್ತಾರೆ, ಸಾಯುತ್ತಾರೆ, ಭಿನ್ನ ಭಿನ್ನವಾಗುತ್ತಾರೆ. ಆದರೆ ಪರನಾದರೋ ಹುಟ್ಟುವುದಿಲ್ಲ. ಸಾಯುವುದಿಲ್ಲ, ಪೂರ್ಣನಾಗಿಯೇ ಇರುತ್ತಾನೆ—ಎಂದು ಚತುರ್ವೇದಶಿಖೆ ತಿಳಿಸುವುದು. ಜೀವನಿಗೆ ಮಾತ್ರ ಸಾಮ್ಯನಿಷೇಧ ಅನ್ವಯಿಸುವುದು, ಪ್ರಕೃತಿಗೆ ಅಲ್ಲ.]

ಓಂ ಸ್ಪಷ್ಟೋ ಹ್ಯೇಕೇಷಾಮ್ ಓಂ 13

ಕೆಲವರ ಪಾಠದಲ್ಲಿ ಇದು ಸ್ಪಷ್ಟವಾಗಿದೆ.

["ಅಥಾತಃ ಸಮಾಶ್ಚಾಸಮಾಶ್ಚಾಭಿಧೀಯಂತೇ, ಸಮಾಸಮಾಶ್ಚ । ಸಮಾನಿ ಬ್ರಹ್ಮಣೋ ರೂಪಾಣಿ...ಅಥಾಸಮಾ ಬ್ರಹ್ಮೇಂದ್ರೋ ರುದ್ರಃ ಪ್ರಜಾಪತಿರ್ದೇವಾ ಗಂಧರ್ವಾ ಮನುಷ್ಯಾಃ ಪಿತರೋ ಸುರಾ ಯಶ್ಚಿಂಚೇದಂ ಚರಮಚರಂ ಚ । ಅಥ ಸಮಾಸಮಾ ಪ್ರಕೃತಿರ್ವಾವ ಸಮಾಸಮಾ..."—ಈಗ ಸಮ, ಅಸಮ, ಸಮಾಸಮಗಳನ್ನು ಹೇಳಲಾಗುವುದು. ಬ್ರಹ್ಮನ ನಾನಾ ರೂಪಗಳು ಸಮ; ಅವನಿಗೆ ಅಸಮರಾದವರು ಚತುರ್ಮುಖ, ಇಂದ್ರ, ರುದ್ರ, ಪ್ರಜಾಪತಿ, ದೇವತೆಗಳು, ಗಂಧರ್ವರು, ಮನುಷ್ಯರು, ಪಿತೃಗಳು, ಅಸುರರು ಹಾಗೂ ಎಲ್ಲ ಚರಾಚರವಸ್ತುಗಳು; ಪ್ರಕೃತಿಯಾದರೋ

ಪರಮಾತ್ಮನಿಗೆ ಕೆಲವು ವಿಷಯಗಳಲ್ಲಿ ಸಮಳು, ಇತರ ವಿಷಯಗಳಲ್ಲಿ ಅಸಮಳು —ಎಂದು ಮಾಧ್ಯಂದಿನಾಯನಶ್ರುತಿಯು ಸಮಾದಿಪಾದವಿದೆ.]

ಓಂ ಸ್ಮರ್ಯತೇ ಚ ಓಂ 14

ಸ್ಮೃತಿಯೂ ಇದೆ.

["ಮತ್ಸ್ಯಕೂರ್ಮವರಾಹಾದ್ಯಾಃ ಸಮಾ ವಿಷ್ಣೋರಭೇದತಃ । ಬ್ರಹ್ಮಾದ್ಯಾಸ್ತ್ವಸಮಾಃ ಪ್ರೋಕ್ತಾಃ ಪ್ರಕೃತಿಶ್ಚ ಸಮಾಸಮಾ"—ವಿಷ್ಣುವಿನ ಮತ್ಸ್ಯಕೂರ್ಮವರಾಹಾದಿ ಅವತಾರಗಳೆಲ್ಲ ವಿಷ್ಣುವಿನಿಂದ ಯಾವ ಭೇದ ವನ್ನೂ ಪಡೆಯದೆ ಸಮರೇ ಆಗಿರುವುವು; ಚತುರ್ಮುಖಬ್ರಹ್ಮನೇ ಮೊದಲಾದ ಎಲ್ಲ ಚರಾಚರವಸ್ತುಗಳು ವಿಷ್ಣುವಿಗೆ ಅಸಮವೇ. ಪ್ರಕೃತಿ ಯಾದರೋ ವಿಷ್ಣುವಿನೊಡನೆ ಸಮಳು ಹಾಗೂ ಅಸಮಳು —ಎಂದು ವರಾಹ ಪುರಾಣ ತಿಳಿಸುತ್ತದೆ.]

ಓಂ ತಾನಿ ಪರೇ, ತಥಾ ಹ್ಯಾಹ ಓಂ 15

ಅವರೆಲ್ಲ ಪರಮಾತ್ಮನಲ್ಲಿ, ಹಾಗೆ ಹೇಳುತ್ತಾರಷ್ಟೆ.

[ಎಲ್ಲ ದೇವತೆಗಳೂ ಮುಖ್ಯಪ್ರಾಣನ ಮೂಲಕವೇ ಪರಮಾತ್ಮನಲ್ಲಿ ಪ್ರವೇಶ ಹೊಂದುತ್ತಾರೆ. "ಸರ್ವೇ ದೇವಾಃ ಪ್ರಾಣಮಾವಿಶ್ಯ ದೇವೇ ಮುಕ್ತಾ ಲಯಂ ಪರಮೇ ಯಾಂತ್ಯಚಿಂತ್ಯೇ"—ಎಲ್ಲ ದೇವತೆಗಳೂ ಮುಖ್ಯ ಪ್ರಾಣನಲ್ಲಿ ಪ್ರವೇಶಿಸಿ ಮುಕ್ತರಾದಾಗ ಅಚಿಂತ್ಯನಾದ ಪರಮಾತ್ಮನಲ್ಲಿಯೇ ಲಯ ಹೊಂದುವರು, ಎಂದು ಕೌಷಾರವಶ್ರುತಿ ಇದೆ.]

ಓಂ ಅವಿಭಾಗೋ, ವಚನಾತ್ ಓಂ 16

ಮುಕ್ತರಿಗೆ ವಿಭಾಗವಿಲ್ಲ, ವಚನವಿರುವುದರಿಂದ.

["ಏತೇ ದೇವಾ ಏತಮಾತ್ಮಾನಮನುವಿಶ್ಯ ಸತ್ಯಾಃ ಸತ್ಯಕಾಮಾಃ ಸತ್ಯ-ಸಂಕಲ್ಪಾ ಯಥಾನಿಕಾಮಮಂತರ್ಬಹಿಃ ಪರಿಚರಂತಿ"— ಈ ದೇವತೆಗಳು ಪರಮಾತ್ಮನೊಳಗೆ ಪ್ರವೇಶಿಸಿ ಸತ್ಯರೂ, ಸತ್ಯಕಾಮರೂ, ಸತ್ಯಸಂಕಲ್ಪರೂ ಆಗಿದ್ದು ಒಳಗೂ ಹೊರಗೂ ಸುತ್ತುತ್ತಿರುತ್ತಾರೆ—ಎಂದು ಗೌಪವನಶ್ರುತಿ ಹೇಳುವುದು. ಅವರ ಕಾಮಗಳೆಲ್ಲ ಪರಮಾತ್ಮನ ಕಾಮಗಳಿಂದ ಅವಿಭಾಗ ಹೊಂದಿರುತ್ತವೆ. ಪರಮಾತ್ಮನ ಇಚ್ಛೆಗಿಂತ ಮುಕ್ತಾತ್ಮರ ಇಚ್ಛೆಗಳು ಬೇರೆ ಯಾಗಿರುವುದಿಲ್ಲ.]

ಓಂ ತದೋಕೋಽಗ್ರಜ್ವಲನಂ ತತ್ಪ್ರಕಾಶಿತದ್ವಾರೋ ವಿದ್ಯಾಸಾಮರ್ಥ್ಯಾತ್ ತಚ್ಛೇಷಗತ್ಯನುಸ್ಮೃತಿ- ಯೋಗಾಚ್ಚ, ಹಾರ್ದಾನುಗೃಹೀತಃ ಶತಾಧಿಕತಯಾ ಓಂ 17

ಪ್ರಾಣೋತ್ಕ್ರಮಣ ಕಾಲದಲ್ಲಿ ಪರಮಾತ್ಮನ ವಾಸಸ್ಥಾನವಾದ ಹೃದಯದ ತುದಿಯಲ್ಲಿ ಪ್ರಭೆ ಬೆಳಗುತ್ತದೆ. ಅದರಿಂದ ನಾಡೀದ್ವಾರ ಪ್ರಕಾಶಿತವಾಗುತ್ತದೆ. ತನ್ನ ವಿದ್ಯಾಸಾಮರ್ಥ್ಯದಿಂದಲೇ ವಿದ್ಯಾಂಗಭೂತ ವಾದ ಗತಿಯ ಧ್ಯಾನದಿಂದಲೂ, ಹೃದಯನಿವಾಸಿಯಾದ ಪರಮಾತ್ಮನ ಅನುಗ್ರಹದಿಂದಲೂ ನೂರೊಂದನೆಯ ನಾಡಿಯ ಮೂಲಕ ಜ್ಞಾನಿಜೀವನು ಹೊರಗೆ ಹೊರಡುತ್ತಾನೆ.

["ಸಾಯುವಾಗ ಯಾವ ಯಾವ ಭಾವಗಳನ್ನು ಸ್ಮರಿಸಿಕೊಳ್ಳುತ್ತಾನೆಯೋ ಅವನ್ನೇ ಜೀವನು ಪಡೆಯುತ್ತಾನೆ" ಎಂದು ಗೀತೆಯಲ್ಲಿ ಹೇಳಿದೆ. ನಾಡಿಗಳು ನೂರೊಂದು ; ಅವುಗಳಲ್ಲಿ ಒಂದು ತಲೆಯತ್ತ ಹೊರಟಿದೆ. ಜ್ಞಾನಿಯ ಆತ್ಮ ಆ ನಾಡಿಯ ಮೂಲಕ ತಲೆಯನ್ನು ಭೇದಿಸಿಕೊಂಡು ಬ್ರಹ್ಮರಂಧ್ರದಿಂದ ಹೊರ ಹೊರಟಾಗ ಮೋಕ್ಷವಾಗುವುದು, ಎಂದು ಅಧ್ಯಾತ್ಮದಲ್ಲಿ ಹೇಳಿದೆ.]

ಓಂ ರಶ್ಮ್ಯನುಸಾರೀ ಓಂ 18

ರಶ್ಮಿಯನ್ನು ಅನುಸರಿಸಿ ಹೋಗುವನು.

[ಪೌತ್ರಾಯಣಶ್ರುತಿಯಲ್ಲಿ "ಸಹಸ್ರಂ ಹ್ಯಾದಿತ್ಯಸ್ಯ ರಶ್ಮಯಃ, ಆಸು ನಾಡೀಷ್ವಾತತಾಸ್ತತ್ರ ಶ್ವೇತಃ ಸುಷುಮ್ನೋ ಬ್ರಹ್ಮಯಾನಃ, ಸುಷುಮ್ನಾಯಾ- ಮಾತತಸ್ತತ್ಪ್ರಕಾಶೇನೈವ ನಿರ್ಗಚ್ಛತಿ"—ಸೂರ್ಯನಿಗೆ ಸಾವಿರ ಕಿರಣ ಗಳಿವೆ, ಇವು ಈ ನಾಡಿಗಳಲ್ಲಿ ಸೇರಿಹೋಗಿವೆ. ಸುಷುಮ್ನಾನಾಡಿಯೊಳಗೆ ಪ್ರವೇಶಿಸಿರುವ ಸುಷುಮ್ನ ಎಂಬ ಬಿಳಿಯ ಕಿರಣದ ಮೂಲಕ ಜ್ಞಾನಿ ದೇಹ ದಿಂದ ಹೊರಗೆ ಹೋಗುತ್ತಾನೆ—ಎಂದು ಹೇಳಿದೆ.]

ಓಂ ನಿಶಿ ನೇತಿ ಚೇನ್ನ, ಸಂಬಂಧಾತ್ ಓಂ 19

ರಾತ್ರಿಯಲ್ಲಿ ಹೀಗಾಗುವುದಿಲ್ಲ, ಎನ್ನುವುದು ಸರಿಯಲ್ಲ, ಸಂಬಂಧವಿರು ವುದರಿಂದ.

[ರಾತ್ರಿಯಲ್ಲಿ ಸೂರ್ಯರಶ್ಮಿಗಳು ಇರುವುದಿಲ್ಲ, ಆಗ ಉತ್ಕ್ರಮಣ ವಾಗಲಾರದು, ಎನ್ನುವುದು ಸರಿಯಲ್ಲ. ರಶ್ಮಿಗಳಿಗೂ ನಾಡಿಗಳಿಗೂ ಯಾವಾಗಲೂ ಸಂಬಂಧ ಇದ್ದೇ ಇರುವುದು.]

ಓಂ ಯಾವದ್ದೇಹಭಾವಿತ್ವಾತ್, ದರ್ಶಯತಿ ಚ ಓಂ 20

ದೇಹವಿರುವವರೆಗೆ ಈ ಸಂಬಂಧವಿರುವುದು, ಶ್ರುತಿಯೂ ಇದನ್ನು ಹೇಳುವುದು.

["ಸಂಸೃಷ್ಟಾ ವಾ ಏತೇ ರಶ್ಮಯಶ್ಚ ನಾಡ್ಯಶ್ಚ, ನೈಷಾಂ ವಿಯೋಗೋ ಯಾವದಿದಂ ಶರೀರಮ್"—ಈ ಕಿರಣಗಳೂ ನಾಡಿಗಳೂ ಸದಾ ಸಂಬಂಧ ಹೊಂದಿರುವುವು, ಇವುಗಳಿಗೆ ಶರೀರವಿರುವವರೆಗೆ ವಿಯೋಗವಿಲ್ಲ—ಎಂದು ಮಾಧ್ಯಂದಿನಾಯನಶ್ರುತಿ ಹೇಳುತ್ತದೆ.]

ಓಂ ಅತಶ್ಚಾಯನೇಽಪಿ ಹಿ ದಕ್ಷಿಣೇ ಓಂ 21

ಆದುದರಿಂದ ದಕ್ಷಿಣಾಯನದಲ್ಲಿಯೂ ಕೂಡ.

[ದಕ್ಷಿಣಾಯನ ಕಾಲದಲ್ಲಿ ಸತ್ತವನಿಗೆ ಸ್ವರ್ಗಪ್ರಾಪ್ತಿಯನ್ನೂ ಉತ್ತರಾಯಣದಲ್ಲಿ ಮರಣಹೊಂದಿದವನಿಗೆ ಬ್ರಹ್ಮಪದವಿಯನ್ನೂ ಹೇಳಿದೆ; ಆದರೆ ಇದು ಸಾಮಾನ್ಯ ಸೂತ್ರ. ದಕ್ಷಿಣಾಯನದಲ್ಲಿ ಮೃತನಾದವನೂ ಜ್ಞಾನಿಯಾಗಿದ್ದರೆ ಉತ್ಕ್ರಾಂತಿ ಪಡೆದು ಮುಕ್ತನಾಗಬಹುದು. "ಅತ್ಯುತ್ತಮಾನಾಂ ಕೇಷಾಂಚಿತ್ ನ ವಿಶೇಷೋಽಸ್ತಿ ಕಾಲತಃ"—ಅತ್ಯುತ್ತಮ ಜೀವರಾದ ಕೆಲವರಿಗೆ ಮರಣಕ್ಕಾಗಿ ಕಾಲವಿಶೇಷವೇನೂ ಇಲ್ಲ—ಎಂದು ನಾರಾಯಣತಂತ್ರ ತಿಳಿಸುತ್ತದೆ. ಇಚ್ಛಾಮರಣಿಯಾದ ಭೀಷ್ಮ ಉತ್ತರಾಯಣ ಕ್ಕಾಗಿ ಕಾದಿದ್ದುದು ಶಿಷ್ಟಾಚಾರ ಪಾಲನೆಗಾಗಿಯೇ.]

ಓಂ ಯೋಗಿನಃ ಪ್ರತಿ ಸ್ಮರ್ಯತೇ, ಸ್ಮಾರ್ತೇ ಚೈತೇ ಓಂ 22

ಯೋಗಿಗಳನ್ನು ಕುರಿತು ಸ್ಮೃತಿಗಳಲ್ಲಿ ಹೇಳಿದೆ; ಈ ಎರಡು ಗತಿಗಳೂ ಸ್ಮೃತಿಗಳನ್ನು ಅವಲಂಬಿಸಿವೆ.

[ಬ್ರಹ್ಮ ಮತ್ತು ಚಂದ್ರನ ಗತಿಗಳು ಕೇವಲ ಕಾಲಾದಿಗಳಿಂದಲೇ ಹುಟ್ಟಿದುವಲ್ಲ. ಜ್ಞಾನಯೋಗಿ, ಕರ್ಮಯೋಗಿಗಳಿಗಾಗಿ ಬೇರೆಯಾಗಿದೆ.

"ಗತ್ಯನುಸ್ಮರಣಾದ್ಬ್ರಹ್ಮ ಚಂದ್ರಂ ವಾ ಗಚ್ಛತಿ ಧ್ರುವಮ್ । ಅನನುಸ್ಮರತಃ ಕಾಲೇ ಸ್ಮರಣಂ ಪ್ರಾಪ್ಯ ವೈ ಗತಿಃ"—ಗತಿಯ ಅನುಸ್ಮರಣೆಯಿಂದ ಹೊರಟ ಜೀವನು ಬ್ರಹ್ಮ ಅಥವಾ ಚಂದ್ರರನ್ನು ಸಮೀಪಿಸುತ್ತಾನೆ. ಸ್ಮರಣೆ ಹೊಂದದಿದ್ದರೆ ಮುಂದೆ ಜನ್ಮಾಂತರದಲ್ಲಿ ಆ ಸ್ಮರಣೆ ಪಡೆದು ತನ್ನ ಗತಿಯನ್ನು ಹೊಂದುತ್ತಾನೆ—ಎಂದು ಅಧ್ಯಾತ್ಮದಲ್ಲಿ ಹೇಳಿದೆ. ಮಹಾನಾರಾಯಣೀಯೋಪನಿಷತ್ತಿನಲ್ಲಿ "ಅಥ ಯೋ ದಕ್ಷಿಣೇ ಪ್ರಮೀಯತೇ ಪಿತ್ರೂಣಾಮೇವ ಮಹಿಮಾನಂ ಮತ್ವಾ ಚಂದ್ರಮಸಃ ಸಾಯುಜ್ಯಂ ಗಚ್ಛತಿ"—ದಕ್ಷಿಣಾಯನದಲ್ಲಿ ಮೃತನಾಗುವವನು ಪಿತೃಗಳ ಮಹಿಮೆಯನ್ನು ಅರಿತು ಚಂದ್ರನೊಡನೆ ಸಾಯುಜ್ಯ ಪಡೆಯುವನು—ಎಂದು ಹೇಳಿದೆ. ಬ್ರಹ್ಮ, ಚಂದ್ರರೊಡನೆ ಸೇರಿಕೊಳ್ಳುವ ಈ ಎರಡು ಗತಿಗಳಿಗೆ ದೇವಯಾನ, ಪಿತೃಯಾನಗಳೆಂದು ಹೆಸರಿವೆ.]

ಇಲ್ಲಿಗೆ ಬ್ರಹ್ಮಸೂತ್ರಗಳ ನಾಲ್ಕನೆಯ ಅಧ್ಯಾಯದ ಎರಡನೆಯ ಪಾದ ಮುಗಿಯಿತು.

ಮೂರನೆಯ ಪಾದ

ಮಾರ್ಗ ಮತ್ತು ಗುರಿಗಳು ಈ ಪಾದದಲ್ಲಿ ಹೇಳಲ್ಪಡುವುವು.

ಓಂ ಅರ್ಚಿರಾದಿನಾ, ತತ್ಪ್ರಥಿತೇಃ ಓಂ 1

ಅರ್ಚಿರಾದಿ ಮಾರ್ಗದಿಂದ, ಹಾಗೆ ಅದು ಪ್ರಸಿದ್ಧವಾಗಿರುವುದರಿಂದ.

["ದ್ವಾವೇವ ಮಾರ್ಗೌ ಪ್ರಥಿತಾವರ್ಚಿರಾದಿರ್ವಿಪಶ್ಚಿತಾಮ್ । ಧೂಮಾದಿಃ ಕರ್ಮಿಣಾಂ ಚೈವ ಸರ್ವವೇದವಿನಿರ್ಣಯಾತ್"—ಎರಡು ಮಾರ್ಗಗಳೇ ಪ್ರಸಿದ್ಧವಾಗಿವೆ; ಪರಬ್ರಹ್ಮನನ್ನು ಹೊಂದಲು ಜ್ಞಾನಿ ಅರ್ಚಿರಾದಿಮಾರ್ಗದಿಂದಲೇ ಹೋಗುತ್ತಾನೆ, ಕರ್ಮ ಮಾಡಿ ಹೋಗುವವನು ಧೂಮ ಮಾರ್ಗದಿಂದ ಮುಂದುವರಿಯುತ್ತಾನೆ, ಇದು ಎಲ್ಲ ವೇದಗಳಲ್ಲಿ ನಿರ್ಣೀತವಾದ ವಿಷಯ—ಎಂದು ಬ್ರಹ್ಮತರ್ಕ ತಿಳಿಸುತ್ತದೆ. "ತೇಽರ್ಚಿಷಮಭಿಸಂಭವಂತಿ" ಎಂದು ಜ್ಞಾನಿಗಳಿಗೆ ಅರ್ಚಿರಾದಿಮಾರ್ಗವನ್ನು ಛಾಂದೋಗ್ಯ ತಿಳಿಸುತ್ತದೆ.]

ಓಂ ವಾಯುಶಬ್ದಾತ್, ಅವಿಶೇಷವಿಶೇಷಾಭ್ಯಾಮ್ ಓಂ 2

ವಾಯುಶಬ್ದವಿರುವುದರಿಂದ, ಅವಿಶೇಷ ಮತ್ತು ವಿಶೇಷಗಳಿರುವುದರಿಂದ.

[ಅರ್ಚಿರ್ಲೋಕದಿಂದ ವಾಯುಲೋಕಕ್ಕೆ ಜ್ಞಾನಿಜೀವ ಹೋಗುತ್ತಾನೆ. "ಸ ವಾಯುಮಾಗಚ್ಛತಿ"—ಅವನು ವಾಯುಲೋಕಕ್ಕೆ ಬರುತ್ತಾನೆ—ಎಂಬ ಬೃಹದಾರಣ್ಯಕದ ಸಾಮಾನ್ಯ (ಅವಿಶೇಷ) ವಾಕ್ಯವಿದೆ. ಹಾಗೆಯೇ "ಸ ಇತೋ ಗತೋ ದ್ವಿತೀಯಾಂ ಗತಿಂ ವಾಯುಮಾಗಚ್ಛತಿ"—ಅವನು ಇಲ್ಲಿಂದ ಹೊರಟು ತನ್ನ ಎರಡನೆಯ ಗತಿಯಾದ ವಾಯುಲೋಕಕ್ಕೆ ಹೋಗುವನು—ಎಂಬ ವಿಶೇಷವಚನವೂ ಇದೆ.]

ಓಂ ತಟಿತೋಽಧಿ ವರುಣಃ, ಸಂಬಂಧಾತ್ ಓಂ 3

ವಿದ್ಯುತ್ತಿನಿಂದಾಚೆಗೆ ವರುಣಲೋಕ, ಸಂಬಂಧವಿರುವುದರಿಂದ.

["ಸಂವತ್ಸರಾದ್ವರುಣಲೋಕಂ, ವರುಣಲೋಕಾತ್ಪ್ರಜಾಪತಿಲೋಕಂ"—ಒಂದು ವರ್ಷವಾದಮೇಲೆ ವರುಣಲೋಕವನ್ನೂ ಅಲ್ಲಿಂದ ಮುಂದೆ ಪ್ರಜಾಪತಿಲೋಕವನ್ನೂ ಪ್ರವೇಶಿಸುವನು, ಎಂದು ಕೌಂಡಿನ್ಯಶ್ರುತಿ ಹೇಳುತ್ತದೆ. "ತಟಿತಾ ಹ್ಯೂಹ್ಯತೇ ವರುಣಲೋಕಃ"—ವರುಣಲೋಕ ಮಿಂಚಿನಿಂದ ಧರಿಸಲ್ಪಟ್ಟಿದೆ—ಎಂಬ ಶ್ರುತಿಯ ಪ್ರಕಾರ ತಟಿಲ್ಲೋಕದಿಂದ ವರುಣಲೋಕಕ್ಕೆ ಹೋಗುತ್ತಾನೆ.]

ಓಂ ಆತಿವಾಹಿಕಃ, ತಲ್ಲಿಂಗಾತ್ ಓಂ 4

ವಾಯುವೇ ಆತಿವಾಹಕನು ; ಹಾಗೆ ಲಿಂಗವಿದೆ.

[ಅರ್ಚಿರಾದಿಗಳು ಪರಮಾತ್ಮನಿಂದ ನಿಯುಕ್ತರಾದ ದೇವತೆಗಳೇ. ಅವರು ಉಪಾಸಕನನ್ನು ವಿವಿಧ ಹಂತಗಳಲ್ಲಿ ಒಯ್ಯುತ್ತಾರೆ. ಇಲ್ಲಿ ಹೇಳಲ್ಪಟ್ಟಿರುವ ವಾಯುವೇ ಆತಿವಾಹಕ—ಕರೆದೊಯ್ಯುವವ. ಪೂರ್ವದಲ್ಲಿಯೇ ಜೀವ ಇವನ ಬಳಿಗೆ ಹೋಗುವನು, ಎಂದಿರುವುದರಿಂದ ಇದು ಸಿದ್ಧಿಸುತ್ತದೆ.]

ಓಂ ಉಭಯವ್ಯಾಮೋಹಾತ್, ತತ್ಸಿದ್ಧೇಃ ಓಂ 5

ಎರಡರಲ್ಲಿ ಮೋಹವಿರುವುದರಿಂದ, ಅದು ಸಿದ್ಧಿಸುತ್ತದೆ.

[ವಾಯು ಮುಖ್ಯನೋ ಬರೇ ಆತಿವಾಹಕನೋ, ಎಂಬುದು ಸಂದೇಹ. ಮೊದಲು ಅವನು ವಾಯುವಿನ ಬಳಿಗೆ ಹೋಗುತ್ತಾನೆ—ಸ ವಾಯುಮಾಗಚ್ಛತಿ—ಎಂದು ಬೃಹದಾರಣ್ಯಕದಲ್ಲಿ ಹೇಳಿದೆ. ಮುಂದೆ "ಉಪಗಚ್ಛತಿ ದ್ಯೌರ್ವಾವ ವಿದ್ಯುತ್, ತತ್ಪತಿಂ ವಾಯುಮುಪಗಮ್ಯ ತೇನೈವ ಬ್ರಹ್ಮ ಗಚ್ಛತಿ" ಎಂಬ ಶ್ರುತಿಯಲ್ಲಿ ಮುಂದೆ ಪ್ರಾಪ್ಯನಾಗುವ ವಾಯುವಿಗೆ 'ದಿವಸ್ಪತಿ' ಎಂಬ ವಿಶೇಷಣವನ್ನು ಹೇಳಿರುವುದರಿಂದ ಅವನೇ ಮುಖ್ಯ. ಪೂರ್ವದಲ್ಲಿ ಸೇರಿದ್ದ ವಾಯು ಆತಿವಾಹಕ.]

ಓಂ ವೈದ್ಯುತೇನೈವ ತತಃ, ತಚ್ಛ್ರುತೇಃ ಓಂ 6

ಅಲ್ಲಿಂದ ಮುಂದೆ ವೈದ್ಯುತನಿಂದಲೇ ಅತಿವಾಹಿತನಾಗುತ್ತಾನೆ, ಹಾಗೆ ಶ್ರುತಿ ಇರುವುದರಿಂದ.

["ವಿದ್ಯುತ್ಪತಿನಾ ವಾಯುನೈವ ಸ ಏನಾನ್ ಬ್ರಹ್ಮ ಗಮಯತಿ"— ವಿದ್ಯುದಧಿಪತಿಯಾದ ಮುಖ್ಯಪ್ರಾಣವಾಯುವಿನಿಂದಲೇ ಸಾಧಕನು ಬ್ರಹ್ಮ ಲೋಕವನ್ನು ಸೇರುತ್ತಾನೆ--ಎಂದು ಛಾಂದೋಗ್ಯದಲ್ಲಿ ಹೇಳಿದೆ.]

ಓಂ ಕಾರ್ಯಂ ಬಾದರಿಃ, ಅಸ್ಯ ಗತ್ಯುಪಪತ್ತೇಃ ಓಂ 7

ಕಾರ್ಯಬ್ರಹ್ಮನ ಬಳಿಗೆ ಸೇರಿಸುವುದು, ಎಂದು ಬಾದರಿಯ ಮತ; ಅದರ ಗತಿಯು ಉಪಪತ್ತಿ ಇದೆ.

[ಕಾರ್ಯಬ್ರಹ್ಮನೆಂದರೆ ಸೃಷ್ಟಿಮಾಡುವ ಹಿರಣ್ಯಗರ್ಭ—ಚತುರ್ಮುಖ ಬ್ರಹ್ಮ. ವಾಯು ಜೀವನನ್ನು ಚತುರ್ಮುಖಬ್ರಹ್ಮನಲ್ಲಿಗೆ ಒಯ್ಯುತ್ತಾನೆ, ಎಂದು ಬಾದರಿಯ ಮತ.]

ಓಂ ವಿಶೇಷಿತತ್ವಾಚ್ಚ ಓಂ 8

ವಿಶೇಷಣವನ್ನು ಕೊಟ್ಟಿರುವುದರಿಂದ.

["ಯದಿ ಹ ವಾವ ಪರಮಭಿಪಶ್ಯತಿ, ಪ್ರಾಪ್ನೋತಿ ಬ್ರಹ್ಮಾಣಂ ಚತುರ್ಮುಖಂ, ಪ್ರಾಪ್ನೋತಿ ಬ್ರಹ್ಮಾಣಂ ಚತುರ್ಮುಖಂ"—ಜೀವ ಬ್ರಹ್ಮನ ಸಾಕ್ಷಾತ್ಕಾರ ಪಡೆದರೆ ಅವನು ಚತುರ್ಮುಖಬ್ರಹ್ಮನ ಬಳಿಗೆ ಹೋಗುತ್ತಾನೆ— ಎಂದು ಕೌಷಾರವಶ್ರುತಿ ಹೇಳುತ್ತದೆ.]

ಓಂ ಸಾಮೀಪ್ಯಾತ್ತು ತದ್ವ್ಯಪದೇಶಃ ಓಂ 9

ಸಾಮೀಪ್ಯದ ದೆಸೆಯಿಂದಲೇ ಹಾಗೆ ಹೇಳಿದೆ.

["ಬ್ರಹ್ಮವಿದಾಪ್ನೋತಿ ಪರಂ" —ಬ್ರಹ್ಮಜ್ಞಾನಿ ಪರಮಾತ್ಮನನ್ನು ಹೊಂದುತ್ತಾನೆ— ಎಂಬ ಶ್ರುತಿಗೆ ಅವನು ಪರಮೇಶ್ವರನ ಸಮೀಪಕ್ಕೆ ಹೋಗುತ್ತಾನೆ, ಎಂದೇ ಅರ್ಥ.]

ಓಂ ಕಾರ್ಯಾತ್ಯಯೇ ತದಧ್ಯಕ್ಷೇಣ ಸಹ, ಅತಃ ಪರಮಭಿಧಾನಾತ್ ಓಂ 10

ಕಾರ್ಯ ಮುಗಿದಾಗ ಅದರ ಒಡೆಯನ ಜೊತೆಗೇ ಅಲ್ಲಿಂದ ಮುಂದಕ್ಕೆ. ಹಾಗೆ ಹೇಳಿರುವುದರಿಂದ.

[ಜಗತ್ತಿನ ಸೃಷ್ಟಿಕಾರ್ಯ ಮುಗಿದಮೇಲೆ—ಪ್ರಳಯಕಾಲ ಬಂದಾಗ—ಚತುರ್ಮುಖಬ್ರಹ್ಮನೊಡನೆಯೇ ಜೀವರು ಪರಬ್ರಹ್ಮನನ್ನು ಸೇರಿಕೊಳ್ಳುತ್ತಾರೆ. ಈ ವಿಷಯವನ್ನು ಸೌಪರ್ಣಶ್ರುತಿ, "ತೇ ಹ ಬ್ರಹ್ಮಾಣಮಭಿಸಂಪದ್ಯ ಯದೈತದ್ವಿಲೀಯತೇಽಥ ಸಹ ಬ್ರಹ್ಮಣಾ ಪರಮಧಿಗಚ್ಛತಿ" ಎಂದು ಹೇಳಿದೆ.]

ಓಂ ಸ್ಮೃತೇಶ್ಚ ಓಂ 11

ಸ್ಮೃತಿಯಿಂದಲೂ.

["ಬ್ರಹ್ಮಣಾ ಸಹ ತೇ ಸರ್ವೇ ಸಂಪ್ರಾಪ್ತೇ ಪ್ರತಿಸಂಚರೇ । ಪರಸ್ಯಾಂತೇ ಪರಾತ್ಮಾನಃ ಪ್ರವಿಶಂತಿ ಪರಂ ಪದಂ" ಎಂಬ ಸ್ಮೃತಿ ಪ್ರಳಯಕಾಲ ಬಂದಾಗ ಚತುರ್ಮುಖಬ್ರಹ್ಮನೊಡನೆಯೇ ಎಲ್ಲರೂ ಪರಮಪದವನ್ನು ಪ್ರವೇಶಿಸುವರು, ಎಂದು ಹೇಳುತ್ತದೆ.]

ಓಂ ಪರಂ ಜೈಮಿನಿಃ, ಮುಖ್ಯತ್ವಾತ್ ಓಂ 12

ಮುಖ್ಯವಾಗಿರುವುದರಿಂದ ಪರಮಾತ್ಮನನ್ನೇ, ಎಂದು ಜೈಮಿನಿಯ ಮತ.

["ಅವನು ಅವರನ್ನೆಲ್ಲ ಬ್ರಹ್ಮನಲ್ಲಿಗೆ ಒಯ್ಯುವನು" ಎಂಬಲ್ಲಿ ಬ್ರಹ್ಮಶಬ್ದ ಮುಖ್ಯವಾಗಿರುವುದರಿಂದ ಜೀವರನ್ನು ವಾಯು ಪರಬ್ರಹ್ಮನ ಬಳಿಗೇ ಕರೆದೊಯ್ಯುವನು, ಎಂದು ತಿಳಿಯಬೇಕು. ಇದು ಜೈಮಿನಿಯ ಮತ.]

ಓಂ ದರ್ಶನಾಚ್ಚ ಓಂ 13

ದರ್ಶನದಿಂದಲೂ.

[ಜೀವರು ಪರಮಾತ್ಮ ತೃಪ್ತನಾಗಿರುವುದನ್ನು ನೋಡುವುದರಿಂದಲೂ ಅವನೇ ಗಮ್ಯ. ಇದೂ ಆಚಾರ್ಯ ಜೈಮಿನಿಯ ಮತ.]

ಓಂ ನ ಚ ಕಾರ್ಯೇ ಪ್ರತಿಪತ್ತ್ಯಭಿಸಂಧಿಃ ಓಂ 14

ಕಾರ್ಯದಲ್ಲಿ ಹೊಂದಬೇಕೆಂಬ ಅಭಿಲಾಷೆ ಇರುವುದಿಲ್ಲ.

["ಯದುಪಾಸ್ತೇ ಪುಮಾನ್ ಜೀವನ್ ಯತ್ಪ್ರಾಪ್ತುಮಭಿವಾಂಛತಿ । ಯಚ್ಚ ಪಶ್ಯತಿ ತೃಪ್ತಃ ಸನ್, ತತ್ಪ್ರಾಪ್ನೋತಿ ಮೃತೇರನು"— ಬದುಕಿರುವಾಗ ಮನುಷ್ಯ ಯಾವುದನ್ನು ಉಪಾಸಿಸುತ್ತಾನೆಯೋ ಯಾವುದನ್ನು ಹೊಂದಲು ಬಯಸುತ್ತಾನೆಯೋ, ಯಾವುದನ್ನು ತೃಪ್ತನಾಗಿ ನೋಡುತ್ತಾನೆಯೋ ಅದನ್ನೇ ಮರಣಾನಂತರ ಹೊಂದುತ್ತಾನೆ—ಎಂದು ಪದ್ಮಪುರಾಣದಲ್ಲಿ ಹೇಳಿದೆ. ಅವನು ಕಾರ್ಯಬ್ರಹ್ಮನನ್ನು ನೋಡುವುದೂ ಇಲ್ಲ, ಬಯಸುವುದೂ ಇಲ್ಲ. ಇದೂ ಜೈಮಿನಿಯ ಮತವೇ.]

ಓಂ ಅಪ್ರತೀಕಾಲಂಬನಾನ್ನಯತೀತಿ ಬಾದರಾಯಣಃ, ಉಭಯಥಾ ಚ ದೋಷಾತ್ತತ್ಕ್ರತುಶ್ಚ ಓಂ 15

ಅಪ್ರತೀಕಾಲಂಬನರನ್ನು ವಾಯು ಪರಬ್ರಹ್ಮನಲ್ಲಿಗೆ ಒಯ್ಯುತ್ತಾನೆ, ಎಂದು ಬಾದರಾಯಣರ ಮತ. ಮೇಲೆ ಹೇಳಿದ ಎರಡು ಪಕ್ಷಗಳಲ್ಲಿಯೂ ದೋಷವಿದೆ ಮತ್ತು ತತ್ಕ್ರತುವನ್ನು ತಿಳಿಸುವ ಶ್ರುತಿಯೂ ಇದೆ.

["ಪ್ರತೀಕವೆಂದರೆ ದೇಹ. ಯಾರು ಅದರಲ್ಲಿಯೇ ಪರಮಾತ್ಮನನ್ನು ಕಾಣುವರೋ ಹಾಗೂ ಸರ್ವತ್ರವ್ಯಾಪ್ತರೂಪದಿಂದ ಕಾಣಲಾರರೋ ಅವರು ಪ್ರತೀಕಾಲಂಬನರು. ಅಪ್ರತೀಕರು ದೇವತೆಗಳು, ಕೆಲವರು ಋಷಿಗಳು, ರಾಜರು, ಗಂಧರ್ವರು, ಇತ್ಯಾದಿ ಉತ್ತಮರು. ಇವರೇ ವ್ಯಾಪ್ತಿದರ್ಶನಕ್ಕೆ ಅಧಿಕಾರಿಗಳು. ಅಪ್ರತೀಕಾಲಂಬರನ್ನೇ ವಾಯು ಪರಬ್ರಹ್ಮನ ಬಳಿಗೆ ಒಯ್ಯುವನು, ಪ್ರತೀಕಾಲಂಬನರನ್ನು ಕಾರ್ಯಬ್ರಹ್ಮನ ಬಳಿಗೆ ಕರೆದುಕೊಂಡು ಹೋಗುವನು. ಇದೇ ಬಾದರಾಯಣರ ಸಿದ್ಧಾಂತ. 'ಎಲ್ಲರನ್ನೂ ಕಾರ್ಯಬ್ರಹ್ಮನ ಬಳಿಗೆ ಒಯ್ಯುತ್ತಾನೆ' ಎಂಬ ಬಾದರಿಯ ಪಕ್ಷವೂ, 'ಎಲ್ಲರನ್ನೂ ಪರಬ್ರಹ್ಮನಲ್ಲಿಗೆ ಒಯ್ಯುತ್ತಾನೆ' ಎಂಬ ಜೈಮಿನಿಪಕ್ಷವೂ ದೋಷಯುಕ್ತವೇ.

"ಸ ಯಥಾಕಾಮೋ ಭವತಿ ತತ್ಕ್ರತುರ್ಭವತಿ"—ಜೀವನು ಯಾವುದನ್ನು ಪಡೆಯಲು ಬಯಸುತ್ತಾನೆಯೋ ಅದನ್ನೇ ಮಾಡಲು ಸಂಕಲ್ಪಿಸುತ್ತಾನೆ—ಎಂದು ಬೃಹದಾರಣ್ಯಕ ತಿಳಿಸುವ ಕರ್ಮ ಉಪಾಸನೆಯೇ.]

ಓಂ ವಿಶೇಷಂ ಚ ದರ್ಶಯತಿ ಓಂ 16

ವಿಶೇಷವನ್ನೂ ಶ್ರುತಿ ತಿಳಿಸುತ್ತದೆ.

[ಜ್ಞಾನಿಗಳಲ್ಲಿ ಮೂರು ಬಗೆಗಳುಂಟು, ಎಂದು ವಿಶೇಷವನ್ನು ಶ್ರುತಿ ಪ್ರತಿಪಾದಿಸುತ್ತದೆ. "ದೇವಾ ವಾವ ಸರ್ವಪ್ರಕಾಶಾಃ, ಋಷಯೋಽಂತಃ ಪ್ರಕಾಶಾಃ, ಮಾನುಷಾ ಏವ ಬಹಿಃಪ್ರಕಾಶಾಃ"—ದೇವತೆಗಳೇ ಬ್ರಹ್ಮನ ಸರ್ವಪ್ರಕಾಶ ಪಡೆದಿರುವರು, ಋಷಿಗಳು ಅಂತಃ ಪ್ರಕಾಶವುಳ್ಳವರು, ಮನುಷ್ಯರು ಬಹಿಃಪ್ರಕಾಶ ಪಡೆದವರು—ಎಂದು ಚತುರ್ವೇದಶಿಖೆಯಲ್ಲಿ ಹೇಳಿದೆ.]

ಇಲ್ಲಿಗೆ ಬ್ರಹ್ಮಸೂತ್ರಗಳ ನಾಲ್ಕನೆಯ ಅಧ್ಯಾಯದ ಮೂರನೆಯ ಪಾದ ಮುಗಿಯಿತು.

ನಾಲ್ಕನೆಯ ಪಾದ

ಈ ಪಾದದಲ್ಲಿ ಭೋಗವನ್ನು ತಿಳಿಸಿದೆ.

ಓಂ ಸಂಪದ್ಯ, ಅವಿಹಾಯ, ಸ್ವೇನ, ಶಬ್ದಾತ್ ಓಂ 1

ಪರಬ್ರಹ್ಮನನ್ನು ಹೊಂದಿ, ಅವನನ್ನು ಅತಿಕ್ರಮಿಸದೆ, ಸ್ವರೂಪದಿಂದಲೇ; ಶಬ್ದವಿರುವುದರಿಂದ.

["ಸ ಯ ಏವಂವಿದೇವಂ ಮನ್ವಾನಃ, ಏವಂ ಪಶ್ಯನ್ನಾತ್ಮಾನಮಭಿಸಂಪದ್ಯ, ಏತೇನಾತ್ಮನಾ ಯಥಾಕಾಮಂ ಸರ್ವಾನ್ಕಾಮಾನನುಭವತಿ"—ಬ್ರಹ್ಮನನ್ನು ಹೀಗೆ ತಿಳಿದವನಾಗಿ, ಹೀಗೆ ನೋಡುತ್ತಾ, ಪರಮಾತ್ಮನ ಬಳಿಗೆ ಹೋಗಿ ಅವನೊಡನೆಯೇ ಇಚ್ಛಾನುಸಾರ ಎಲ್ಲ ಕಾಮಗಳನ್ನೂ ಅನುಭವಿಸುತ್ತಾನೆ—ಎಂದು ಸೌಪರ್ಣಶ್ರುತಿ ಹೇಳುತ್ತದೆ.]

ಓಂ ಮುಕ್ತಃ, ಪ್ರತಿಜ್ಞಾನಾತ್ ಓಂ 2

ಮುಕ್ತನೇ ; ಪ್ರತಿಜ್ಞೆ ಮಾಡಿರುವುದರಿಂದ.

["ಅಥ ಯದೈನಂ ಮುಕ್ತೋऽನುಪ್ರವಿಶತಿ, ಮೋದತೇ ಚ ಪ್ರಮೋದತೇ ಚ, ಕಾಮಾಂಶ್ಚೈವಾನುಭವತಿ"—ಮುಂದೆ ಮುಕ್ತನಾಗಿ ಬ್ರಹ್ಮನಲ್ಲಿ ಸೇರಿಕೊಂಡಾಗ ಸಂತೋಷಪಡುತ್ತಾನೆ ಮತ್ತು ತನಗೆ ಇಷ್ಟವಾದ ಕಾಮಗಳನ್ನು ಅನುಭವಿಸುತ್ತಾನೆ—ಎಂದು ಬೃಹಚ್ಛ್ರುತಿಯಲ್ಲಿ ಪ್ರತಿಜ್ಞೆ ಮಾಡಿದೆ.]

ಓಂ ಆತ್ಮಾ, ಪ್ರಕರಣಾತ್ ಓಂ 3

ಪರಮಾತ್ಮನೇ ; ಪ್ರಕರಣದಿಂದ.

[ಪರಂಜ್ಯೋತಿ ಎಂಬ ಶಬ್ದ ಪರಮಾತ್ಮನನ್ನೇ ಪ್ರಕರಣದಿಂದ ತಿಳಿಸುತ್ತದೆ. "ಪರಂಜ್ಯೋತಿಃ ಪರಂ ಬ್ರಹ್ಮ ಪರಮಾತ್ಮಾದಿಕಾ ಗಿರಃ । ಸರ್ವತ್ರ ಹರಿಮೇವೈಕಂ ಬ್ರೂಯುರ್ನಾನ್ಯಂ ಕಥಂಚನ"—ಪರಂಜ್ಯೋತಿ, ಪರಬ್ರಹ್ಮ, ಪರಮಾತ್ಮಾ ಮೊದಲಾದ ಶಬ್ದಗಳು ಯಾವಾಗಲೂ ಹರಿಯೊಬ್ಬನನ್ನೇ ಹೇಳುವುವು, ಬೇರೆಯವನನ್ನು ಅಲ್ಲವೇ ಅಲ್ಲ—ಎಂದು ಬ್ರಹ್ಮಾಂಡಪುರಾಣದಲ್ಲಿ ಹೇಳಿದೆ.]

ಓಂ ಅವಿಭಾಗೇನ, ದೃಷ್ಟತ್ವಾತ್ ಓಂ 4

ಅವಿಭಾಗದಿಂದಲೇ, ದರ್ಶನವಿರುವುದರಿಂದ.

[ಪರಮಾತ್ಮನ ಭೋಗಗಳನ್ನೇ ಜೀವನೂ ಅನುಭವಿಸುತ್ತಾನೆ—ಆದರೆ ಸ್ವರೂಪಯೋಗ್ಯವಾದ ಕಡಿಮೆ ಪ್ರಮಾಣದಲ್ಲಿ. "ಯಾನೇವಾಹಂ ಶೃಣೋಮಿ, ಯಾನ್ಪಶ್ಯಾಮಿ, ಯಾನ್ ಜಿಘ್ರಾಮಿ, ತಾನೇವೈತ ಇದಂ ಶರೀರಂ ವಿಮುಚ್ಯಾನುಭವಂತಿ"—ನಾನು ಯಾವುದನ್ನು ಕೇಳುತ್ತೇನೆಯೋ, ನೋಡುತ್ತೇನೆಯೋ, ಮೂಸುತ್ತೇನೆಯೋ ಅವನ್ನೇ, ಈ ಶರೀರವನ್ನು ಬಿಟ್ಟ ಜೀವರು ಅನುಭವಿಸುತ್ತಾರೆ—ಎಂದು ಚತುರ್ವೇದಶಿಖೆಯಲ್ಲಿ ಹೇಳಿದೆ.]

ಓಂ ಬ್ರಾಹ್ಮೇಣ ಜೈಮಿನಿಃ, ಉಪನ್ಯಾಸಾದಿಭ್ಯಃ ಓಂ 5

ಬ್ರಹ್ಮಸಂಬಂಧಿ ಶರೀರದಿಂದ, ಎಂದು ಜೈಮಿನಿಯ ಮತ; ಉಪನ್ಯಾಸಾದಿಗಳಿಂದ.

[ಸರ್ವದೇಹಪರಿತ್ಯಾಗದಿಂದ ಮುಕ್ತಿ ಪಡೆದವರು ಬ್ರಾಹ್ಮದೇಹದಿಂದ ಭೋಗಗಳನ್ನು ಅನುಭವಿಸುತ್ತಾರೆ, ಎಂದು ಜೈಮಿನಿಯ ಮತ. "ಸ ವಾ ಏಷ ಬ್ರಹ್ಮನಿಷ್ಠ ಇದಂ ಶರೀರಂ ಮರ್ತ್ಯಮತಿಸೃಜ್ಯ, ಬ್ರಹ್ಮಾಭಿಸಂಪದ್ಯ, ಬ್ರಹ್ಮಣಾ ಪಶ್ಯತಿ, ಬ್ರಹ್ಮಣಾ ಶೃಣೋತಿ, ಬ್ರಹ್ಮಣೈವೇದಂ ಸರ್ವಮನು-ಭವತಿ" —ಜೀವನು ಬ್ರಹ್ಮಜ್ಞಾನ ಪಡೆದು ಈ ಮರ್ತ್ಯಲೋಕದ ಶರೀರವನ್ನು ಬಿಟ್ಟು ಬ್ರಹ್ಮನನ್ನು ಸೇರಿ ಬ್ರಹ್ಮದೇಹದಿಂದಲೇ ನೋಡುತ್ತಾನೆ, ಬ್ರಹ್ಮ ನೊಡನೆಯೇ ಕೇಳುತ್ತಾನೆ. ಬ್ರಹ್ಮನ ಜೊತೆಗೇ ಇದೆಲ್ಲವನ್ನೂ ಅನುಭವಿಸು ತ್ತಾನೆ—ಎಂದು ಮಾಧ್ಯಂದಿನಾಯನಶ್ರುತಿಯಲ್ಲಿ ಹೇಳಿದೆ.]

ಓಂ ಚಿತಿಮಾತ್ರೇಣ ತದಾತ್ಮಕತ್ವಾತ್, ಇತ್ಯೌಡುಲೋಮಿಃ ಓಂ 6

ಚಿನ್ಮಾತ್ರದೇಹದಿಂದ, ಆ ಸ್ವರೂಪವಿರುವುದರಿಂದ, ಎನ್ನುತ್ತಾನೆ. ಔಡುಲೋಮಿ.

[ಮುಕ್ತನ ಸ್ವರೂಪ ಚಿನ್ಮಾತ್ರವಾಗಿರುವುದು, ಅವನಿಗೆ ರಕ್ತಮಾಂಸ ಮಯ ದೇಹವಿರುವುದಿಲ್ಲ. ಆದುದರಿಂದ ಆ ಚಿನ್ಮಾತ್ರದೇಹದಿಂದಲೇ ಮುಕ್ತನು ಸುಖವನ್ನು ಅನುಭವಿಸುವನು. ಇದು ಔಡುಲೋಮಿಯ ಅಭಿಪ್ರಾಯ.]

ಓಂ ಏವಮಪ್ಯುಪನ್ಯಾಸಾತ್, ಪೂರ್ವಭಾವಾ-ದವಿರೋಧಂ, ಬಾದರಾಯಣಃ ಓಂ 7

ಹೀಗೆಯೂ ಹೇಳಿರುವುದರಿಂದ ಹಿಂದೆ ಹೇಳಿರುವುದರಲ್ಲಿ ವಿರೋಧವಿಲ್ಲ, ಎಂದು ಬಾದರಾಯಣರ ಮತ.

["ಸ ವಾ ಏಷ ಏತಸ್ಮಾನ್ಮರ್ತ್ಯಾದ್ವಿಮುಕ್ತಶ್ಚಿನ್ಮಾತ್ರೀಭವತಿ, ಅಥ ತೇನೈವ ರೂಪೇಣಾಭಿಪಶ್ಯತಿ, ಅಭಿಶೃಣೋತಿ, ಅಭಿಮನುತೇ, ಅಭಿವಿಜಾನಾತಿ, ತಾಮಾಹುರ್ಮುಕ್ತಿರಿತಿ"—ಜೀವನು ಈ ಮರ್ತ್ಯಶರೀರದಿಂದ ಬಿಡಲ್ಪಟ್ಟು ಚಿನ್ಮಾತ್ರಸ್ವರೂಪನಾಗುತ್ತಾನೆ. ತರುವಾಯ ಅದೇ ರೂಪದಿಂದ ನೋಡು ತ್ತಾನೆ, ಕೇಳುತ್ತಾನೆ, ತಿಳಿಯುತ್ತಾನೆ; ಆ ಸ್ಥಿತಿಯನ್ನೇ 'ಮುಕ್ತಿ' ಎನ್ನುತ್ತಾರೆ —ಎಂದು ಸೌಪರ್ಣಶ್ರುತಿಯಿದೆ. ಜೈಮಿನಿ ಹೇಳಿರುವ ವಿಷಯವೂ ಯುಕ್ತ ವಾಗಿದೆ. ಆದುದರಿಂದ ಇವೆರಡು (ಜೈಮಿನಿ, ಔಡುಲೋಮಿಯರ) ಮತ ಗಳಲ್ಲಿ ಯಾವ ವಿರೋಧವೂ ಇಲ್ಲ, ಎಂದು ಬಾದರಾಯಣರ ಸಿದ್ಧಾಂತ.]

ಓಂ ಸಂಕಲ್ಪಾದೇವ ಚ, ತಚ್ಛ್ರುತೇಃ ಓಂ 8

ಸಂಕಲ್ಪದಿಂದಲೇ ; ಆ ವಿಷಯದ ಶ್ರುತಿ ಇರುವುದರಿಂದ.

[ಜೀವರ ಭೋಗ ಸಂಕಲ್ಪಮಾತ್ರದಿಂದಲೇ, ಅದಕ್ಕಾಗಿ ಪ್ರಯತ್ನ ಅನಾವಶ್ಯಕ. "ಸ ಯದಿ ಪಿತೃಲೋಕಕಾಮೋ ಭವತಿ ಸಂಕಲ್ಪಾದೇವಾಸ್ಯ ಪಿತರಃ ಸಮುತ್ತಿಷ್ಠಂತಿ"—ಅವನು ಪಿತೃಲೋಕವನ್ನು ನೋಡಬಯಸಿದರೆ ಅವನ ಸಂಕಲ್ಪಮಾತ್ರದಿಂದಲೇ ಅವನ ಪಿತೃಗಳು ಎದುರಿಗೆ ಬಂದು ನಿಲ್ಲುವರು —ಎಂದು ಛಾಂದೋಗ್ಯದಲ್ಲಿ ಹೇಳಿದೆ.]

ಓಂ ಅತ ಏವ ಚಾನನ್ಯಾಧಿಪತಿಃ ಓಂ 9

ಆದುದರಿಂದಲೇ ಅವನ ಮೇಲೆ ಬೇರೆ ಅಧಿಪತಿಗಳಿಲ್ಲ.

[ಜೀವನು ಮುಕ್ತನಾದಮೇಲೆ ಸತ್ಯಸಂಕಲ್ಪನಾಗುವುದರಿಂದ ವಿಷ್ಣು ಹಾಗೂ ಆ ಮುಕ್ತಜೀವನಿಗಿಂತ ಶ್ರೇಷ್ಠರಾದ ಇತರರು ಯಾರೊಬ್ಬರೂ ಅವನಿಗೆ ಒಡೆಯನಾಗಿರುವುದಿಲ್ಲ. ವರಾಹಪುರಾಣವೂ ಇದನ್ನೇ ತಿಳಿಸುತ್ತದೆ.]

ಓಂ ಅಭಾವಂ ಬಾದರಿರಾಹ ಹ್ಯೇವಮ್ ಓಂ 10

ದೇಹಾಭಾವವನ್ನು ಬಾದರಿ ಹೇಳುತ್ತಾನೆ, ಹೀಗೆ ಇದೆಯಷ್ಟೆ.

[ಚಿನ್ಮಾತ್ರದೇಹವಲ್ಲದೆ ರಕ್ತಮಾಂಸಾದಿಮಯವಾದ ದೇಹ ಮುಕ್ತನಿಗೆ ಇಲ್ಲ, ಎಂದು ಬಾದರಿಯ ಅಭಿಪ್ರಾಯ. "ಅಶರೀರೋ ವಾವ ತದಾ ಭವತಿ, ಅಶರೀರಂ ವಾವ ಸಂತಂ ನ ಪ್ರಿಯಾಪ್ರಿಯೇ ಸ್ಪೃಶತಃ, ಯಾಭ್ಯಾಂ ಹ್ಯೇಷ ಉನ್ಮಥ್ಯತೇ"—ಮುಕ್ತನಾದಮೇಲೆ ಶರೀರವಿಲ್ಲದವನಾಗುವನು. ಅಶರೀರನಾದ ಜೀವನನ್ನು ಆಗ ಪ್ರಿಯ ಮತ್ತು ಅಪ್ರಿಯವಾದವು ಮುಟ್ಟಲಾರವು ; ಆ ಪ್ರಿಯಾಪ್ರಿಯಗಳಿಂದಲೇ ಜನರು ಉನ್ಮಥಿತರಾಗಬಲ್ಲರು.]

ಓಂ ಭಾವಂ ಜೈಮಿನಿಃ,
ವಿಕಲ್ಪಾಮ್ನಾನಾತ್ ಓಂ 11

ಬೇರೊಂದು ದೇಹ ಇದೆ, ಎಂದು ಜೈಮಿನಿಯ ಮತ ; ಹಾಗೆ ವಿಕಲ್ಪವನ್ನು ಶ್ರುತಿ ತಿಳಿಸುವುದು.

[ಚಿನ್ಮಾತ್ರದೇಹವಲ್ಲದೆ ಬೇರೊಂದು ವಿಧ ದೇಹವಿದೆಯೆಂದು ಜೈಮಿನಿಯ ಅಭಿಪ್ರಾಯ. "ಸ ವಾ ಏಷ ಏವಂವಿತ್ ಪರಮಭಿಪಶ್ಯತಿ,

ಅಭಿಶೃಣೋತಿ, ಜ್ಯೋತಿಷ್ಯೈವ ರೂಪೇಣ ಚಿತಾ ವಾಽಚಿತಾ ವಾ, ನಿತ್ಯೇನ ವಾಽನಿತ್ಯೇನ ವಾ, ಅಥಾನಂದೀ ಹ್ಯೇವೈಷ ಭವತಿ, ನಾಸಂದಂ ಕಿಂಚಿದುಪಸ್ಮೃಶತಿ"—ಬ್ರಹ್ಮಜ್ಞಾನಿ ಮುಕ್ತನಾಗಿ ಜ್ಯೋತಿಃಸ್ವರೂಪದಿಂದ ಪರಮಾತ್ಮನನ್ನು ನೋಡುತ್ತಾನೆ, ಕೇಳುತ್ತಾನೆ, ಚಿತ್‌ನಿಂದಾಗಲಿ ಅಚಿತ್‌ನಿಂದಾಗಲಿ, ನಿತ್ಯವಾದ ದೇಹದಿಂದಾಗಲಿ ಅನಿತ್ಯದೇಹದಿಂದಾಗಲಿ ; ಆಮೇಲೆ ಆನಂದವನ್ನು ಅನುಭವಿಸುತ್ತಾನೆ ; ದುಃಖವನ್ನು ಅವನು ಸ್ವಲ್ಪಮಟ್ಟಿಗೂ ಮುಟ್ಟುವುದೇ ಇಲ್ಲ. ಇದು ಔದ್ದಾಲಕಾಯನಶ್ರುತಿಯಲ್ಲಿದೆ.]

ಓಂ ದ್ವಾದಶಾಹವದುಭಯವಿಧಂ, ಬಾದರಾಯಣೋಽತಃ ಓಂ 12

ಆದುದರಿಂದ ದ್ವಾದಶಾಹದಂತೆ ಎರಡು ವಿಧವೂ, ಎಂದು ಬಾದರಾಯಣರ ಮತ.

[ಹನ್ನೆರಡು ದಿನಗಳ 'ದ್ವಾದಶಾಹ' ಯಾಗ, 'ಕ್ರತು' ಅಥವಾ 'ಸತ್ರ' ಆಗಬಹುದು. ಹೀಗೆಯೇ ಮುಕ್ತಿಯಲ್ಲಿ ಜೀವನ ಭೋಗ ಬ್ರಾಹ್ಮಶರೀರದಿಂದ, ಹೀಗೆ ಎರಡು ಬಗೆಯಲ್ಲಿಯೂ ಆಗಬಹುದು, ಎಂದು ಬಾದರಾಯಣರ ಅಭಿಪ್ರಾಯ.]

ಓಂ ತನ್ವಭಾವೇ ಸಂಧ್ಯವತ್, ಉಪಪತ್ತೇಃ ಓಂ 13

ಶರೀರವಿರದಿದ್ದರೆ ಸ್ವಪ್ನದಂತೆ, ಉಪಪತ್ತಿ ಇರುವುದರಿಂದ.

["ಸಂಧ್ಯಂ ತೃತೀಯಂ ಸ್ವಪ್ನಸ್ಥಾನಂ" — ಸಂಧ್ಯವೆನ್ನುವುದು ಮೂರನೆಯದಾದ ಸ್ವಪ್ನಸ್ಥಾನ—ಎಂದು ಶ್ರುತಿ ಇದೆ. ಬಾಹ್ಯಶರೀರವಿಲ್ಲ, ಎಂದರೆ, ಭೋಗಾನುಭವವಿಲ್ಲ, ಎಂದು ತಿಳಿಯಬಾರದು. ಸ್ವಪ್ನಗಳಲ್ಲಿ ಭೋಗ ಪ್ರಾಪ್ತಿಯಾಗುವುದಿಲ್ಲವೇ ?]

ಓಂ ಭಾವೇ ಜಾಗ್ರದ್ವತ್ ಓಂ 14

ಶರೀರವಿದ್ದರೆ, ಜಾಗ್ರದವಸ್ಥೆಯಲ್ಲಿರುವಂತೆಯೇ.

[ಜಾಗ್ರದವಸ್ಥೆಯಲ್ಲಿ ಹೇಗೆ ಭೋಗಾನುಭವವಾಗುವುದೋ, ಮುಕ್ತನಾದ ಮೇಲೆ ದೇಹವಿರುವಾಗ ಹಾಗೆಯೇ ಯುಕ್ತವಾಗುವುದು. "ಸ್ವೇಚ್ಛಯಾಪಾ ಶರೀರಾಣಿ ತೇಜೋರೂಪಾಣಿ ಕಾನಿಚಿತ್ । ಸ್ವೀಕೃತ್ಯ ಜಾಗರಿತವತ್

ಭುಕ್ತ್ವಾ ತ್ಯಾಗಃ ಕದಾಚನ"—ತನ್ನ ಇಚ್ಛೆಯಿಂದಲೇ ತೇಜೋರೂಪಗಳಿಂದ ಕೆಲವು ದೇಹಗಳನ್ನು ಪಡೆದು ಎಚ್ಚೆತ್ತಿರುವವನಂತೆ ಸುಖಾನುಭವ ಮಾಡಿ ಕಾಲಾಂತರದಲ್ಲಿ ಅವನ್ನು ಬಿಡುವನು—ಎಂದು ಬ್ರಹ್ಮವೈವರ್ತದಲ್ಲಿ ಹೇಳಿದೆ.]

ಓಂ ಪ್ರದೀಪವದಾವೇಶಃ, ತಥಾ ಹಿ ದರ್ಶಯತಿ ಓಂ 15

ಪ್ರದೀಪದಂತೆಯೇ ಪ್ರವೇಶ; ಹಾಗೆಯೇ ದರ್ಶನವಿದೆ.

[ಮುಕ್ತನು ಶರೀರದೊಳಗೆ ಪ್ರವೇಶಿಸಿದರೂ ಪ್ರದೀಪದಂತೆಯೇ ನಡೆದುಕೊಳ್ಳುವನು. ಅವನು ಪುಣ್ಯದ ಭೋಗವನ್ನು ಮಾತ್ರ ಅನುಭವಿಸುವನು, ದುಃಖವನ್ನಲ್ಲ. ದೀಪದ ಬತ್ತಿಯೊಳಗೆ ಪ್ರವೇಶ ಮಾಡಿದ ತೇಜಸ್ಸು ಎಣ್ಣೆಯನ್ನು ಮಾತ್ರ ಹೀರಿಕೊಳ್ಳುತ್ತದೆ, ಮಸಿ ಮೊದಲಾದುವನ್ನಲ್ಲ. "ತೀರ್ಣೋ ಹಿ ತದಾ ಸರ್ವಾನ್ ಶೋಕಾನ್ ಹೃದಯಸ್ಯ ಭವತಿ"—ಆಗ ಮುಕ್ತನು ಹೃದಯದ ಎಲ್ಲ ದುಃಖಗಳನ್ನು ದಾಟಿ ಹೋಗಿರುತ್ತಾನೆ—ಎಂದು ಬೃಹದಾರಣ್ಯಕೋಪನಿಷತ್ತು ತಿಳಿಸುತ್ತದೆ.]

ಓಂ ಸ್ವಾಪ್ಯಯಸಂಪತ್ತ್ಯೋರನ್ಯತರಾಪೇಕ್ಷಮಾ-ವಿಷ್ಕೃತಂ ಹಿ ಓಂ 16

ಸುಷುಪ್ತಿಯನ್ನೋ ಮುಕ್ತಿಯನ್ನೋ ಒಂದನ್ನು ಸೂಚಿಸುತ್ತದೆ; ಶ್ರುತಿಯಿಂದ ಪ್ರಕಟಿತವಾಗಿದೆಯಷ್ಟೆ.

["ಸ್ವರ್ಗೇ ಲೋಕೇ ನ ಭಯಂ ಕಿಂಚಿದಸ್ತಿ"—ಸ್ವರ್ಗಲೋಕದಲ್ಲಿ ಯಾವ ಭಯವೂ ಇಲ್ಲ—ಎಂಬ ಶ್ರುತಿ ಸ್ವರ್ಗಾದಿಲೋಕಗಳನ್ನು ಸೇರಿದವನಿಗೆ ಅನ್ವಯಿಸುವುದು, ಎನ್ನಲಾಗದು. "ತೀರ್ಣೋ ಹಿ ತದಾ ಸರ್ವಾನ್ ಶೋಕಾನ್"—ಆಗ ಎಲ್ಲ ದುಃಖಗಳನ್ನೂ ದಾಟಿ—ಎಂಬ ಬೃಹದಾರಣ್ಯಕ ವಾಕ್ಯ ಸುಷುಪ್ತಿಯನ್ನೋ ಮೋಕ್ಷವನ್ನೋ ಸೂಚಿಸುತ್ತದೆ. ಇದು "ಅತ್ರ ಪಿತಾಽಪಿತಾ ಭವತಿ, ಮಾತಾಽಮಾತಾ, ಲೋಕಾ ಅಲೋಕಾ, ದೇವಾ ಅದೇವಾ, ವೇದಾ ಅವೇದಾಃ। ಅನನ್ವಾಗತಂ ಪುಣ್ಯೇನ ಅನನ್ವಾಗತಂ ಪಾಪೇನ"—ಅಲ್ಲಿ ತಂದೆ ತಂದೆಯಲ್ಲ, ತಾಯಿ ತಾಯಿಯಲ್ಲ...ಪುಣ್ಯದಿಂದ ಹಿಂಬಾಲಿಸಲ್ಪಟ್ಟವನು ಆದರೆ ಪಾಪದಿಂದ ಹಿಂಬಾಲಿಸಲ್ಪಟ್ಟವನಲ್ಲ—ಎಂಬ ಅದೇ ಶ್ರುತಿವಾಕ್ಯದಿಂದ ಸ್ಪಷ್ಟವಾಗುವುದು.]

ಓಂ ಜಗದ್ವ್ಯಾಪಾರವರ್ಜಂ ಓಂ 17

ಜಗತ್ತಿನ ಆಗುಹೋಗುಗಳನ್ನು ಬಿಟ್ಟು.

["ಸರ್ವಾನ್ಕಾಮಾನಾಪ್ತ್ವಾ, ಅಮೃತಃ ಸಮಭವತ್" — ಎಲ್ಲ ಇಷ್ಟಾರ್ಥಗಳನ್ನೂ ಹೊಂದಿ ಮುಕ್ತನಾದವನು—ಎಂದು ಹೇಳಿದೆ. ಆದರೆ ಆ ಇಷ್ಟಾರ್ಥಗಳಲ್ಲಿ ಜಗತ್ತನ್ನು ಸೃಷ್ಟಿ ಮಾಡುವ ಹಾಗೂ ಸ್ಥಿತಿ, ಸಂಹಾರಗಳನ್ನು ಮಾಡುವ ಸಾಮರ್ಥ್ಯ ಸೇರಿಲ್ಲ.]

ಓಂ ಪ್ರಕರಣಾತ್, ಅಸಂನಿಹಿತತ್ವಾಚ್ಚ ಓಂ 18

ಜೀವನ ಪ್ರಕರಣವಿರುವುದರಿಂದಲೂ, ಆ ಸಾಮರ್ಥ್ಯದಿಂದ ದೂರದಲ್ಲಿರುವುದರಿಂದಲೂ.

["ಸ್ವಾಧಿಕಾನಂದಸಂಪ್ರಾಪ್ತೌ ಸೃಷ್ಟ್ಯಾದಿವ್ಯಾಪೃತಿಷ್ವಪಿ। ಮುಕ್ತಾನಾಂ ನೈವ ಕಾಮಃ ಸ್ಯಾದನ್ಯಾನ್ ಕಾಮಾಂಸ್ತು ಭುಂಜತೇ"—ತನ್ನ ಯೋಗ್ಯತೆಗೆ ಮೀರಿದ ಆನಂದ ಪಡೆಯುವುದರಲ್ಲಿಯೂ ಸೃಷ್ಟ್ಯಾದಿವ್ಯಾಪಾರಗಳಲ್ಲಿಯೂ ಮುಕ್ತರಿಗೆ ಆಸೆ ಹುಟ್ಟುವುದೇ ಇಲ್ಲ, ಅವರು ಇತರ ಇಷ್ಟಗಳನ್ನು ಪಡೆಯುತ್ತಾರೆ—ಎಂದೂ "ನ ಚಾಯೋಗ್ಯಂ ಬಿಮುಕ್ತೋऽಪಿ ಪ್ರಾಪ್ನುಯಾನ್ನ ಚ ಕಾಮಯೇತ್"—ಮುಕ್ತನಾದರೂ ಜೀವನು ಯೋಗ್ಯತೆಗೆ ಮೀರಿದುದನ್ನು ಹೊಂದುವುದೂ ಇಲ್ಲ, ಅದಕ್ಕಾಗಿ ಅಪೇಕ್ಷೆಪಡುವುದೂ ಇಲ್ಲ—ಎಂದೂ ವರಾಹಪುರಾಣದಲ್ಲಿದೆ.]

ಓಂ ಪ್ರತ್ಯಕ್ಷೋಪದೇಶಾದಿತಿ ಚೇನ್ನ, ಆಧಿಕಾರಿಕಮಂಡಲಸ್ಥೋಕ್ತೇಃ ಓಂ 19

ಪ್ರತ್ಯಕ್ಷೋಪದೇಶವಿರುವುದರಿಂದ, ಎನ್ನಬಾರದು; ಆಧಿಕಾರಿಕಮಂಡಲಸ್ಥನನ್ನು ಕುರಿತು ಹೇಳಿರುವುದರಿಂದ.

["ತಾ ಯೋ ವೇದ, ಸ ವೇದ ಬ್ರಹ್ಮ, ಸರ್ವೇಽಸ್ಮೈ ಬಲಿಮಾವಹಂತಿ"—ಯಾವನು ವ್ಯಾಹೃತಿಗಳನ್ನು ತಿಳಿದಿರುವವನೋ ಅವನು ಬ್ರಹ್ಮನನ್ನು ತಿಳಿದಂತೆಯೇ, ಅವನಿಗಾಗಿ ಎಲ್ಲ ದೇವತೆಗಳೂ ಬಲಿಯನ್ನು ವಹಿಸುತ್ತಾರೆ—ಎಂಬ ತೈತ್ತಿರೀಯವಾಕ್ಯದಿಂದ ಪ್ರತ್ಯಕ್ಷವಾಗಿ ಮುಕ್ತನಿಗೆ ಪೂಜ್ಯತ್ವವನ್ನು ತಿಳಿಸಿದೆ. ಇದರಿಂದ ಮುಕ್ತನಿಗೆ ಜಗತ್ತಿನ ಎಲ್ಲ ಐಶ್ವರ್ಯಗಳೂ ಇವೆ, ಎನ್ನಬಾರದು. ಆ ಶ್ರುತಿಯಲ್ಲಿ ಹೇಳಿರುವ ಆಧಿಕಾರಿಕಮಂಡಲಾಧಿಪತಿ

ಚತುರ್ಮುಖಬ್ರಹ್ಮನೇ. ಆದುದರಿಂದ ಎಲ್ಲ ಮುಕ್ತರಿಗೂ ಜಗದ್ವ್ಯಾಪಾರ ವಿಷಯಕವಾದ ಐಶ್ವರ್ಯವಿಲ್ಲ.]

ಓಂ ವಿಕಾರಾವರ್ತಿ ಚ, ತಥಾ ಹಿ ದರ್ಶಯತಿ ಓಂ 20

ಸಂಸಾರದಲ್ಲಿ ಸುತ್ತಿಸುವ ವ್ಯಾಪಾರ ಮುಕ್ತಜೀವರಿಗಿಲ್ಲ, ಹಾಗೆ ಶ್ರುತಿ ಇದೆಯಷ್ಟೆ.

["ಇಮಂ ಮಾನವಮಾವರ್ತಂ ನಾವರ್ತಂತೇ"--ಈ ಮನುಷ್ಯನನ್ನು ಸಂಸಾರದಲ್ಲಿ ಪುನಃ ಪುನಃ ಸುತ್ತಿಬರುವಂತೆ ಅವರು ಮಾಡುವುದಿಲ್ಲ--ಎಂಬ ಛಾಂದೋಗ್ಯವಾಕ್ಯದಿಂದ ಸಂಸಾರಪ್ರವೃತ್ತವ್ಯಾಪಾರ ಮಾಡಲು ಮುಕ್ತ ಜೀವರಿಗೆ ಸಾಧ್ಯವಿಲ್ಲ, ಎಂದು ಹೇಳಿದ ಹಾಗಾಯಿತು. ಯಾರು ವಿಷ್ಣುವಿನಿಂದ ಆ ಕಾರ್ಯಕ್ಕಾಗಿ ನಿಯುಕ್ತರಾಗಿದ್ದರೋ ಅವರು ವಿಕಾರಾಧಿಕಾರಿಗಳು.]

ಓಂ ಸ್ಥಿತಿಮಾಹ, ದರ್ಶಯತಶ್ಚೈವಂ ಪ್ರತ್ಯಕ್ಷಾನುಮಾನೇ ಓಂ 21

ಸ್ಥಿತಿಯನ್ನು ಹೇಳಲಾಗಿದೆ, ಶ್ರುತಿಗಳು ತಿಳಿಸುತ್ತದೆ, ಪ್ರತ್ಯಕ್ಷ ಮತ್ತು ಅನುಮಾನಗಳೂ ಕೂಡ.

["ಏತತ್ಸಾಮ ಗಾಯನ್ನಾಸ್ತೇ"—ಈ ಪರಮಾತ್ಮನ ಸ್ತುತಿಯನ್ನು ಹಾಡುತ್ತಾ ಇರುವನು—ಎಂಬಲ್ಲಿ ಆನಂದಾದಿಗಳಲ್ಲಿ ವೃದ್ಧಿಹ್ರಾಸಗಳಿಲ್ಲದ ಸಮಸ್ಥಿತಿಯನ್ನು ಹೇಳಿದೆ. "ಸ ಏಷ ಏತಸ್ಮಿನ್ ಬ್ರಹ್ಮಣಿ ಸಂಪನ್ನೋ ನ ಜಾಯತೇ ನ ಮ್ರಿಯತೇ, ನ ಹೀಯತೇ ನ ವರ್ಧತೇ, ಸ್ಥಿತ ಏವ ಸದಾ ಭವತಿ"—ಜೀವನು ಬ್ರಹ್ಮನೊಡನೆ ಸೇರಿಕೊಂಡು ಹುಟ್ಟುವುದಿಲ್ಲ, ಸಾಯುವುದಿಲ್ಲ, ಕಡಿಮೆಯಾಗುವುದಿಲ್ಲ, ಹೆಚ್ಚುವುದೂ ಇಲ್ಲ, ಒಂದೇ ಸಮಸ್ಥಿತಿಯಲ್ಲಿಯೇ ಯಾವಾಗಲೂ ಇರುವನು—ಎಂಬ ಜಾಬಾಲಶ್ರುತಿ ಮುಕ್ತರ ಏಕಪ್ರಕಾರ ಸ್ಥಿತಿಯನ್ನು ತಿಳಿಸುವುದು. ಮುಕ್ತರಾದಮೇಲೆ ವೃದ್ಧಿಹ್ರಾಸಗಳಿರದಿರುವುದೇ ಅನುಮಾನ. ವಿದ್ವಾಂಸರಾದ ಬ್ರಹ್ಮಜ್ಞಾನಿಗಳಿಗೆ ಇದು ಪ್ರತ್ಯಕ್ಷವಾಗಿಯೇ ಇರುವುದು.]

ಓಂ ಭೋಗಮಾತ್ರಸಾಮ್ಯಲಿಂಗಾಚ್ಚ ಓಂ 22

ಭೋಗಮಾತ್ರವೇ ಸಮಾನವಾಗಿರುವುದು, ಎಂಬ ಲಿಂಗವಿರುವುದರಿಂದಲೂ.

["ಏತಮಾನಂದಮಯಮಾತ್ಮಾನಮನುಪಿಶ್ಯ ನ ಜಾಯತೇ, ನ ಮ್ರಿಯತೇ, ನ ಹ್ರಸತೇ, ನ ವರ್ಧತೇ, ಯಥಾಕಾಮಂ ಚರತಿ, ಯಥಾಕಾಮಂ ಪಿಬತಿ, ಯಥಾಕಾಮಂ ರಮತೇ, ಯಥಾಕಾಮಮುಪರಮತೇ"— ಆನಂದಮಯನಾದ ಈ ಪರಮಾತ್ಮನಲ್ಲಿ ಸೇರಿದಮೇಲೆ ಜೀವನು ಮುಂದೆ ಹುಟ್ಟುವುದಿಲ್ಲ, ಸಾಯುವುದಿಲ್ಲ, ಕಡಿಮೆಯಾಗುವುದಿಲ್ಲ, ಹೆಚ್ಚುವುದೂ ಇಲ್ಲ; ಇಷ್ಟಬಂದಂತೆ ಸಂಚರಿಸುತ್ತಾನೆ, ಬೇಕಾದಂತೆ ಕುಡಿಯುತ್ತಾನೆ; ತನ್ನ ಇಚ್ಛೆಯನ್ನು ಅನುಸರಿಸಿ ವಿಹರಿಸುತ್ತಾನೆ ಅಥವಾ ಸುಮ್ಮನಾಗುತ್ತಾನೆ—ಎಂಬ ಶ್ರುತಿಯಲ್ಲಿ ಭೋಗಮಾತ್ರವನ್ನೇ ಜೀವೇಶರಿಗೆ ಸಾಮ್ಯಲಿಂಗವನ್ನಾಗಿ ಹೇಳಲಾಗಿದೆ. ಭೋಗದಲ್ಲಿ ವಿಶೇಷವೈಚಿತ್ರ್ಯಗಳನ್ನು ಕಾಣಬಹುದೆಂದು ಕೂರ್ಮಪುರಾಣ, ನಾರಾಯಣತಂತ್ರಗಳು ಹೇಳುತ್ತವೆ.]

ಓಂ ಅನಾವೃತ್ತಿಃ ಶಬ್ದಾತ್, ಅನಾವೃತ್ತಿಃ ಶಬ್ದಾತ್ ಓಂ 23

ಪುನರಾವೃತ್ತಿ ಇಲ್ಲವೇ ಇಲ್ಲ, ಶ್ರುತಿ ಹೇಳುವುದರಿಂದ.

[ಮುಕ್ತರಿಗೆ ಪುನರ್ಜನ್ಮವಿಲ್ಲ. "ನ ಚ ಪುನರಾವರ್ತತೇ"—ಮತ್ತೆ ಸಂಸಾರಕ್ಕೆ ಬರುವುದಿಲ್ಲ—ಎಂಬ ಛಾಂದೋಗ್ಯದಲ್ಲಿನ ಹಾಗೂ ಇತರ ವಾಕ್ಯಗಳಿಂದ ಮುಕ್ತಜೀವ ಹಿಂದಿರುಗಿ ಇಲ್ಲಿಗೆ ಬರುವುದಿಲ್ಲ.]

ಜ್ಞಾನಾನಂದಾದಿಭಿಃ ಸರ್ವಗುಣೈಃ ಪೂರ್ಣಾಯ ವಿಷ್ಣವೇ ।
ನಮೋಽಸ್ತು ಗುರವೇ ನಿತ್ಯಂ ಸರ್ವಥಾಽತಿಪ್ರಿಯಾಯ ಮೇ ॥

(ಜ್ಞಾನಾನಂದಾದಿಸರ್ವಗುಣಗಳಿಂದ ಪರಿಪೂರ್ಣನಾಗಿರುವ, ಯಾವಾಗಲೂ ನನಗೆ ಸರ್ವಥಾ ಅತಿಪ್ರಿಯನಾಗಿ ಗುರುವೂ ಆಗಿರುವ ವಿಷ್ಣುವಿಗೆ ನಮಸ್ಕಾರ) ಎಂದು ಮಂಗಳಶ್ಲೋಕವನ್ನು ಹೇಳಿ ಶ್ರೀಮದಾನಂದತೀರ್ಥಭಗವತ್ಪಾದರು ತಮ್ಮ ಭಾಷ್ಯವನ್ನು ಮುಗಿಸಿರುತ್ತಾರೆ.

ಇಲ್ಲಿಗೆ ಶ್ರೀ ಬ್ರಹ್ಮಸೂತ್ರಗಳ ನಾಲ್ಕನೆಯ ಅಧ್ಯಾಯದ ನಾಲ್ಕನೆಯ ಪಾದ ಮುಗಿಯಿತು.

ನಮಃ ಪರಮಋಷಿಭ್ಯೋ ನಮಃ ಪರಮಋಷಿಭ್ಯಃ.

॥ ಶ್ರೀಕೃಷ್ಣಾರ್ಪಣಮಸ್ತು ॥

ಈ ಗ್ರಂಥದ ಬಗೆಗೆ ಕೆಲವು ಅಭಿಪ್ರಾಯಗಳು

"ಮಧ್ವಾಚಾರ್ಯರ ದಾರ್ಶನಿಕ ನಿಲುವನ್ನು ಕನ್ನಡ ಜನರಿಗೆ ಪರಿಚಯ ಮಾಡಿಕೊಡಲು ನೀವು ಅವಿರತವಾಗಿ ಶ್ರಮಿಸುತ್ತಿದ್ದೀರಿ. ನಿಮ್ಮ ಉದ್ಯಮಕ್ಕೆ ಕೀರ್ತಿಕಲಶ ಈ ಗ್ರಂಥ. ಬ್ರಹ್ಮಸೂತ್ರಗಳು ಕಠಿಣವಾದುವೆಂದೂ, ಜಟಿಲವಾದುವೆಂದೂ, ವಾದಗ್ರಸ್ತ-ವಾದ ವಿಚಾರಗಳಿಂದ ತುಂಬಿರುವುವೆಂದೂ ಎಲ್ಲರೂ ಬಲ್ಲರು. ಸಾಮಾನ್ಯಜನರಿಗೆ ಈ ಗ್ರಂಥವನ್ನು ಒದಗಿಸುವುದು ಕಷ್ಟಸಾಧ್ಯವಾದ ಕೆಲಸವೇ. ಆದರೆ ತಮ್ಮ ಬರಹ ತಿಳಿಯಾಗಿದೆ, ನಿರೂಪಣೆ ಸರಳವಾಗಿದೆ, ವಿಷಯ ಸಂಗ್ರಹವಾಗಿದೆ. ಗಂಭೀರವಾದ ವಿಚಾರವನ್ನು ಹೀಗೆ ಸುಲಭವಾಗಿ ಎಟುಕುವಂತೆ ಮಾಡಿರುವುದು ಸಾಹಸವೂ ಹೌದು, ಪ್ರಶಂಸಾರ್ಹವಾದುದೂ ಹೌದು. ಈವರೆಗೆ ಇಂಥ ಸಂಗ್ರಾಹ್ಯವಾದ ಪುಸ್ತಕ ಕನ್ನಡದಲ್ಲಿ ಬಂದುದಿಲ್ಲ. ವೇದಾಂತ ವಾಙ್ಮಯ ರಸಿಕರು ತಲೆತೂಗುವಂಥ ಕೆಲಸ ಮಾಡಿದ್ದೀರಿ. ಇಷ್ಟು ಸರಳ ಸುಂದರವಾದ ಸಣ್ಣ ಗ್ರಂಥದ ಹಿನ್ನೆಲೆಯಲ್ಲಿ ಎಷ್ಟು ಆಳವಾದ ಅಭ್ಯಾಸ ನಡೆದಿರಬೇಕೆನ್ನುವುದನ್ನು ಯಾರಾದರೂ ಊಹಿಸಿಕೊಳ್ಳಬಹುದು."

—**Prof. S. K. Ramachandra Rao**

ಸಂಸ್ಕೃತ ಭಾಷೆಯನ್ನರಿಯದ ಕನ್ನಡ ಭಾಷಾನುಯಾಯಿಗಳಿಗೆ ಈ ಗ್ರಂಥಕರ್ತರು ಮಹೋಪಕಾರ ಮಾಡಿದ್ದಾರೆ. ತಿಳಿಯಲು ಕಷ್ಟವಾದ ಸಮಸ್ಯೆಗಳನ್ನು ಬಹು ಸುಲಭ ರೀತಿಯಲ್ಲಿ ಎಲ್ಲರಿಗೂ ತಿಳಿಯುವಂತೆ ಗ್ರಂಥವನ್ನು ರಚಿಸಿದ್ದಾರೆ.

—ಡಿ. ವಿ. ಮೂರ್ತಿ, ಇಂಜನಿಯರ್.

Sri Narasimha Murthy's fine book on Brahmasutras, with a short informing introduction and a lucid translation in limpid Kannada, of which he is a master, is a boon to the lay reader to get a concise idea of the difficult classic. The work has drawn on the earliest commentary to Sri Madhwa's bhashya by Trivikrama's book **Tattva Pradipa**. The Sutras are printed in bold letters and the book is got up in a fine way. The book is one other feather in the cap of the author who is already famous as the receipient of the awards from the Karnataka Sahitya Academy, Bangalore for his books.

—**Dr. P. Nagaraja Rao**, M.A., D.LITT.
Retd. Professor of Philosophy

Your publication 'Brahma Sutras' has given me immense help in understanding the meaning of every Sutra. Your rendering of the meaning in Kannada for every Sutra is very clear and understandable by lay men like myself.

—**C. Govinda Rao**
Mysore

'ಮನುಸ್ಮೃತಿ', ಮಹಾಭಾರತದಲ್ಲಿ ಭೀಷ್ಮರ ರಾಜನೀತಿ, ಆರ್ಯಭಟನ ಗಣಿತಶಾಸ್ತ್ರ, ಮುಂತಾದ ಸಂಸ್ಕೃತ ಶಾಸ್ತ್ರ ಗ್ರಂಥಗಳನ್ನು ಸುಲಲಿತವಾದ ಇಂದಿನ ಕನ್ನಡದಲ್ಲಿ ಅನುವಾದಿಸಿ, ವಿವರಿಸಿ, ಅನುಭವ ಪಡೆದು ಪಕ್ವವಾಗಿರುವ ತಮ್ಮ ಲೇಖನಿಯನ್ನು 'ಬ್ರಹ್ಮಸೂತ್ರ'ಗಳ ವಿವರಣೆಗೆ ವಿಸ್ತರಿಸಿರುವ ಮ॥ ರಾ॥ ಶ್ರೀ ಎನ್. ಕೆ. ನರಸಿಂಹಮೂರ್ತಿ ಅವರು ಕನ್ನಡಿಗರ ಅಭಿನಂದನೆಗೆ ಅರ್ಹರಾಗಿದ್ದಾರೆ.

ಮಿಕ್ಕ ಎಲ್ಲ ಶಾಸ್ತ್ರಗಳದ್ದು ಒಂದು ತೂಕವಾದರೆ, ವೇದಾಂತ ಅಥವಾ ಬ್ರಹ್ಮವಿದ್ಯೆಯದು ಎಲ್ಲಕ್ಕೂ ಹೆಚ್ಚಿನ ತೂಕ. ಮಹಾ ಮಹಾ ಆಚಾರ್ಯರುಗಳೇ ಉಪನಿಷತ್ತು, ಗೀತೆಗಳ ವಿವರಣೆಗಿಂತ ಬ್ರಹ್ಮಸೂತ್ರಗಳ ಶಾಸ್ತ್ರೀಯ ವಿವರಣೆಗೆ ಹೆಚ್ಚಿನ ಮಹತ್ವವನ್ನು ನೀಡಿದ್ದಾರೆ. ಏನಾದರೂ ಅವರ ಭಾಷೆ ಕೂಡ ವೇದಾಂತದ ಅವರ ಗ್ರಂಥಗಳ ಅನೇಕ ಅವತರಣೆಗಳಿಂದಲೂ, ಶಾಸ್ತ್ರೀಯ ಪರಿಭಾಷೆಯಿಂದಲೂ ಸಂಸ್ಕೃತ ಶಾಸ್ತ್ರಾಧ್ಯಯನದ ವಿಶೇಷಜ್ಞರಿಗೆ ಮಾತ್ರ ತಿಳಿಯುವಂತಹ ಗಹನತೆಯಿಂದ ತುಂಬಿರುವುದರಿಂದ ಕುತೂಹಲಿಗಳಾದ ಸಾಮಾನ್ಯ ಜನತೆಗೆ ತಿಳಿಯಾದ ರೀತಿಯಿಂದ ಅದನ್ನು ಸುಲಭ ಮಾಡಿಕೊಡುವುದು ಪಂಡಿತರಿಗೂ ಅಶಕ್ಯವೇ ಎನ್ನಬಹುದು. ವಾದಯುಗದಲ್ಲಿ ಸರಳವಾದ ತಾತ್ಪರ್ಯದೃಷ್ಟಿ ಹಿಂದಾಗಿ ಕ್ಲಿಷ್ಟ ವಿವಾದ-ಪ್ರತಿವಾದಗಳಿಗೂ, ಕಷ್ಟಕರವಾದ ಖಂಡನ-ಮಂಡನಗಳಿಗೂ ಪುಷ್ಟಿ ದೊರೆತುದು ವಿದ್ವಜ್ಜನರಿಗೆ ತುಷ್ಟಿಕರವಾದರೂ, ಸಾಮಾನ್ಯ ಜನರ ಪಾಲಿಗೆ ದುರದೃಷ್ಟಕರ ವಾಗಿಯೇ ಪರಿಣಮಿಸಿತು.

ಇಲ್ಲಿ ಮಾನ್ಯ ಲೇಖಕರು ಶ್ರೀ ಮಧ್ವಾಚಾರ್ಯರ ಮುಖ್ಯ ಸಿದ್ಧಾಂತವನ್ನಷ್ಟೇ ಎಂತಹವರಿಗೂ ಮನದಟ್ಟಾಗುವ ಸ್ಪಷ್ಟ ಹಾಗೂ ವಿಶಿಷ್ಟ ಶೈಲಿಯಲ್ಲಿ ಒಂದೊಂದು ಸೂತ್ರದ ಕೆಳಗೆ ಸಂಯೋಜಿಸಿ ಕೊಡುವುದರಲ್ಲಿ ತುಂಬಾ ಯಶಸ್ವಿಯಾಗಿದ್ದಾರೆ. ಆಕರ ವಚನಗಳನ್ನೇ ಅತ್ಯವಶ್ಯ ಕನಿಷ್ಟ ಪ್ರಮಾಣಕ್ಕೆ ಇಳಿಸಿ, ಅವುಗಳ ಮಥಿತಾರ್ಥವನ್ನು ಸಂಗ್ರಹವಾದರೂ ಸಾರವತ್ತಾಗಿ, ವ್ಯರ್ಥಶಬ್ದವೊಂದಕ್ಕೂ ಆಸ್ಪದವೀಯದಂತಹ ಸಾರ್ಥಕ ಹಿತ-ಮಿತ ವ್ಯಾಪ್ತಿಯಲ್ಲಿ, ಸಾಧಿಸಿರುವುದು ನಿಜಕ್ಕೂ ಒಂದು ಮಹತ್ಸಾಧನೆಯೇ ಸರಿ. ಇಲ್ಲಿ ಪೂರ್ವಗ್ರಹ, ದುರಾಗ್ರಹಗಳಿಗೆ ಎಡೆಯಿಲ್ಲ ; ಸ್ವಮತಪ್ರಶಂಸೆ—ಪರದೂಷಣೆಗಳಿಗೆ ಪ್ರವೇಶವಿಲ್ಲ. ಜಟಿಲ ಕರ್ಕಶ ಶಾಸ್ತ್ರಶೈಲಿಗೆ ಪುರಸ್ಕಾರವೂ ಇಲ್ಲ. ಹೀಗೆ ವಸ್ತುನಿಷ್ಠವೂ, ಸಾಧಾರವೂ, ನೇರವೂ ಆದ ಇವರ ಬ್ರಹ್ಮಸೂತ್ರದ ಮಧ್ವಮತಾನುಗುಣ ಕನ್ನಡ ವಿವರಣೆ ಕೇವಲ ಮಾಧ್ವರಿಗೆ ಮಾತ್ರವಲ್ಲ, ವೇದಾಂತದ ಎಲ್ಲ ಜಿಜ್ಞಾಸುಗಳಿಗೂ ಆಕರ್ಷಕವಾಗುವಂತಿದೆ. ಗುಣಪೂರ್ಣವಾದ ಈ ರಚನೆ ಆಧುನಿಕ ಕುತೂಹಲಿಗಳ ಜ್ಞಾನತೃಷ್ಣೆಯನ್ನು ನೀಗಲೆಂದು ಹಾರೈಸುತ್ತೇನೆ.

ಡಾ। ಕೆ. ಕೃಷ್ಣಮೂರ್ತಿ
ಸಂಸ್ಕೃತ ಪ್ರಾಧ್ಯಾಪಕರು, ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ